ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು

ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಟಿ.ಆರ್.ಲೀಲಾವತಿ

ಮಾರ್ಗದರ್ಶಕರು
ಡಾ.ಟಿ.ಆರ್.ಚಂದ್ರಶೇಖರ್
ಸಂಶೋಧಕರು, ಅಭಿವೃದ್ಧಿ ನಿಕಾಯ
ಕನ್ನಡ ವಿಶ್ವವಿದ್ಯಾಲಯ,

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೦೭

ಕರ್ನಾಟಕದ ಕ್ರೈಸ್ತರ ದೇವಾಲಯಗಳಲ್ಲಿ ಧಾರ್ಮಿಕ [illegible] ಶಾಸ್ತ್ರ ಮತ್ತು ಅದರ ಸಾಮಾಜಿಕ ಆಯಾಮಗಳು

[illegible] ಜಿಲ್ಲೆಯ [illegible]

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
[illegible]

ಮಾರ್ಗದರ್ಶಕರು
ಡಾ. [illegible]
ಪ್ರಾಧ್ಯಾಪಕರು, [illegible]
ಕನ್ನಡ ವಿಶ್ವವಿದ್ಯಾಲಯ

[illegible] ಅಧ್ಯಯನ ವಿಭಾಗ
[illegible]
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೨

ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು

ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಟಿ.ಆರ್.ಲೀಲಾವತಿ

ಮಾರ್ಗದರ್ಶಕರು

ಡಾ.ಟಿ.ಆರ್.ಚಂದ್ರಶೇಖರ್

ಸಂಶೋಧಕರು, ಅಭಿವೃದ್ಧಿ ನಿಕಾಯ

ಕನ್ನಡ ವಿಶ್ವವಿದ್ಯಾಲಯ,

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೦೭

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಟಿ.ಆರ್.ಲೀಲಾವತಿ ಇವರು **ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು : ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ** ಎಂಬ ಶೀರ್ಷಿಕೆಯ ಈ ಪಿಎಚ್.ಡಿ., ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಟಿ.ಆರ್.ಚಂದ್ರಶೇಖರ್)
ಮಾರ್ಗದರ್ಶಕರು

ದಿನಾಂಕ :
ಸ್ಥಳ : ವಿದ್ಯಾರಣ್ಯ, ಹಂಪಿ

ಪ್ರಮಾಣ ಪತ್ರ

ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು : ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಟಿ.ಆರ್. ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

T.R. Leelavathi

ದಿನಾಂಕ : 19 - 11 - 2007
ಸ್ಥಳ : ವಿದ್ಯಾರಣ್ಯ, ಹಂಪಿ

(ಟಿ.ಆರ್.ಲೀಲಾವತಿ)
ಸಂಶೋಧನಾ ವಿದ್ಯಾರ್ಥಿ

ನಿವೇದನೆ

ನಾನು ೧೯೮೭ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. (ಅರ್ಥಶಾಸ್ತ್ರ) ಪದವಿ ಪಡೆದ ನಂತರ ೧೯೯೨ ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ಪದವಿ ಕಾಲೇಜಿಗೆ ಅರ್ಥಶಾಸ್ತ್ರ ಉಪನ್ಯಾಸಕಳಾಗಿ ನೇಮಕಗೊಂಡೆ. ೨೦೦೩-೦೪ರ ಸಾಲಿನಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ನಿರ್ಧರಿಸಿದೆನು. ಈ ಅಧ್ಯಯನಕ್ಕೆ ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ॥ ಟಿ.ಆರ್.ಚಂದ್ರಶೇಖರ್‌ರವರನ್ನು ಮಾರ್ಗದರ್ಶಕರಾಗಲು ವಿನಂತಿಸಿಕೊಂಡಾಗ ಅವರು ಸಮ್ಮತಿಸಿ, ನನಗೆ ಪಿಎಚ್.ಡಿ. ಮಾಡಲು ಅವಕಾಶ, ಸ್ಫೂರ್ತಿ ಒದಗಿಸಿಕೊಟ್ಟರು. ಮುಂದೆ ವಿಷಯ ಆಯ್ಕೆಯ ಸಂದರ್ಭದಲ್ಲಿ ಮಾರ್ಗದರ್ಶಕರು, ಸಂಶೋಧಕರು ಆದ ಡಾ.ಟಿ.ಆರ್.ಚಂದ್ರಶೇಖರ್‌ರವರಲ್ಲಿ ಚರ್ಚಿಸಿದಾಗ, ಅವರ ಸೂಚನೆಯ ಮೇರೆಗೆ "ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು: ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ" ಎಂಬುದರ ಕುರಿತು ಪ್ರಬಂಧ ರಚಿಸಲು ತೀರ್ಮಾನಿಸಿದೆನು. ಈ ವಿಷಯವನ್ನು ಆಯ್ಕೆ ಮಾಡಲು ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಶೈಕ್ಷಣಿಕ, ಉಚಿತ ವಸತಿ ಮತ್ತು ದಾಸೋಹ ಕಾರ್ಯಗಳ ಪ್ರಭಾವವು ಕಾರಣವಾಗಿದೆ. ಅಧ್ಯಯನದುದ್ದಕ್ಕೂ ಸಲಹೆ ಸೂಚನೆಗಳನ್ನು ಕೊಟ್ಟು ಅತ್ಯಂತ ಸಹನೆಯಿಂದ ನನ್ನ ಬರವಣಿಗೆಯ ಓರೆ-ಕೋರೆಗಳನ್ನು ತಿದ್ದಿ, ಈ ಮಹಾಪ್ರಬಂಧ ರೂಪುಗೊಳ್ಳಲು ಮಾರ್ಗದರ್ಶನ ನೀಡಿದ ಡಾ.ಟಿ.ಆರ್.ಚಂದ್ರಶೇಖರ್‌ರವರಿಗೆ ಸದಾಕಾಲ ಚಿರಋಣಿಯಾಗಿರುವೆ.

ಶ್ರೀ ಸಿದ್ಧಗಂಗಾ ಮಠದ ಪಿಎಚ್.ಡಿ. ಸಂಶೋಧನ ಅಧ್ಯಯನಕ್ಕೆ ಸಂತೋಷದಿಂದ ಒಪ್ಪಿಗೆ ನೀಡಿ, ಪ್ರೋತ್ಸಾಹಿಸಿ, ಆಶೀರ್ವದಿಸಿ, ಮಠದ ದಾಖಲೆಗಳನ್ನು ಒದಗಿಸಿದ ಪೂಜ್ಯ ಶ್ರೀ ಡಾ. ಶಿವಕುಮಾರಸ್ವಾಮೀಜಿಯವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳವರಿಗೂ ಭಕ್ತಿಪೂರ್ವಕ ಪ್ರಣಾಮಗಳು.

ನನ್ನ ದೊಡ್ಡಪ್ಪನವರಾದ ತುಮಕೂರಿನ ಮಾಜಿ ಸಂಸದ ಶ್ರೀಯುತ ಜಿ.ಎಸ್.ಬಸವರಾಜುರವರು ಮತ್ತು ಶ್ರೀಮತಿ ಶಕುಂತಲಬಸವರಾಜುರವರು ನನ್ನನ್ನು ಪ್ರೋತ್ಸಾಹಿಸಿ, ಆಶೀರ್ವದಿಸಿದ್ದಾರೆ. ಅವರಿಗೂ ನನ್ನ ವಂದನೆಗಳು.

ಶ್ರೀ ಸಿದ್ಧಗಂಗಾ ಮಠದ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಪ್ರೋತ್ಸಾಹಿಸಿ ಆಶೀರ್ವದಿಸಿದ್ದಾರೆ. ಅವರಿಗೂ ನನ್ನ ವಂದನೆಗಳು. ಶ್ರೀ ಸಿದ್ಧಗಂಗಾ

ಮಠದ ಆಡಳಿತ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ, ೩೧ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ, ಬೋಧಕ–ಬೋಧಕೇತರ ವರ್ಗದವರಿಗೆ, ಶ್ರೀ ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ನನ್ನ ಆತ್ಮೀಯ ಕೃತಜ್ಞತೆಗಳು.

ಅಧ್ಯಯನ ಸಂದರ್ಭದಲ್ಲಿ ಹಲವು ರೀತಿಯಿಂದ ಸಹಕರಿಸಿ ನನಗೆ ಸ್ಫೂರ್ತಿ ಚೈತನ್ಯವನ್ನು ತುಂಬಿದ ಕನ್ನಡ ವಿಶ್ವವಿದ್ಯಾಲಯದ ಸಂಶೋಧಕರಾದ ಡಾ. ಕರೀಗೌಡ ಬೀಚನಹಳ್ಳಿಯವರಿಗೂ, ಡಾ. ಹೀ.ಚಿ. ಬೋರಲಿಂಗಯ್ಯನವರಿಗೂ ಮತ್ತು ಡಾ. ಸಿದ್ಧಗಂಗಮ್ಮನವರಿಗೂ ವಂದನೆಗಳು. ಹೊಸಪೇಟೆಯಲ್ಲಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ನನ್ನ ಮಾರ್ಗದರ್ಶಕರನ್ನು ಭೇಟಿ ಮಾಡಲು ಬಂದಾಗಲೆಲ್ಲಾ ನನಗೆ ಸ್ಫೂರ್ತಿ ನೀಡುತ್ತಿದ್ದ ಶ್ರೀಮತಿ ದಾಕ್ಷಾಯಣಿಚಂದ್ರಶೇಖರ್‌ರವರಿಗೂ ನನ್ನ ವಂದನೆಗಳು. ತುಮಕೂರಿನಲ್ಲಿ ನನಗೆ ಪ್ರೋತ್ಸಾಹಿಸುತ್ತಿದ್ದ ಸಾಹಿತಿಗಳಾದ ಪ್ರೊ. ಸಿ.ಹೆಚ್. ಮರಿದೇವರುರವರಿಗೂ ನನ್ನ ವಂದನೆಗಳು. ಅಭಿವೃದ್ಧಿ ಅಧ್ಯಯನ ವಿಭಾಗದ ಸಂಶೋಧಕರು, ಪ್ರವಾಚಕರು, ಪ್ರಾಧ್ಯಾಪಕರುಗಳಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಧನ್ಯವಾದಗಳು. ಮಹಾಪ್ರಬಂಧವನ್ನು ಕಂಪ್ಯೂಟರ್‌ನಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿದ ಹಾಗೂ ರೇಖಾಚಿತ್ರಗಳನ್ನು ರಚಿಸಿದ ತುಮಕೂರಿನ ಶ್ರೀ ಬಿ.ಎಂ.ಸುರೇಶ್ ಅವರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡಿದವರೆಲ್ಲರಿಗೂ ನಾನು ಕೃತಜ್ಞಳಾಗಿದ್ದೇನೆ.

ಲೀಲಾವತಿ ಟಿ.ಆರ್.
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ,
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ – ೧

ಪ್ರಸ್ತಾವನೆ

ಅಧ್ಯಾಯ – ೧

ಪ್ರಸ್ತಾವನೆ

ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಶಿಕ್ಷಣದ ಪಾತ್ರ ಹಿರಿದು. ಶಿಕ್ಷಣ ಒಂದು ರಾಷ್ಟ್ರದ ಸಮಸ್ತ ಚಿತ್ರಣವನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿದೆ. ಆದ್ದರಿಂದ 'ಅಭಿವೃದ್ಧಿ' ಎಂದರೆ 'ಶಿಕ್ಷಣ', 'ಶಿಕ್ಷಣ' ಎಂದರೆ 'ಅಭಿವೃದ್ಧಿ'. ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆಗಳಾಗಿರುವುದು ಐತಿಹಾಸಿಕ ಅಧ್ಯಯನದಿಂದ ತಿಳಿದುಬರುತ್ತದೆ. ಹೀಗೆ ಶಿಕ್ಷಣವು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಸಾಧ್ಯವೂ ಹೌದು. ಅಭಿವೃದ್ಧಿಯ ಮೂಲಮಂತ್ರವೇ ಶಿಕ್ಷಣವಾಗಿರುವುದರಿಂದ, ಶಿಕ್ಷಣ ಅಭಿವೃದ್ಧಿಯ ಅಂತರ್ಗತ ಭಾಗವಾಗಿದೆ.

ಶಿಕ್ಷಣದ ಬೆಳವಣಿಗೆಯಲ್ಲಿ ವಿವಿಧ ಬಗೆಯ ಸಾಮಾಜಿಕ ಸಂಘ-ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಾ ಬಂದಿವೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಶಿಕ್ಷಣ ಅಸ್ತಿತ್ವದಲ್ಲಿದ್ದರೂ ಬ್ರಿಟೀಷರ ಆಗಮನದಿಂದಾಗಿ, ಸರ್ಕಾರವು ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತಿರುವುದು ಐತಿಹಾಸಿಕವಾಗಿ ಸ್ಪಷ್ಟವಾಗುತ್ತದೆ. ಸರ್ಕಾರದೊಂದಿಗೆ ಧಾರ್ಮಿಕ ಸಂಸ್ಥೆಗಳೂ ಮತ್ತು ಖಾಸಗಿ ಪ್ರಯತ್ನಗಳು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಇಂದಿಗೂ ಕರ್ನಾಟಕದ ಸಂದರ್ಭದಲ್ಲಿ ಶಿಕ್ಷಣದ ಬೆಳವಣಿಗೆಗೆ ಸಂಬಂಧಿಸಿದಂತೆ ಧಾರ್ಮಿಕ ಸಂಸ್ಥೆಗಳ ಪಾತ್ರ ಅಪಾರವಾದುದು. ಪ್ರಸ್ತುತ ಅಧ್ಯಯನದಲ್ಲಿ ಧಾರ್ಮಿಕ ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಿಸುತ್ತಿರುವ ಜವಾಬುದಾರಿಯ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗಳನ್ನು ಅಧ್ಯಯನ ಮಾಡಿದರೆ ಎರಡು ಪ್ರಬಲ ಜಾತಿಗಳು ಮಠಮಾನ್ಯಗಳನ್ನು ಸ್ಥಾಪಿಸಿಕೊಂಡು ವ್ಯಾಪಕವಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಅವುಗಳೆಂದರೆ ಲಿಂಗಾಯತರು ಮತ್ತು ಒಕ್ಕಲಿಗರು. ಶಿಕ್ಷಣ ಕೆಲವರಿಗಷ್ಟೇ ದೊರೆಯುತ್ತಿದ್ದ ಕಾಲದಲ್ಲಿ ಬಡಜನತೆಯೂ ಶಿಕ್ಷಣ ಪಡೆಯಲೆಂದು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದವು.

ವರ್ಣಾಶ್ರಮ ಧರ್ಮವನ್ನು ಕಿತ್ತೊಗೆದು ಎಲ್ಲಾ ವರ್ಗದ ಮಕ್ಕಳಿಗೂ ಶಿಕ್ಷಣ ನೀಡಲು ವೀರಶೈವ ಮಠಗಳು ಸತ್‌ಸಂಕಲ್ಪ ಮಾಡಿದವು. ಇಂದಿನ ಅನೇಕ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಸೇವೆಯನ್ನು ಸಲ್ಲಿಸುತ್ತಿವೆ. ಉದಾ:- ರಂಭಾಪುರಿ ಮಠ, ಸುತ್ತೂರು ಮಠ, ಮುರುಘಾಮಠ, ಸಿದ್ಧಗಂಗಾ ಮಠ.........ಇತ್ಯಾದಿ. ಕರ್ನಾಟಕದಲ್ಲಿ ಲಿಂಗಾಯತ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಬೃಹತ್ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ದಿಸೆಯಲ್ಲಿ ತುಮಕೂರು ಜಿಲ್ಲೆಯ ಶ್ರೀ ಸಿದ್ಧಗಂಗಾ ಮಠ ಪಾತ್ರ ಮಹತ್ವ ಪಡೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ಸಿದ್ಧಗಂಗಾ ಮಠ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಒಟ್ಟು ೧೨೨ ಶಾಲಾ-ಕಾಲೇಜುಗಳನ್ನು ರಾಜ್ಯಾದ್ಯಂತ ಸ್ಥಾಪಿಸಿದೆ. ಈ ದಿಸೆಯಲ್ಲಿ ಸಿದ್ಧಗಂಗಾ ಮಠದ ಶೈಕ್ಷಣಿಕ ಚಟುವಟಿಕೆಗಳ ಸಾಮಾಜಿಕ ಸ್ವರೂಪದ ಅಧ್ಯಯನವು ವಿಷಯ ವಸ್ತುವಾಗಿದೆ. ನನ್ನ ಅಧ್ಯಯನವನ್ನು ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆಯಲ್ಲಿ ನಡೆಸುತ್ತಿರುವ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಪ್ರೌಢಶಾಲಾ ಶಿಕ್ಷಣಕ್ಕೆ ಸೀಮಿತಗೊಳಿಸಿಕೊಂಡಿದ್ದೇನೆ. ಈ ಅಧ್ಯಯನದ ಗುರಿ ಶೈಕ್ಷಣಿಕ ಚಟುವಟಿಕೆಗಳ ಸಾಮಾಜಿಕ ಸ್ವರೂಪದ ಅನ್ವೇಷಣೆಯಾಗಿದೆ. ಅನ್ನದಾಸೋಹ, ಅಕ್ಷರದಾಸೋಹ, ಆಸನ ದಾಸೋಹ ಮಾಡುತ್ತಿರುವ ಸಿದ್ಧಗಂಗಾ ಮಠ ಕರ್ನಾಟಕದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿರುವುದರಿಂದ "ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಧಾರ್ಮಿಕ ಸಂಸ್ಥೆಗಳ ಪಾತ್ರ ಮತ್ತು ಅದರ ಸಾಮಾಜಿಕ ಆಯಾಮಗಳು : ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವನ್ನು ಅನುಲಕ್ಷಿಸಿ" ಎಂಬ ಶೀರ್ಷಿಕೆಯ ವಸ್ತು ವಿಷಯವನ್ನು ನನ್ನ ಸಂಶೋಧನಾ ಮಹಾಪ್ರಬಂಧಕ್ಕಾಗಿ ಆಯ್ಕೆ ಮಾಡಿಕೊಂಡಿರುತ್ತೇನೆ.

ಕರ್ನಾಟಕದಲ್ಲಿ ಸನಾತನ ಧರ್ಮಗಳಾದ ಜೈನ, ಬೌದ್ಧ, ವೈಷ್ಣವ ಧರ್ಮಗಳು ತಮ್ಮ ಧರ್ಮದ ಅಸ್ಥಿತ್ವ ಮತ್ತು ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ತಮ್ಮ ಧರ್ಮದ ಬಗ್ಗೆ ಜನರಲ್ಲಿ ಹೆಚ್ಚು ನಂಬಿಕೆಯನ್ನು ಮೂಡಿಸಿ ಬೆಳೆಯುತ್ತಾ ಬಂದವೇ ವಿನಃ ಜನರಲ್ಲಿ ಸಾಮಾಜಿಕ ಕಳಕಳಿಯನ್ನು ತುಂಬುವಲ್ಲಿ ವಿಫಲವಾದವು. ಆದರೆ ವೀರಶೈವ ಧರ್ಮ ಮತ್ತು ಮಠಗಳ ನಿರೂಪಣೆಯು ಪ್ರಮುಖವಾಗಿ ಸಾಮಾಜಿಕ ದೃಷ್ಟಿಯಿಂದ ಕೂಡಿದ ಸಮಗ್ರ ನಿರೂಪಣೆ. ೧೨ನೇ ಶತಮಾನದ ಸಾಮಾಜಿಕ ಕ್ರಾಂತಿಯ ರೂವಾರಿ ಬಸವಣ್ಣನ ದಾಸೋಹ ಮತ್ತು ಲಿಂಗಸಮಾನತೆಯ ಅಡಿಗಲ್ಲ ಮೇಲೆ ಸ್ಥಾಪಿತವಾಗಿದ್ದೆಂದರೆ ತಪ್ಪಾಗಲಾರದು. ಈ ಹಿನ್ನೆಲೆಯಿಂದ ಕರ್ನಾಟಕದಾದ್ಯಂತ ಸಾವಿರಾರು ಮಠಗಳು ಸ್ಥಾಪಿತವಾದವು. ಸಮಾಜಮುಖಿಯಾಗಬೇಕೆಂಬ ಚಿಂತನೆ ಈ ಮಠಗಳಿಗಿದ್ದುದರಿಂದ, ಕೇವಲ ಧಾರ್ಮಿಕ ತಳಹದಿಯ ಮೇಲೆ ರೂಪುಗೊಳ್ಳದೆ ಸಾಮಾಜಿಕ ತಳಹದಿಯ ಮೇಲೂ ರೂಪುಗೊಂಡದ್ದು ವಿಶೇಷವಾಗಿತ್ತು.

ಜೀವನೋತ್ಕರ್ಷವೇ ಧರ್ಮದ ಗುರಿಯಾಗಿದ್ದುದರಿಂದ ಸಮಾಜದ ಧಾರಣೆ ಮತ್ತು ವಿಕಾಸಕ್ಕೆ ಸ್ವ-ಶಕ್ತಿ ಮತ್ತು ಪರಿಸ್ಥಿತಿಗಳಿಗನುಗುಣವಾಗಿ ಮಠಗಳು ಶಿಕ್ಷಣ ನೀಡಲಾರಂಭಿಸಿದವು. ಸಂಪ್ರದಾಯ ಶಿಕ್ಷಣಕ್ಕೂ ಅಂಟಿಕೊಳ್ಳದೆ, ಆಧುನಿಕ ಶಿಕ್ಷಣವನ್ನು ನೀಡುತ್ತಾ, ಬದಲಾವಣೆಯನ್ನು ಸಮಾಜದಲ್ಲಿ ಕಾಣಲು ಶಿಕ್ಷಣದಿಂದ ಮಾತ್ರ ಸಾಧ್ಯವೆಂದರಿತು, ಸಾವಿರಾರು ಮಠಗಳು ಶಿಕ್ಷಣ ಕೈಂಕರ್ಯದಲ್ಲಿ ತೊಡಗಿಕೊಂಡವು. ವೀರಶೈವ ಮಠಗಳು ಕೇವಲ ಧ್ಯಾನಮಂದಿರಗಳಾಗದೆ, ಜ್ಞಾನಮಂದಿರಗಳಾದವು. ಜಾತಿ, ಮತ, ಪಂಥ, ಲಿಂಗಭೇದವಿಲ್ಲದೆ ಎಲ್ಲರಿಗೂ ಆಶ್ರಯದಾತರಾದ ಮಠಗಳು ಶೈವಧರ್ಮದ ಆಧ್ಯಾತ್ಮಿಕ ಚಿಂತನೆಯ ಜೊತೆಗೆ ಬಸವಣ್ಣನ ಸಮಾನ ತತ್ವದ ಸಾಮಾಜಿಕ ಪರಿಕಲ್ಪನೆಯ ಕಡೆಗೆ ತಮ್ಮ ಗಮನವನ್ನು ಹರಿಸಿದವು.

ಸಮಾಜದಲ್ಲಿ ದೀನದಲಿತರ, ಬಡರೈತರ ಮತ್ತು ಬಡಕಾರ್ಮಿಕರ ಮಕ್ಕಳ ಏಳ್ಗೆಗಾಗಿ ಶಿಕ್ಷಣದ ಜೊತೆಗೆ ಉಚಿತ ವಸತಿ ಮತ್ತು ದಾಸೋಹದ ಸೌಕರ್ಯವನ್ನು ಒದಗಿಸುವುದರ ಮೂಲಕ ಅವರ ಜೀವನಕ್ಕೆ ದಾರಿದೀಪವಾಗಿ ಸಮಾಜದ ಮುಖ್ಯವಾಹಿನಿಗೆ ರಾಜ್ಯದ ಇತರ ಧರ್ಮೀಯರ ಗಮನ ಸೆಳೆದವು ಮತ್ತು ಸಮಾಜಕ್ಕೆ ಮಾದರಿಯಾಗಿ ನಿಂತವು.

ಈ ಹಿನ್ನೆಲೆಯಲ್ಲಿ ಸ್ಥಾಪಿತವಾದ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರ ಕೈಂಕರ್ಯದಿಂದ ಉಚಿತ ಶಿಕ್ಷಣ, ವಸತಿ ಮತ್ತು ದಾಸೋಹದಿಂದ ಕೇವಲ ಧಾರ್ಮಿಕ ವಿಧಿ ವಿಧಾನಗಳಷ್ಟನ್ನೇ ಪಾಲಿಸದೆ, ಶೈಕ್ಷಣಿಕ ವಿಧಿ ವಿಧಾನಗಳನ್ನು ಪಾಲಿಸಿಕೊಂಡು ಜಾತಿಭೇದ, ಲಿಂಗಭೇದ, ವರ್ಗಭೇದವಿಲ್ಲದೆ ತ್ರಿವಿಧ ದಾಸೋಹವನ್ನು ನಡೆಸಲಾಗುತ್ತಿದೆ. ಇದುವರೆಗಿನ ವೈಷ್ಣವ ಧರ್ಮದ ಮಠಗಳು ಪ್ರಬಲವಾಗಿದ್ದಾಗ್ಯೂ ಈ ರೀತಿಯ ಕೈಂಕರ್ಯವನ್ನು ತೊಡದೆ ಕೇವಲ ಧಾರ್ಮಿಕತೆ, ಆಧ್ಯಾತ್ಮಿಕತೆಗೆ ಗಮನ ನೀಡುತ್ತಾ, ಶೈಕ್ಷಣಿಕವಾಗಿ ಎಲ್ಲಾ ಧರ್ಮೀಯರಿಗೂ ಆಶ್ರಯದಾತವಾಗಲಿಲ್ಲ. ಆದರೆ ಶೈವಧರ್ಮದ ಅನೇಕ ಮಠಗಳು ಸಮಾಜದ ಎಲ್ಲಾ ವರ್ಗದ ಜನರಿಗೆ ಅನ್ನ, ವಸತಿ ಮತ್ತು ಶಿಕ್ಷಣವನ್ನು ಉಚಿತವಾಗಿ ನೀಡುತ್ತಿದ್ದು, ನನ್ನ ಅಧ್ಯಯನಕ್ಕೆ ಒಂದು ಪ್ರೇರಕಶಕ್ತಿಯಾಗಿದೆ.

ಕರ್ನಾಟಕದ ಅನೇಕ ಮಠಗಳು ಆಧ್ಯಾತ್ಮಿಕ ಬೋಧನೆ ಮತ್ತು ಧಾರ್ಮಿಕ ವಿಧಿ-ವಿಧಾನಗಳಿಗೆ ಪ್ರಾಶಸ್ತ್ಯ ನೀಡಿದ್ದರೆ, ಸಿದ್ಧಗಂಗಾ ಮಠ ಶೈಕ್ಷಣಿಕ ಪ್ರಗತಿಗೆ ಪ್ರಾಶಸ್ತ್ಯ ನೀಡಿ, ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಸಿದ್ಧಗಂಗಾ ಮಠ ಕೇವಲ ತುಮಕೂರು ಜಿಲ್ಲೆಗೆ ಶಿಕ್ಷಣವನ್ನು ನೀಡಲು ಸೀಮಿತವಾಗಿರದೆ, ರಾಜ್ಯಾದ್ಯಂತ ತನ್ನ ಶಿಕ್ಷಣ ಪ್ರಭೆಯನ್ನು ಹರಡಿದ್ದು, ರಾಜ್ಯವಲ್ಲದೆ ಹೊರರಾಜ್ಯದವರಿಗೂ ಉಚಿತ ವಸತಿ

ಮತ್ತು ಅನ್ನವನ್ನು ನೀಡುವುದರ ಮೂಲಕ ನಗರ ಪ್ರದೇಶದಲ್ಲಿ ಶಿಕ್ಷಣ ಪಡೆಯಲು ಅನುವು ಮಾಡಿಕೊಟ್ಟಿದೆ.

ಎಂಟು ಸಾವಿರಕ್ಕಿಂತ ಹೆಚ್ಚು ಬಡ ವಿದ್ಯಾರ್ಥಿಗಳ ವಾಸ್ತವ್ಯ, ಜ್ಞಾನಾರ್ಜನೆ, ದಿನನಿತ್ಯದ ಸಾಮೂಹಿಕ ಪ್ರಾರ್ಥನೆ ಹಾಗೂ ಶಿವಕುಮಾರಸ್ವಾಮೀಜಿಯವರ ದಿನನಿತ್ಯದ ಸಾಮಾಜಿಕ ಮೌಲ್ಯಗಳ ಬೋಧನೆ, ಸಿದ್ಧಗಂಗಾ ಮಠವನ್ನು ಇತರೆ ಮಠಗಳಿಗಿಂತ ಭಿನ್ನವಾಗಿಸುವಲ್ಲಿ ಯಶ ಕಂಡಿದೆ. ರಾಷ್ಟ್ರದಲ್ಲಿ ಯಾವ ರಾಜ್ಯ ಸರ್ಕಾರವೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಒಂದೇ ಸ್ಥಳದಲ್ಲಿ ಸಾವಿರಾರು ಮಕ್ಕಳಿಗೆ ಜ್ಞಾನಾರ್ಜನೆ ಮತ್ತು ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ನೀಡಲು ಸಾಧ್ಯವಾಗದಿರುವುದು ನನ್ನೀ ಅಧ್ಯಯನದ ಆಯ್ಕೆಗೆ ಪ್ರಮುಖ ಕಾರಣ.

ತುಮಕೂರು ಜಿಲ್ಲೆಯವಳಾದ ನಾನು ನಮ್ಮ ಜಿಲ್ಲೆಯಲ್ಲಿ ಇಂತಹ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಮಠವನ್ನು ಕಂಡು, ಈ ಜ್ಞಾನದೇಗುಲದ ಆಕರ್ಷಣೆ ಏನು? ಎಂಬುದು ನನ್ನನ್ನು ಕಾಡುತ್ತಿದ್ದ ಪ್ರಶ್ನೆ. ಒಳಹೊಕ್ಕು ನೋಡಿದಾಗ, ಬಡವ, ರೈತ, ಕಾರ್ಮಿಕ, ಗ್ರಾಮೀಣ, ಹಿಂದುಳಿದ ಪ್ರಾಂತ್ಯ ಹೀಗೆ ವಿವಿಧ ಜಾತಿಗಳಿಂದ, ವಿವಿಧ ವರ್ಗಗಳಿಂದ, ವಿವಿಧ ಪ್ರಾಂತ್ಯಗಳಿಂದ ಬಂದ ಬಡಮಕ್ಕಳು, ಶಿವಕುಮಾರಸ್ವಾಮೀಜಿಯವರನ್ನೇ ತಂದೆ-ತಾಯಿಯೆಂದು ಭಾವಿಸಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಯಾವ ಜಾತಿಭೇದವಿಲ್ಲದೆ ಆಹಾರವಿಲ್ಲದವರಿಗೆ ಊಟ, ಸೂರಿಲ್ಲದವರಿಗೆ ಆಶ್ರಯ, ಬಟ್ಟೆಯಿಲ್ಲದವರಿಗೆ ಬಟ್ಟೆ, ಹೊದಿಕೆ ಇಲ್ಲದವರಿಗೆ ಹೊದಿಕೆ..........ಇವುಗಳನ್ನೆಲ್ಲ ಪೂರೈಸುತ್ತಿರುವ ಮಠದ ಅಧ್ಯಯನ ವಿಸ್ತೃತವಾಗಿದ್ದು, ಸಮಷ್ಟಿ ದೃಷ್ಟಿಯಿಂದ ಕಾಣುವಂತಹದ್ದು. ಅಕ್ಷರ, ಅನ್ನ ಮತ್ತು ಆಸನವೆಂಬುದು ವಿಸ್ತೃತ ಅಧ್ಯಯನವೇ ಆಗಿದೆ.

ಶ್ರೀ ಶಿವಕುಮಾರಸ್ವಾಮೀಜಿಯವರು ಕೇವಲ ನಗರ ಪ್ರದೇಶಗಳಲ್ಲಿ ಮಾತ್ರ ಶಾಲಾ-ಕಾಲೇಜುಗಳನ್ನು ಸ್ಥಾಪಿಸದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದರು. ಮುಖ್ಯವಾಗಿ ಪ್ರೌಢಶಾಲೆಗಳ ಸ್ಥಾಪನೆಗೆ ಮಹತ್ವ ನೀಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ತೆರೆದು, ವಿದ್ಯಾವಂತ ಸಮಾಜವನ್ನು ನಿರ್ಮಾಣ ಮಾಡುತ್ತಿರುವ ಹಿನ್ನೆಲೆಯಲ್ಲಿ ನಾನು ಮಠದ ಸಾಮಾಜಿಕ ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು, ಅಧ್ಯಯನದ ವಿಷಯವನ್ನಾಗಿಸಿಕೊಂಡಿದ್ದೇನೆ.

ಶಿವಕುಮಾರಸ್ವಾಮೀಜಿಯವರು ೧೨ನೇ ಶತಮಾನದ ಕ್ರಾಂತಿಪುರುಷ ಬಸವಣ್ಣನ ಅನುಯಾಯಿಗಳೆಂಬುದು ಅವರ ಮಾತಿನಲ್ಲಿ, ಕಾಯಕದಲ್ಲೇ ಅರ್ಥವಾಗುತ್ತದೆ. ಬಡರೈತರ, ಕಾರ್ಮಿಕರ, ದೀನದಲಿತರ, ಹಿಂದುಳಿದವರ, ನಿರ್ಗತಿಕ ಮಕ್ಕಳ ಪಾಲಿಗೆ ಆಶಾದೀಪವಾಗಿ ಶಿಕ್ಷಣ, ವಸತಿ ಮತ್ತು ದಾಸೋಹದ ಮೂಲಕ ಒಂದು ನೆಲೆಯನ್ನು ಒದಗಿಸಿಕೊಟ್ಟ ಒಬ್ಬ ದಾರ್ಶನಿಕ ಎಂದರೆ ತಪ್ಪಾಗಲಾರದು. ಈ ತ್ರಿವಿಧ ದಾಸೋಹಕ್ಕೆ ತಗಲುವ ವೆಚ್ಚವನ್ನು ಹೇಗೆ ಭರಿಸುತ್ತಾರೆಂಬುದು ನನ್ನ ಅಂತರಾಳದ ಪ್ರಮುಖ ಪ್ರಶ್ನೆಯಾಗಿತ್ತು. ಮಠ ಯಾವ ಯಾವ ರೀತಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ ? ಶ್ರೀ ಸಿದ್ಧಗಂಗಾ ಮಠದ ವಿದ್ಯಾರ್ಥಿ ನಿಲಯದಲ್ಲಿ ಯಾವ ಯಾವ ಜಾತಿಯ ವಿದ್ಯಾರ್ಥಿಗಳಿದ್ದಾರೆ ? ಈ ವಿದ್ಯಾರ್ಥಿಗಳು ಯಾವ ಯಾವ ಪ್ರದೇಶದವರಾಗಿದ್ದಾರೆ ? ಎಷ್ಟು ಪ್ರೌಢಶಾಲೆಗಳನ್ನು ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ ? ವಿದ್ಯಾರ್ಥಿಗಳ, ಉಪಾಧ್ಯಾಯರ ಸಂಖ್ಯೆ ಹಾಗೂ ಲಿಂಗಸಂಬಂಧಿ ರಚನೆ ಹೇಗಿದೆ? ಹಣಕಾಸು ಸಂಪನ್ಮೂಲಗಳನ್ನು ಯಾವ ಯಾವ ಮೂಲಗಳಿಂದ ಕ್ರೋಢೀಕರಿಸಿಕೊಳ್ಳಲಾಗುತ್ತದೆ? ಇವೇ ಮೊದಲಾದ ಸಾಮಾಜಿಕ-ಆರ್ಥಿಕಾಂಶಗಳ ಮೇಲೆ ಅಧ್ಯಯನ ಕೈಗೊಳ್ಳುವುದು ಮಹತ್ವದ್ದಾಗಿದೆ. ಮಠ ತುಮಕೂರು ಜಿಲ್ಲೆಯಲ್ಲಿ ನಡೆಸುತ್ತಿರುವ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳನ್ನು ಕುರಿತ ನನ್ನ ಅಧ್ಯಯನವು ಇಂತಹ ವಿಚಾರಗಳ ಮೇಲೆ ಹೆಚ್ಚು ಕೇಂದ್ರಿತವಾಗಿದೆ.

ಇತ್ತೀಚಿನ ಆಧುನಿಕ ತಂತ್ರಜ್ಞಾನದ ಗಂಧಗಾಳಿ ಬೀಸದೇ ಇದ್ದ ಬಹು ಹಿಂದೆಯೇ ಅತ್ಯಂತ ಉತ್ತಮ ಸೌಲಭ್ಯಗಳಿಲ್ಲದ ಕಾಲದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆದ ಅನೇಕ ವಿದ್ಯಾರ್ಥಿಗಳು ಇಂದು ರಾಷ್ಟ್ರ-ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವುದು ಮತ್ತು ರಾಷ್ಟ್ರಕವಿಯಾಗುವ ಮಟ್ಟದ ಪಾಂಡಿತ್ಯ ಪಡೆದದ್ದೂ ನನ್ನ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಲು ಕಾರಣವಾಯಿತು ಎಂದು ಹೇಳಬಯಸುತ್ತೇನೆ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಾವುವೂ ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಕ್ಕೆ ಪರಿಣಾಮವನ್ನುಂಟು ಮಾಡಲು ಸಾಧ್ಯವಾಗಿಲ್ಲ. ಮುಕ್ತ ಸಮಾಜದ ಪೈಪೋಟಿಯನ್ನೆದುರಿಸಲು ಸಿದ್ಧಗಂಗಾ ಮಠ ಬಡಮಕ್ಕಳಿಗೆ ಅವಕಾಶವನ್ನು ಒದಗಿಸಿದೆ. ಬಡ ಗ್ರಾಮೀಣ ಮಕ್ಕಳು ಉಚಿತ ವಸತಿ ಮತ್ತು ಆಹಾರವನ್ನು ಪಡೆದು ಸಮರ್ಥವಾಗಿ ಸಮಾಜವನ್ನೆದುರಿಸಲು ಸಾಧ್ಯವಾಗುವಲ್ಲಿ ಅವಕಾಶಗಳು ಮತ್ತು ಅನುಕೂಲಗಳನ್ನೊದಗಿಸಿ, ಸೇವಾ ವಲಯದಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿದೆ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಾರ್ವತ್ರಿಕ ಶಿಕ್ಷಣಕ್ಕೆ ಇತ್ತೀಚೆಗಷ್ಟೇ ಹೆಚ್ಚಿನ ಒತ್ತನ್ನು ನೀಡುತ್ತಿರುವ ಪ್ರಸಕ್ತ ಸನ್ನಿವೇಶಗಳಲ್ಲಿ, ೬-೧೪ ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬ ಮಹದುದ್ದೇಶವನ್ನು ಇಟ್ಟುಕೊಂಡು ಅದಕ್ಕೆ ಪೂರಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಇತ್ತೀಚಿನ ಬೆಳವಣಿಗೆಯಾಗಿದ್ದರೆ, ಈಗಾಗಲೇ ಅನೇಕ ವರ್ಷಗಳಿಂದ ಮಠದ ವತಿಯಿಂದ ಅನೇಕ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಇಂತಹ ಸರ್ಕಾರದ ಯೋಜನೆಗಳಿಗೂ, ಗಾವುದ ದೂರ ಮುಂದಾಲೋಚಿಸಿ ಸರ್ವರಿಗೂ ಉಚಿತ ಶಿಕ್ಷಣ ನೀಡುತ್ತಿರುವ ಶ್ರೀ ಶಿವಕುಮಾರಸ್ವಾಮೀಜಿಯವರ ಕ್ರಮ ದೂರದೃಷ್ಟಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಪ್ರೌಢಶಾಲಾ ಶಿಕ್ಷಣ ಮಕ್ಕಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಬಹು ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು, ಅಭಿರುಚಿಗೆ ತಕ್ಕಂತೆ ಪ್ರೌಢಿಮೆಯನ್ನು ಸಂಪಾದಿಸಲು ಪೂರಕವಾಗಿರುವ ಶಿಕ್ಷಣವನ್ನು ನೀಡುವ ಇಂತಹ ಪ್ರೌಢಶಾಲಾ ಮಕ್ಕಳ ಸ್ಥಿತಿ-ಗತಿಯ ಬಗ್ಗೆ ಅರಿಯುವ ಉದ್ದೇಶದಿಂದ, ಅತ್ಯಂತ ವಿಶಾಲ ವ್ಯಾಪ್ತಿಯುಳ್ಳ ವಸ್ತು ವಿಷಯವಾಗಿದ್ದರೂ, ನನ್ನ ಅಧ್ಯಯನದ ವ್ಯಾಪ್ತಿಗೆ ಶ್ರೀ ಸಿದ್ಧಗಂಗಾ ಮಠದ ಪ್ರೌಢಶಾಲೆಗಳನ್ನು ತೆಗೆದುಕೊಂಡಿದ್ದು, ಅದರ ಮೇಲೆ ವ್ಯಾಪಕವಾದ ಬೆಳಕು ಚೆಲ್ಲುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಕ್ಕೆ ಹರ್ಷವೆನ್ನಿಸುತ್ತಿದೆ.

೧.೧ ಅಧ್ಯಯನ ವಿಷಯದ ಸೈದ್ಧಾಂತಿಕ ನೆಲೆಗಳು–ಸಮಸ್ಯೀಕರಣ

ಕರ್ನಾಟಕದಲ್ಲಿ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದ ಸಂದರ್ಭದಲ್ಲಿ ವಸಾಹತುಶಾಹಿಗಳು ಕೂಡಾ ಖಾಸಗಿಯವರಿಗೆ ಶಿಕ್ಷಣ ಕ್ಷೇತ್ರ ಪ್ರವೇಶಿಸಲು ಅನುಮತಿಯನ್ನು ನೀಡಿದವು. ಕೇವಲ ಸರ್ಕಾರಿ ಶಾಲೆಗಳಿಂದ ಮಾತ್ರ ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿಲ್ಲವೆಂದರಿತು, ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಹಾಗೂ ಮಠ-ಮಾನ್ಯಗಳಿಗೂ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಬ್ರಿಟಿಷ್ ಸರ್ಕಾರ ಅವಕಾಶ ನೀಡಿದ ನಂತರ ಅನೇಕ ಮಠಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಶಿಕ್ಷಣವನ್ನು ವಿಕೇಂದ್ರೀಕರಣಗೊಳಿಸಲಾಯಿತು. ಇದರಿಂದಾಗಿ ಜ್ಞಾನಪ್ರಸಾರವನ್ನು ಕೈಗೊಳ್ಳಲು ಸಾಧ್ಯವಾಯಿತು. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಶಿಕ್ಷಣ ವ್ಯಾಪಕವಾಗಿ ಹರಡಿತು. ಈ ನಿಟ್ಟಿನಲ್ಲಿ ಕರ್ನಾಟಕದ ಶೈಕ್ಷಣಿಕ ಇತಿಹಾಸದಲ್ಲಂತು ಸಿದ್ಧಗಂಗಾ ಮಠಕ್ಕೆ ವಿಶಿಷ್ಠ ಸ್ಥಾನವಿದೆ. ಕರ್ನಾಟಕದಲ್ಲಿ ಶಿಕ್ಷಣ ಮುನ್ನಡೆಗೆ ಸಿದ್ಧಗಂಗಾ ಮಠ ಸಾಕಷ್ಟು ಅವಿರತ ಪ್ರಯತ್ನ ಮಾಡಿದೆ. ಕೇವಲ ಸರ್ಕಾರದ ವೆಚ್ಚವನ್ನು ಮಾತ್ರ ಕಾದಿದ್ದರೆ, ಶಿಕ್ಷಣ ಇಂದಿನಷ್ಟು ವ್ಯಾಪಕವಾಗಿ ಹರಡುತ್ತಿರಲಿಲ್ಲ. ಉಳ್ಳವರಿಂದ ಧನಸಹಾಯ ಪಡೆದು ಶಾಲಾ-

ಕಾಲೇಜುಗಳನ್ನು ಸ್ಥಾಪಿಸಿ ಇಲ್ಲದವರಿಗೆ ಸದ್ವಿನಿಯೋಗ ಮಾಡುವುದು ಮಠದ ಉದ್ದೇಶವಾಗಿದ್ದರೆ, ಶಿಕ್ಷಣ ಪ್ರಸಾರವು ಅವುಗಳ ಕಾರ್ಯಕ್ರಮಗಳಲ್ಲೊಂದಾಗಿದೆ.

ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಧ್ಯಯನದಲ್ಲಿ ಸಂಪತ್ತು, ಆರೋಗ್ಯ ಮತ್ತು ಶಿಕ್ಷಣ ಒಂದನ್ನೊಂದು ಅವಲಂಬಿಸಿದೆ. ಅಮರ್ತ್ಯ ಸೇನ್ ಕೂಡಾ ಸಾಕ್ಷರತೆಗೆ ಮನುಷ್ಯನ ಬದುಕಿನಲ್ಲಿ 'ಅಂತಸ್ಥ'ವಾದ ಗುಣವಿದೆ ಎಂದಿದ್ದಾರೆ. ಸಮಾಜವು ಶ್ರೇಣೀಕೃತ ವ್ಯವಸ್ಥೆಯಿಂದ ಕೂಡಿದ್ದು, ಇಲ್ಲಿ ಜಾತಿ, ವರ್ಗ, ಲಿಂಗಗಳನ್ನಾಧರಿಸಿದ ಅಸಮಾನತೆಗಳಿವೆ ಎಂದಿದ್ದಾರೆ. ಇಂತಹ ಅಸಮಾನತೆಗಳನ್ನು ಹೋಗಲಾಡಿಸಲು ಶಿಕ್ಷಣ ಪ್ರಸಾರ ಅಗತ್ಯವಾದದ್ದು. ಮಾನವನ ಬದುಕು ಉತ್ತಮವಾಗಿದೆಯೋ ಇಲ್ಲವೋ ಎಂಬುದನ್ನು ಗುರುತಿಸಲು ವರಮಾನದ ಜೊತೆಗೆ ಜನರ ಆರೋಗ್ಯ, ಶಿಕ್ಷಣ, ಸಾಕ್ಷರತೆ, ಶಿಶುಮರಣ ಪ್ರಮಾಣ, ಆಯಸ್ಸು ಮೊದಲಾದ ಸೂಚ್ಯಂಕಗಳನ್ನು ಗಣನೆ ಮಾಡಬೇಕಾಗುತ್ತದೆ. ಇಂತಹ ನಿಟ್ಟಿನಲ್ಲಿ ಮಠವು ಯೋಚಿಸುತ್ತಿದೆ ಮತ್ತು ಯೋಜಿಸುತ್ತಿದೆ.

ಇಂದು ಅಭಿವೃದ್ಧಿಯನ್ನು ಕೇವಲ ರಾಷ್ಟ್ರೀಯ ಆದಾಯ ಇಲ್ಲವೆ ತಲಾದಾಯ ರೂಪದಲ್ಲಿ ಅಳೆಯುವುದಿಲ್ಲ. ಬದಲಿಗೆ ಭೌತಿಕ ಗುಣಮಟ್ಟದ ಜೀವನ ಸೂಚಿ ಸಂಖ್ಯೆಯನ್ನು ಪರಿಗಣಿಸಲಾಗಿದೆ. ಭೌತಿಕ ಗುಣಮಟ್ಟದ ಜೀವನ ಸೂಚಿ ಸಂಖ್ಯೆಯಲ್ಲಿ ಜನರ ಜೀವನಮಟ್ಟ, ಸಾಕ್ಷರತೆ ಮತ್ತು ಶಿಶುಮರಣ ಪ್ರಮಾಣಗಳನ್ನು ಪರಿಗಣಿಸಲಾಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹೂಟೆ-ಉತ್ಪನ್ನ, ಆದಾಯ-ಉಳಿತಾಯಗಳೇ ಅಭಿವೃದ್ಧಿ ನಿರ್ಧಾರಕಗಳಲ್ಲ. ಬದಲಿಗೆ ಶಿಕ್ಷಣ-ಸಾಕ್ಷರತೆಗಳು ಮುಖ್ಯವಾದವು ಎನ್ನಲಾಗಿದೆ. ಇತ್ತೀಚಿನ ಅಧ್ಯಯನಗಳಲ್ಲಿ ಶಿಕ್ಷಣ ಎಲ್ಲರಿಗೂ ತಲುಪಲು ಸಾಧ್ಯವಾಗುತ್ತಿದೆಯೇ ಎಂಬುದು ಮಹತ್ವದ ಪ್ರಶ್ನೆ. ಎಲ್ಲಾ ಜಾತಿ, ಎಲ್ಲಾ ಪ್ರದೇಶದವರು, ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಶಿಕ್ಷಣವನ್ನು ಸಮಾನವಾಗಿ ಪಡೆಯುತ್ತಿದ್ದಾರೆಯೇ ? ಇಲ್ಲವೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಯೇ ? ಹೀಗೆ ಅಭಿವೃದ್ಧಿ ಮತ್ತು ಸಾಮಾಜಿಕ ರಚನೆಗಳ ನಡುವೆ ಒಂದಕ್ಕೊಂದು ಸಂಬಂಧವಿದ್ದರೂ, ಸಾಕಷ್ಟು ಅಂತರವನ್ನು ಕಾಣುತ್ತೇವೆ. ಸಮಾಜದಲ್ಲಿ ಹಿಂದುಳಿದ ವರ್ಗ ಮತ್ತು ಹಿಂದುಳಿದ ಜಾತಿಯವರು ಹೇಗೆ ಶಿಕ್ಷಣ ಪಡೆಯುವಲ್ಲಿ ವಂಚಿತರಾಗುತ್ತಿದ್ದಾರೋ ಹಾಗೆಯೇ ಮಹಿಳೆಯರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಈ ಮೂರು ಗುಂಪುಗಳು ಪಿರಮಿಡ್ಡಿನ ತಳಭಾಗದಲ್ಲಿವೆ. ನನ್ನ ಅಧ್ಯಯನದಲ್ಲಿ ಪ್ರೌಢಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ಆಯಾಮಗಳೆಂದರೆ ಹಿಂದುಳಿದ ಜಾತಿ, ಹಿಂದುಳಿದ ವರ್ಗ, ಗ್ರಾಮೀಣ-ನಗರ, ಮಹಿಳೆಯರು-ಪುರುಷರು

ಇವರುಗಳನ್ನೊಳಗೊಂಡಂತೆ ಅಧ್ಯಯನ ನಡೆಸುವುದಾಗಿದೆ. ಮಠ ಪ್ರೌಢಶಾಲಾ ಅಧ್ಯಯನದಲ್ಲಿ ಜಾತಿ-ಸಂಬಂಧಿ, ಲಿಂಗ-ಸಂಬಂಧಿ ಅಧ್ಯಯನ ಮುಖ್ಯವಾದದ್ದು. ಜಾತಿ-ತಾರತಮ್ಯ ಮತ್ತು ಲಿಂಗ-ತಾರತಮ್ಯ ನಿವಾರಿಸುವಲ್ಲಿ ಮಠ ಪ್ರಯತ್ನಿಸಿದೆಯೇ ? ಎಂಬುದು ಬಹುಮುಖ್ಯವಾದ ಪ್ರಶ್ನೆ.

ಲಿಂಗ ತಾರತಮ್ಯ ಮತ್ತು ಜಾತಿ ತಾರತಮ್ಯ ಪಿಡುಗುಗಳನ್ನು ಕೇವಲ ಪ್ರೌಢಶಾಲೆ ಅಧ್ಯಯನಕ್ಕೆ ಮಾತ್ರ ಸೀಮಿತಗೊಳಿಸದೆ, ಶ್ರೀ ಸಿದ್ಧಗಂಗಾ ಮಠ ನಡೆಸುತ್ತಿರುವ ಉಚಿತ ವಸತಿ ನಿಲಯಕ್ಕೂ ವಿಸ್ತೃತಗೊಳಿಸಿಕೊಂಡಿದ್ದೇನೆ. ಉಚಿತ ವಸತಿ ನಿಲಯ ಮತ್ತು ದಾಸೋಹದಲ್ಲಿ ಮಠ ಜಾತ್ಯತೀತವಾಗಿದೆಯೇ ? ಮಠದ ಸಾಮಾಜಿಕ ಹೊಣೆ ಎಂತಹದ್ದು ? ಎಂಬುದು ಪ್ರಮುಖ ಪ್ರಶ್ನೆಯಾಗಿದೆ.

ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ ಪ್ರೌಢಶಾಲೆಗಳ ಅಧ್ಯಯನ ಪ್ರಮುಖವಾದದ್ದು. ಅದರಲ್ಲೂ ತುಮಕೂರು ಜಿಲ್ಲೆಯ ಒಟ್ಟು ೩೧ ಪ್ರೌಢಶಾಲೆಗಳಲ್ಲಿ ೨೫ ಪ್ರೌಢಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿ, ಶಿಕ್ಷಣದ ತಳಪಾಯವನ್ನು ಗಟ್ಟಿಯನ್ನಾಗಿಸಿಕೊಂಡಿದೆ. ಸಿದ್ಧಗಂಗಾ ಮಠ ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಿಸುತ್ತಿರುವ ಜವಾಬ್ದಾರಿಯುತ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಮಠ ಜ್ಞಾನದಾಸೋಹ ಮತ್ತು ಅನ್ನದಾಸೋಹ ಕಾಯಕದಲ್ಲಿ ತೊಡಗಿಕೊಂಡಿದ್ದು, ಸಾಮಾಜಿಕ ಜವಾಬ್ದಾರಿಯನ್ನು ಹೊತ್ತಿದೆ. ಹಾಗಾದಲ್ಲಿ ಸಿದ್ಧಗಂಗಾ ಮಠದ ಶೈಕ್ಷಣಿಕ ಚಟುವಟಿಕೆಗಳ ಸಾಮಾಜಿಕ ಸ್ವರೂಪ ಯಾವ ರೀತಿಯದ್ದು ? ಸಾಮಾಜಿಕ ತಾರತಮ್ಯವಾದ ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ, ಬಡವ-ಶ್ರೀಮಂತ ಮೊದಲಾದ ಸಾಮಾಜಿಕ ಅನಿಷ್ಟಗಳಿಂದ ಸಿದ್ಧಗಂಗಾ ಮಠ ನಡೆಸುತ್ತಿರುವ ಶಾಲೆಗಳು ಮುಕ್ತವಾಗಿವೆಯೇ ? ಎಷ್ಟರ ಮಟ್ಟಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಿದೆ ? ಉಚಿತ ವಸತಿ ಸೌಲಭ್ಯವನ್ನು ಯಾವ ಯಾವ ಜಾತಿಯ ಮಕ್ಕಳು ಪಡೆಯುತ್ತಿದ್ದಾರೆ ? ಮಠ ಪೂರೈಸುತ್ತಿರುವ ಅಕ್ಷರ ಹಾಗೂ ಅನ್ನ ಇವುಗಳ ಸಾಮಾಜಿಕ ಸ್ವರೂಪವನ್ನು ಗುರುತಿಸುವ ಅಗತ್ಯವಿದೆ. ಹಾಗೆಯೇ ಹಣಕಾಸಿನ ಮೂಲಗಳನ್ನು ಅಧ್ಯಯನ ಮಾಡುವುದಾಗಿದೆ. ಶಿಕ್ಷಣದ ಮೇಲಿನ ಆದಾಯ ಮತ್ತು ವೆಚ್ಚ ಅಧ್ಯಯನ ಮುಖ್ಯವಾದದ್ದು. ಮಠ ಶಾಲಾ-ಕಾಲೇಜುಗಳಿಗೆ ಹಣಕಾಸಿನ ಸಂಪನ್ಮೂಲವನ್ನು ಹೇಗೆ ಕ್ರೋಢೀಕರಿಸುತ್ತದೆ ? ಉಚಿತ ದಾಸೋಹ ಮತ್ತು ವಸತಿ ನಿಲಯಕ್ಕೆ ಹೇಗೆ ಹಣಕಾಸು ಸಂಪನ್ಮೂಲವನ್ನು ಕ್ರೋಢೀಕರಿಸುತ್ತದೆ ? ಸರ್ಕಾರದಿಂದ ಸಹಾಯಧನವನ್ನೇನಾದರೂ ಪಡೆಯುತ್ತಿದೆಯೇ ? ಶಿಕ್ಷಕರ-ವಿದ್ಯಾರ್ಥಿಗಳ ಅನುಪಾತವೆಷ್ಟು ? ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಎಷ್ಟು ಜನ ಸದಸ್ಯರಿರುವರು ? ಆಡಳಿತ ಮಂಡಳಿಯ ಸದಸ್ಯರುಗಳ

ಸಾಮಾಜಿಕ ಸ್ವರೂಪ ಹೇಗಿದೆ ? ಆಡಳಿತ ಮಂಡಳಿಯಲ್ಲಿ ಒಂದೇ ಜಾತಿಯವರಿದ್ದಾರೋ ? ಇಲ್ಲವೆ ಭಿನ್ನ ಭಿನ್ನ ಜಾತಿಯವರು ಇದ್ದಾರೆಯೋ?

ಹೀಗೆ ವಿದ್ಯಾರ್ಥಿಗಳ ಜಾತಿ ಮತ್ತು ಲಿಂಗ ಸ್ವರೂಪ, ನೌಕರರ ಜಾತಿ ಮತ್ತು ಲಿಂಗ ಸ್ವರೂಪ ಮತ್ತು ಆಡಳಿತ ಮಂಡಳಿಯ ಜಾತಿ ಸ್ವರೂಪವನ್ನು ಅಧ್ಯಯನ ಮಾಡಲಾಗುತ್ತದೆ. ಈ ಅಧ್ಯಯನದ ಮೂಲಕ ಮಠ ಇತರೆ ಮಠಗಳಿಗಿಂತ ಭಿನ್ನವಾಗಿದೆಯೇ ಎಂಬುದನ್ನು ಗುರುತಿಸುವುದು ಗುರುತರವಾದ ಹೊಣೆಯಾಗಿದೆ. ಆರ್ಥಿಕ ಪ್ರಗತಿ ಮತ್ತು ಶಿಕ್ಷಣದ ಉತ್ಕರ್ಷೆ ಇವೆರಡೂ ಪರಸ್ಪರ ಅವಲಂಬಿತವಾದವುಗಳು. ಆದ್ದರಿಂದ ಸಿದ್ಧಗಂಗಾ ಮಠದ ಶೈಕ್ಷಣಿಕ ಅಧ್ಯಯನ ಸೀಮಿತವಾಗಿರದೆ ವಿಸ್ತೃತವಾಗಿದ್ದು, ಇದೊಂದು ಸಮಗ್ರ ಅಧ್ಯಯನವಾಗಿದೆ.

೧.೨ ಅಧ್ಯಯನದ ಉದ್ದೇಶಗಳು

ಲಿಂಗಭೇದವೆಣಿಸದೆ, ಜಾತಿಭೇದವೆಣಿಸದೆ ಶಿಕ್ಷಣ ನೀಡುವ ಯೋಜನೆಯನ್ನು ಮಠ ಕೈಗೊಂಡಿದೆ. ಉಳ್ಳವರು ಎಲ್ಲಾದರೂ ಶಿಕ್ಷಣವನ್ನು ಪಡೆಯುವರು. ಆದರೆ ಇಲ್ಲದವರು ಶಿಕ್ಷಣ ಪಡೆಯಲು ಸಾಧ್ಯವಿಲ್ಲವೆಂದರಿತು, ಮಠ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿತು. ಗ್ರಾಮೀಣ ಪ್ರದೇಶದ ಮಕ್ಕಳು ನಗರ ಪ್ರದೇಶದ ಶಿಕ್ಷಣವನ್ನು ಪಡೆಯುವಂತಾಗಲೆಂದು ಬಯಸಿ ಉಚಿತ ವಸತಿ ನಿಲಯ ಮತ್ತು ದಾಸೋಹವನ್ನು ಪ್ರಾರಂಭಿಸಿತು. ಸಿದ್ಧಗಂಗಾ ಮಠ ಲಿಂಗಾಯತ ಮಠವಾಗಿರುವುದರಿಂದ ಜಾತ್ಯತೀತವಾಗಿ ತನ್ನ ಸೇವೆಯನ್ನು ಸಲ್ಲಿಸುತ್ತಿದೆಯೇ? ಎಂಬುದು ಪ್ರಮುಖ ಪ್ರಶ್ನೆ. ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಎಲ್ಲರೂ ಶಿಕ್ಷಣ ಪಡೆಯಲು ಸಾಧ್ಯವಾಗಿದೆಯೇ ? ಮಠ ಉಚಿತ ವಸತಿ ಮತ್ತು ದಾಸೋಹ ವ್ಯವಸ್ಥೆಯನ್ನು ಹೆಣ್ಣು ಮಕ್ಕಳಿಗೂ ನೀಡಿದೆಯೇ ? ಲಿಂಗಭೇದ, ಜಾತಿಭೇದವಿಲ್ಲದೆ ಮಠ ಹೇಗೆ ಶಿಕ್ಷಣ ಕ್ಷೇತ್ರದಲ್ಲಿ ಇಷ್ಟು ಎತ್ತರಕ್ಕೆ ಸಾಗಿದೆ ಎಂಬುದು ಪ್ರಮುಖ ಚಿಂತನೆಯಾಗಿದೆ. ಆದ್ದರಿಂದ ನಿರ್ದಿಷ್ಟವಾಗಿ ನನ್ನ ಅಧ್ಯಯನದ ಉದ್ದೇಶಗಳು ಈ ಕೆಳಕಂಡಂತಿವೆ.

೧. ಸಮಾಜ, ಶಿಕ್ಷಣ ಮತ್ತು ಧಾರ್ಮಿಕ ಸಂಸ್ಥೆಗಳು ಇವುಗಳ ಅಂತರ್-ಸಂಬಂಧಗಳನ್ನು ಅಧ್ಯಯನ ಮಾಡುವುದು.

೨. ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಸಾಮಾಜಿಕ ಸ್ಥಿತ್ಯಂತರಗಳಿಗೆ ಸಿದ್ಧಗಂಗಾ ಮಠದ ಶಿಕ್ಷಣ ಸಂಸ್ಥೆಗಳು ಹೇಗೆ ಸ್ಪಂದಿಸುತ್ತಿವೆ ಎಂದು ವಿಶ್ಲೇಷಿಸುವುದು.

೩. ಸಿದ್ಧಗಂಗಾ ಮಠ ನಡೆಸುತ್ತಿರುವ ತುಮಕೂರು ಜಿಲ್ಲೆಯ ಪ್ರೌಢಶಾಲೆಗಳಲ್ಲಿನ ಉದ್ಯೋಗಿಗಳ ಹಾಗೂ ವಿದ್ಯಾರ್ಥಿಗಳ ಸಾಮಾಜಿಕ ಸ್ವರೂಪವನ್ನು ಚರ್ಚಿಸುವುದು.

೪. ಸಿದ್ಧಗಂಗಾ ಮಠ ಗ್ರಾಮೀಣ ಪ್ರೌಢಶಾಲೆಗಳ ಶಿಕ್ಷಕರ–ವಿದ್ಯಾರ್ಥಿಗಳ ಅನುಪಾತವನ್ನು ಅಧ್ಯಯನ ಮಾಡುವುದು.

೫. ಸಿದ್ಧಗಂಗಾ ಮಠ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಿದೆಯೇ ಎಂಬುದನ್ನು ಅಧ್ಯಯನ ಮಾಡುವುದು.

೬. ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಹಾಗೂ ಸಂಘಟನೆ ಕುರಿತು ಚರ್ಚಿಸಲಾಗುವುದು ಹಾಗೂ ಆಡಳಿತ ಮಂಡಳಿಯ ಸದಸ್ಯರ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವುದು.

೭. ಉಚಿತ ವಿದ್ಯಾರ್ಥಿ ನಿಲಯಗಳನ್ನು ಬಹಳ ಕಾಲದಿಂದಲೂ ನಡೆಸಿಕೊಂಡು ಬರುತ್ತಿರುವ ಸಿದ್ಧಗಂಗಾ ಮಠದ ಶಿಕ್ಷಣ ಸಂಸ್ಥೆಗಳ ಮತ್ತು ವಿದ್ಯಾರ್ಥಿ ನಿಲಯಗಳ ಸಾಮಾಜಿಕ ಆಯಾಮಗಳನ್ನು ವಿಶ್ಲೇಷಿಸುವುದು.

೮. ಶಿಕ್ಷಣ ಕ್ಷೇತ್ರದಲ್ಲಿನ ತನ್ನ ಚಟುವಟಿಕೆಗಳನ್ನು ನಡೆಸುವ ಮಠವು ಯಾವ ಯಾವ ಮೂಲಗಳಿಂದ ಹಣಕಾಸು ಸಂಪನ್ಮೂಲವನ್ನು ಕ್ರೋಢೀಕರಿಸುತ್ತದೆ ಹಾಗೂ ವೆಚ್ಚಗಳನ್ನು ಕೈಗೊಳ್ಳುತ್ತದೆಂದು ಚರ್ಚಿಸುವುದು.

ಮೇಲ್ಕಂಡ ಉದ್ದೇಶಗಳು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಮುಖ್ಯವಾಗಿ ಕಂಡು ಬರುವ ಪ್ರಮುಖ ಅಂಶಗಳಾಗಿವೆ.

೧.೩ ಅಧ್ಯಯನದ ವಿಧಾನ

ಮೇಲ್ಕಂಡ ವಿಷಯದ ಅಧ್ಯಯನವು ಮೂಲಭೂತವಾಗಿ ಎಂಪಿರಿಕಲ್ ಅಥವಾ ಅನುಭವಸಿದ್ಧವಾದ ಅಧ್ಯಯನ. ಎಂಪಿರಿಕಲ್ ಅಧ್ಯಯನವು ಪ್ರಧಾನವಾಗಿದ್ದರೂ, ಸೈದ್ಧಾಂತಿಕ ಸಂಗತಿಗಳನ್ನು ಅಧ್ಯಯನದಲ್ಲಿ ಪರಿಗಣಿಸಲಾಗುವುದು. ಸಂಶೋಧನಾ ವಿಧಾನಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ವಿಜ್ಞಾನಗಳಲ್ಲಿ ಎರಡು ವಿಭಿನ್ನ ತಜ್ಞರ ಚಿಂತನೆಗಳನ್ನು ಕಾಣುತ್ತೇವೆ - ಪಾಸಿಟಿವಿಸಂ ಮತ್ತು ಆಂಟಿ–ಪಾಸಿಟಿವಿಸಂ.

ಪಾಸಿಟಿವಿಸಂ ಚಿಂತನಾಕಾರರ ಪ್ರಕಾರ ಸಂಶೋಧನೆಗಳಲ್ಲಿ ವಸ್ತುನಿಷ್ಠ ಅಂಶಗಳನ್ನು ಪರಿಗಣಿಸಿ, ಪರಿಮಾಣಾತ್ಮಕ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಅಂಕಿ–ಅಂಶಗಳಿಲ್ಲದೆ, ಪೂರ್ಣ ಪ್ರಮಾಣದ ಅಧ್ಯಯನ ಕೈಗೊಳ್ಳಲು ಸಾಧ್ಯವಿಲ್ಲ. ಕಾರಣ–ಪರಿಣಾಮಗಳನ್ನು ಅವಲೋಕಿಸಿ ವೈಜ್ಞಾನಿಕವಾಗಿ ವಿಚಾರ ಮಾಡಲಾಗುತ್ತದೆಂದು ವಿವರಿಸಿದ್ದಾರೆ. ವಸ್ತುನಿಷ್ಠ ಅಂಶಗಳಿಗಿಂತ ವ್ಯಕ್ತಿನಿಷ್ಠ ಅಂಶಗಳೇ ಪ್ರಧಾನವಾದದ್ದೆಂಬುದು ಆಂಟಿ–ಪಾಸಿಟಿವಿಸಂ ತಜ್ಞರ ಅಭಿಪ್ರಾಯ. ಗುಣಾತ್ಮಕ ವಿಧಾನಗಳನ್ನು ಸಂಶೋಧನಾ ಅಧ್ಯಯನಗಳಲ್ಲಿ ಅಳವಡಿಸಿಕೊಳ್ಳಬೇಕೆಂದಿದ್ದಾರೆ. ಆದರೆ ಯಾವುದೇ ಒಂದು ಸಂಶೋಧನಾ ಅಧ್ಯಯನ ಪರಿಪೂರ್ಣವಾಗಬೇಕಾದರೆ, ಅದರ ಪರಿಪೂರ್ಣ ಜ್ಞಾನ ಹೊಂದಬೇಕಾದರೆ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳೆರಡನ್ನೂ ಅಳವಡಿಸಿಕೊಳ್ಳಬೇಕು. ಸಾಮಾಜಿಕ ವಿಜ್ಞಾನಗಳಲ್ಲಿ ಒಂದನ್ನೊಂದು ಬೇರ್ಪಡಿಸಿ ಸಂಶೋಧನೆಯನ್ನು ಕೈಗೊಳ್ಳುವುದು ಕಠಿಣವಾದದ್ದು.

ಸಮಾಜಶಾಸ್ತ್ರಜ್ಞ ಗಿಡ್ಡನ್ ಈ ರೀತಿಯ ವಿಭಜನೆಯನ್ನು ತಿರಸ್ಕರಿಸಿದ್ದಾನೆ. ಕಾರಣ–ಪರಿಣಾಮಗಳನ್ನು ಅಧ್ಯಯನ ಮಾಡುವುದರೊಂದಿಗೆ ಭಾವನಾತ್ಮಕ ಅಂಶಗಳಿಗೂ ಅವಕಾಶ ಕಲ್ಪಿಸಬೇಕೆಂದಿದ್ದಾನೆ. ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಅಂಶಗಳು ಏಕೀಕರಣಗೊಂಡಾಗಲೇ ಅಧ್ಯಯನ ಸಾಧ್ಯ. ಆದ್ದರಿಂದ ಅಧ್ಯಯನಕ್ಕೊಳಪಟ್ಟ ವಿಷಯವನ್ನು ವೀಕ್ಷಿಸಿ, ಅವಲೋಕಿಸಿ, ಸಂಗ್ರಹಿಸಿ, ಒಂದು ಸಾಮಾನ್ಯ ನಿರ್ಣಯಕ್ಕೆ ಬರಲು ಶ್ರಮಿಸಲಾಗುತ್ತದೆ (ಜಯರಾಂ ಎನ್., ೧೯೮೯, ಪು.೪–೧೦). ಗೂಡೆ ಮತ್ತು ಹ್ಯಾಟ್‌ರವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ–"Modern research must reject as a false dichotomy the separation between the statistical approach and non-statistical approach. Qualification does not ensure rigour of proof any more than the use of insight guarantees the significance of the research" (ಗೂಡೆ/ಹ್ಯಾಟ್, ೧೯೫೨, ಪು. ೩೧೩).

ಅಧ್ಯಯನದ ಅವಧಾರಣೆ ಎಂಪಿರಿಕಲ್ ಅಧ್ಯಯನವಾದರೂ, ಪರಿಮಾಣಾತ್ಮಕ ಅಧ್ಯಯನವು ಅಷ್ಟೇ ಮುಖ್ಯವಾದುದು. ಈ ಅಧ್ಯಯನದಲ್ಲಿ ಯಾವುದೇ ಗಣಿತಶಾಸ್ತ್ರೀಯ ಸೂತ್ರಗಳನ್ನು ಬಳಸದೇ, ಅವಶ್ಯವಿರುವ ವಿಮರ್ಶಾತ್ಮಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ನನ್ನ ಅಧ್ಯಯನದಲ್ಲಿ ಮಠ ಕಾರಣವಾದರೆ, ಶಿಕ್ಷಣ ಅದರ ಪರಿಣಾಮವಾಗುತ್ತದೆ. ಶಿಕ್ಷಣ ಮತ್ತು ಸಾಕ್ಷರತೆ ಹೇಗೆ ಮಾನವಮುಖಿ ಅಭಿವೃದ್ಧಿ ಸೂಚಿಯಲ್ಲಿ ಪ್ರಧಾನವಾದ ನಿಯೋಗಿಗಳಾಗಿವೆಯೋ, ಹಾಗೆಯೇ ಮಠ ಕೇಂದ್ರಿತ ಅಧ್ಯಯನದಲ್ಲಿಯೂ ಶಿಕ್ಷಣ ಮತ್ತು ಸಾಕ್ಷರತೆಗಳೇ ಪ್ರಮುಖ ನಿಯೋಗಿಗಳಾಗಿವೆ. 'ಧರ್ಮ'ದ ಚಿಂತನೆಯನ್ನು ಬದಿಗಿಟ್ಟು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿರುವ ಶಿಕ್ಷಣ ಮತ್ತು ಸಾಕ್ಷರತೆಯನ್ನು ಅಧ್ಯಯನದ ಕೇಂದ್ರ ಬಿಂದುವೆಂದು ಪರಿಗಣಿಸಲಾಗಿದೆ.

ತುಮಕೂರು ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಠ ನಡೆಸುತ್ತಿರುವ ಪ್ರೌಢಶಾಲೆಗಳ ಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ, ಲಿಂಗ-ಸಂಬಂಧಿ ಅಧ್ಯಯನ, ಶಿಕ್ಷಕರ-ವಿದ್ಯಾರ್ಥಿಗಳ ಅನುಪಾತ, ಶಿಕ್ಷಣ ಕ್ಷೇತ್ರಕ್ಕಾಗಿ ಮಠ ಹೂಡುತ್ತಿರುವ ಬಂಡವಾಳ, ಉಚಿತ ವಸತಿ ನಿಲಯ ಮತ್ತು ದಾಸೋಹ, ವಿದ್ಯಾರ್ಥಿಗಳ ಸಂಖ್ಯೆ, ಪ್ರದೇಶವಾರು ಸಂಖ್ಯೆ, ಜಾತಿವಾರು ಸಂಖ್ಯೆ, ಪ್ರವರ್ಗವಾರು, ಮಠ ಉಚಿತ ದಾಸೋಹಕ್ಕೆ ಮತ್ತು ವಸತಿ ನಿಲಯಗಳಿಗೆ ಪಡೆಯುತ್ತಿರುವ ಆದಾಯದ ಮೂಲಗಳು ಮತ್ತು ಕೈಗೊಳ್ಳುತ್ತಿರುವ ವೆಚ್ಚಗಳು-ಇವೇ ಪ್ರಮುಖವಾದ ಸಮಾಜೋರ್ಥಿಕ ಸಂಬಂಧಗಳನ್ನು ಅಧ್ಯಯನ ಮಾಡಲಾಗುತ್ತದೆ.

ಈ ಮೇಲ್ಕಂಡ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಲಾಯಿತು. ಇದರೊಂದಿಗೆ ವಿದ್ಯಾರ್ಥಿಗಳು, ಸಾರ್ವಜನಿಕರು ಮತ್ತು ಶಾಲೆಯ ಮುಖ್ಯಸ್ಥರೊಂದಿಗೆ ಸಂದರ್ಶನ ನಡೆಸಲಾಯಿತು. ಪ್ರಶ್ನಾವಳಿ ಮತ್ತು ಚರ್ಚೆಯ ಮೂಲಕವೂ ಮಾಹಿತಿಯನ್ನು ಪಡೆಯಲಾಯಿತು. ಮಾಹಿತಿಯನ್ನು ಪಡೆಯಲು ಕ್ಷೇತ್ರಕಾರ್ಯಕ್ಕಾಗಿ ಹಳ್ಳಿಗಳನ್ನು ಆಯ್ದುಕೊಂಡು, ಹಳ್ಳಿಗಳ ಆಯ್ಕೆಯಲ್ಲಿ ರ್‍ಯಾಂಡಮ್ ಪದ್ಧತಿಯನ್ನು ಅನುಸರಿಸಲಾಯಿತು. ಗ್ರಂಥಾಲಯಗಳಿಂದಲೂ ಹಾಗೂ ವಿಷಯಕ್ಕೆ ಸಂಬಂಧಪಟ್ಟಂತೆ ನಡೆದಿರುವ ಸಂಶೋಧನೆಗಳ ಮೂಲಕವೂ ಮಾಹಿತಿಯನ್ನು ಪಡೆಯಲಾಯಿತು.

ಮೇಲ್ಕಂಡ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮೂಲಗಳಿಗಿಂತ ಆನುಷಂಗಿಕ ಮೂಲಗಳಿಂದಲೇ ಅಧಿಕ ಮಾಹಿತಿಯನ್ನು ಪಡೆಯಲಾಗಿದ್ದು, ಪ್ರಾಥಮಿಕ ಮೂಲಗಳಿಗಿಂತ ಆನುಷಂಗಿಕ ಮೂಲಗಳಿಂದಲೇ ನನ್ನ ಅಧ್ಯಯನವನ್ನು ಕಟ್ಟಲಾಗಿದೆ. ಆದರೂ ಕರ್ನಾಟಕದಲ್ಲಿ ವಸಾಹತು-ಪೂರ್ವ ಶೈಕ್ಷಣಿಕ ಇತಿಹಾಸ, ವಸಾಹತೋತ್ತರದ-ಶೈಕ್ಷಣಿಕ ಇತಿಹಾಸ, ಸಾಮಾಜಿಕ, ರಾಜಕೀಯ ಚಳವಳಿಗಳು, ಮಠ ಬೆಳೆದು ಬಂದ ಹಾದಿ, ಮಠಗಳ ವಿಭಜನೆ ಇವುಗಳ ಅಧ್ಯಯನಗಳಿಗಾಗಿ ಬೆಂಗಳೂರಿನ ಐಸೆಕ್ ಗ್ರಂಥಾಲಯದಿಂದ ಮಾಹಿತಿ ಪಡೆದಿದ್ದೇನೆ. ಮೈಸೂರು ವಿಶ್ವವಿದ್ಯಾಲಯದ ಗ್ರಂಥಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಅಧ್ಯಯನವನ್ನು ನಡೆಸಿ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ. ಸಿದ್ಧಗಂಗಾ ಮಠದ ಗ್ರಂಥಾಲಯ, ತುಮಕೂರಿನ ಸರ್ಕಾರಿ ಕಲಾ ಕಾಲೇಜಿನ ಗ್ರಂಥಾಲಯಗಳನ್ನು ನನ್ನ ಅಧ್ಯಯನಕ್ಕಾಗಿ ಬಳಸಿಕೊಂಡಿರುವೆನು. ನನಗೆ ಮಾರ್ಗದರ್ಶಕರಾದ ಡಾ.ಟಿ.ಆರ್.ಚಂದ್ರಶೇಖರ್‌ರವರ ಖಾಸಗಿ ಗ್ರಂಥಾಲಯದಿಂದಲೂ ನನ್ನ ಅಧ್ಯಯನಕ್ಕೆ ಗ್ರಂಥಗಳನ್ನು ಬಳಸಿಕೊಂಡಿರುವೆನು. ತುಮಕೂರಿನ ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಡಾ.ಡಿ.ಎನ್. ಯೋಗೀಶ್‌ರವರ ಖಾಸಗಿ ಗ್ರಂಥಾಲಯದಿಂದಲೂ ಗ್ರಂಥಗಳನ್ನು ಬಳಸಿಕೊಂಡಿರುವೆನು. ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರಾದ ಶ್ರೀ ಕವಿತಾಕೃಷ್ಣರ ಗ್ರಂಥಾಲಯವನ್ನು ನನ್ನ ಅಧ್ಯಯನಕ್ಕೆ ಬಳಸಿಕೊಂಡಿರುವೆನು.

ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲು, ಬೆಂಗಳೂರಿನ ರಾಜ್ಯ ಯೋಜನಾ ಇಲಾಖೆಗೂ (ಸರ್ವ ಶಿಕ್ಷಣ ಅಭಿಯಾನ ಮಿಷನ್) ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದೇನೆ. ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದಲೂ ಮಾಹಿತಿ ಸಂಗ್ರಹಿಸಿರುವೆನು. ತುಮಕೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್‌ನ ಆಡಳಿತ ವರದಿಯಿಂದಲೂ ಮಾಹಿತಿ ಸಂಗ್ರಹಿಸಿರುವೆನು. ಸಿದ್ಧಗಂಗಾ ಮಠದ ಅನಾಥಾಲಯ ಮತ್ತು ಉಚಿತ ವಸತಿ ನಿಲಯ ಹಾಗೂ ದಾಸೋಹದ ಮಾಹಿತಿಯನ್ನು, ಸಿದ್ಧಗಂಗಾ ಮಠದ ಆಡಳಿತ ಕಛೇರಿಯಿಂದ ಪಡೆದಿರುವೆನು. ಸಿದ್ಧಗಂಗಾ ಮಠದ ವಾರ್ಷಿಕ ವರದಿ ಪುಸ್ತಕಗಳನ್ನು ಆಡಳಿತ ಕಛೇರಿಯಿಂದಲೇ ಪಡೆದಿರುವೆನು. ಸಿದ್ಧಗಂಗಾ ಮಠದ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ.ನಂಜುಂಡಪ್ಪನವರು ಮಾಹಿತಿ ಸುಲಭವಾಗಿ ಮತ್ತು ಶೀಘ್ರವಾಗಿ ದೊರೆಯುವಂತೆ ಅನುವು ಮಾಡಿಕೊಟ್ಟರು ಹಾಗೂ ಇವರೊಡನೆ ಹಲವಾರು ಬಾರಿ ಚರ್ಚಿಸಿ ವಿಷಯಗಳನ್ನು ಸಂಗ್ರಹಿಸಿದ್ದೇನೆ.

ಸಿದ್ಧಗಂಗಾ ಮಠದ ಒಟ್ಟು ೩೧ ಪ್ರೌಢಶಾಲೆಗಳ ಪರಿಪೂರ್ಣ ಮಾಹಿತಿಯನ್ನು ೩೧ ಪ್ರೌಢಶಾಲೆಗಳಿಂದಲೂ ಪಡೆದಿರುವೆನು. ಪ್ರತಿಯೊಂದು ಶಾಲೆಗಳಿಂದಲೂ ವಿದ್ಯಾರ್ಥಿಗಳ ದಾಖಲಾತಿ, ಜಾತಿ–ಸ್ವರೂಪ, ಲಿಂಗ–ಸ್ವರೂಪದ ಬಗ್ಗೆ ಪೂರ್ಣ ಮಾಹಿತಿಯನ್ನು ಪಡೆದಿದ್ದೇನೆ. ಹಾಗೆಯೇ ನೌಕರರ ಮಾಹಿತಿಯನ್ನು ಪಡೆದಿದ್ದೇನೆ. ಬೋಧಕ–ಬೋಧಕೇತರರು, ಸ್ತ್ರೀ–ಪುರುಷರು, ಇವರ ಜಾತಿವಾರು, ಲಿಂಗಾವಾರು ಮಾಹಿತಿಯನ್ನು ಪ್ರೌಢಶಾಲೆಗಳಿಂದಲೇ ಸಂಗ್ರಹಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸಹಜವಾದ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ನೀಡಿದಾಗ, ಮಠ ನೀಡುವ ಶಿಕ್ಷಣದ ಬಗ್ಗೆ ಹೆಚ್ಚು ಒಲವಿರುವುದು ಕಂಡುಬಂದಿತು. ಕಾರಣ ಉತ್ತಮವಾದ ಕಟ್ಟಡಗಳು, ಗ್ರಂಥಾಲಯಗಳು, ಶೌಚಾಲಯಗಳು ಮೊದಲಾದ ಸಾಮಾಜಿಕ ಮೂಲಭೂತ ಸೌಕರ್ಯಗಳನ್ನು ಮಠ ಒದಗಿಸಿರುವುದು ಸ್ಪಷ್ಟವಾಗುತ್ತದೆ.

೧.೪ ಅಧ್ಯಯನದ ಮಹತ್ವ

ಪ್ರತಿಯೊಂದು ರಾಷ್ಟ್ರವು ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದೆ. ಅದರಂತೆ ಕರ್ನಾಟಕದಲ್ಲಿಯೂ ಧಾರ್ಮಿಕ ಸಂಸ್ಥೆಗಳ ಪಾತ್ರ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವವಾದದ್ದು. ಸರ್ಕಾರಗಳು ಸ್ವಾತಂತ್ರ್ಯ ಪೂರ್ವದಲ್ಲಿ ಶಾಲೆಗಳನ್ನು ಸ್ಥಾಪಿಸಲು ವಿಫಲವಾದ ಸಂದರ್ಭದಲ್ಲಿ ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ತುಮಕೂರು ಜಿಲ್ಲೆಯಲ್ಲಿಯಂತು ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಒಂದೇ ಒಂದು ಸರ್ಕಾರಿ ಪ್ರೌಢಶಾಲೆಯಿತ್ತು. ಚಾರ್ಲ್ಸ್‌ವುಡ್‌ನ ಪರಿಪತ್ರ ಖಾಸಗಿ ಸಂಸ್ಥೆಗಳಿಗೆ ಅನುದಾನವನ್ನು ನೀಡಲಾಗುವುದೆಂದು ಘೋಷಿಸಿದ ನಂತರವೇ ಅನೇಕ ಖಾಸಗಿ ಸಂಸ್ಥೆಗಳು ಮತ್ತು ಮಠಮಾನ್ಯಗಳು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದವು.

ಈ ದಿಸೆಯಲ್ಲಿ ತುಮಕೂರಿನ ಶ್ರೀ ಸಿದ್ಧಗಂಗಾ ಮಠ ಬಡವರ, ದೀನದಲಿತರ, ರೈತಾಪಿ ವರ್ಗದವರ ಜನರಿಗೆ ಶಿಕ್ಷಣ ಸಂಸ್ಥೆಗಳನ್ನು ತೆರೆದು ದಾರಿದೀಪವಾಯಿತು. ಸಾರಿಗೆ–ಸಂಪರ್ಕಗಳು ಸಾಕಷ್ಟು ಅಭಿವೃದ್ಧಿ ಹೊಂದಿಲ್ಲದಿರುವ ಕಾಲದಲ್ಲಿಯೇ ಮಠದ ಉಚಿತ ವಸತಿ ಮತ್ತು ದಾಸೋಹ ವ್ಯವಸ್ಥೆಯನ್ನು ಕಲ್ಪಿಸಿತು. ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದ ಶಿಕ್ಷಣಾರ್ಥಿಗಳಾಗಿ ಆಗಮಿಸುವುದರ ಮೂಲಕ ಮಠದ ಆಶ್ರಯವನ್ನು ಪಡೆದರು. ಮಠದ ಆಶ್ರಯದಿಂದ ಬೆಳೆದ ವಿದ್ಯಾರ್ಥಿ ಉತ್ತಮ ಪ್ರಜೆಯಾಗುತ್ತಾನೆಂಬುದು ನಾಡಿನ ಜನರ ಸಾಮಾನ್ಯ ಮಾತಾಗಿತ್ತು.

ಅಮರ್ತ್ಯ ಸೇನ್‌ನ ಧಾರಣಶಕ್ತಿಯನ್ನು ಇಲ್ಲಿ ಉಲ್ಲೇಖಿಸಬಹುದು. ಅಂದರೆ ಅಭಿವೃದ್ಧಿಯು ಒದಗಿಸುವ ಅವಕಾಶಗಳನ್ನು ಪಡೆದುಕೊಳ್ಳಲು ಬೇಕಾದ ಸಾಮರ್ಥ್ಯವೇ ಧಾರಣಶಕ್ತಿ. ಗ್ರಾಮೀಣ ಪ್ರದೇಶದಲ್ಲಿ ಜನತೆ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಪಡೆಯುವಂತೆ ನೆರವಾಗಲು ಎಂಥಹ ಧಾರಣಶಕ್ತಿಯನ್ನು ಹೊಂದಿದ್ದಾರೆಂಬುದು ಪ್ರಮುಖವಾದುದು. ನೀಡಿರುವ ಅವಕಾಶಗಳನ್ನು ಯಾವ ರೀತಿ ಪಡೆಯುತ್ತಿದ್ದಾರೆಂಬುದು ಮುಖ್ಯ. ಸಿದ್ಧಗಂಗಾ ಮಠ ೧೯೪೦ ರಿಂದೀಚೆಗೆ ತುಮಕೂರು ಜಿಲ್ಲೆಯಾದ್ಯಂತ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಶಾಲೆಗಳನ್ನು ತೆರೆಯಲು ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಿದೆ. ಆಡಂ ಸ್ಮಿತ್, ಜೆ.ಎಸ್.ಮಿಲ್, ಶ್ಲಟ್ಜ್, ಅಂಬೇಡ್ಕರ್, ಅಮರ್ತ್ಯ ಸೇನ್‌ರಂತೆ, ಶಿವಕುಮಾರಸ್ವಾಮೀಜಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ರಾಷ್ಟ್ರೀಯ ಆದಾಯ, ರಾಷ್ಟ್ರೀಯ ಉತ್ಪನ್ನಗಳು ಒಂದು ರಾಷ್ಟ್ರದ ಅಭಿವೃದ್ಧಿಯನ್ನು ವ್ಯಕ್ತಪಡಿಸುವುದಿಲ್ಲ. ಶಿಕ್ಷಣ ಮತ್ತು ಸಾಕ್ಷರತೆಯೇ ಅಭಿವೃದ್ಧಿಯ ಚಲಕಗಳೆಂದು ಶಿವಕುಮಾರಸ್ವಾಮೀಜಿ ಅಂದೇ ನಂಬಿದ್ದರು. ಅಭಿವೃದ್ಧಿಯ ನೆಲೆಯನ್ನು ಇರುವುದರಲ್ಲಿಯೇ ಕಂಡುಕೊಳ್ಳಬೇಕೆಂಬುದು ಅವರ ಧ್ಯೇಯವಾಕ್ಯ.

ಭಾರತ ಜಾತಿಪ್ರಧಾನ ರಾಷ್ಟ್ರ. ಇದು ಅಭಿವೃದ್ಧಿ ಹೊಂದುವುದಿಲ್ಲವೆಂದು ಭಾವಿಸಿದ್ದವರಿಗೆ, ಎಲ್ಲಾ ಜಾತಿಯವರನ್ನು ಶಾಲಾ-ಕಾಲೇಜುಗಳಿಗೆ ಮುಖ್ಯವಾಗಿ ಉಚಿತ ವಸತಿ ಮತ್ತು ದಾಸೋಹಕ್ಕೆ ಪ್ರವೇಶಾವಕಾಶವನ್ನು ನೀಡಿ, ಎಲ್ಲಾ ಜಾತಿಯವರು ಒಂದೇ ಕಡೆ ಕುಳಿತು, ಏಕಕಾಲದಲ್ಲಿ ಸಂಸ್ಕೃತದಲ್ಲಿ ಪ್ರಾರ್ಥನೆಯನ್ನು ಮಾಡಿಸುತ್ತಿರುವುದು ಶಿವಕುಮಾರಸ್ವಾಮೀಜಿಯವರ ಸಾಧನೆ. ಬಸವಣ್ಣನವರ ಚಿಂತನೆಯನ್ನು ಅನುಷ್ಠಾನಗೊಳಿಸಿದ ಕೀರ್ತಿ ಶ್ರೀ ಶಿವಕುಮಾರಸ್ವಾಮೀಜಿಯವರಿಗೆ ಸಲ್ಲತಕ್ಕದ್ದು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಸಿದ್ಧಗಂಗಾ ಮಠದಲ್ಲಿ ಕಾಯಕ-ದಾಸೋಹ ನಡೆಯುತ್ತಿದೆ. ಭಾರತೀಯ ಸಂಸ್ಕೃತಿಯ ಇತಿಹಾಸ ಕಥನದಲ್ಲಿ ಸಿದ್ಧಗಂಗಾ ಮಠ ಒಂದು ಮಹತ್ವಪೂರ್ಣ ಅಧ್ಯಾಯವಾಗಿದೆ.

ಸಾಮಾಜಿಕ ಕಾರಣದಿಂದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ನಗರ ಪ್ರದೇಶಗಳಿಗೆ ಬರಲು ಸಾಧ್ಯವಿಲ್ಲವೆಂದರಿತ ಶ್ರೀ ಶಿವಕುಮಾರಸ್ವಾಮೀಜಿ ಶಿಕ್ಷಣವನ್ನು ಅವರ ಹಳ್ಳಿಗೆ ಕರೆದೊಯ್ದರು. ೧೯೪೦ ರಿಂದ ೧೯೭೦ರ ಅವಧಿಯಲ್ಲಿ ಮಠ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸದಿದ್ದರೆ, ಅನೇಕ ಹೆಣ್ಣುಮಕ್ಕಳು ಪ್ರಾಥಮಿಕ ಶಾಲಾ ಹಂತಕ್ಕೆ ಶಾಲೆಯನ್ನು ಬಿಡುತ್ತಿದ್ದರು. ಮಠ, ಜಾತಿಸಂಬಂಧಿ ನೆಲೆಯಲ್ಲಿ ಮಾತ್ರ ಯೋಚಿಸದೆ, ಲಿಂಗಸಂಬಂಧಿ ನೆಲೆಯಲ್ಲಿಯೂ ಯೋಚಿಸಿರುವುದು

ಮಹತ್ವವಾದದ್ದು. ಲಿಂಗಸಂಬಂಧಿ, ಜಾತಿಸಂಬಂಧಿ ಅಂತರಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಮಠ ಸಾಗಿದೆ.

ಸಿದ್ಧಗಂಗಾ ಮಠದ ಆಲೋಚನೆಗಳು, ಯೋಚನೆಗಳು ಮತ್ತು ಯೋಜನೆಗಳು ವಿಸ್ತೃತವಾಗಿರುವುದೆಂದು ಗೋಚರಿಸುತ್ತಿದೆ. ಆದ್ದರಿಂದ ಮಠ ನನ್ನೀ ಅಧ್ಯಯನದಿಂದ ಮತ್ತೇನನ್ನಾದರೂ ಯೋಜನೆಗಳನ್ನು ಹಮ್ಮಿಕೊಳ್ಳಲು ಸಾಧ್ಯವಿದೆಯೇ ? ಸಿದ್ಧಗಂಗಾ ಮಠದ ಶಾಲಾ-ಕಾಲೇಜುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಹೆಚ್ಚಿನ ಸಂಖ್ಯೆಯ ಶಾಲಾ-ಕಾಲೇಜುಗಳು ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿರುವುದು ಗೋಚರಿಸುತ್ತದೆ. ಅದರಲ್ಲೂ ಪ್ರೌಢಶಾಲೆಗಳು ಮತ್ತು ಸಂಸ್ಕೃತ ಶಾಲೆಗಳು ತುಮಕೂರು ಜಿಲ್ಲೆಯಲ್ಲಿಯೇ ಕೇಂದ್ರಿತವಾಗಿರುವುದರಿಂದ ಇನ್ನೂ ಹೆಚ್ಚಿನ ಶಾಲಾ-ಕಾಲೇಜುಗಳನ್ನು ಉತ್ತರ ಕರ್ನಾಟಕದ ಹಿಂದುಳಿದ ಪ್ರಾಂತ್ಯಗಳಲ್ಲಿ ಸ್ಥಾಪಿಸಬಹುದಾಗಿದೆ.

ಸಿದ್ಧಗಂಗಾ ಮಠದ ಉಚಿತ ವಸತಿ ನಿಲಯ ಮತ್ತು ದಾಸೋಹ ವ್ಯವಸ್ಥೆಯನ್ನು ತುಮಕೂರಿನಲ್ಲಿ ಗಂಡು ಮಕ್ಕಳಿಗೆ ಮಾತ್ರ ಸ್ಥಾಪಿಸಲಾಗಿದ್ದು, ಹೆಣ್ಣು ಮಕ್ಕಳಿಗೆ ಈ ಆನುಕೂಲವನ್ನು ಒದಗಿಸಿಲ್ಲ. ಈ ನಿಟ್ಟಿನಲ್ಲಿಯೂ ಮಠ ಯೋಚಿಸಬಹುದಾಗಿದೆ.

ಸಿದ್ಧಗಂಗಾ ಮಠದ ಉಚಿತ ವಸತಿ ನಿಲಯ ಮತ್ತು ದಾಸೋಹಕ್ಕೆ ಪ್ರವೇಶಾವಕಾಶವನ್ನು ಬಯಸಿ ಬರುವವರು ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಕರ್ನಾಟಕದವರೇ ಆಗಿರುವರು. ಬಳ್ಳಾರಿ, ರಾಯಚೂರು, ಬಿಜಾಪುರ, ಗುಲ್ಬರ್ಗ, ಬಾಗಲಕೋಟೆ ಪ್ರದೇಶಗಳ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದು, ಮಠದ ಆಶ್ರಯ ಪಡೆದಿದ್ದಾರೆ. ಆದ್ದರಿಂದ ಮಠ ಈ ನಿಟ್ಟಿನಲ್ಲಿ ಆಲೋಚಿಸಿದಲ್ಲಿ ಉತ್ತರ ಕರ್ನಾಟಕದ ಯಾವುದಾದರೊಂದು ಪ್ರಾಂತ್ಯದಲ್ಲಿ ಮುಖ್ಯವಾಗಿ ಬಳ್ಳಾರಿಯಲ್ಲಿಯೇ ಉಚಿತ ವಸತಿ ನಿಲಯ ಮತ್ತು ದಾಸೋಹವನ್ನು ಸ್ಥಾಪಿಸಬಹುದಾಗಿದೆ. ಒಂದೊಮ್ಮೆ ಇದು ಸಾಧ್ಯವಾದಲ್ಲಿ, ಸಿದ್ಧಗಂಗಾ ಮಠಕ್ಕೆ ಮತ್ತೊಂದು ಸಾಧನೆ ಸೇರ್ಪಡೆ ನನ್ನ ಅಧ್ಯಯನದಿಂದ ಸಾಧಿತವಾದಂತೆ. ಮಠ ಪ್ರಯತ್ನಿಸಿದಲ್ಲಿ ಇದು ಅಸಾಧ್ಯವೇನೂ ಅಲ್ಲ.

೧.೫ ಅಧ್ಯಾಯಗಳ ವಿನ್ಯಾಸ

ಕನ್ನಡ ನಾಡಿನಲ್ಲಿ ಮಠಮಾನ್ಯಗಳು ಅಸಂಖ್ಯಾತವಾಗಿದ್ದು, ಅವು ಸಮಾಜದ ಶೈಕ್ಷಣಿಕ ಬೆಳವಣಿಗೆಯ ದೃಷ್ಟಿಯಿಂದ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ವೀರಶೈವ ಧರ್ಮದಲ್ಲಿ ಮಠಗಳ ವ್ಯವಸ್ಥೆಯು ಮಹತ್ವಪೂರ್ಣವಾದುದು. ಜನಜೀವನದ ಸಮಸ್ತ ಭಾಗಗಳ ಮೇಲೂ ಅವು ವಿವಿಧ ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಾ ಬಂದಿವೆ. ಹಿಂದಣ ಆಶ್ರಮಗಳು, ಗುರುಕುಲಗಳು, ಘಟಿಕಾಸ್ಥಾನಗಳು ವಿದ್ಯಾಕೇಂದ್ರಗಳಾಗಿ ವಿದ್ಯಾಪ್ರಸಾರ ಮಾಡುತ್ತಾ ಬಂದಿವೆ. ಈ ಪರಂಪರೆ ಇಂದಿಗೂ ನಡೆದುಕೊಂಡು ಬಂದಿದೆ.

ವೀರಶೈವ ಮಠಗಳು ಸಮಾಜದ ಅವಿಭಾಜ್ಯ ಅಂಗಗಳಾಗಿದ್ದು, ಅಪಾರವಾದ ಮತ್ತು ಅದ್ವಿತೀಯವಾದ ಕೊಡುಗೆಯನ್ನು ನೀಡಿವೆ. ಮಠಗಳು ತಮ್ಮ ಧಾರ್ಮಿಕ ಚಟುವಟಿಕೆಗಳೊಂದಿಗೆ ಜ್ಞಾನದಾಸೋಹ, ಅನ್ನದಾಸೋಹ ಕೈಗೊಂಡು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ ಸಲ್ಲಿಸುತ್ತಿವೆ. ಕರ್ನಾಟಕದ ಅಂತಹ ಪ್ರಮುಖ ಮಠಗಳಲ್ಲಿ ಶ್ರೀ ಸಿದ್ಧಗಂಗಾ ಮಠವೂ ಒಂದು.

ಸಿದ್ಧಗಂಗಾ ಮಠ ಸ್ಥಾಪಿಸಿರುವ ತುಮಕೂರು ಜಿಲ್ಲೆಯ ೩೧ ಪ್ರೌಢಶಾಲೆಗಳ ಅಧ್ಯಯನ ಮುಖ್ಯವಾದದ್ದು. ಈ ಕುರಿತು ಇದುವರೆವಿಗೂ ವಿಶೇಷವಾದ ಸಂಶೋಧನಾತ್ಮಕ ಅಧ್ಯಯನ ನಡೆದಿಲ್ಲ. ರಾಷ್ಟ್ರಾದ್ಯಂತ ಪ್ರಸಿದ್ಧಿ ಹೊಂದಿರುವ ಸಿದ್ಧಗಂಗಾ ಮಠದ ಶೈಕ್ಷಣಿಕ ಅಭಿವೃದ್ಧಿಯನ್ನು ನಿರ್ದಿಷ್ಟವಾಗಿ ಪ್ರೌಢಶಾಲಾ ಶೈಕ್ಷಣಿಕ ಪ್ರಗತಿಯನ್ನು ಸಮಗ್ರವಾಗಿ ಅಧ್ಯಯನ ಮಾಡಲು ಸಂಶೋಧನೆಗೆ ಎತ್ತಿಕೊಳ್ಳಲಾಗಿದೆ. ಸಿದ್ಧಗಂಗಾ ಮಠ ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾಜಕ್ಕೆ, ನಾಡಿಗೆ ನೀಡಿದ ಕೊಡುಗೆ ಕುರಿತ ಸಮಗ್ರ ಅಧ್ಯಯನ ಪ್ರಸ್ತುತ ಪ್ರಬಂಧದ ಮುಖ್ಯ ಆಶಯವಾಗಿದೆ.

ಸಿದ್ಧಗಂಗಾ ಮಠದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಕಟವಾಗಿರುವ ಗ್ರಂಥಗಳು ಹಾಗೂ ಕ್ಷೇತ್ರಕಾರ್ಯದಲ್ಲಿ ದೊರೆತ ಸಂಗತಿಗಳು ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಸಂದರ್ಶನದ ಮೂಲಕ ದೊರೆತ ಮಾಹಿತಿಗಳನ್ನು ಸಂಗ್ರಹಿಸಿ ಒಟ್ಟು ಏಳು ಅಧ್ಯಾಯಗಳ ವ್ಯಾಪ್ತಿಯಲ್ಲಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

ಮೊದಲನೇ ಅಧ್ಯಾಯ ಪ್ರಸ್ತಾವನೆಯಾಗಿದ್ದು, ಅಧ್ಯಯನ ವಿಷಯದ ಸೈದ್ಧಾಂತಿಕ ನೆಲೆಗಳು ಮತ್ತು ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಸಿದ್ಧಗಂಗಾ ಮಠದ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನ ವಿಧಾನದಲ್ಲಿ ವಿವರಿಸಲಾಗಿದೆ. ಅಧ್ಯಯನದ ಮಹತ್ವವನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಶೈಕ್ಷಣಿಕ ಪ್ರಗತಿಯ ಸಮೀಕ್ಷೆಯನ್ನು ನೀಡಲಾಗಿದೆ. ಈ ಅಧ್ಯಾಯದಲ್ಲಿ ಭಾರತದಲ್ಲಿ ವಸಾಹತು-ಪೂರ್ವ ಮತ್ತು ವಸಾಹತೋತ್ತರ ಶೈಕ್ಷಣಿಕ ಇತಿಹಾಸವನ್ನು ಅಧ್ಯಯನ ಮಾಡಲಾಗಿದ್ದು, ಇದೇ ಅವಧಿಯಲ್ಲಿ ಕರ್ನಾಟಕದ ಶೈಕ್ಷಣಿಕ ಕ್ಷೇತ್ರದಲ್ಲಿ ಮಠಗಳ ಪ್ರವೇಶವನ್ನು ಕೂಲಂಕಷವಾಗಿ ವಿವರಿಸಲಾಗಿದೆ. ಬ್ರಾಹ್ಮಣೇತರರ ಚಳವಳಿ, ಹಿಂದುಳಿದ ವರ್ಗಗಳ ಚಳವಳಿ, ಮಠಗಳ ಒಳಸಂಘರ್ಷ-ವಿಭಜನೆಯನ್ನು ವಿವರಿಸಲಾಗಿದೆ. ಇದುವರೆವಿಗು ಸಿದ್ಧಗಂಗಾ ಮಠಕ್ಕೆ ಸಂಬಂಧಿಸಿದಂತೆ ನಡೆದ ಇತರೆ ಸಂಶೋಧನೆಗಳ ಬಗ್ಗೆ, ಪ್ರಬಂಧಗಳ ಬಗ್ಗೆ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ತುಮಕೂರು ಜಿಲ್ಲೆ ಮತ್ತು ಸಿದ್ಧಗಂಗಾ ಮಠದ ಕ್ಷೇತ್ರ ಪರಿಚಯವನ್ನು ಕೂಲಂಕಷವಾಗಿ ನಿರೂಪಿಸಲಾಗಿದೆ. ಈ ಅಧ್ಯಾಯದಲ್ಲಿ ತುಮಕೂರು ಜಿಲ್ಲೆಯ ಶಿಕ್ಷಣ ಮತ್ತು ಸಾಕ್ಷರತೆಯನ್ನು ಪರಿಪೂರ್ಣವಾಗಿ ವಿವರಿಸಲಾಗಿದೆ. ತುಮಕೂರು ಜಿಲ್ಲೆಯ ಪ್ರಾಥಮಿಕ ಶಿಕ್ಷಣ, ಗ್ರಾಮೀಣ ಮತ್ತು ನಗರ ಶಾಲೆಗಳು, ಮಕ್ಕಳ ದಾಖಲಾತಿ ಪ್ರಮಾಣ, ಶಾಲಾ-ದಾಖಲಾತಿಯಲ್ಲಿ ಸಾಮಾಜಿಕ ಆಯಾಮಗಳನ್ನು ಗುರುತಿಸಲಾಗಿದೆ. ಸಾಮಾಜಿಕ ಆಯಾಮಗಳಲ್ಲಿ ಲಿಂಗ-ಸಂಬಂಧಿ ಮತ್ತು ಜಾತಿ-ಸಂಬಂಧಿ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು, ಸಾಕ್ಷರತೆಯನ್ನು ಅಧ್ಯಯನ ಮಾಡಲಾಗಿದ್ದು, ಸಾಕ್ಷರತೆಯಲ್ಲಿ ಗ್ರಾಮೀಣ-ನಗರ ಸಾಕ್ಷರತೆ, ಪುರುಷ-ಸ್ತ್ರೀಯರ ಸಾಕ್ಷರತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾಕ್ಷರತೆಯನ್ನು ವಿವರಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಸರ್ಕಾರ ಸ್ಥಾಪಿಸಲ್ಪಟ್ಟಿರುವ ಉಚಿತ ವಿದ್ಯಾರ್ಥಿ ನಿಲಯಗಳನ್ನು ವಿವರಿಸಲಾಗಿದೆ. ಶ್ರೀ ಸಿದ್ಧಗಂಗಾ ಮಠದ ಕ್ಷೇತ್ರ ಪರಿಚಯವನ್ನು ಸ್ಥೂಲವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸಿದ್ಧಗಂಗಾ ಮಠ ಕರ್ನಾಟಕದಾದ್ಯಂತ ಸ್ಥಾಪಿಸಿರುವ ಒಟ್ಟು ಶಾಲೆಗಳನ್ನು ವಿವರಿಸಲಾಗಿದೆ. ಒಟ್ಟು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಉದ್ಯೋಗ ಸೃಷ್ಟಿಯನ್ನು ವಿವರಿಸಲಾಗಿದೆ. ಇದೇ ಅಧ್ಯಾಯದಲ್ಲಿಯೇ ಮಠದ ಒಟ್ಟು ಪ್ರೌಢಶಾಲೆಗಳು, ತುಮಕೂರು ಜಿಲ್ಲೆಯ ೩೧

ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು, ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳು ಮತ್ತು ಅವುಗಳ ತುಲನಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ಕೊನೆಯಲ್ಲಿ ೩೧ ಪ್ರೌಢಶಾಲೆಗಳ ನೌಕರ ವರ್ಗದ ಲಿಂಗ ಸ್ವರೂಪ ಮತ್ತು ಸಾಮಾಜಿಕ ಆಯಾಮಗಳ ಬಗ್ಗೆ ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಿದ್ಧಗಂಗಾ ಸಂಸ್ಥೆಯ ಆಡಳಿತ ಮತ್ತು ಬೆಳವಣಿಗೆಯ ಬಗ್ಗೆ ಅಧ್ಯಯನ ಮಾಡಲಾಗಿದೆ. ಮಠದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದಂತೆ ಶಾಲಾ-ಕಾಲೇಜುಗಳ ಆದಾಯದ ಮೂಲಗಳು ಮತ್ತು ವೆಚ್ಚಗಳ ಬಗ್ಗೆ ಸವಿವರವಾದ ಮಾಹಿತಿ ನೀಡಲಾಗಿದೆ.

ಆರನೇ ಅಧ್ಯಾಯದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯದ ಬಗ್ಗೆ ಸಮಗ್ರ ಚಿತ್ರಣವನ್ನು ನೀಡಿದ್ದು, ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಉಚಿತ ವಿದ್ಯಾರ್ಥಿ ನಿಲಯ, ಅಲ್ಲಿರುವ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು, ಇವುಗಳ ನಿರ್ವಹಣೆಗೆ ಬರುವ ಸಹಾಯಧನ ಮತ್ತು ಅನಾಥಾಲಯದ ಆದಾಯ ಮತ್ತು ವೆಚ್ಚದ ಬಗೆಗೆ ಸಂಪೂರ್ಣ ವಿವರಣೆ ನೀಡಲಾಗಿದೆ.

ಏಳನೇ ಅಧ್ಯಾಯದಲ್ಲಿ ನನ್ನ ಮಹಾಪ್ರಬಂಧದ ಸಾರಾಂಶ, ಅಧ್ಯಯನದ ಹಂತಗಳಲ್ಲಿ ಕಂಡು ಬಂದ ತಥ್ಯಗಳು ಮತ್ತು ಈ ತಥ್ಯಗಳಿಗೆ ನನ್ನದೇ ಆದ ಸಲಹೆ-ಶಿಫಾರಸ್ಸುಗಳನ್ನು ಉಲ್ಲೇಖಿಸಿದ್ದೇನೆ. ಕೊನೆಯಲ್ಲಿ ಅನುಬಂಧ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಪ್ರತಿಯೊಂದು ಅಧ್ಯಾಯದ ಮುಕ್ತಾಯದಲ್ಲಿ ಅಧ್ಯಾಯವಾರು ಕೊನೆಯ ಮಾತುಗಳನ್ನು ಮತ್ತು ಗ್ರಂಥಋಣವನ್ನು ನೀಡಲಾಗಿದೆ.

ಗ್ರಂಥಋಣ

೧. **ಜಯರಾಂ, ಎನ್.,** ಸೋಷಿಯಾಲಜಿ, ಮೆಥಡ್ಸ್ ಅಂಡ್ ಥಿಯರೀಸ್ ಇನ್ ಟೋನಿ ಬಿಲ್ಟನ್ ಕೆವಿನ್ ಬೋನೆಟ್, ಫಿಲಿಪ್ (ಇಡಿ), *ಇಂಟ್ರೊಡಕ್ಟರಿ ಸೋಷಿಯಾಲಜಿ,* ಮ್ಯಾಕ್‌ಮಿಲ್ಲನ್ ಎಜುಕೇಟೆಡ್ ಲಿ., ಯು.ಕೆ. ೧೯೮೯.

೨. **ವಿಲಿಯಂ ಜೆ. ಗೂಡೆ/ ಪಾಲ್ ಕೆ. ಹ್ಯಾಟ್,** *ಮೆಥಡ್ಸ್ ಇನ್ ಸೋಷಿಯಲ್ ರಿಸರ್ಚ್,* ಎಂ.ಸಿ. ಗ್ರಾ-ಹಿಲ್ ಬುಕ್ ಕಂಪನಿ, ಟೋಕಿಯೋ, ೧೯೫೨.

ಅಧ್ಯಾಯ – ೨

ಶೈಕ್ಷಣಿಕ ಪ್ರಗತಿಯ ಸಮೀಕ್ಷೆ

ಅಧ್ಯಾಯ – ೨

ಶೈಕ್ಷಣಿಕ ಪ್ರಗತಿಯ ಸಮೀಕ್ಷೆ

ಶಿಕ್ಷಣ ಮತ್ತು ಸಾಕ್ಷರತಾ ಬೆಳವಣಿಗೆ ಆ ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಚಲಕಗಳೆಂದು ೧೯೯೮ರಲ್ಲಿ ನೋಬೆಲ್ ಪ್ರಶಸ್ತಿ ಪಡೆದ ಅಮರ್ತ್ಯ ಸೇನ್ ಅಭಿಪ್ರಾಯ. ಗುಣಾತ್ಮಕ ಸುಧಾರಣೆ ಸಾಧಿಸದ ಆರ್ಥಿಕ ಅಭಿವೃದ್ಧಿ ಅರ್ಥಹೀನ ಎನ್ನುವ ಸೇನ್‌ರವರ ದೃಷ್ಟಿಯಲ್ಲಿ ಮಾನವ ಅಭಿವೃದ್ಧಿಯೇ ಆರ್ಥಿಕ ಅಭಿವೃದ್ಧಿಯ ಉದ್ದೇಶ. ಆದ್ದರಿಂದ ಶಿಕ್ಷಣ ಎಲ್ಲರಿಗೂ ದೊರೆಯಬೇಕೆಂದರು. ಶಿಕ್ಷಣ, ಸಾಕ್ಷರತೆ ಮತ್ತು ಆರೋಗ್ಯದ ಸಂಪತ್ತಿಲ್ಲದ ಬರಿ ಭೌತಿಕ ಸಂಪತ್ತಿನಿಂದ ಯಾವುದೇ ರಾಷ್ಟ್ರ ಏನನ್ನಾದರೂ ಸಾಧಿಸಲು ಸಾಧ್ಯವಾಗಿದೆಯೇ? ಹೀಗಾಗಿ 'ಶಿಕ್ಷಣ' ಮತ್ತು 'ಸಾಕ್ಷರತೆ'ಗಳ ಅಧ್ಯಯನ ಮುಖ್ಯವಾದದ್ದು. ಒಂದು ರಾಷ್ಟ್ರ ತನ್ನ ಪ್ರಜೆಗಳಿಗೆ ನೀಡಬಹುದಾದ ಏಕೈಕ ಆಸ್ತಿಯೆಂದರೆ 'ಅತ್ಯುತ್ತಮ ಶಿಕ್ಷಣ'. ಶಿಕ್ಷಣವು ಅವಿಭಾಜ್ಯ ಅಂಗವಾಗಿದೆ. ಆದರೆ ಶಿಕ್ಷಣದ ಹರವು ತೃಪ್ತಿಕರವಾಗಿಲ್ಲ. ಏಕೆಂದರೆ ಸಮಾಜದ ಎಲ್ಲಾ ಜನರನ್ನು ಒಳಗೊಳ್ಳುವುದರಲ್ಲಿ ವಿಫಲವಾಗಿದೆ.

ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಶಿಕ್ಷಣ ರಚನೆಯು ಆ ರಾಷ್ಟ್ರದ ಸಮಾಜದ ಸ್ವರೂಪವನ್ನವಲಂಬಿಸಿದೆ. ಶಿಕ್ಷಣವನ್ನು ನೀಡುವಲ್ಲಿ ವಿವಿಧ ಬಗೆಯ ಸಾಮಾಜಿಕ ಸಂಘ-ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಾ ಬಂದಿವೆ. ಶಿಕ್ಷಣದ ಬೆಳವಣಿಗೆಯಲ್ಲಿ ಅನೇಕ ಸಾಮಾಜಿಕ, ಧಾರ್ಮಿಕ ಸಂಘ-ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಕ್ರಿಶ್ಚಿಯನ್ ಮಿಷನರಿಗಳು ಹಾಗೂ ಸರ್ಕಾರ ಕಾರ್ಯ ನಿರ್ವಹಿಸುತ್ತಾ ಬಂದಿವೆ. ಶಿಕ್ಷಣದ ಬೆಳವಣಿಗೆಯ ವಿವಿಧ ಆಯಾಮಗಳಾದ ವರ್ಗ, ಜಾತಿ-ಸ್ವರೂಪ, ಲಿಂಗ-ಸ್ವರೂಪ ಮತ್ತು ಪ್ರಾದೇಶಿಕ ಸ್ವರೂಪಗಳನ್ನು ಕುರಿತಂತೆ ಅಧ್ಯಯನಗಳು ಸಾಗುತ್ತಿವೆ. ಭಾರತದಲ್ಲಿ ಆಧುನಿಕ ಶಿಕ್ಷಣ ಪ್ರಾರಂಭವಾದದ್ದು ವಸಾಹತು ಕಾಲದಲ್ಲಿ ಎಂಬುದು ಐತಿಹಾಸಿಕ ಚಿಂತನೆಯಿಂದ ಸ್ಪಷ್ಟವಾಗುತ್ತದೆ. ಹಾಗೆಂದ ಮಾತ್ರಕ್ಕೆ ಶಿಕ್ಷಣ ವಸಾಹತು ಪೂರ್ವ ಕಾಲದಲ್ಲಿ ಅಸ್ಥಿತ್ವದಲ್ಲಿರಲಿಲ್ಲವೆಂದು ಅರ್ಥವಲ್ಲ. ಶಿಕ್ಷಣ ವೇದಗಳ ಕಾಲದಿಂದಲೂ ಅಸ್ಥಿತ್ವದಲ್ಲಿದ್ದು, ಭಾರತದ ಶಿಕ್ಷಣ ಇತಿಹಾಸದಲ್ಲಿ ಸುದೀರ್ಘ ದಾರಿ ಸವೆಸಿದೆ.

ಜಗತ್ತಿನ ಇತಿಹಾಸದಲ್ಲಿ ಪ್ರಗತಿಯತ್ತ ಪ್ರವೃತ್ತನಾದ ಮಾನವನ ನಿರಂತರ ಹೋರಾಟ ಶಿಕ್ಷಣ ಕ್ಷೇತ್ರದಲ್ಲಿ ಕಂಡುಬಂದಿದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಶಿಕ್ಷಣ ರಚನೆಯು ಆ ರಾಷ್ಟ್ರದ ಸಮಾಜದ ಸ್ವರೂಪವನ್ನವಲಂಬಿಸಿದೆ. ಶಿಕ್ಷಣವನ್ನು ನೀಡುವಲ್ಲಿ ವಿವಿಧ ಬಗೆಯ ಸಾಮಾಜಿಕ ಸಂಘ – ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಾ ಬಂದಿವೆ. ಶಿಕ್ಷಣದ ಬೆಳವಣಿಗೆಯಲ್ಲಿ ಅನೇಕ ಸಾಮಾಜಿಕ, ಧಾರ್ಮಿಕ ಸಂಘ–ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಕ್ರಿಶ್ಚಿಯನ್ ಮಿಷನರಿಗಳು ಹಾಗೂ ಸರ್ಕಾರ ಕಾರ್ಯ ನಿರ್ವಹಿಸುತ್ತಾ ಬಂದಿವೆ. ಶಿಕ್ಷಣದ ಬೆಳವಣಿಗೆಯ ವಿವಿಧ ಆಯಾಮಗಳಾದ ವರ್ಗ, ಜಾತಿ ಸ್ವರೂಪ, ಲಿಂಗ ಸ್ವರೂಪ ಮತ್ತು ಪ್ರಾದೇಶಿಕ ಸ್ವರೂಪಗಳನ್ನು ಕುರಿತಂತೆ ಅಧ್ಯಯನಗಳು ಸಾಗುತ್ತಿವೆ. ಭಾರತದಲ್ಲಿ ಆಧುನಿಕ ಶಿಕ್ಷಣ ಪ್ರಾರಂಭವಾದದ್ದು ವಸಾಹತು ಕಾಲದಲ್ಲಿ ಎಂಬುದು ಐತಿಹಾಸಿಕ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಹಾಗೆಂದ ಮಾತ್ರಕ್ಕೆ ಶಿಕ್ಷಣ ವಸಾಹತು ಪೂರ್ವ ಕಾಲದಲ್ಲಿ ಅಸ್ತಿತ್ವದಲ್ಲಿರಲಿಲ್ಲವೆಂದು ಅರ್ಥವಲ್ಲ. ಶಿಕ್ಷಣ ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಹಲವಾರು ಸ್ವ–ನಿರ್ಮಿತ ತೊಡಕುಗಳಲ್ಲಿ ಸಿಲುಕಿದಾಗ ಅನೇಕ ಕ್ರಾಂತಿಗಳು ನಡೆದು ಸಮಾಜದಲ್ಲಿ ಬದಲಾವಣೆಗಳಾಗಿರುವುದು ಐತಿಹಾಸಿಕ ಅಧ್ಯಯನದಿಂದ ತಿಳಿದು ಬರುತ್ತದೆ. ಚಾರ್ಲ್ಸ್‌ವುಡ್‌ನಿಂದ ಪ್ರಾರಂಭವಾದ ಶಿಕ್ಷಣ ಚಿಂತನೆ ಮೆಕಾಲೆಯಿಂದ ರೂಪ ಪಡೆದು ಬ್ರಾಹ್ಮಣೇತರರ ಚಳವಳಿಯಿಂದ ಎಲ್ಲಾ ಜಾತಿ ವರ್ಗದವರು ಶಿಕ್ಷಣ ಪಡೆಯುವಂತಾಯಿತು. ಕೆಲವರ ಸ್ವತ್ತಾಗಿದ್ದ ಶಿಕ್ಷಣ ಬಹುಸಂಖ್ಯಾತರ ಸ್ವತ್ತಾಯಿತು. ಶಿಕ್ಷಣ ಮತ್ತು ಉದ್ಯೋಗಗಳು ಬಹುಸಂಖ್ಯಾತರ ಸ್ವತ್ತಾಗಲೆಂದು ಅನೇಕ ಚಳವಳಿಗಳು ನಡೆದವು. ಇದರಲ್ಲಿ 'ಬ್ರಾಹ್ಮಣೇತರರ ಚಳವಳಿ' ಮತ್ತು 'ಹಿಂದುಳಿದ ವರ್ಗಗಳ ಚಳವಳಿ' ಪ್ರಮುಖವಾದವುಗಳು. ಈ ಚಳವಳಿಗಳನ್ನು ಕರ್ನಾಟಕದಲ್ಲಿ ಧಾರ್ಮಿಕ ಸಂಸ್ಥೆಗಳು ಪ್ರಬಲವಾಗಿ ಬೆಂಬಲಿಸಿದವು. ಧಾರ್ಮಿಕ ಸಂಸ್ಥೆಗಳು ವ್ಯಾಪಕವಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿ, ಶಿಕ್ಷಣ ಎಲ್ಲಾ ಜಾತಿಯವರಿಗೂ ದೊರೆಯಲೆಂದು ಅವಿರತವಾಗಿ ಶ್ರಮಿಸಿದವು. ಶೈಕ್ಷಣಿಕ ಇತಿಹಾಸವನ್ನು ಅಧ್ಯಯನ ಮಾಡಿದರೆ ವಸಾಹತುಶಾಹಿಗಳ ಆಗಮನಕ್ಕಿಂತ ಪೂರ್ವದಲ್ಲಿ ವರ್ಣಧರ್ಮವೇ ತಳಹದಿಯಾಗಿರುವುದು ಕಂಡು ಬರುತ್ತದೆ. ಆದ್ದರಿಂದ 'ಜಾತಿ' ಮತ್ತು 'ಶಿಕ್ಷಣ' ಒಂದನ್ನೊಂದು ಪರಾವಲಂಬಿಯಾಗಿರುವುದು ಪ್ರಾಚೀನ ಕಾಲದಿಂದಲೂ ಗೋಚರಿಸುತ್ತದೆ. ಇದು ಇಂದಿಗೂ ಮುಂದುವರೆದಿದೆ. ಹಾಗಾದಲ್ಲಿ ಬ್ರಿಟೀಷರು ಭಾರತೀಯರಿಗೆ ಆಧುನಿಕ ಶಿಕ್ಷಣ ನೀಡಿದುದಕ್ಕಿಂತಲೂ ಮೊದಲು ಶಿಕ್ಷಣ ಸ್ವರೂಪವು ಹೇಗಿತ್ತು? ಶಿಕ್ಷಣವನ್ನು ಯಾವ ಜಾತಿ, ಯಾವ ವರ್ಗದವರು ಪಡೆಯುತ್ತಿದ್ದರು? ಸಮಾಜದ ಸಾಮಾಜಿಕ ಸ್ವರೂಪವು ಹೇಗಿತ್ತು ? ಶಿಕ್ಷಣ ಕ್ಷೇತ್ರದಲ್ಲಿ ಧಾರ್ಮಿಕ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ವೀರಶೈವ ಮಠಗಳು ಜಾತ್ಯತೀತವಾಗಿ ಶಿಕ್ಷಣ ಒದಗಿಸಲು ಸಾಧ್ಯವಾಯಿತೆ? ಒಂದು ರಾಷ್ಟ್ರ, ಸಮಾಜ, ಧರ್ಮ ಸುಸಂಸ್ಕೃತವಾಗಿದ್ದು ಸುಖ ಶಾಂತಿ ನೆಲೆಸಬೇಕಾದರೆ ಅಲ್ಲಿನ ಶಿಕ್ಷಣದ ಸಾಮಾಜಿಕ ಸ್ವರೂಪವು ಶೋಷಣಾರಹಿತ ವ್ಯವಸ್ಥೆಯಿಂದ ಕೂಡಿತ್ತೇ?

ಸ್ತ್ರೀಯರು ಶಿಕ್ಷಣವನ್ನು ಪಡೆಯಲು ಅವಕಾಶಗಳನ್ನು ಕಲ್ಪಿಸಲಾಗಿತ್ತೇ? ಹೀಗೆ ಹಲವಾರು ಪ್ರಶ್ನೆಗಳು ಶಿಕ್ಷಣ ಇತಿಹಾಸದ ಅಧ್ಯಯನದಲ್ಲಿ ಕಂಡು ಬರುತ್ತದೆ. ಈ ಬಗೆಯ ಸಾಮಾಜಿಕ, ಆರ್ಥಿಕ ಹಾಗೂ ಶಿಕ್ಷಣ ಕ್ಷೇತ್ರದ ಸ್ಥಿತಿಗತಿಗಳನ್ನು ಅರಿಯುವುದು ಅವಶ್ಯಕವಾದದ್ದು. ಆದ್ದರಿಂದ ಭಾರತದ ಶೈಕ್ಷಣಿಕ ಇತಿಹಾಸದ ಅಧ್ಯಯನದಲ್ಲಿ ಎರಡು ಕಾಲಘಟ್ಟಗಳು ಮಹತ್ವವಾದದ್ದು.

೧. ವಸಾಹತು ಪೂರ್ವ ಶೈಕ್ಷಣಿಕ ಇತಿಹಾಸ.

೨. ವಸಾಹತೋತ್ತರದ ಶೈಕ್ಷಣಿಕ ಇತಿಹಾಸ.

೨.೧ ವಸಾಹತು ಪೂರ್ವ ಶೈಕ್ಷಣಿಕ ಇತಿಹಾಸ

ಭಾರತದ ಸಾಮಾಜಿಕ ಸಂದರ್ಭದಲ್ಲಿ ವೇದಗಳ ಅಂತಿಮ ಕಾಲದಲ್ಲಿ ಅಂದರೆ ಕ್ರಿ.ಪೂ.೧೦೦೦ ವರ್ಷಗಳಿಗಿಂತ ಹಿಂದೆ, ಸಮಾಜವು ವರ್ಣಾಶ್ರಮ ಧರ್ಮ ಸಿದ್ಧಾಂತದಿಂದ ರೂಪುಗೊಂಡಿತ್ತು. ವರ್ಣಾಶ್ರಮ ಕಾಲದಲ್ಲಿಯೇ ವರ್ಣ ಮತ್ತು ಜಾತಿ, ಆರ್ಯರು-ಅನಾರ್ಯರು, ಆರ್ಯವರ್ಣ-ದಾಸ ವರ್ಣಗಳೆಂದು ಜನರ ನಡುವೆ ವರ್ಗೀಕರಣಗಳು, ವಿಭಜನೆಗಳನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ವಿದೇಶದಿಂದ ಬಂದ ಆರ್ಯರು, ಭಾರತದ ಮೂಲಸ್ಥರಾದ ದಸ್ಯುಗಳೊಂದಿಗೆ ಹೋರಾಟ ನಡೆಸಿದಾಗಲೇ 'ಜಾತಿ ವ್ಯವಸ್ಥೆ' ತನ್ನ ಮೊದಲ ಹೆಜ್ಜೆಯನ್ನಿಟ್ಟಿತು. ಬ್ರಾಹ್ಮಣರು ದೇವರ ಶಿರೋಭಾಗದಿಂದ, ಕ್ಷತ್ರಿಯರು ಭುಜಗಳಿಂದ, ವೈಶ್ಯರು ಹೊಟ್ಟೆಯಿಂದ ಮತ್ತು ಶೂದ್ರ ಪಾದದಿಂದ ಅವತರಿಸಿದರೆಂದು ಉಲ್ಲೇಖಿಸಿದ್ದು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಚತುರ್ವರ್ಣಗಳು ಜಾತಿ ಆಧಾರಕ್ಕಿಂತ ವೃತ್ತಿ ಆಧಾರದ ಮೇಲೆ ವಿಭಜಿತವಾಗಿದ್ದವು. ಶ್ರಮ ವಿಭಜನಾ ತತ್ವವನ್ನು ಇಲ್ಲಿ ಮನಗಾಣಬಹುದಾಗಿದೆ. ವರ್ಣ ವ್ಯವಸ್ಥೆಯು ಜನ್ಮ ಜನಾಂಗ ವಾಚಕವಾಗಿರದೆ ಅವರವರ ಗುಣಕರ್ಮಗಳಿಗನುಸಾರವಾಗಿರುವುದು ಕಂಡು ಬರುತ್ತದೆ. ಬ್ರಾಹ್ಮಣರು ಜ್ಞಾನಾರ್ಜನೆ ಮತ್ತು ಧಾರ್ಮಿಕ ವೃತ್ತಿಯನ್ನು, ಕ್ಷತ್ರಿಯರು ಯುದ್ಧ ವೃತ್ತಿಯನ್ನು ಅವಲಂಬಿಸಿದ್ದರು. ಸಾಮಾಜಿಕ ವ್ಯವಸ್ಥೆ ಸರಳವಾಗಿದ್ದು, ವೃತ್ತಿ ಬದಲಾವಣೆಗೆ ಅವಕಾಶಗಳಿತ್ತು. ಚಾತುರ್ವರ್ಣ ವ್ಯವಸ್ಥೆಯಿದ್ದರೂ ವರ್ಣವು ವಂಶಪಾರಂಪರ್ಯವಾಗಿರಲಿಲ್ಲ (ಗೋಖಲೆ ಬಿ.ಜೆ., ೧೯೫೨, ಪು. ೧೧೮-೧೨೦).

ವರ್ಣಾಶ್ರಮ ವ್ಯವಸ್ಥೆಯಲ್ಲಿ ಶಿಕ್ಷಣವು ನಿರ್ಬಂಧಗಳಿಗೊಳಪಡದೆ ಮುಕ್ತವಾಗಿದ್ದು, 'ಗುರುಕುಲ' ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಶಿಕ್ಷಣಾರ್ಥಿಗಳು ಬ್ರಾಹ್ಮಣ ಗುರುಗಳ ಮನೆಯಲ್ಲಿದ್ದುಕೊಂಡು ವಿದ್ಯಾರ್ಜನೆ

ಮಾಡಬೇಕಾಗಿದ್ದಿತು. ಇದಕ್ಕೆ ಪ್ರತಿಯಾಗಿ ಅವರು ಗುರುಸೇವೆಯನ್ನು ಮತ್ತು ಗುರುದಕ್ಷಿಣೆಯನ್ನು ಸಲ್ಲಿಸಬೇಕಾಗಿದ್ದಿತು. ಶಿಕ್ಷಣದ ಉದ್ದೇಶ ವಿದ್ಯಾರ್ಥಿಗಳ ಬೌದ್ಧಿಕ ಪ್ರಗತಿಯೇ ಆಗಿತ್ತು. ಬ್ರಹ್ಮಚಾರಿಯಾದವನಿಗೆ 'ಉಪನಯನ' ವನ್ನು ಮಾಡಿಸಿ, ಅವನನ್ನು ಸಂಪೂರ್ಣವಾಗಿ ವಿದ್ಯಾಭ್ಯಾಸದಲ್ಲಿ ತೊಡಗಿಸಲಾಗುತ್ತಿದ್ದಿತು. ವೇದಾಧ್ಯಯನಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗಿತ್ತು (ಗೋಖಲೆ ಬಿ.ಜಿ., ೧೯೫೨, ಪು. ೧೪೦-೧೪೮). ಆದರೆ ಸಾಮಾಜಿಕ ಬದಲಾವಣೆಗಳುಂಟಾದಂತೆ ಕಾನೂನು ಕ್ರಮದಲ್ಲಿ ಈ ವರ್ಣ ವ್ಯವಸ್ಥೆಯು ವಿರೂಪಗೊಂಡು ಹಲವಾರು ಉಪಜಾತಿಗಳು ಜನ್ಮ ತಾಳಿದವು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು 'ದ್ವಿಜ' ರೆಂದು ಕರೆಯಲಾಗುತ್ತಿತ್ತು. 'ಉಪನಯನ' ವೇ ಶಿಕ್ಷಣದ ಸಂಸ್ಕಾರವಾದ್ದರಿಂದ ದ್ವಿಜ ಜಾತಿಯವರಷ್ಟೇ ತಮ್ಮ ಮಕ್ಕಳಿಗೆ ಉಪನಯನವನ್ನು ಮಾಡಿಸುವುದು ಕಡ್ಡಾಯವಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ನಾಲ್ಕು ವರ್ಣಗಳು ಬಹಳ ಹಿಂದೆಯೇ ರೂಪುಗೊಂಡಿದ್ದಲ್ಲದೆ, ಅನೇಕ ಒಳಭೇದಗಳುಂಟಾಗಿ, 'ಅಂತ್ಯಜರು' ಅಥವಾ 'ಅಸ್ಪೃಶ್ಯ' ರೆಂಬ ಪಂಚಮವರ್ಣ ಆಗಲೇ (ಕ್ರಿ.ಪೂ.೧೦೦೦ ವರ್ಷಗಳ ಹಿಂದೆ) ಪ್ರಬಲವಾಗಿ ಬೆಳೆದು ಬಂದಿದ್ದಿತೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಶೂದ್ರರ ನಂತರ ಬಂದ ಅಂತ್ಯಜರು ಯಾವ ಜಾತಿಗಳಿಗೂ ಸೇರಿರುವುದಿಲ್ಲ. ಶೂದ್ರರಂತೆ ಇವರಿಗೂ ವರ್ಣ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನವಿಲ್ಲ. ಈ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ಹೆಚ್ಚು ಅನುಕೂಲಗಳು, ಅಧಿಕಾರಗಳು, ಸಾಮಾಜಿಕ ಅವಕಾಶಗಳು ಇದ್ದವು. ಬ್ರಾಹ್ಮಣರು ಸಮಾಜದಲ್ಲಿ ಅತಿ ಮುಖ್ಯ ವರ್ಗಕ್ಕೆ ಸೇರಿದವರಾಗಿದ್ದರು (ಗೋಖಲೆ ಬಿ.ಜಿ., ೧೯೫೨, ಪು. ೧೨೦).

ವೃತ್ತಿಯಾಧಾರಿತ ವಿಭಜನೆ ಆನಂತರ ಜಾತಿಯಾಧಾರಿತವಾಗಿ ವಿಭಜನೆಗೊಂಡು ಏಣಿ-ಶ್ರೇಣಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ಏಣಿ-ಶ್ರೇಣಿಯ ತುತ್ತ ತುದಿಯಲ್ಲಿ ಬ್ರಾಹ್ಮಣ ಜಾತಿ ಇದ್ದರೆ, ಕೆಳಭಾಗದಲ್ಲಿ ಶೂದ್ರರು ಮತ್ತು ಅಸ್ಪೃಶ್ಯರು ಕಂಡು ಬರುತ್ತಾರೆ. ದೇವರ ಬಾಯಿಯಿಂದ ಜನಿಸಿದ ಬ್ರಾಹ್ಮಣನೇ ಶ್ರೇಷ್ಠನೆಂದು, ಉಳಿದವರು ನಿಕೃಷ್ಠರೆಂದು ಪರಿಗಣಿಸಲಾಯಿತು. ಈ ಮಧ್ಯೆ ಬ್ರಾಹ್ಮಣರು ಮತ್ತು ಕ್ಷತ್ರಿಯರು ಸಾಮಾಜಿಕವಾಗಿ ಚಕ್ರಾಧಿಪತ್ಯವನ್ನು ಸ್ಥಾಪಿಸುವಲ್ಲಿ ಸ್ಪರ್ಧೆಗಿಳಿದರು. ಕ್ಷತ್ರಿಯರು ರಾಜಕೀಯ ಪ್ರಾಬಲ್ಯತೆಯನ್ನು ಪಡೆಯಲು ತಮ್ಮ ಗಮನವನ್ನು ಕೇಂದ್ರೀಕರಿಸಿದರೆ, ಬ್ರಾಹ್ಮಣರು ಜ್ಞಾನ ಸಂಪಾದಿಸುವಿಕೆಯಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಸಾಮ್ರಾಜ್ಯಗಳ ಅಧಿಪತಿಗಳಾದ ಕ್ಷತ್ರಿಯರು ವಿಶೇಷವಾದ ಅಧಿಕಾರಗಳನ್ನು ಪಡೆದಿದ್ದರು. ಕ್ಷತ್ರಿಯರು ತಮ್ಮ ಅಧೀನದಲ್ಲಿಯೇ ಇರಬೇಕೆಂದು ಬಯಸಿದ ಬ್ರಾಹ್ಮಣರು, ರಾಜನ ಪಟ್ಟಾಭಿಷೇಕ ಸಮಾರಂಭದಲ್ಲಿ ವೇದಗಳನ್ನು ಪಠಿಸುತ್ತಿದ್ದರು. ಬ್ರಾಹ್ಮಣರ ಉದ್ದೇಶ ಯಾವುದೇ ಕಾರಣದಿಂದ ಕ್ಷತ್ರಿಯರು ಸಾಮಾಜಿಕ ಶ್ರೇಣಿಯಲ್ಲಿ ಮೇಲೇರಬಾರದಾಗಿತ್ತು. ಆದ್ದರಿಂದ

ರಾಜನು ಕೈಗೊಂಡ ಕಾರ್ಯಗಳಿಗೆಲ್ಲ ಬ್ರಾಹ್ಮಣರು ಸುಲಭವಾಗಿ ಸಮ್ಮತಿಸುತ್ತಿರಲಿಲ್ಲ. ನಿರಂಕುಶ ಪ್ರಭುತ್ವವನ್ನು ಪ್ರತಿಭಟಿಸುವ ಹಾಗೂ ನಿಯಂತ್ರಿಸುವ ದಿಟ್ಟತನವನ್ನು ಮೊದಲು ಬ್ರಾಹ್ಮಣರು ತೋರಿದರೂ, ನಂತರ ಕ್ಷತ್ರಿಯರ ಶಕ್ತಿ ಸಂಪತ್ತಿಗೆ ಬ್ರಾಹ್ಮಣರು ಬೆಂಬಲಿಗರಾದರು, ಅವಕಾಶವಾದಿಗಳಾದರು. ಆದರೂ ಬ್ರಾಹ್ಮಣರು ಮತ್ತು ಕ್ಷತ್ರಿಯರ ನಡುವೆ ವರ್ಣ ಶ್ರೇಷ್ಠತೆಗಾಗಿ ಹೋರಾಟ ಸಾಗುತ್ತಲೇ ಇತ್ತು. ಕ್ಷತ್ರಿಯರು ಬ್ರಾಹ್ಮಣರಂತೆ ವೇದಾಧ್ಯಯನ ಮಾಡಬಹುದಾಗಿದ್ದರೂ, ಕ್ಷತ್ರಿಯರಿಗೆ ವೇದಾಧ್ಯಯನ ಮಾಡಿಸಬಲ್ಲ ಹಕ್ಕು ಬ್ರಾಹ್ಮಣರಿಗೆ ಮಾತ್ರ ಸೇರಿತ್ತು. ಪ್ರಾಂತ್ಯಗಳ ಅಧಿಕಾರವನ್ನು ನೇರವಾಗಿ ನಿರ್ವಹಿಸುತ್ತಿದ್ದ ಕ್ಷತ್ರಿಯರಿಗೆ ವೇದಾಧ್ಯಯನ ಮಾಡುವ ಅಧಿಕಾರವಿತ್ತೇ ವಿನಃ ಅದನ್ನು ಬೇರೊಬ್ಬರಿಗೆ ಕಲಿಸುವ ಅಧಿಕಾರವಿರಲಿಲ್ಲ. ಹೀಗೆ ಶಿಕ್ಷಣ ಸಂಪೂರ್ಣವಾಗಿ ಬ್ರಾಹ್ಮಣರ ವಶವಾಗಿದ್ದಿತು. ಉಚ್ಚ ವರ್ಗದ ಬ್ರಾಹ್ಮಣ ಮತ್ತು ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರನ್ನು ಶೋಷಿಸಬಹುದಾಗಿತ್ತು. ವೈಶ್ಯರಿಗಿದ್ದ ಒಂದೇ ಒಂದು ವಿಶೇಷ ಸವಲತ್ತೆಂದರೆ ಮೇಲ್ವರ್ಗದವರ ಜೊತೆಯಲ್ಲಿ ವೇದ ಮಂತ್ರಗಳ ಪ್ರಕಾರ ಉಪನಯನವನ್ನು ಮಾಡಿಸಿಕೊಳ್ಳಬಹುದಿತ್ತು (ಮಹಾಜನ್ ವಿ.ಡಿ., ೨೦೦೫, ಪು. ೧೬೫-೧೬೬). ವೇದಾಧ್ಯಯನ ಮಾಡುವಲ್ಲಿ ಬ್ರಾಹ್ಮಣರು ಏಕ ಸ್ವಾಮ್ಯಾಧಿಕಾರ ಸ್ಥಾಪಿಸುತ್ತಾ ಬಂದಂತೆ, ಕ್ಷತ್ರಿಯರು ಮತ್ತು ವೈಶ್ಯರು ಉಪನಯನ ಮಾಡಿಸಿಕೊಳ್ಳುವುದು ನಿರುಪಯುಕ್ತವೆಂದು ಭಾವಿಸಿಕೊಂಡರು (ಗೋಖಲೆ ಬಿ.ಜಿ., ೧೫೫೨, ಪು.೧೩೯).

ಏಣಿ-ಶ್ರೇಣಿಯಲ್ಲಿ ಬ್ರಾಹ್ಮಣರು ಅತ್ಯುನ್ನತ ಸ್ಥಾನವನ್ನು ಪಡೆದಿದ್ದರು. ಬ್ರಾಹ್ಮಣರು ಮತ್ತು ಕ್ಷತ್ರಿಯರ ನಡುವೆ ಸಹಕಾರ ಮನೋಭಾವನೆ ವೃದ್ಧಿಯಾಗಿ ರಾಜರು ಬ್ರಾಹ್ಮಣರಿಗೆ ವಿದ್ಯಾಭ್ಯಾಸದ ಅನುಕೂಲತೆಗಾಗಿ ದಾನದತ್ತಿಗಳನ್ನಿತ್ತು ಅವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸುತ್ತಿದ್ದರು. ಇವು ಅಗ್ರಹಾರಗಳೇ ಆಗಿದ್ದವು (ಗೋಖಲೆ ಬಿ.ಜಿ. ೧೯೫೨, ಪು. ೧೪೦).

ಹಿಂದೂ ಸಮಾಜದ ನಾಲ್ಕು ವರ್ಣಗಳಲ್ಲಿ ಒಂದಾದ ಬ್ರಾಹ್ಮಣ ವರ್ಗದವರು ತಮ್ಮ ಜ್ಞಾನ ಮತ್ತು ಬೌದ್ಧಿಕ ಬಲದಿಂದ ಶಿಕ್ಷಣವು ಜನಸಾಮಾನ್ಯರ ಸ್ವತ್ತಾಗಲು ಬಿಡಲಿಲ್ಲ. ನಿರ್ದಿಷ್ಟಪಡಿಸಿದ ವರ್ಣ ಸಿದ್ಧಾಂತದ ಆದರ್ಶವು ಕೇವಲ ಸಿದ್ಧಾಂತವಾಗಿಯೇ ಉಳಿದು ವಾಸ್ತವಿಕ ಜಗತ್ತಿನಲ್ಲಿ ಜಾತಿ ಪದ್ಧತಿ ಬಲವಾಗಿ ಬೇರೂರಿ, ಸಾಂಸ್ಥಿಕ ಅಸಮಾನತೆ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾಗಿ ಕಂಡು ಬಂದಿತು.

ಹನ್ನೊಂದನೇ ಶತಮಾನದ ಮಧ್ಯಯುಗೀನ ಕಾಲದಲ್ಲಿ 'ಜಾತಿ ವ್ಯವಸ್ಥೆ' ಮತ್ತಷ್ಟು ಜಟಿಲವಾಗಿತ್ತು. ವೇದಗಳ ಕಾಲದಲ್ಲಿ ಹುಟ್ಟಿಕೊಂಡ 'ಜಾತಿ ವ್ಯವಸ್ಥೆ', ಮಧ್ಯಯುಗೀನ ಕಾಲದಲ್ಲಿ ಹಿಂದೂ ಸಮಾಜವನ್ನು

ಸಂಪೂರ್ಣವಾಗಿ ವಿಭಜಿಸಿತು. ಹೀಗೆ ಭಾರತೀಯ ಸಂಸ್ಕೃತಿಯ ಮೂಲವು ಪುರಾತನ ಕಾಲದಲ್ಲಿ ವಿಶಿಷ್ಟವಾಗಿದ್ದು, ಮಾನವನ ಎಲ್ಲಾ ಚಟುವಟಿಕೆಗಳು ಧರ್ಮದ ನಿರ್ದೇಶನದಲ್ಲಿ ನಡೆಯುತ್ತಿದ್ದವು. ಧರ್ಮವನ್ನು ಮೀರಿ ಶಿಕ್ಷಣವೆಂಬುದು ಇರಲಿಲ್ಲ. ಆಧ್ಯಾತ್ಮಿಕ ಹಾಗೂ ನೈತಿಕ ಶಿಕ್ಷಣವು ಮಾತ್ರ ನಿಜವಾದ ಶಿಕ್ಷಣವೆಂದು ಪರಿಗಣಿಸಲ್ಪಟ್ಟಿತ್ತು. ಶಿಕ್ಷಣವು ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮ ಗುರುಗಳಿಗೆ ಸೇರಿದ ವಿಷಯವಾಗಿತ್ತು. ಆದರೆ ಹನ್ನೊಂದನೆ ಶತಮಾನದ ಮಧ್ಯಯುಗದಲ್ಲಿ ಕಾಣಿಸಿಕೊಂಡ ಸಂಕುಚಿತ ಮನೋವೃತ್ತಿಯು ಹಿಂದೂ ಸಮಾಜಕ್ಕೆ ವಿಘಾತಕವಾಗಿ ಪರಿಣಮಿಸಿತು. ಹಿಂದೂ ಸಮಾಜದ ವರ್ಣಭೇದ ನೀತಿಯೇ ಬಹುಮಟ್ಟಿಗೆ ಕಾರಣವಾಯಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ವಿಭಜಿಸಲ್ಪಟ್ಟಿದ್ದರಿಂದ ಜಾತಿ ವ್ಯವಸ್ಥೆ ಪ್ರಬಲವಾಯಿತು. ಸಾಮಾಜಿಕ ವ್ಯವಸ್ಥಾ ಪದ್ಧತಿಗಳು ವಿರೋಧಾತ್ಮಕವಾಗಿ ಬೆಳೆದುಕೊಂಡು ಬಂದಿದ್ದವೆನ್ನುವುದು ಐತಿಹಾಸಿಕ ಅಧ್ಯಯನದಿಂದ ತಿಳಿದು ಬರುತ್ತದೆ. ಹೋರಾಟ, ಸಂಧಾನ ಮತ್ತು ಸಂಯೋಜಿತ ಚಟುವಟಿಕೆಗಳಿಗೆ ಈ ಅವಧಿಯಲ್ಲಿ ಹೆಚ್ಚು ಅವಕಾಶಗಳು ದೊರೆತವು. ಈ ವರ್ಣ ವ್ಯವಸ್ಥೆಯಲ್ಲಿ ಮಧ್ಯಯುಗೀನ ಕಾಲದಲ್ಲಿಯೂ ಬ್ರಾಹ್ಮಣರಿಗೆ ಹೆಚ್ಚು ಅನುಕೂಲಗಳು, ಸಾಮಾಜಿಕ ಅವಕಾಶಗಳು, ಅಧಿಕಾರಗಳೂ ಇದ್ದವು (ಮಜುಮ್‌ದಾರ್ ಆರ್.ಸಿ., ೧೯೫೨, ಪು.೪೯೯–೫೦೦).

ಪಿರಮಿಡ್ಡಿನ ರೀತಿಯಲ್ಲಿದ್ದ ಸ್ಥಾನಮಾನ ರಚನೆಯಲ್ಲಿ ಬ್ರಾಹ್ಮಣರೇ ಶ್ರೇಷ್ಠರೆಂದು ನಂಬಲಾಗಿತ್ತು. ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸಲು ಇತರೆ ಯಾವುದೇ ಜಾತಿಯವರಿಗೆ ಅವಕಾಶವಿರಲಿಲ್ಲ. ಹನ್ನೊಂದನೆ ಶತಮಾನದ ಮಧ್ಯಯುಗದಲ್ಲಿಯೂ, ಜ್ಞಾನದ ದೃಷ್ಟಿಯಿಂದ ಬ್ರಾಹ್ಮಣರು ಹೇಗೆ ಏಕಸ್ವಾಮ್ಯ ಹೊಂದಿದ್ದರೋ ಅಷ್ಟೇ ಅವಕಾಶವಾದಿಗಳೂ ಆಗಿದ್ದರು. ಬ್ರಾಹ್ಮಣರು, ಕ್ಷತ್ರಿಯರು ರಾಜನಾಗಿದ್ದಾಗ ಅವರಿಗೆ ತೋರಿದ ಹೊಂದಾಣಿಕೆಯನ್ನು ಉಳಿದವರಿಗೆ ತೋರುತ್ತಿರಲಿಲ್ಲ. ದ್ವಿಜೋತ್ತಮರು ಇತರ ವರ್ಗದವರಿಂದ ದೂರವಾಗಿದ್ದುಕೊಂಡು ತಮ್ಮ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವಲ್ಲಿ ಯಥಾ ಪ್ರಕಾರ ನಿರತರಾಗಿದ್ದುದು ಕಂಡುಬರುತ್ತದೆ. ಸಮಾಜವು ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಅಸಮರ್ಥವಾಗಿದ್ದರಿಂದ ಹಿಂದೂ ಸಮಾಜ ಅಧೋಗತಿಯತ್ತ ಸಾಗಿತ್ತು (ಮಜುಮ್‌ದಾರ್ ಆರ್.ಸಿ., ೧೯೫೨, ಪು.೫೦೦).

ಹೀಗೆ ಮಧ್ಯಕಾಲೀನ ಭಾರತದ ಶಿಕ್ಷಣವು ಮತಶಾಸ್ತ್ರದ ಮೇಲೆ ಆಧಾರವಾಗಿತ್ತೇ ಹೊರತು ಪ್ರಾಪಂಚಿಕ ವಿಷಯಗಳಾದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳನ್ನು ಆಧರಿಸಿರಲಿಲ್ಲ.

ಧರ್ಮದ ಹೆಸರಿನಲ್ಲಿ ವರ್ಣಗಳು, ವರ್ಣಗಳ ಹೆಸರಿನಲ್ಲಿ ಜಾತಿಗಳು ತಲೆದೋರಿ ಧರ್ಮದ ಶಕ್ತಿಯನ್ನು ನಾಶಗೊಳಿಸಿದವು. ಹಾಗಾದಲ್ಲಿ ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರದ ಹಾದಿ ಹೇಗೆ ಸಾಗಿತ್ತು?

ಕರ್ನಾಟಕದಲ್ಲಿಯೂ ವಿದ್ಯಾಭ್ಯಾಸ ಕ್ರಮ ಭಾರತೀಯ ಹಿನ್ನಲೆಯನ್ನೇ ಹೋಲುತ್ತದೆ. ಬ್ರಾಹ್ಮಣ ಧರ್ಮದ ಪಾರುಪತ್ಯದಲ್ಲಿ ನಾಲ್ಕು ಪ್ರಕಾರದ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳೆಂದರೆ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ದೇವಸ್ಥಾನ. ಅಗ್ರಹಾರವು ಹಳ್ಳಿ ಅಥವಾ ಗ್ರಾಮವೊಂದನ್ನು ಪ್ರತಿನಿಧಿಸುತ್ತಿತ್ತು. ವಿದ್ಯಾಭಿವೃದ್ಧಿಯು ಅಗ್ರಹಾರಗಳ ಪ್ರಮುಖ ಕಾರ್ಯವಾಗಿ, ವಿದ್ಯಾ ಕೇಂದ್ರಗಳಾಗಿದ್ದವು. ಅಗ್ರಹಾರಗಳು ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿ, ವಿದ್ಯಾಭ್ಯಾಸದ ಕೇಂದ್ರವಾಗಿದ್ದವು. ಅಗ್ರಹಾರ ನಿವಾಸಿಗಳಾದ ಬ್ರಾಹ್ಮಣರು ವಿವಿಧ ಶಾಸ್ತ್ರಗಳ ಉಚ್ಚ ಅಧ್ಯಯನ – ಅಧ್ಯಾಪನದಲ್ಲಿ ತೊಡಗಿರುತ್ತಿದ್ದರು. ವಿದ್ಯಾ ಪಾರಂಗತರಾದ ಬ್ರಾಹ್ಮಣರ ನಿವಾಸವೇ ಬ್ರಹ್ಮಪುರಿ. ಇದು ನಗರದ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸುತ್ತದೆ. ರಾಜ-ಮಹಾರಾಜರುಗಳೇ ಭೂದಾನ, ಧನದಾನ್ಯಗಳನ್ನಿತ್ತು ನಡೆಸುತ್ತಿದ್ದುದೇ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು. ಘಟಿಕಾಸ್ಥಾನವು ಸುದೀರ್ಘ ಪುರಾತನತೆಯನ್ನು ಹೊಂದಿದ ಶಿಕ್ಷಣ ಸಂಸ್ಥೆ. ವಿದ್ಯಾಕೇಂದ್ರಗಳಾದ ಈ ಸಂಸ್ಥೆಗಳಲ್ಲಿ ವೇದ, ಧರ್ಮಶಾಸ್ತ್ರ, ಮೀಮಾಂಸ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ದೇವಸ್ಥಾನಗಳು ಚಾರಿತ್ರ್ಯಶುದ್ಧಿಯುಳ್ಳ ತಪೋನಿಷ್ಠ ಋಷಿಗಳ ಅಧ್ಯಾಪನ ಕೇಂದ್ರಗಳಾಗಿದ್ದವು. ಕೆಲವು ದೇವಸ್ಥಾನಗಳು ಪ್ರಾಥಮಿಕ ವಿದ್ಯಾ ಕೇಂದ್ರಗಳಾಗಿದ್ದು, ಇನ್ನೂ ಕೆಲವು ಉಚ್ಚ ಶಿಕ್ಷಣ ಸಂಸ್ಥೆಗಳಾಗಿದ್ದವು. ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾ ಸ್ಥಾನಗಳು ಈ ದೇವಸ್ಥಾನಗಳಿಗೆ ಸೇರುತ್ತಿದ್ದು, ದೇವಸ್ಥಾನಗಳು ವಿದ್ಯಾದಾನದ ಪ್ರಥಮ ಸಂಸ್ಥೆಗಳಾಗಿದ್ದವು (ಶಿವರುದ್ರಪ್ಪ ಜಿ., ೧೯೭೪, ಪು.೧೫೬-೧೬೨).

ಕರ್ನಾಟಕದಲ್ಲಿ ಮಠಗಳು ಮತ್ತು ದೇವಸ್ಥಾನಗಳೂ ಸಹ ಶಿಕ್ಷಣ ಕೇಂದ್ರಗಳಾಗಿದ್ದವು. ಮಧ್ಯಯುಗದಲ್ಲಿ ಮಠಗಳ ವ್ಯಾಪ್ತಿ ವಿಶಾಲವಾಗಿದ್ದು ಯಾವುದಾದರೊಂದು ದೇವಾಲಯಕ್ಕೆ ಹೊಂದಿಕೊಂಡು ಧರ್ಮ, ಸಂಸ್ಕೃತಿ ಹಾಗೂ ಶಿಕ್ಷಣದ ಕೇಂದ್ರಗಳಾಗಿದ್ದವು. ಮಠಗಳೆಂದರೆ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳೇ ಆಗಿದ್ದವು. ಕ್ರಿ.ಶ.೬ನೇ ಶತಮಾನದಿಂದಲೇ ಶಿಕ್ಷಣ ಕ್ಷೇತ್ರದಲ್ಲಿ ಕಾಣಿಸಿಕೊಂಡ ಮಠಗಳು ಕ್ರಿ.ಶ.೧೦ ರಿಂದ ಕ್ರಿ.ಶ.೧೩ನೇ ಶತಕದ ಅವಧಿಯಲ್ಲಿ ಕಾಳಾಮುಖ ಶೈವ ಮತದ ಉಚ್ಛ್ರಾಯ ಕಾಲದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದವು. ಈ ಮಠಗಳಲ್ಲಿ ಬೋಧನಾ ಮಾಧ್ಯಮವು ಸಂಸ್ಕೃತವಾಗಿತ್ತು (ಶಿವರುದ್ರಪ್ಪ ಜಿ., ೧೯೭೪, ಪು.೧೨೩-೧೩೪). ಹೀಗೆ ಶ್ರೀಮಂತರ, ರಾಜ-ಮಹಾರಾಜರ, ಜನತೆಯ ಸಹಕಾರದಿಂದ ನಡೆಯುತ್ತಿದ್ದ ವಿದ್ಯಾಸಂಸ್ಥೆಗಳು ಆ ಕಾಲದ ಸಂಸ್ಕೃತಿಯ ಜೀವನವನ್ನು ರೂಪಿಸಲು

ಕಾರಣವಾಗಿದ್ದವು. ಆಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು ಮತ್ತು ದೇವಸ್ಥಾನಗಳು ಬ್ರಾಹ್ಮಣರಿಗಷ್ಟೇ ಶಿಕ್ಷಣ ಸೌಲಭ್ಯ ಒದಗಿಸುತ್ತಿದ್ದುದು ಅಧ್ಯಯನಗಳಿಂದ ತಿಳಿದು ಬರುತ್ತದೆ.

ಜಾತಿ ಕತ್ತಲಲ್ಲಿ ಜನ ಸಿಲುಕಿ ಭಾರತ ದೇಶ ಛಿದ್ರ ವಿಚ್ಛಿದ್ರವಾಗಿತ್ತು. ಅಲ್ಪಸಂಖ್ಯಾತ ಮೇಲ್ಜಾತಿಯ ಜನ ಬಹುಸಂಖ್ಯಾತ ಬಲಾಢ್ಯರಾದ ಕೆಳಜಾತಿಯ ಜನರನ್ನು ಶಿಕ್ಷಣದಿಂದ, ಸಮಾಜದ ಬದುಕಿನಿಂದ ಬಹಳ ದೂರವಿಟ್ಟಿದ್ದರು. ಕರ್ನಾಟಕವೂ ಇದರಿಂದ ಹೊರತಾಗಿರಲಿಲ್ಲ. ಧಾರ್ಮಿಕ ನಂಬಿಕೆಗಳು ಮತ್ತು ಸಾಮಾಜಿಕ ಕಟ್ಟುಪಾಡುಗಳು ಅನೇಕ ಕಾರಣಗಳಿಂದಾಗಿ ದಿನಕಳೆದಂತೆ ಜಟಿಲವಾಗಿದ್ದವು. ಇದರಿಂದಾಗಿ ಧರ್ಮ ಮತ್ತು ಸಮಾಜದ ಶುದ್ಧೀಕರಣ ಕಾರ್ಯ ಅನಿವಾರ್ಯವಾಯಿತು. ಇಂತಹ ಸನ್ನಿವೇಶದಲ್ಲಿ ಧರ್ಮಕ್ಕೆ ಹೊಸ ತಿರುವು ಕೊಟ್ಟು ಜನಸಾಮಾನ್ಯರ ಆತ್ಮಿಕ ತೃಷೆಯನ್ನು ತಣಿಸುವೊಂದರ ಅವಶ್ಯಕತೆಯುಂಟಾದ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ವೀರಶೈವ ಪಂಥ ಅಸ್ಥಿತ್ವಕ್ಕೆ ಬಂದಿತು. ಮಾನವನ ಅಭ್ಯುದಯ ಮತ್ತು ಸಾಮಾಜಿಕ ಬದಲಾವಣೆಗಳನ್ನು ಐತಿಹಾಸಿಕ ಸಂದರ್ಭಗಳು ತಡೆಗಟ್ಟಿ ನಿಂತಾಗ, ಅವುಗಳನ್ನು ಆಹ್ವಾನಿಸಿ, ಅಭ್ಯುದಯಕ್ಕೂ, ಬದಲಾವಣೆಗೂ ದಾರಿ ಮಾಡಿಕೊಟ್ಟ ಪಂಥವೇ ವೀರಶೈವ ಪಂಥ.

ಕ್ರಿ.ಶ.೧೨ನೇ ಶತಮಾನದಲ್ಲಿ ಬಸವಣ್ಣ (ಕ್ರಿ.ಶ.೧೧೫೬) ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಆಂದೋಲನವನ್ನುಂಟು ಮಾಡಿದನು. ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ ಬಸವಣ್ಣ ಬ್ರಾಹ್ಮಣರ ವಿರೋಧಿ ನಿಲುವನ್ನು ತಳೆದಿದ್ದು, ವೀರಶೈವ ಚಳವಳಿಯ ಮೂಲಕ ಸಾಮಾಜಿಕ ಅಸಮಾನತೆಗೆ ವಿರೋಧ ವ್ಯಕ್ತಪಡಿಸಿದ್ದನು. ವಿಚಾರ ಸ್ವಾತಂತ್ರ್ಯ ಮತ್ತು ವೃತ್ತಿ ಗೌರವ ಇವರೆಡೂ ವೀರಶೈವ ಧರ್ಮದ ವಿಶಿಷ್ಟ ಲಕ್ಷಣಗಳೆಂದನು. ವೀರಶೈವ ಶರಣರು ಅನಾಚಾರ, ಸಾಮಾಜಿಕ ಅನ್ಯಾಯ, ಕುರುಡು ಸಂಪ್ರದಾಯ ಹಾಗೂ ಜಾತೀಯ ಯಜಮಾನಿಕೆ ವಿರುದ್ಧ ಬಂಡಾಯವೆದ್ದರು. ವೇದಗಳ ಕಾಲದಲ್ಲಿ ಕಂಡುಬಂದ ಜಾತಿ ಪದ್ಧತಿಯನ್ನೇ ಸಂಪೂರ್ಣವಾಗಿ ಅಲ್ಲಗಳೆದು ಜಾತಿರಹಿತ, ಸಮಾನ ಶರಣರ ಸಮಾಜವನ್ನು ಸ್ಥಾಪಿಸಬೇಕೆಂದನು. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸ್ಥಾಪಿಸಬೇಕೆಂದನು (ಮಜುಮ್‌ದಾರ್ ಆರ್.ಸಿ., ೧೯೫೨, ಪು.೪೬೨).

ವೇದಗಳ ಅಂತಿಮ ಕಾಲದಲ್ಲಿ ಸ್ತ್ರೀ-ಪುರುಷರ ಸಮಾನ ಹಕ್ಕು ಬಾಧ್ಯತೆಗಳು ನಿರಾಕರಿಸಲ್ಪಟ್ಟಿದ್ದವು. ಉನ್ನತ ವರ್ಗದ ಸ್ತ್ರೀಯರಿಗೆ ಮಾತ್ರ ಶಿಕ್ಷಣ ಪಡೆಯಲು ಅವಕಾಶವಿದ್ದು, ವೇದಾಂತದ ಚರ್ಚೆಗಳಲ್ಲಿ

ಭಾಗವಹಿಸಬಹುದಾಗಿತ್ತು. ಸ್ತ್ರೀ ಶಿಕ್ಷಣ ವೇದಗಳ ಪ್ರಾರಂಭದ ಕಾಲದಲ್ಲಿ ಉನ್ನತ ಸ್ಥಾನದಲ್ಲಿದ್ದರೂ ಅಂತಿಮ ಕಾಲದಲ್ಲಿ ಬಹಳ ಮಟ್ಟಿಗೆ ಕುಗ್ಗಿತ್ತು (ಮಹಾಜನ್ ವಿ.ಡಿ., ೨೦೦೫, ಪು. ೧೬೫-೧೬೬). ನಿರ್ದಿಷ್ಟ ಪಡಿಸಿದ ವರ್ಣ ಸಿದ್ಧಾಂತದ ಆದರ್ಶವು ಕೇವಲ ಸಿದ್ಧಾಂತವಾಗಿಯೇ ಉಳಿದು, ವಾಸ್ತವಿಕ ಜಗತ್ತಿನಲ್ಲಿ ಜಾತಿ ಪದ್ಧತಿ ಬಲವಾಗಿ ಬೇರೂರಿ, ಸಾಂಸ್ಥಿಕ ಅಸಮಾನತೆ ಶಿಕ್ಷಣ ಕ್ಷೇತ್ರದಲ್ಲಿ ಕಂಡು ಬಂದಿತ್ತು. ಆದರೆ ಬಸವಾದಿ ಪ್ರಮಥರು ಶಿಕ್ಷಣ ಪಡೆಯುವಲ್ಲಿ ಸ್ತ್ರೀ-ಪುರುಷರು ಸಮಾನರೆಂದು, ಜ್ಞಾನ ಸಂಪಾದಿಸಲು ಹಾಗೂ ಪಡೆದ ಜ್ಞಾನವನ್ನು ಪ್ರಸಾರ ಮಾಡಲು ಸಮಾನ ಅವಕಾಶಗಳಿವೆ ಎಂದರು. ತಮ್ಮ ಕ್ರಾಂತಿಕಾರಕ ಚಿಂತನೆಗಳು ಜನಸಾಮಾನ್ಯರಿಗೆ ತಲುಪಲೆಂದು ಆಶಿಸಿ 'ಅನುಭವ ಮಂಟಪ' ವನ್ನು ಸ್ಥಾಪಿಸಿ, ಅನುಸಂಧಾನಕ್ಕೆ ಅವಕಾಶ ಕಲ್ಪಿಸಿದ್ದರು.

ಅನುಭವ ಮಂಟಪದಲ್ಲಿ ಎಲ್ಲಾ ಜಾತಿ, ಎಲ್ಲಾ ವರ್ಗದವರು ಮುಕ್ತವಾಗಿ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲು ಅವಕಾಶಗಳಿದ್ದವು. ಅನುಭವ ಮಂಟಪದ ಕಾರ್ಯ ಕಲಾಪಗಳಿಂದ ಶರಣರ ಸ್ವಾನುಭವ ವಿಚಾರಗಳಿಂದ ಜಾತಿ-ಮತ-ಪಂಥಗಳ ಬಂಧನವಿಲ್ಲದೆ ಹರಿತವಾದ ವಿಚಾರಧಾರೆ ಹರಿದು, ಎಲ್ಲರಿಗೂ ದಿವ್ಯಜ್ಞಾನ ಪಡೆಯಲು ಅವಕಾಶವಿತ್ತು. ಸ್ತ್ರೀಯರು ಪುರುಷರಷ್ಟೇ ಸರಿಸಮಾನರಾಗಿ ವೇದಿಕೆಯನ್ನು ಹಂಚಿಕೊಂಡು, ವಚನಗಳನ್ನು ಕನ್ನಡದಲ್ಲಿ ಮಂಡಿಸುತ್ತಿದ್ದರು. ಬ್ರಾಹ್ಮಣರು ವೇದಗಳನ್ನು ಪಠಿಸುವಾಗ ಸಂಸ್ಕೃತ ಭಾಷೆಯನ್ನು ಬಳಸಿದರೆ, ವಚನಕಾರರು ಕನ್ನಡವನ್ನು ಸಂಸ್ಕೃತಿಯ ವಾಹಕವನ್ನಾಗಿಸಿದರು (ಜವಳಿ ಬಿ.ಸಿ., ೧೯೯೭, ಪು.೮೧-೧೦೦). ಅನುಭವ ಮಂಟಪ ವ್ಯಷ್ಟಿ ಉದ್ಧಾರದ ಮುಖಾಂತರ ಸಮಷ್ಟಿ ಉದ್ಧಾರ ಸಾಧಿಸುವ ಗುರಿಯನ್ನು ಹೊಂದಿತ್ತು. ಅನುಭವ ಮಂಟಪದಲ್ಲಿ ಎಲ್ಲರೂ ಸಮಾನರು. ಸರ್ವರಿಗೂ ವಿಚಾರ ಸ್ವಾತಂತ್ರ್ಯವಿತ್ತು. ಹಿರಿಯ-ಕಿರಿಯ, ಸ್ತ್ರೀ-ಪುರುಷ, ಅಂತ್ಯಜ-ಕುಲಜರೆಲ್ಲರೂ ಸಾಹಿತ್ಯ ಸಿದ್ಧಿಯನ್ನು ನಿಲುಕಿಸಿಕೊಂಡರು. ಇದರಿಂದ ಕನ್ನಡಕ್ಕೆ ಉತ್ಕೃಷ್ಟ ಅನುಭಾವ ಸಾಹಿತ್ಯ ಕಾಣಿಕೆಯಾಗಿ ಸಂದಿತು. ಹನ್ನೆರಡನೇ ಶತಮಾನದ ವೀರಶೈವ ಆಂದೋಲನದೊಂದಿಗೆ ವಿದ್ಯಾಕ್ಷೇತ್ರದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳು ಕಾಣಿಸಿಕೊಂಡವು.

ವೀರಶೈವ ಚಳವಳಿಯ ನಂತರ ಭಾರತದಲ್ಲಿ ಅನೇಕ ಐತಿಹಾಸಿಕ ಬದಲಾವಣೆಗಳುಂಟಾದವು. ೧೮ನೇ ಶತಮಾನದಲ್ಲಿ 'ಜಾತಿ' ವ್ಯವಸ್ಥೆ ಮತ್ತಷ್ಟು ಸಂಕೀರ್ಣಗೊಂಡು, ದ್ವಿಜ-ಜಾತಿಯವರಿಗಷ್ಟೇ ಶಿಕ್ಷಣ ದೊರೆಯುತ್ತಿತ್ತು. ಕೆಳಜಾತಿಯವರು ಉದ್ಯೋಗ ಮತ್ತು ಶಿಕ್ಷಣದಿಂದ ವಂಚಿತರಾಗಿದ್ದರು. ಮಹಿಳಾ ಶಿಕ್ಷಣಕ್ಕೆ ವ್ಯಾಪಕ ಬೆಂಬಲ ದೊರೆಯಲಿಲ್ಲ. ಬಾಲ್ಯವಿವಾಹ ಮತ್ತು ಸತಿಸಹಗಮನ ಪದ್ಧತಿಗಳನ್ನು

ಪ್ರೋತ್ಸಾಹಿಸಲಾಯಿತು. ಶಿಕ್ಷಣ ಸಾರ್ವತ್ರಿಕವಾಗಿರದೆ ಕೆಲವೇ ವರ್ಗಕ್ಕೆ ಸೀಮಿತವಾಗಿತ್ತು. ಉಳ್ಳವರು ಶಿಕ್ಷಣವನ್ನು ಪಡೆಯುತ್ತಿದ್ದರು. ಬಡ ಮತ್ತು ಕೆಳವರ್ಗದ ಜನರು ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ (ಗ್ರೋವರ್ ಬಿ.ಎಲ್., ೧೯೮೩, ಪು. ೨೭-೨೮).

ಹದಿನೆಂಟನೆ ಶತಮಾನದ ಕೊನೆಗೆ ಭಾರತೀಯ ಸಮಾಜವು ಹೆಚ್ಚಾಗಿ ಸ್ಥರೀಕೃತವೂ, ಉಚ್ಚ-ನೀಚ ಪರಂಪರೆಯದೂ, ಅಸಮವೂ ಆಗಿತ್ತು. ಸಾಮಂತ ಪ್ರಭುಗಳು, ಅವರ ಆಶ್ರಿತರು ಮತ್ತು ಬೆಂಬಲಿಗರು, ಮೇಲ್ಜಾತಿಯವರು, ದೊಡ್ಡ ಹಿಡುವಳಿಗಳ ರೈತರು, ವ್ಯಾಪಾರಸ್ಥರು ಮತ್ತು ಲೇವಾದೇವಿಗಾರರು- ಇವರನ್ನೊಳಗೊಂಡ ಅನುಕೂಲಸ್ಥರ ಸಣ್ಣ ಗುಂಪು ಸಮಾಜದ ಉತ್ತುಂಗದಲ್ಲಿದ್ದರು. ಆದರೆ ಬಹುಪಾಲು ಜನರು ಸಮಾಜದಿಂದ ಎಲ್ಲ ರಂಗಗಳಲ್ಲೂ ವಂಚಿತರಾಗುತ್ತಿದ್ದರು. ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಈ ಶೋಷಣೆ ಅಪಾರವಾಗಿದ್ದಿತು.

ಭಾರತದಲ್ಲಿ ಅನೇಕ ರಾಜ-ಮಹಾರಾಜರು ಶಿಕ್ಷಣಕ್ಕೆ ಉದಾರವಾದ ನೆರವು ಮತ್ತು ಪ್ರೋತ್ಸಾಹ ನೀಡುತ್ತಿದ್ದರು. ೧೮ನೇ ಶತಮಾನದಲ್ಲಿ ಬ್ರಿಟೀಷರು ಭಾರತವನ್ನು ಆಕ್ರಮಿಸಿ ಆಳ್ವಿಕೆಯನ್ನು ಪ್ರಾರಂಭಿಸಿದಾಗ, ಭಾರತದ ಶೈಕ್ಷಣಿಕ ವ್ಯವಸ್ಥೆ ಮತ್ತು ಶಿಕ್ಷಣ ದುರವಸ್ಥೆಯನ್ನು ಹೊಂದಲು ಪ್ರಾರಂಭಿಸಿದವು. ಇದಕ್ಕೆ ಕಾರಣ ರಾಜಕೀಯ, ಸಾಮಾಜಿಕ, ಆರ್ಥಿಕ ಗತ್ಯಂತರಗಳು ಮತ್ತು ಬದಲಾವಣೆಗಳು. ಅನೇಕ ಶಾಲೆಗಳು ರಾಜರ ಮತ್ತು ಅಧಿಕಾರ ವರ್ಗದವರ ಪೋಷಣೆಯಿಲ್ಲದೆ ಅವನತಿ ಹೊಂದಿದವು. ಬ್ರಿಟೀಷರ ಆಗಮನದೊಂದಿಗೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು.

೨.೨ ವಸಾಹತೋತ್ತರ ಶೈಕ್ಷಣಿಕ ಇತಿಹಾಸ

ವಸಾಹತುಶಾಹಿಗಳ ಆಗಮನಕ್ಕಿಂತಲೂ ಮೊದಲು ಶಿಕ್ಷಣ ಸಾರ್ವತ್ರಿಕವಾಗಿರದೆ, ದ್ವಿಜ ಜಾತಿಯವರಿಗಷ್ಟೇ ದೊರೆಯುತ್ತಿತ್ತು. ಬ್ರಾಹ್ಮಣರು ಶಿಕ್ಷಣವನ್ನು ಪಡೆಯುವಲ್ಲಿ ಸಂಪೂರ್ಣವಾಗಿ ಏಕಸ್ವಾಮ್ಯ ಹೊಂದಿದ್ದರು. ಆದರೆ ಬೋಧನೆಯು ಧಾರ್ಮಿಕ ವಿಷಯಗಳಿಗಷ್ಟೇ ಮೀಸಲಾಗಿತ್ತು. ವ್ಯಕ್ತಿ ವಿಕಾಸಕ್ಕೆ ಪೂರಕವಾಗಿರುವ ವಿಚಾರಗಳಿಗೆ ಗಮನ ಹರಿಸುತ್ತಿರಲಿಲ್ಲ. ಬ್ರಿಟೀಷರು ಭಾರತೀಯರಿಗೆ ಆಧುನಿಕ ಶಿಕ್ಷಣವನ್ನು ಪರಿಚಯಿಸಿದರು, ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಆಡಳಿತವನ್ನು ಆರಂಭಿಸಿದಾಗ ಭಾರತೀಯ ಶಿಕ್ಷಣ ಪದ್ದತಿಯಲ್ಲಿ ಯಾವುದೇ ಬದಲಾವಣೆಯನ್ನು ತರದೆ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನೇ ಮುಂದುವರೆಸಿತು. ಹಾಗಾದಲ್ಲಿ ಬ್ರಿಟೀಷರು ಭಾರತೀಯರಿಗೆ ಆಧುನಿಕ ಶಿಕ್ಷಣ

ನೀಡಲು ಮುಂದೆ ಬರಲು ಕಾರಣಗಳೇನು ? ಭಾರತದಲ್ಲಿ ಆಧುನಿಕ ಶಿಕ್ಷಣ ಪ್ರಾರಂಭವಾದದ್ದು ವಸಾಹತು ಕಾಲದಲ್ಲಿ ಎಂಬುದು ಐತಿಹಾಸಿಕ ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಸರ್ಕಾರ, ಕ್ರಿಶ್ಚಿಯನ್ ಮಿಷನರಿಗಳು, ಧಾರ್ಮಿಕ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳು ವಸಾಹತು ಕಾಲದಲ್ಲಿಯೇ ವ್ಯಾಪಕವಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳ ಸಮಗ್ರ ಚಿಂತನೆ ವಸಾಹತು ಕಾಲದ 'ಶಿಕ್ಷಣ ಇತಿಹಾಸ'ದಲ್ಲಿ ಅಡಕವಾಗಿದೆ. ಭಾರತದ ಸಂದರ್ಭದಲ್ಲಿ ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಲು ಒದಗಿ ಬಂದ ಒತ್ತಾಯಗಳು ಯಾವುವು ?

ಆಂಗ್ಲರ ಆಳ್ವಿಕೆಯೇ ಭಾರತದಲ್ಲಿ ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಲು ಕಾರಣ. ಆಂಗ್ಲರ ಆಳ್ವಿಕೆಯ ಕಾಲದಲ್ಲಿ ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳ ಶಿಕ್ಷಣವು ಮೊಳೆತು, ಚಿಗುರಿ, ಕೊಂಬೆಯೊಡೆದು ರಾಜ್ಯಾದ್ಯಂತ ಪ್ರಸರಿಸಿದ ಗತಿ ವಿನ್ಯಾಸವನ್ನು ವಿವರಿಸಬಹುದು.

ಭಾರತದಲ್ಲಿ ೧೭೬೫ ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಆಳ್ವಿಕೆಯನ್ನು ಬಂಗಾಳದಲ್ಲಿ ಪ್ರಾರಂಭಿಸಿದಾಗ ಕಂಪೆನಿಯು ಭಾರತೀಯರಿಗೆ ಶಿಕ್ಷಣ ನೀಡುವಲ್ಲಿ ಯಾವುದೇ ಆಸಕ್ತಿ ವಹಿಸಿರಲಿಲ್ಲ. ಆದರೆ ೧೭೮೨-೯೩ ರ ಅವಧಿಯಲ್ಲಿ ಬ್ರಿಟೀಷ್ ಪಾರ್ಲಿಮೆಂಟ್ ಭಾರತದಲ್ಲಿನ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಗೆ ಭಾರತದಲ್ಲಿ ನೂತನ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಆಗ್ರಹಪಡಿಸಿತು. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ಭಾರತೀಯರಿಗೆ ಶಿಕ್ಷಣ ನೀಡಲು ಎರಡು ಪ್ರಮುಖ ಕಾರಣಗಳಿಂದ ಮುಂದಾಯಿತು. ಮೊದಲನೆಯದಾಗಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ವಿದ್ಯಾವಂತ ನೌಕರರ ಅವಶ್ಯಕತೆಯಿತ್ತು. ಬ್ರಿಟನ್‌ನಿಂದಲೇ ಆಡಳಿತ ನಡೆಸಲು ಅಗತ್ಯವಿರುವ ನೌಕರರನ್ನು ಕರೆತರುವುದು ಕಷ್ಟದ ಕೆಲಸವಾಗಿತ್ತು. ಆದ್ದರಿಂದ ಬ್ರಿಟೀಷ್ ಸರ್ಕಾರ ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ, ಹೆಚ್ಚಿನ ಜನರನ್ನು ಆಡಳಿತ ಸೇವೆಗಳಲ್ಲಿ ತೊಡಗಿಸುವ ಉದ್ದೇಶದಿಂದ ವಿದ್ಯಾಭ್ಯಾಸವನ್ನು ಆರಂಭಿಸಬೇಕಿತ್ತು. ಆಡಳಿತ ಸೇವೆಗಳಲ್ಲಿ ಆಂಗ್ಲಭಾಷಾ ಜ್ಞಾನ ಹೊಂದಿರುವವರ ಅವಶ್ಯಕತೆ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಗಿತ್ತು. ಎರಡನೆಯದಾಗಿ ಬ್ರಿಟೀಷರು ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾದ ಧರ್ಮ ಕ್ರೈಸ್ತಧರ್ಮವೆಂದು ಭಾವಿಸಿದ್ದು, ಆಂಗ್ಲ ಭಾಷಾ ಶಿಕ್ಷಣದ ಮೂಲಕ 'ಕ್ರೈಸ್ತಧರ್ಮ' ವನ್ನು ಹರಡುವುದು ಸುಲಭ ಸಾಧ್ಯವೆಂದು ಅಭಿಪ್ರಾಯಪಟ್ಟರು. ಬ್ರಿಟಿಷರು ಭಾರತಕ್ಕೆ ಆಗಮಿಸಿದಾಗಿನಿಂದಲೂ ಭಾರತೀಯರಿಗೆ ಶಿಕ್ಷಣ ನೀಡುವುದಕ್ಕಿಂತ ಹೆಚ್ಚು 'ಕ್ರೈಸ್ತಧರ್ಮ' ವನ್ನು ಹರಡುವುದು ಹಾಗೂ ಭಾರತೀಯರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸುವುದೇ ಬ್ರಿಟೀಷರ

ಉದ್ದೇಶವಾಗಿತ್ತು (ವಾದ್ವಾನಿ ಎಂ.ಆರ್./ ಎ.ಎಲ್.ಡಿಸೌಜ, ೧೯೮೦, ಪು.೨೨೮). ಹಾಗೆಯೇ ಪ್ರಗತಿಪರ ಭಾರತೀಯ ಚಿಂತಕರು ಆಂಗ್ಲಭಾಷಾ ಶಿಕ್ಷಣದ ಮೇಲೆ ಹೆಚ್ಚಿನ ಒಲವನ್ನು ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಬ್ರಿಟೀಷರು ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿ, ಆಧುನಿಕ ಶಿಕ್ಷಣವನ್ನು ಪ್ರಚಾರ ಮಾಡಲು ಪ್ರಾರಂಭಿಸಿದರು. ಈ ಚಿಂತನೆಯೇ ಭಾರತದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಆರಂಭಕ್ಕೆ ನಾಂದಿಯಾಯಿತು.

೧೮೦೦ ರಿಂದ ೧೮೧೧ರ ಅವಧಿಯಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್‌ನ ಸದಸ್ಯ ಚಾರ್ಲ್ಸ್ ಗ್ರಾಂಟ್ ಆಂಗ್ಲಭಾಷಾ ಶಿಕ್ಷಣವನ್ನು ಕೊಡುವುದರಿಂದ ಭಾರತೀಯರಲ್ಲಿರುವ ಅಜ್ಞಾನವನ್ನು ತೊಡೆದು ಹಾಕಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದನು. ಆದರೆ ಗ್ರಾಂಟ್‌ನ ಪ್ರಯತ್ನಗಳು ವಿಫಲವಾದವು. ೧೮೧೧ ರಲ್ಲಿ ಲಾರ್ಡ್ ಮಿಂಟೋ ಭಾರತದಲ್ಲಿನ ಸಾಹಿತ್ಯ, ವಿಜ್ಞಾನ ಶಿಕ್ಷಣದ ದುಃಸ್ಥಿತಿಯ ಬಗೆಗೆ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿ, ಇರುವ ಶಾಲಾ-ಕಾಲೇಜುಗಳ ಪುನರ್ ವ್ಯವಸ್ಥೆಗೆ ಮತ್ತು ಹೊಸ ಶಾಲಾ-ಕಾಲೇಜುಗಳ ಸ್ಥಾಪನೆಗೆ ಆಗ್ರಹಪಡಿಸಿದ್ದನು. ಈ ಕಾರಣದಿಂದಾಗಿ ೧೮೧೩ ರಲ್ಲಿ ಚಾರ್ಟರ್ ಕಾಯಿದೆಯನ್ನು ರೂಪಿಸಲಾಯಿತು (ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ, ೧೯೮೦, ಪು.೨೨೮).

ವಸಾಹತು ಕಾಲದಲ್ಲಿ ಶಿಕ್ಷಣವು ಸಮಾಜದಲ್ಲಿ ಉನ್ನತ ಜಾತಿಯವರಿಗೆ ಮಾತ್ರ ಸುಲಭ ಸಾಧ್ಯವಾಗಿತ್ತು. ಶಿಕ್ಷಣ ಕೆಲವರಿಗಷ್ಟೇ ದೊರೆಯುತ್ತಿದ್ದುದರಿಂದ ಬಹುಸಂಖ್ಯಾತರನ್ನು ಶಿಕ್ಷಣ ಪಡೆಯುವುದರಿಂದ ದೂರವಿಡಲಾಗುತ್ತಿತ್ತು. ಆದರೆ ಬ್ರಿಟೀಷ್ ಸರ್ಕಾರದ ಆಡಳಿತದಲ್ಲಿ ಕ್ರಿ.ಶ.೧೮೧೩ರ ಗೊತ್ತುವಳಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರಿಂದ ಭಾರತೀಯರೆಲ್ಲರಿಗೂ ಶಿಕ್ಷಣ ದೊರೆಯುವಂತೆ ಒಪ್ಪಂದವಾಯಿತು (ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ, ೧೯೮೦, ಪು.೨೨೮). ಈ ಒಪ್ಪಂದದಂತೆ ಎಲ್ಲರಿಗೂ ಶಿಕ್ಷಣ ನೀಡಲು ಸಾಧ್ಯವಾಯಿತೆ ? ಎಲ್ಲರಿಗೂ ಶಿಕ್ಷಣ ಸಮಾನಾಂತರವಾಗಿ ದೊರೆಯುವಂತೆ ಕ್ರಮ ಕೈಗೊಳ್ಳಲಾಯಿತೆ ?

೧೮೧೩ ರ ಚಾರ್ಟರ್ ಕಾಯಿದೆಯಂತೆ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ಭಾರತೀಯರಿಗೆ ಕ್ರಿಶ್ಚಿಯನ್ ಮಿಷನರಿಗಳ ಮೂಲಕ ಶಿಕ್ಷಣ ನೀಡಲು ಮುಂದಾಯಿತು. ವಾಸ್ತವವಾಗಿ ಕಂಪೆನಿಯ ಉದ್ದೇಶ ಭಾರತೀಯರಿಗೆ ಶಿಕ್ಷಣವನ್ನು ಕೊಡುವುದಾಗಿರದೆ ಮತಾಂತರಿಸುವುದೇ ಆಗಿತ್ತು. ಅವರ ಉದ್ದೇಶವೇನೇ

ಇರಲಿ, ಶಿಕ್ಷಣ ಕ್ಷೇತ್ರದಲ್ಲಿ ಮಿಷನರಿಗಳು ಉತ್ತಮ ಸೇವೆಯನ್ನು ಸಲ್ಲಿಸಿದವು. ಈಸ್ಟ್ ಇಂಡಿಯಾ ಕಂಪೆನಿಯಿಂದ ವಾಸ್ತವವಾಗಿ, ಪ್ರಾಯೋಗಿಕವಾಗಿ ಶಿಕ್ಷಣವನ್ನು ಕೊಡಲು ಸಾಧ್ಯವಾಗಲಿಲ್ಲವೋ, ಆ ಕಾರ್ಯವನ್ನು ಕ್ರಿಶ್ಚಿಯನ್ ಮಿಷನರಿಗಳು ಕೈಗೊಂಡವು. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ಶಿಕ್ಷಣ ನೀಡುವುದಕ್ಕಿಂತಲೂ ಹೆಚ್ಚು ಕ್ರಿಶ್ಚಿಯನ್ ಮಿಷನರಿಗಳು ಶಿಕ್ಷಣ ನೀಡಲು ಮುಂದಾದವು. ಶಿಕ್ಷಣವನ್ನು ಆಂಗ್ಲ ಭಾಷೆಯಲ್ಲಿಯೇ ನೀಡಲು ನಿರ್ಧರಿಸಿ ಸುಮಾರು ಒಂದು ಲಕ್ಷ ರೂ.ಗಳನ್ನು ಶಿಕ್ಷಣ ಕ್ಷೇತ್ರಕ್ಕೆ ವೆಚ್ಚ ಮಾಡಲು ಸರ್ಕಾರ ನಿರ್ಧರಿಸಿತು (ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ, ೧೯೮೦, ಪು.೨೨೮-೨೨೯). ಆದರೆ ಶಿಕ್ಷಣ ಯಾವ ಭಾಷೆಯಲ್ಲಿರಬೇಕೆಂಬ ಚರ್ಚೆಗೆ ಗ್ರಾಸವಾಗಿ ೧೮೧೩ರ ಚಾರ್ಟರ್ ಕಾಯಿದೆ ೧೮೯೩ ರಲ್ಲಿ ವಿವಾದಕ್ಕೆ ಸಿಲುಕಿತು. ೧೮೨೩ ರಲ್ಲಿ ಹತ್ತು ಸದಸ್ಯರುಳ್ಳ 'ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್' ನೇಮಕ ಮಾಡಲಾಗಿ ಈ ಕಮಿಟಿಯು ಭಾರತೀಯರಿಗೆ ಯಾವ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಿತ್ತು. ಆದರೆ ಈ ಕಮಿಟಿಯ ಸದಸ್ಯರುಗಳಲ್ಲಿಯೇ ಓರಿಯಂಟಲಿಸ್ಟ್ ಮತ್ತು ಆಂಗ್ಲಿಸಿಸ್ಟ್‌ರೆಂದು ಎರಡು ಬಣಗಳಾಯಿತು. ಓರಿಯಂಟಲಿಸ್ಟ್ ಧುರೀಣರಾದ ಹೆಚ್.ಟಿ.ಪ್ರಿನ್ಸೆಪ್ ಮತ್ತು ಹೆಚ್.ಹೆಚ್.ವಿಲ್ಸನ್ ಪ್ರಕಾರ ಸಂಸ್ಕೃತ, ಅರೇಬಿಕ್ ಇಲ್ಲವೆ ಪರ್ಷಿಯನ್ ಭಾಷೆಗಳಲ್ಲಿ ಶಿಕ್ಷಣ ನೀಡಬೇಕೆಂದರೆ, ಆಂಗ್ಲಿಸಿಸ್ಟರಾದ ಚಾರ್ಲ್ಸ್ ಟ್ರೆವೆಲಿಯನ್ ಮತ್ತು ಮೆಕಾಲೆ ಆಂಗ್ಲಭಾಷೆಯಲ್ಲಿ ಶಿಕ್ಷಣ ನೀಡುವಂತೆ ಒತ್ತಾಯಿಸಿದ್ದರು (ವಾದ್ವಾನಿ ಎಂ.ಆರ್./ಎ.ಎಲ್.ಡಿಸೌಜ, ೧೯೮೦, ಪು.೨೩೦-೨೩೧).

ಮೆಕಾಲೆಯನ್ನು ಶಿಕ್ಷಣ ಮಂಡಳಿಗೆ ಅಧ್ಯಕ್ಷನನ್ನಾಗಿ ನೇಮಿಸುವವರೆವಿಗೂ ಈ ವಿಷಯದಲ್ಲಿ ಒಂದು ನಿರ್ದಿಷ್ಟವಾದ ನೀತಿ ರೂಪುಗೊಳ್ಳಲೇ ಇಲ್ಲ. ಲಾರ್ಡ್ ವಿಲಿಯಂ ಬೆಂಟಿಂಕ್ ಸಾರ್ವಜನಿಕ ಶಿಕ್ಷಣ ನೀತಿಯನ್ನು ಮುಕ್ತವಾಗಿ ಜಾರಿಗೆ ತಂದನು. ಇದನ್ನು ೧೮೩೫ ರಲ್ಲಿ 'ಮೆಕಾಲೆ ಮಿನಿಟ್' ಎಂದೇ ಕರೆಯಲಾಯಿತು (ಗ್ರೋವರ್ ಬಿ.ಎಲ್., ೧೯೮೩, ಪು.೩೪೪). ೧೮೩೫ ರ ಮೆಕಾಲೆ ಪತ್ರ, ೧೮೫೪ ರ ಚಾರ್ಲ್ಸ್ ವುಡ್‌ನ ಪರಿಪತ್ರ ಮತ್ತು ೧೮೮೨ ರ 'ಹಂಟರ್' ವರದಿಗಳು ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನುಂಟು ಮಾಡಿದವು (ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ, ೧೯೮೦, ಪು. ೨೨೮-೨೨೯). ಪ್ರಾಚೀನ ಶಿಕ್ಷಣದ ಇತಿಹಾಸದ ಪ್ರಕಾರ 'ಸಂಸ್ಕೃತ' ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನವಾಗಿತ್ತು. ಆದರೆ ಮೆಕಾಲೆಯು ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆಗಳನ್ನುಂಟು ಮಾಡಿದನು.

(ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ ೧೯೮೦ ಪು. ೨೩೬). ಈ ಅವಧಿಯಲ್ಲಿ ದೇಶೀಯ ಭಾಷಾ ಶಿಕ್ಷಣಕ್ಕೆ ಗಮನಾರ್ಹವಾದ ಪ್ರೋತ್ಸಾಹ ದೊರೆಯಲಿಲ್ಲ. ಹಾರ್ಡಿಂಜ್ ವರದಿಯಂತೆ ಯಾರಿಗೆ ಆಂಗ್ಲ ಭಾಷೆಯ ಮೇಲೆ ಹಿಡಿತವಿರುತ್ತದೆಯೋ ಅವರಷ್ಟೆ ಉದ್ಯೋಗವನ್ನು ಪಡೆಯಲು ಅರ್ಹರಾಗಿರುತ್ತಾರೆ.

೧೮೫೪ ರಲ್ಲಿ ಬೋರ್ಡ್ ಆಫ್ ಕಂಟ್ರೋಲಿನ ಅಧ್ಯಕ್ಷನಾಗಿದ್ದ ಸರ್ ಚಾರ್ಲ್ಸ್‌ವುಡ್ ಹೊರಡಿಸಿದ 'ವುಡ್' ನ ಪರಿಪತ್ರವೇ ಭಾರತದಲ್ಲಿ ಆಧುನಿಕ ಶಿಕ್ಷಣದ ಪ್ರಾರಂಭಕ್ಕೆ ತಳಹದಿಯಾಯಿತು. ಸರ್ಕಾರವೊಂದೇ ಶಿಕ್ಷಣವನ್ನು ಪರಿಪೂರ್ಣವಾಗಿ ಪೂರೈಸಲು ಸಾಧ್ಯವಿಲ್ಲ. ಶಿಕ್ಷಣದ ಬೇಡಿಕೆಗೆ ತಕ್ಕಂತೆ ಶಿಕ್ಷಣವನ್ನು ಪೂರೈಸಬೇಕಾದರೆ ಖಾಸಗಿ ಸಂಘ-ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಬಹುದೆಂದು ಮತ್ತು ಅವುಗಳಿಗೆ ಅನುದಾನವನ್ನು ನೀಡಲಾಗುವುದೆಂದು ಪರಿಪತ್ರವು ವಿವರಿಸಿತು. ದಿನಕಳೆದಂತೆ ಶಿಕ್ಷಣದ ಬೇಡಿಕೆ ಅಧಿಕವಾಗತೊಡಗಿತು. ಸರ್ಕಾರವು ಸ್ಥಾಪಿಸುತ್ತಿದ್ದ ಶಾಲೆಗಳು ಮತ್ತು ವಿನಿಯೋಗಿಸುತ್ತಿದ್ದ ಹಣದ ಮೊತ್ತವು ಜನತೆಯ ಶೈಕ್ಷಣಿಕ ಬೇಡಿಕೆಯನ್ನು ಪೂರೈಸಲು ಸಾಲದಾಯಿತು. ರಾಜ್ಯಗಳು ಶಿಕ್ಷಣ ಕ್ಷೇತ್ರದಿಂದ ಹಿಂದೆ ಸರಿದವು. ಸರ್ಕಾರವು ತನ್ನ ವೆಚ್ಚದ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಖಾಸಗಿ ಶಿಕ್ಷಣ ಸಂಸ್ಥೆಗಳನ್ನೂ, ಧಾರ್ಮಿಕ ಸಂಸ್ಥೆಗಳನ್ನೂ ಪ್ರೋತ್ಸಾಹಿಸಿತು (ಗ್ರೋವರ್ ಬಿ.ಎಲ್., ೧೯೮೩, ಪು.೩೪೪-೩೪೭). ೧೮೫೪ರ ಅವಧಿಯಲ್ಲಿ ಮೂರು ರೀತಿಯ ಖಾಸಗಿ ಶಿಕ್ಷಣ ಸಂಸ್ಥೆಗಳು ಅಸ್ಥಿತ್ವಕ್ಕೆ ಬಂದವು-ಮಿಷನರಿಗಳು, ಕಂಪೆನಿ ನೌಕರರು ಮತ್ತು ಇಂಡಿಯನ್ನರು. ಇವುಗಳಲ್ಲಿ ಮಿಷನರಿಗಳು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿ ಕಾರ್ಯ ನಿರ್ವಹಿಸಲು ಮುಂದೆ ಬಂದವು (ಮದನ್ ಟಿ.ಎನ್./ಬಿ.ಜಿ. ಹಾಲ್ಬರ್, ೧೯೭೨, ಪು. ೧೨೩).

ವಸಾಹತುಶಾಹಿ ಆಳ್ವಿಕೆಯ ಪೂರ್ವದಲ್ಲಿ ಭಾರತದಲ್ಲಿ ಬ್ರಾಹ್ಮಣರು ಮತ್ತು ಕ್ಷತ್ರಿಯರು ವೇದಗಳನ್ನು ಕಲಿಯಬಹುದಾಗಿದ್ದರೂ, ಕ್ಷತ್ರಿಯರಿಗೆ ವೇದಗಳನ್ನು ಅಭ್ಯಾಸ ಮಾಡಿಸುವ ಜವಾಬ್ದಾರಿಯು ಬ್ರಾಹ್ಮಣರದ್ದೇ ಆಗಿದ್ದರು, ಬ್ರಾಹ್ಮಣರು ತಾವು ಪಡೆದ ಜ್ಞಾನದ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬದಲಾವಣೆಗಳನ್ನುಂಟು ಮಾಡಲು ಆಸಕ್ತರಾಗಿರಲಿಲ್ಲ. ಕ್ರಿಶ್ಚಿಯನ್ ಮಿಷನರಿಗಳು ನೂತನ ಶಿಕ್ಷಣ ಸಂಸ್ಥೆಗಳನ್ನು ಭಾರತದಲ್ಲಿ ಸ್ಥಾಪಿಸುವುದರೊಂದಿಗೆ, ಹಳೆಯ ಶಿಕ್ಷಣ ಪದ್ಧತಿ ಮತ್ತು ಸಂಸ್ಥೆಗಳನ್ನು ಮೂಲಭೂತವಾಗಿಯೇ ಬದಲಾಯಿಸಿದರು. ಬ್ರಿಟೀಷರು ಭಾರತದಲ್ಲಿ ಶಾಲೆಗಳನ್ನು ಆರಂಭಿಸುವುದಕ್ಕಿಂತ ಮೊದಲೇ ಶಾಲೆಗಳಿದ್ದರೂ, ಬ್ರಿಟೀಷರು ಪ್ರಾರಂಭಿಸಿದ ಶಾಲೆಗಳು ಭಾರತೀಯ ಶಾಲೆಗಳಿಗಿಂತ ಭಿನ್ನವಾಗಿದ್ದವು.

೧೮೫೪ ರಿಂದ ೧೯೦೨ ರವರೆಗೆ ಸರ್ಕಾರವಾಗಲಿ, ಮಿಷನರಿಗಳಾಗಲಿ ಹೇಳಿಕೊಳ್ಳುವಷ್ಟೇನೂ ಶಿಕ್ಷಣ ಕ್ಷೇತ್ರವನ್ನು ವಿಸ್ತರಿಸಲಿಲ್ಲ. ಕಾಲಾನಂತರ ಬೆಳೆಯುತ್ತಿರುವ ಶಿಕ್ಷಣ ಕ್ಷೇತ್ರದಲ್ಲಿನ ಬೇಡಿಕೆಯನ್ನು ಪೂರೈಸಲು ಖಾಸಗಿ ಉದ್ಯಮಶಾಹಿಗಳು ಪ್ರಮುಖ ಪಾತ್ರ ವಹಿಸಿದವು. ೧೮೫೪ರಲ್ಲಿ 'ಪ್ರೈವೇಟ್ ಎಂಟರ್‌ಪ್ರೈಸಸ್' ಗಳೆಂದರೆ 'ಮಿಷನರಿ ಎಂಟರ್‌ಪ್ರೈಸಸ್'ಗಳೆಂದೇ ಕರೆಯಲಾಯಿತು (ಮದನ್ ಟಿ.ಎನ್./ ಬಿ.ಜಿ.ಹಾಲ್ಬರ್, ೧೯೭೨,ಪು.೧೨೩). ೨೦ ನೇ ಶತಮಾನದ ಆದಿಭಾಗದಲ್ಲಿ ಶಿಕ್ಷಣ ರಂಗದಲ್ಲಿ ಖಾಸಗಿ ಸಂಘ-ಸಂಸ್ಥೆಗಳು, ಧರ್ಮ ಪ್ರಚಾರದ ಸಂಘ-ಸಂಸ್ಥೆಗಳು ಮುಖ್ಯವಾಗಿ ಮಠಗಳು ಮತ್ತು ಕ್ರಿಶ್ಚಿಯನ್ ಮಿಷನರಿಗಳು ಪ್ರಮುಖ ಪಾತ್ರ ವಹಿಸಿದವು. ಭಾರತದ ಸಂದರ್ಭದಲ್ಲಿ ಧರ್ಮ ಮತ್ತು ಶಿಕ್ಷಣ ಬೇರೆಯಲ್ಲ ಎಂಬ ಭಾವನೆ ಪರಂಪರೆಯಿಂದಲೂ ಬಂದಿರುವಂತಹುದು. ಧಾರ್ಮಿಕ ಕ್ಷೇತ್ರವಾದ ಮಠಗಳು ಜನಸಾಮಾನ್ಯರ, ದೀನದಲಿತರ, ಮಹಿಳೆಯರ ಮತ್ತು ಹಿಂದುಳಿದವರ ಅಭಿವೃದ್ಧಿ ಶಿಕ್ಷಣದ ಮೂಲಕ ಸಾಧ್ಯವೆಂಬುದನ್ನು ಮನಗಂಡಿದ್ದರಿಂದಲೇ ಇಂದು ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಲಿಂಗಾಯತ ಮಠಗಳು ಶಿಕ್ಷಣ ನೀಡುವಲ್ಲಿ ಅಗ್ರಗಣ್ಯ ಎನಿಸಿವೆ. ಶಿಕ್ಷಣದ ಬೆಳವಣಿಗೆಗೆ ಸಂಬಂಧಿಸಿದಂತೆ ಧಾರ್ಮಿಕ ಸಂಸ್ಥೆಗಳ ಪಾತ್ರ ಅನನ್ಯವಾದದ್ದು. ೨೦ನೇ ಶತಮಾನದ ಆದಿಭಾಗದಲ್ಲಿ ಮಠಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸದಿದ್ದಲ್ಲಿ ಅವು ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ವಿಫಲವಾಗುತ್ತಿದ್ದವು. ಆಗ ಮಠಗಳು ಕೇವಲ ಪೂಜಾ ಮಂದಿರಗಳಾಗುತ್ತಿದ್ದವಷ್ಟೆ.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ 'ಅನುದಾನ' ವನ್ನು ನೀಡಲಾಗುವುದೆಂದು ಚಾರ್ಲ್ಸ್‌ವುಡ್ ಘೋಷಿಸಿದ ನಂತರ ಅನೇಕ ಖಾಸಗಿ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದವು. ಚಾರ್ಲ್ಸ್‌ವುಡ್ ವರದಿಯು ಭಾರತೀಯ ಸಮಾಜದಲ್ಲಿ ಯಾವ ರೀತಿಯ ಪರಿಣಾಮವನ್ನುಂಟು ಮಾಡುತ್ತಿದೆ ಎಂಬುದನ್ನು ಅಧ್ಯಯನ ಮಾಡಲು ೧೮೮೨-೮೩ ರ ಅವಧಿಯಲ್ಲಿ ಬ್ರಿಟೀಷ್ ಸರ್ಕಾರ ಹಂಟರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ೧೮೫೪ ರ ವುಡ್‌ನ ವರದಿಯ ಕಾಲದಿಂದ ೧೮೮೨ ರವರೆವಿಗೂ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗಿದ್ದ ಪ್ರಗತಿಯನ್ನು ಪರಿಶೀಲಿಸುವುದು ಇದರ ಕಾರ್ಯವಾಗಿತ್ತು. ಈ ಸಮಿತಿಯು ೧೮೮೨ ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಹಂಟರ್ ಕೂಡ ವುಡ್‌ನ ವರದಿಯನ್ನೇ ಅನುಮೋದಿಸಿದನು. ಹಂಟರ್ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ನೀಡಿ ಪ್ರೋತ್ಸಾಹಿಸಬೇಕೆಂದು ಹಾಗೂ ಅನುದಾನಿತ ಶಾಲೆಗಳನ್ನು ಸರ್ಕಾರಿ ಶಾಲೆಗಳಂತೆ ಮಾನ್ಯತೆ ನೀಡಬೇಕೆಂದನು. ವುಡ್ ಕೇವಲ ಖಾಸಗಿ

ಶಿಕ್ಷಣ ಸಂಸ್ಥೆಗಳ ಅನುದಾನದ ಬಗ್ಗೆ ಮಾತ್ರ ಒಲವನ್ನು ವ್ಯಕ್ತಪಡಿಸಿದ್ದರೆ, ಹಂಟರ್ ಅನುದಾನದೊಂದಿಗೆ ಈ ಶಾಲೆಗಳು ಮಹಿಳೆಯರಿಗೂ ಶಿಕ್ಷಣವನ್ನು ನೀಡಲು ಅನುಕೂಲ ಮಾಡಬೇಕೆಂದನು (ವಾದ್ವಾನಿ ಎಂ.ಆರ್./ಎ.ಎಲ್. ಡಿಸೌಜ, ೧೯೮೦, ಪು.೨೪೦). ಈ ವೇಳೆಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳು ಬೆಳವಣಿಗೆ ಹೊಂದಲಾರಂಭಿಸಿದ್ದವು. ಹಾಗೆಯೇ ಭಾರತೀಯರು, ಪ್ರಗತಿಯನ್ನು ಸಾಧಿಸಲು ಆಧುನಿಕ ಮಾದರಿಯ ಶಿಕ್ಷಣ ಅತ್ಯಂತ ಮುಖ್ಯವಾದುದೆಂಬುದಾಗಿ ಮನಗಂಡಿದ್ದರು.

ಮೆಕಾಲೆ ಮಿನಿಟ್, ಹಾರ್ಡಿಂಜ್ ವರದಿ, ಹಂಟರ್ ವರದಿಗಳನ್ನು ಅಧ್ಯಯನ ಮಾಡಿದರೆ 'ಆಂಗ್ಲ ಭಾಷೆ'ಗೆ ಹೆಚ್ಚು ಪ್ರೋತ್ಸಾಹ ದೊರೆತಿರುವುದು ಕಂಡು ಬರುತ್ತದೆ. ವಸಾಹತುಪೂರ್ವ ಶೈಕ್ಷಣಿಕ ಇತಿಹಾಸದಲ್ಲಿ ಬ್ರಾಹ್ಮಣರು 'ಸಂಸ್ಕೃತ' ಅಧ್ಯಯನದಲ್ಲಿ ಹೇಗೆ ಹಿಡಿತವನ್ನು ಸಾಧಿಸಿದ್ದರೋ, ಹಾಗೆಯೇ 'ಆಂಗ್ಲಭಾಷೆ'ಯ ಮೇಲೂ ತಮ್ಮ ಹಿಡಿತವನ್ನು ಸಾಧಿಸಿದ್ದರು. ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಬ್ರಾಹ್ಮಣರು ಏಕಸ್ವಾಮ್ಯ ಸ್ಥಾಪಿಸಿದ್ದರು. 'ವೈಟ್-ಕಾಲರ್ಡ್' ಉದ್ಯೋಗಗಳೆಲ್ಲವೂ ಬ್ರಾಹ್ಮಣರ ಸ್ವತ್ತಾದವು. ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಶಿಕ್ಷಣ ಸುಲಭವಾಗಿ ದೊರೆಯುತ್ತಿದ್ದುದರಿಂದ ಬ್ರಾಹ್ಮಣರು ಈ ಅವಕಾಶವನ್ನು ಗರಿಷ್ಠ ಮಟ್ಟದಲ್ಲಿ ಸದುಪಯೋಗಪಡಿಸಿಕೊಂಡರು (ರೇಖಾ ಕೌಲ್, ೧೯೯೩, ಪು.೫೯).

ಶ್ರೇಣೀವಾದದ ಮೇಲೆ ರಚಿತವಾದ ಭಾರತದ ವ್ಯವಸ್ಥೆ ನೋಡುವುದಕ್ಕೆ ಬೃಹದಾಕಾರದ ಪಿರಮಿಡ್‌ನಂತೆ ಕಾಣಿಸುತ್ತಿತ್ತು. ಶಿಕ್ಷಣವು ಸಮಾಜದಲ್ಲಿ ಉನ್ನತ ವರ್ಗದವರಿಗೆ ಮಾತ್ರ ಸುಲಭ ಸಾಧ್ಯವಾಗಿ ದೊರೆಯುತ್ತಿತ್ತು. ಶಿಕ್ಷಣ ಕೆಲವರಿಗಷ್ಟೇ ದೊರೆಯುತ್ತಿದ್ದುದರಿಂದ ಬಹುಸಂಖ್ಯಾತರನ್ನು ಶಿಕ್ಷಣ ಪಡೆಯುವುದರಿಂದ ದೂರವಿಡಲಾಗುತ್ತಿತ್ತು.

ವಸಾಹತುಪೂರ್ವ ಕಾಲದಲ್ಲಿ ರಾಜರುಗಳು ಬ್ರಾಹ್ಮಣರಿಗೆ ವಿದ್ಯಾಭ್ಯಾಸದ ಅನುಕೂಲಕ್ಕನುಗುಣವಾಗಿ ದಾನಗಳನ್ನಿತ್ತು ವಿದ್ಯಾರ್ಜನೆಗೆ ಪ್ರತ್ಯೇಕ ಅವಕಾಶವನ್ನು ಕಲ್ಪಿಸುತ್ತಿದ್ದರು. ಸಂಸ್ಥಾನದ ಆಡಳಿತ ಕಾಲದಲ್ಲಿ ಬ್ರಾಹ್ಮಣರಿಗೆ ಭೂಮಿ, ಮನೆ, ಚಿನ್ನ ಇತರೆ ಅಮೂಲ್ಯ ಸರಕುಗಳನ್ನು ಕಾಣಿಕೆ ರೂಪದಲ್ಲಿ ನೀಡಲಾಗುತ್ತಿದ್ದಿತು. ಗ್ರಾಮೀಣ ಪ್ರದೇಶಗಳಲ್ಲಿ 'ಭೂ-ಮಾಲೀಕತ್ವ' ಬ್ರಾಹ್ಮಣರಿಗೆ ಪ್ರಾಪ್ತವಾಗಿ ಪ್ರಾಬಲ್ಯತೆಯನ್ನು ಹೊಂದಿದ್ದರು. 'ಭೂ-ಮಾಲೀಕತ್ವ' ಬ್ರಾಹ್ಮಣರಿಗೆ ಮೇಲ್ಮುಖ ಚಲನೆಗೆ ಅವಕಾಶ ಮಾಡಿಕೊಟ್ಟಿತು. (ಶ್ರೀನಿವಾಸ್ ಎಂ.ಎನ್., ೧೯೭೨, ಪು.೨೨). ಆದರೂ ಬ್ರಾಹ್ಮಣರು

'ಭೂ-ಮಾಲೀಕತ್ವ' ಕ್ಕಿಂತ ಹೆಚ್ಚಾಗಿ 'ಶಿಕ್ಷಣ-ಮಾಲೀಕತ್ವ' ಹಾಗೂ 'ಉದ್ಯೋಗ-ಮಾಲೀಕತ್ವ' ಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಪಡೆಯಲು ಅಸಾಧ್ಯವೆಂದರಿತ ಬ್ರಾಹ್ಮಣರು ತಮ್ಮ ಭೂಮಿಗಳನ್ನು 'ಪ್ರಬಲ ಜಾತಿ'ಗಳಿಗೆ ಮಾರಾಟ ಮಾಡಿ, ನಗರ ಪ್ರದೇಶಗಳಿಗೆ ವಲಸೆ ಬಂದರು (ಮ್ಯಾನರ್ ಜೇಮ್ಸ್, ೧೯೭೭, ಪು. ೧೬೯-೧೮೭). ಭೂ-ಮಾಲೀಕತ್ವ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಬ್ರಾಹ್ಮಣರ ಪ್ರಾಬಲ್ಯತೆ ಹಾಗೂ ಪ್ರತಿಷ್ಠೆಯನ್ನು ಹೆಚ್ಚಿಸಿದ್ದವು. ಹಾಗಾದಲ್ಲಿ ಸಮಾಜದಲ್ಲಿ 'ಪ್ರಬಲ ಜಾತಿ' ಎಂದರೆ ಯಾವ ಜಾತಿ ? ಎಂ.ಎನ್.ಶ್ರೀನಿವಾಸ್ ತಮ್ಮ ಕೃತಿ 'ದಿ ಡಾಮಿನಾಂಟ್ ಕಾಸ್ಟ್ ಅಂಡ್ ಅದರ್ ಎಸ್ಸೇಸ್'ನಲ್ಲಿ ಪ್ರಬಲ ಜಾತಿಗೆ 'ಡಾಮಿನಾಂಟ್ ಕಾಸ್ಟ್' ಎಂದು ಕರೆದು. ಸಮಾಜದಲ್ಲಿ ಯಾವ ಜಾತಿ ಪ್ರಬಲ ಜಾತಿ ಎಂಬುದನ್ನು ಈ ಕೆಳಕಂಡಂತೆ ವಿವರಿಸಿದ್ದಾರೆ. - "A caste may be said to be dominant when it preponderates numerically over the other castes and when it wields preponderate economic and political power. A large and powerful caste group can easily be dominant if its position in the local caste hierarchy is not too low" (ಶ್ರೀನಿವಾಸ್ಎಂ.ಎನ್., ೧೯೮೭, ಪು.೪). ದಕ್ಷಿಣ ಭಾರತದಲ್ಲಿ ಪ್ರಬಲ ಜಾತಿಗಳೆಂದರೆ ನಾಯರ್‌ಗಳು, ಐಳ್‌ವಾಸರು (ಕೇರಳ), ನಾಡರ್‌ಗಳು, ವಾನಿಯರ್‌ರು (ಮದ್ರಾಸ್), ಲಿಂಗಾಯತರು, ಒಕ್ಕಲಿಗರು (ಮೈಸೂರು), ಕಮ್ಮಾರರು, ರೆಡ್ಡಿಗಳು (ಆಂಧ್ರಪ್ರದೇಶ) .... ಈ ಪ್ರಮುಖ ಪ್ರಬಲ ಜಾತಿಗಳು ಭೂ-ಮಾಲೀಕತ್ವ ಹೊಂದಲು ಇಚ್ಛಿಸಿದವು (ಮ್ಯಾನರ್ ಜೇಮ್ಸ್, ೧೯೭೭, ಪು.೧೬೯-೧೮೭). ಆದರೆ ಕಾಲಾನಂತರ ಪ್ರಬಲ ಜಾತಿಗಳು ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಪಡೆಯಲು ಹಂಬಲಿಸಿದವು. ದ್ವಿಜ-ಜಾತಿಯ ಸಂಪ್ರದಾಯವನ್ನಳವಡಿಸಿದರೆ ಇದು 'positional' ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆಯೇ ವಿನಃ "structural" ಬದಲಾವಣೆಗೆ ಅವಕಾಶ ಮಾಡಿಕೊಡುವುದಿಲ್ಲವೆಂದರಿತು ಪ್ರಬಲ ಜಾತಿಗಳು ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನರಸುತ್ತಾ, ನಗರ ಪ್ರದೇಶಗಳಿಗೆ ವಲಸೆ ಬಂದು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಬ್ರಾಹ್ಮಣರ ಏಕಸ್ವಾಮ್ಯವನ್ನು ವಿರೋಧಿಸಿ ಬ್ರಾಹ್ಮಣರಿಗೆ ಈ ಎರಡೂ ಕ್ಷೇತ್ರಗಳಲ್ಲಿ ಪ್ರಬಲ ಸ್ಪರ್ಧಿಗಳಾದರು (ಶ್ರೀನಿವಾಸ್ ಎಂ.ಎನ್., ೧೯೭೨, ಪು.೭).

ಬ್ರಿಟೀಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಜಾತೀವಾದಿಗಳನ್ನು ಪ್ರೋತ್ಸಾಹಿಸುತ್ತಾ, ಜಾತ್ಯತೀತ ಸಮಾಜವನ್ನು ನಿರ್ಮಿಸುವಲ್ಲಿ ಪ್ರಯತ್ನಿಸಿದರು. ೧೮೩೩ ರಲ್ಲಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ರಚಿಸಿದ ಶಾಸನ ಜಾತಿ ಬಲವಾಗಲು ಕಾರಣವಾಯಿತು. ಈ ಶಾಸನದ ಪ್ರಕಾರ 'ಯಾವ ಭಾರತೀಯ ಪ್ರಜೆಯನ್ನಾಗಲಿ ಅವನ ಜಾತಿ, ಹುಟ್ಟಿದ ಸ್ಥಳ, ವರ್ಣಗಳ ಆಧಾರದ ಮೇಲೆ ಅಧಿಕಾರವನ್ನಾಗಲಿ, ಹುದ್ದೆಯನ್ನಾಗಲಿ ಅವಕಾಶ ವಂಚಿತರನ್ನಾಗಿ ಮಾಡಬಾರದೆಂದಿತ್ತು' (ಮಹಾಜನ್ ವಿ.ಡಿ./ ಆರ್.ಆರ್.

ಸೇತ್, ೧೯೫೮, ಪು. ೨೭೦). ಈ ಸಂದರ್ಭದಲ್ಲಿ 'ಜಾತಿ-ಚಾನೆಲ್' ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿತು. ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣರಿಗೆ ಸ್ಪರ್ಧೆಯನ್ನೊಡ್ಡದಿದ್ದಲ್ಲಿ ಸ್ವಾತಂತ್ರ್ಯಾ ನಂತರವೂ ಅವರ ಏಕಸ್ವಾಮ್ಯ ಮುಂದುವರೆಯುತ್ತದೆಂದು ಭಾವಿಸಿದ ಮಹಾರಾಷ್ಟ್ರದ ಬ್ರಾಹ್ಮಣೇತರರು ಸರ್ಕಾರಿ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಲು ಬೆನ್ನೆಲುಬಾಗಿ ನಿಂತರು (ರೇಖಾ ಕೌಲ್, ೧೯೯೩, ಪು. ೨೭).

೧೮೩೩ ರಲ್ಲಿ ಕಂಪೆನಿಯ ಶಾಸನ ಸನ್ನದು 'ಜಾತಿ' ಯನ್ನು ಪ್ರೋತ್ಸಾಹಿಸಿದರೆ, ೧೮೫೮ ರ ಕಾನೂನಿನ ಪ್ರಕಾರ ಉದ್ಯೋಗ ಕ್ಷೇತ್ರದಲ್ಲಿ 'ಮುಕ್ತ ಸ್ಪರ್ಧೆ'ಯನ್ನು ಜಾರಿಗೆ ತಂದು, ಪರೋಕ್ಷವಾಗಿ ದ್ವಿಜ ಜಾತಿಯವರನ್ನು ಪ್ರೋತ್ಸಾಹಿಸಲಾಯಿತು. ಭಾರತೀಯ ನಾಗರೀಕ ಸೇವೆಗಳಲ್ಲಿ ಉದ್ಯೋಗ ಬಯಸುವವರು ಮುಕ್ತ ಸ್ಪರ್ಧೆಯನ್ನೆದುರಿಸಿ ಉತ್ತೀರ್ಣರಾಗಿ ಸೇವೆಯನ್ನು ಸಲ್ಲಿಸಬಹುದಾಗಿತ್ತು (ಮಹಾಜನ್ ವಿ.ಡಿ./ಆರ್.ಆರ್.ಶೇತ್, ೧೯೫೮, ಪು.೨೭೫). ಹೀಗೆ ಮುಕ್ತ ಸ್ಪರ್ಧೆಯಲ್ಲಿ ಪುನಃ ಆಂಗ್ಲ ಭಾಷಾ ಶಿಕ್ಷಣವನ್ನು ಪಡೆದವರೆ ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಉದ್ಯೋಗಾವಕಾಶಗಳನ್ನು ಹೊಂದುತ್ತಿದ್ದರು. ಬ್ರಿಟೀಷರು ರೂಪಿಸಿದ ಕಾನೂನುಗಳು ಜಾತಿ ಪದ್ಧತಿಯನ್ನು ಔಪಚಾರಿಕವಾಗಿ ಒಪ್ಪಿಕೊಳ್ಳದಿದ್ದರೂ, ಇಲ್ಲಿನ ಜನರ ಸಾಮಾಜಿಕ-ಧಾರ್ಮಿಕ ಬದುಕಿನೊಂದಿಗೆ ಹಸ್ತಕ್ಷೇಪ ಮಾಡುವುದಿಲ್ಲವೆಂಬ ತಮ್ಮ ನೀತಿಯಿಂದಾಗಿಯೇ ಪರೋಕ್ಷವಾಗಿ ಜಾತಿ ವ್ಯವಸ್ಥೆಗೆ ಕುಮ್ಮಕ್ಕು ನೀಡುತ್ತಿದ್ದರು. ಈ ಕಾರಣದಿಂದಾಗಿಯೇ ೧೯ನೇ ಶತಮಾನದ ಆರಂಭದಲ್ಲಿ ಅನೇಕ 'ಚಳವಳಿ' ಗಳು ನಡೆಯಲು ಕಾರಣವಾಯಿತು. ಸಂವಿಧಾನಾತ್ಮಕವಾಗಿ ಸಮಾನತೆಯ ಉದ್ದೇಶವನ್ನು ಹೊಂದಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಜಾತಿಯನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಉನ್ನತ ಜಾತಿಯವರು ಈ ಎಲ್ಲಾ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದು, ಕೆಳಜಾತಿಯವರು ಇಂತಹ ಅವಕಾಶಗಳಿಂದ ವಂಚಿತರಾಗುತ್ತಿದ್ದರು.

ಶಿಕ್ಷಣ, ಉದ್ಯೋಗ ಕ್ಷೇತ್ರಗಳಲ್ಲಿ ಬ್ರಾಹ್ಮಣರ ಈ ಏಕಸ್ವಾಮ್ಯತೆಯನ್ನು ವಿರೋಧಿಸಲಾಯಿತು. ಆದರೆ ಬ್ರಾಹ್ಮಣರ ಈ ಪ್ರಾಬಲ್ಯತೆಗೆ ವಿರೋಧ ವ್ಯಕ್ತವಾದದ್ದು ಕೆಳಜಾತಿಯವರಿಂದಲ್ಲ ಅಥವಾ ತುಳಿತಕ್ಕೊಳಪಟ್ಟವರಿಂದಲ್ಲ. ಗ್ರಾಮೀಣ ಪ್ರದೇಶದಲ್ಲಿ ಪ್ರಬಲ ಜಾತಿಯವರೆ ವಿರೋಧ ವ್ಯಕ್ತಪಡಿಸಿದ್ದು, ಈ ಅವಕಾಶಕ್ಕಾಗಿ ಕಾಯುತ್ತಿದ್ದ ಬ್ರಿಟೀಷರು ೧೯೨೩ರಲ್ಲಿ 'ಕೆಳಜಾತಿಯ ಮಕ್ಕಳನ್ನು ಶಾಲೆಗಳಲ್ಲಿ ಅವಮಾನಿಸಿದರೆ ಅಂತಹ ಶಾಲೆಗಳಿಗೆ ಅನುದಾನವನ್ನು ನಿಲ್ಲಿಸಲಾಗುತ್ತದೆ' ಎಂದು ಠರಾವನ್ನು ಹೊರಡಿಸಿದರು. ಈ ಕಾನೂನಿನಿಂದ ಉತ್ತೇಜಿತರಾದ ಬ್ರಾಹ್ಮಣೇತರರು 'ಬ್ರಾಹ್ಮಣೇತರರ ಚಳವಳಿ'ಯನ್ನು

ಪ್ರಾರಂಭಿಸಿದರು (ಕುಪ್ಪುಸ್ವಾಮಿ ಬಿ., ೧೯೭೨, ಪು.೧೭೯). ಪ್ರಬಲ ಜಾತಿಗಳಾದ ಕಮ್ಮಾರರು, ರೆಡ್ಡಿಗಳು, ವೆಲ್ಲಾಳರು, ನಾಯರ್‌ರವರು, ಲಿಂಗಾಯತರು, ಒಕ್ಕಲಿಗರು ಬ್ರಾಹ್ಮಣರ ಪ್ರಾಬಲ್ಯವನ್ನು ವಿರೋಧಿಸಿದರು. ಹೀಗೆ ಶಿಕ್ಷಣದ ಹರವು ತೃಪ್ತಿಕರವಾಗಿರದೆ, ಸಮಾನವಾಗಿ ಎಲ್ಲಾ ಜಾತಿ, ಎಲ್ಲಾ ವರ್ಗದವರಿಗೂ ದೊರೆಯುತ್ತಿರಲಿಲ್ಲ. ಶಿಕ್ಷಣ, ಉದ್ಯೋಗದ ಮೂಲಕ ತಮ್ಮ ಜೀವನವನ್ನು, ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿದ್ದರು. ಸಾಮಾಜಿಕವಾಗಿ, ಆರ್ಥಿಕವಾಗಿ ಅನ್ಯಾಯಕ್ಕೊಳಗಾದವರು 'ಬ್ರಾಹ್ಮಣೇತರರ ಚಳವಳಿ'ಯ ಉದಯಕ್ಕೆ ಕಾರಣರಾದರು.

ಕರ್ನಾಟಕದಲ್ಲಿ 'ಬ್ರಾಹ್ಮಣೇತರರ ಚಳವಳಿ' ಯು ತೀವ್ರಗೊಳ್ಳುವ ಅವಕಾಶಗಳು ದೊರೆಯಿತು. ಪ್ರಮುಖವಾಗಿ 'ಪ್ರಬಲ ಜಾತಿ' ಗಳಾದ ಲಿಂಗಾಯತರು ಮತ್ತು ಒಕ್ಕಲಿಗರು ಈ ಚಳವಳಿಯನ್ನು ಬಲವಾಗಿ ಪ್ರೋತ್ಸಾಹಿಸಿದರು. ಬ್ರಿಟೀಷ್ ಸರ್ಕಾರವು ಈ ಚಳವಳಿಯನ್ನು ಬೆಂಬಲಿಸಿತು. ಶಿಕ್ಷಣದಲ್ಲಿ ಬ್ರಾಹ್ಮಣರ ಏಕಸ್ವಾಮ್ಯವನ್ನು ಮುರಿಯುವುದೇ ಈ ಚಳವಳಿಯ ಉದ್ದೇಶವಾಗಿತ್ತು. ಇದನ್ನು 'ಸಾಮಾಜಿಕ ಪರಿವರ್ತನಾ ಹಂತ' ಎಂದೇ ಕರೆಯಬಹುದು. ಬ್ರಿಟೀಷರ ಆಳ್ವಿಕೆ ಕಾಲದಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರ ನಡುವೆ ವ್ಯಾಪಕ ಕಂದಕವೇರ್ಪಟ್ಟಿತು. 'ಭಾರತೀಯ ಆಂಗ್ಲಭಾಷಾ ಪ್ರವೀಣರೆಂದೇ' ಕರೆಸಿಕೊಳ್ಳುತ್ತಿದ್ದ ಅವಕಾಶವಾದಿ ಬ್ರಾಹ್ಮಣರು ಭಾರತೀಯ ಸಮಾಜದಿಂದ ಬಹಳ ದೂರ ಉಳಿಯಲು ಇಚ್ಛಿಸುತ್ತಿದ್ದರು. ಇದು ಮುಖ್ಯವಾಗಿ ಲಿಂಗಾಯತರನ್ನು ಮತ್ತು ಒಕ್ಕಲಿಗರನ್ನು ಬಡಿದೆಬ್ಬಿಸಿತು.

೧೯೧೩ ರಲ್ಲಿ ಬ್ರಿಟೀಷ್ ಸರ್ಕಾರವು ಶಿಕ್ಷಣ ನೀತಿ ಬಗೆಗೆ ಪ್ರಮುಖವಾದ ನಿರ್ಣಯವನ್ನು ಕೈಗೊಂಡಿತು. ಇದಕ್ಕೆ ಕಾರಣ ೧೯೦೬ ರಲ್ಲಿ ಬರೋಡಾ ರಾಜ್ಯವು ಪ್ರಾಥಮಿಕ ಶಿಕ್ಷಣವನ್ನು ರಾಜ್ಯಾದ್ಯಂತ ಕಡ್ಡಾಯವಾಗಿ ಜಾರಿಗೆ ತಂದದ್ದು. ೧೯೧೦ ರಿಂದ ೧೯೧೩ ರ ಅವಧಿಯಲ್ಲಿ ಗೋಪಾಲಕೃಷ್ಣ ಗೋಖಲೆಯವರು ಕೇಂದ್ರ ಶಾಸಕಾಂಗ ಸಭೆಯಲ್ಲಿ ಸರ್ಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಹೊರುವಂತೆ ಒತ್ತಾಯ ತಂದರು. ಇದರ ಪರಿಣಾಮವಾಗಿ ಸರ್ಕಾರವು ೧೯೧೩ರ ಫೆಬ್ರವರಿ ೨೧ರಂದು ಹೊಸ ನೀತಿಯ ನಿರ್ಣಯವನ್ನು ಪ್ರಕಟಿಸಿತು. ಇದರ ಪ್ರಕಾರ ಸರ್ಕಾರವು ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಒಪ್ಪದೇ ಹೋದರೂ ಸಹ ಅನಕ್ಷರತೆಯನ್ನು ಹೋಗಲಾಡಿಸುವ ನೀತಿಯನ್ನು ಅಂಗೀಕರಿಸಿ, ಬಡವರಿಗೆ ಮತ್ತು ಹಿಂದುಳಿದವರಿಗೆ ಮುಕ್ತವಾಗಿ ಪ್ರಾಥಮಿಕ ಶಿಕ್ಷಣ ಕೊಡಬೇಕೆಂದು ಪ್ರಾಂತೀಯ ಸರ್ಕಾರಗಳನ್ನು ಕೇಂದ್ರ ಸರ್ಕಾರ ಆಗ್ರಹಿಸಿತು (ಗ್ರೋವರ್ ಬಿ.ಎಲ್., ೧೯೮೩, ಪು.೩೩೦). ಈ ದಿಸೆಯಲ್ಲಿ ಖಾಸಗಿ ಪ್ರಯತ್ನಗಳನ್ನು ಬೆಂಬಲಿಸಲು ಸೂಚಿಸಲಾಯಿತು. ಆಗ

ಶಿಕ್ಷಣ ನೀಡುವಲ್ಲಿ ಹಲವಾರು ಜಾತಿ ಸಂಸ್ಥೆಗಳು ಹುಟ್ಟಿಕೊಂಡವು. ಮತಮಾನ್ಯಗಳ ಮಠಾಧಿಪತಿಗಳು ಇದನ್ನು ಪ್ರೋತ್ಸಾಹಿಸಿದರು. ಇಂತಹ ಜಾತಿ ಸಂಸ್ಥೆಗಳು ಮತ್ತು ಮಠಗಳೆಂದರೆ ಕರ್ನಾಟಕದಲ್ಲಿ ಲಿಂಗಾಯತ ಹಾಗೂ ಒಕ್ಕಲಿಗರ ಮಠಗಳು.

೧೯ನೇ ಶತಮಾನ ಮಧ್ಯಯುಗದಿಂದ ಆಧುನಿಕ ಯುಗಕ್ಕೆ 'ಪರಿವರ್ತನೆ' ಹೊಂದಿದ ಕಾಲ. ೧೯ನೇ ಶತಮಾನದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪಡೆದ ಭಾರತೀಯರಿಂದ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಭಾರತೀಯರಲ್ಲಿ ಹೊಸ ಆಲೋಚನೆಗಳು ಆರಂಭವಾಗಿ ಧರ್ಮ, ಸಾಮಾಜಿಕ, ಆಚಾರ-ವಿಚಾರಗಳು ಮತ್ತು ನಂಬಿಕೆಗಳನ್ನು ಪ್ರಶ್ನಿಸಲಾರಂಭಿಸಿದ್ದರಿಂದ ಭಾರತೀಯ ಸಮಾಜದಲ್ಲಿ ಹಲವಾರು ಚಳವಳಿಗಳು ಕಂಡು ಬರುತ್ತವೆ. ಅವುಗಳಲ್ಲಿ 'ಬ್ರಾಹ್ಮಣೇತರರ ಚಳವಳಿ'ಯೂ ಒಂದು.

೨.೩ ಬ್ರಾಹ್ಮಣೇತರರ ಚಳವಳಿ

ದಕ್ಷಿಣ ಭಾರತದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ತುಳಿತಕ್ಕೊಳಗಾದವರು, ಮೇಲ್ಜಾತಿಯ ಪ್ರಭಾವವನ್ನು ಹೊಂದಿರುವವರು 'ಬ್ರಾಹ್ಮಣೇತರರ ಚಳವಳಿ' ಯ ಉದಯಕ್ಕೆ ಕಾರಣರಾದರು. ಶಿಕ್ಷಣ, ಉದ್ಯೋಗ ಹಾಗು ರಾಜಕೀಯ ಲಾಭ ಹೊಂದುವುದೇ ಚಳವಳಿಗಳ ಗುರಿಯಾಗಿತ್ತು. ಮಹಾರಾಷ್ಟ್ರ, ಮದ್ರಾಸ್ ಮತ್ತು ಕೇರಳಗಳಲ್ಲಿ ಈ ಚಳವಳಿಗೆ ವ್ಯಾಪಕ ಬೆಂಬಲ ದೊರೆಯಿತು. ಕೇರಳದಲ್ಲಿ ಪ್ರಬಲ ಜಾತಿಯಾದ 'ಐಝ್‌ವಾಸ್'ರು ಬ್ರಾಹ್ಮಣರ ವಿರುದ್ಧ ಹೋರಾಡಲು ಸನ್ನದ್ಧರಾದರು (ಶ್ರೀನಿವಾಸ್ ಎಂ.ಎನ್. ೧೯೭೨, ಪು. ೧೦೩). ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಲು, ಹರಿಜನರ ಏಳ್ಗೆಗೆ ಶ್ರಮಿಸಲು ಅಂಬೇಡ್ಕರ್ ಕೂಡ ಶ್ರಮಿಸಿದರು. ಅಂಬೇಡ್ಕರ್ ಇದೇ ಅವಧಿಯಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಬೆಳೆದು ದಲಿತರನ್ನು ಪ್ರತಿನಿಧಿಸಿದುದು ದಕ್ಷಿಣ ಭಾರತದಲ್ಲಿ ನೂತನ ಶಕೆಯನ್ನು ಪ್ರಾರಂಭಿಸಿದಂತಾಗಿತ್ತು.

ದಕ್ಷಿಣ ಭಾರತದಲ್ಲಿ ಬ್ರಾಹ್ಮಣೇತರರ ಚಳವಳಿ ತೀವ್ರಗೊಳ್ಳಲು ಕಾರಣ ಜ್ಯೋತಿರಾವ್ ಫುಲೆ ಎಂಬ ಸಮಾಜ ಸೇವಕ. ೧೮೪೮ ರಲ್ಲಿ ಪೂನಾದ ಫುಲೆ ಕೆಳಜಾತಿಯ ಬಾಲಕ-ಬಾಲಕಿಯರಿಗೆ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸುವುದರೊಂದಿಗೆ ಬ್ರಾಹ್ಮಣೇತರರ ಚಳವಳಿಗೆ ಕಾರಣರಾದರು. ೧೮೫೧ರಲ್ಲಿ ಅಸ್ಪೃಶ್ಯರಿಗಾಗಿ ಪ್ರಾಥಮಿಕ ಶಾಲೆಯೊಂದನ್ನು ತೆರೆದು, ೧೮೭೩ರಲ್ಲಿ 'ಸತ್ಯಶೋಧಕ ಸಮಾಜ'ವನ್ನು ಸ್ಥಾಪಿಸಿ, ಅಸ್ಪೃಶ್ಯರ ಹೋರಾಟಕ್ಕಾಗಿ ಬೆನ್ನೆಲುಬಾಗಿ ನಿಂತರು. ಬ್ರಾಹ್ಮಣರ ಸಂಪ್ರದಾಯಗಳನ್ನು ವಿರೋಧಿಸಿದರು. ೧೯೧೬ರಲ್ಲಿ ಮದ್ರಾಸಿನಲ್ಲಿ 'ದಕ್ಷಿಣ ಭಾರತದ ವಿಮೋಚನಾ ರಂಗ' (South Indian Liberal

Federation) ವನ್ನು ಸ್ಥಾಪಿಸಿ, ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ಕೊಡಬೇಕೆಂದು ವಾದಿಸಿ, ಭಾರತದಲ್ಲಿ ಪ್ರಪ್ರಥಮ ಬಾರಿಗೆ ಮೀಸಲಾತಿಯ ಧ್ವನಿಯನ್ನೆತ್ತಿದರು. ದಕ್ಷಿಣ ಭಾರತದ ವಿಮೋಚನಾ ರಂಗವನ್ನು 'ಜಸ್ಟೀಸ್ ಪಾರ್ಟಿ' ಎಂದು ಕರೆಯಲಾಯಿತು. ನಂತರ ಎಲ್ಲರೂ ಕೂಡಿ 'ಮದ್ರಾಸ್ ಪ್ರೆಸಿಡೆನ್ಸಿ ಸಂಘ' ವನ್ನು ಸ್ಥಾಪಿಸಿ, ಬ್ರಾಹ್ಮಣೇತರರ ಆಸಕ್ತಿಯನ್ನು ಕಾಪಾಡಲು Communal Representation ನ ಬೇಡಿಕೆಯನ್ನಿಟ್ಟರು. ಬ್ರಾಹ್ಮಣೇತರರ ಚಳವಳಿ ತೀವ್ರವಾದಂತೆ ಬ್ರಾಹ್ಮಣರು ಎಲ್ಲಾ ಕ್ಷೇತ್ರಗಳಲ್ಲೂ ಪ್ರಬಲರಾಗುತ್ತಿದ್ದಾರೆಂದು ಅರಿತ ಬ್ರಿಟೀಷ್ ಸರ್ಕಾರ ಬ್ರಾಹ್ಮಣೇತರರ ಚಳವಳಿಯನ್ನು ಪ್ರೋತ್ಸಾಹಿಸಿತು (ಕುಪ್ಪುಸ್ವಾಮಿ ಬಿ., ೧೯೭೨, ಪು. ೧೭೮-೨೨೪).

೧೯೧೮ ರ ಅವಧಿಯಲ್ಲಿ ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದ ಮಾಂಟೆಗೋ ಮತ್ತು ವೈಸರಾಯಿ ಚೇಮ್ಸ್‌ಫೋರ್ಡ್ ದ್ವಿ-ಪ್ರಭುತ್ವವನ್ನು ಜಾರಿಗೆ ತಂದರು. ೧೯೧೯ರ ಆಕ್ಟ್ ಪ್ರಕಾರ, ಪ್ರಾಂತೀಯ ಶಾಸನಸಭೆಗೆ ಚುನಾಯಿತರ ಸಂಖ್ಯೆಯನ್ನು ಶೇಕಡ ೭೦ಕ್ಕೆ ಹೆಚ್ಚಿಸಲಾಯಿತು. ಈ ಅವಧಿಯಲ್ಲಿ 'ಕಮ್ಯೂನಲ್ ಎಲೆಕ್ಟೋರೇಟ್ಸ್' ಸಂಖ್ಯೆಯು ಹೆಚ್ಚಾಯಿತು. ಸಿಖ್ಖರು, ಯುರೋಪಿಯನ್ನರು, ಭಾರತದ ಕ್ರಿಶ್ಚಿಯನ್ನರು ಮತ್ತು ಆಂಗ್ಲೋ-ಇಂಡಿಯನ್ನರಿಗೆ ವಿಶೇಷ ಪ್ರತಿನಿಧಿಯನ್ನು ಕಳುಹಿಸಲು ಅವಕಾಶ ಮಾಡಿಕೊಡಲಾಯಿತು. ೧೯೧೯ರ ಚುನಾವಣೆಯಲ್ಲಿ 'ಜಸ್ಟೀಸ್ ಪಾರ್ಟಿ'ಯ ನೇತಾರರನೇಕರು ಅಧಿಕಾರಕ್ಕೆ ಬಂದು 'ವರ್ಗಾಯಿಸಲ್ಪಟ್ಟ ವಿಷಯ'ಗಳಲ್ಲಿ ಮಂತ್ರಿಗಳಾಗಿ ಸ್ನಾತಕೋತ್ತರ, ವೃತ್ತಿನಿರತ ಕೋರ್ಸ್‌ಗಳಲ್ಲಿ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜಾರಿಗೆ ತಂದರು (ಬಿ.ಎಲ್.ಗ್ರೋವರ್, ೧೯೮೩, ಪು.೫೧೪-೫೨೦).

ಈ ಚಳವಳಿಯ ಬಿಸಿ ನೆರೆಯ ಮೈಸೂರು ಪ್ರಾಂತ್ಯಕ್ಕೂ ಹರಡಿತು. ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಬ್ರಾಹ್ಮಣರು ಏಕಸ್ವಾಮ್ಯ ಹೊಂದಿದ್ದಾರೆಂದು ಆಕ್ಷೇಪಿಸಿ ಪ್ರಬಲ ಜಾತಿಗಳಾದ ಲಿಂಗಾಯತರು ಮತ್ತು ಒಕ್ಕಲಿಗರು ಬ್ರಾಹ್ಮಣೇತರರ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು (ಮ್ಯಾನರ್ ಜೇಮ್ಸ್, ೧೯೭೭, ಪು. ೧೭೦-೧೮೭).

೧೮೮೧ ರಲ್ಲಿ ಹತ್ತನೇ ಜಯಚಾಮರಾಜ ಒಡೆಯರ್‌ಗೆ ಮೈಸೂರು ಸಂಸ್ಥಾನದ ಆಡಳಿತ ಅಧಿಕಾರ ಪ್ರಾಪ್ತವಾಯಿತು. ರಾಜ್ಯ ಸೇವೆಯಲ್ಲಿ 'ಬ್ರಾಹ್ಮಣೇತರರು' ಹೆಚ್ಚು ಹುದ್ದೆಯನ್ನಲಂಕರಿಸಬೇಕೆಂಬುದು ಇವರ ಆಶಯವಾಗಿತ್ತು (ಮ್ಯಾನರ್ ಜೇಮ್ಸ್, ೧೯೭೭, ಪು.೧೧). ೧೯೧೭ ರಲ್ಲಿ ಸರ್ ಲೆಸ್ಲಿ

ಮಿಲ್ಲರ್‌ನನ್ನು ನಾಗರೀಕ ಸೇವೆಗಳಲ್ಲಿ ಬ್ರಾಹ್ಮಣೇತರರ 'ರೆಪ್ರೆಸೆಂಟೇಷನ್' ನನ್ನು ಅಧ್ಯಯನ ಮಾಡಲು ನೇಮಿಸಲಾಯಿತು. ಇದೇ ಅವಧಿಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ 'ಜಸ್ಟೀಸ್ ಪಾರ್ಟಿ' ಚುನಾವಣೆಗಳಲ್ಲಿ ಗೆದ್ದು ರಾಜಕೀಯ ಅನುಕೂಲತೆ ಪಡೆದು, ಶಿಕ್ಷಣ ಹಾಗೂ ನೌಕರಿಯಲ್ಲಿ ಮೀಸಲಾತಿಯನ್ನು ಜಾರಿಗೆ ತಂದಿತು. ಮೈಸೂರಿನಲ್ಲಿ ಮಿಲ್ಲರ್ ಕಮಿಟಿ ಕೂಡಾ ಈ ಮೀಸಲಾತಿಯನ್ನೇ ಆಧಾರವಾಗಿಟ್ಟುಕೊಂಡು ಮಹಾರಾಜರಿಗೆ ವರದಿ ಸಲ್ಲಿಸಿತು (ರೇಖಾ ಕೌಲ್, ೧೯೯೩, ಪು.೬೪).

ಈ ಅವಧಿಯಲ್ಲಿ ಮೈಸೂರು ಸಂಸ್ಥಾನದ ಬಹುಮುಖ್ಯ ಸಮಸ್ಯೆಯೇನೆಂದರೆ ಎಲ್ಲಾ ಜಾತಿಯವರಿಗೂ ಸರ್ಕಾರಿ ಹುದ್ದೆಗಳಲ್ಲಿ ಪ್ರಾತಿನಿಧ್ಯ ನೀಡಲಾಗುವುದೆಂದು ಸರ್ಕಾರ ಘೋಷಿಸಿದ್ದರೂ, ಬ್ರಾಹ್ಮಣರು, ಬ್ರಿಟೀಷರು ಮತ್ತು ಆಂಗ್ಲೋ ಇಂಡಿಯನ್ನರು ಪ್ರಧಾನ ಸ್ಥಾನ ಪಡೆದಿದ್ದರು. ಇಂತಹ ಅನ್ಯಾಯದ ವಿರುದ್ಧ ಮೊದಲು ಧ್ವನಿ ಎತ್ತಿದವರು ಲಿಂಗಾಯತರು, ಒಕ್ಕಲಿಗರು ಮತ್ತು ಮುಸ್ಲಿಂರು. ಈ ಸಮಸ್ಯೆಯು ಕೇವಲ ಉದ್ಯೋಗಕ್ಕೆ ಸಂಬಂಧಿಸಿರದೆ ಶಿಕ್ಷಣಕ್ಕೂ ಸಂಬಂಧಿಸಿತ್ತು (ಪೌಟನ್ ಜೆ.ಪಿ., ೧೯೯೫, ಪು. ೭೬-೭೭). ೧೯೨೧ರಲ್ಲಿ ಮಿಲ್ಲರ್ ಸಮಿತಿಯು ಹಲವಾರು ಶಿಫಾರಸ್ಸುಗಳನ್ನು ಮಾಡಿತು– "ಮುಂದಿನ ಏಳು ವರ್ಷಗಳಲ್ಲಿ ಬ್ರಾಹ್ಮಣೇತರರಿಗೆ ಉನ್ನತ ಸೇವೆಗಳಲ್ಲಿ ಶೇ.೫೦ ರಷ್ಟು ಹಾಗೂ ಕೆಳಮಟ್ಟದ ಸೇವೆಗಳಲ್ಲಿ ಶೇ. ೨/೩ ರಷ್ಟು ಉದ್ಯೋಗಾವಕಾಶಗಳನ್ನೊದಗಿಸಲು ಶಿಫಾರಸ್ಸು ಮಾಡಿತು" (ರೇಖಾ ಕೌಲ್, ೧೯೯೩, ಪು.೬೪). ಈ ಶಿಫಾರಸ್ಸಿನನ್ವಯ ಮುಂದಿನ ವರ್ಷಗಳಲ್ಲಿ ಬ್ರಾಹ್ಮಣೇತರರಿಗೆ ಉನ್ನತ ಹುದ್ದೆಗಳನ್ನು ನೀಡಲಾಯಿತು. ಲಿಂಗಾಯತರು ಮತ್ತು ಒಕ್ಕಲಿಗರು ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರು. ಆದರೆ ಕೆಳಜಾತಿಯವರು ಶಿಕ್ಷಣ ಮತ್ತು ಉದ್ಯೋಗಗಳ ಅನುಕೂಲತೆಯನ್ನು ಪಡೆಯುವಲ್ಲಿ ವಿಫಲರಾದರು. ಬ್ರಾಹ್ಮಣೇತರರ ಚಳವಳಿ ಘಟಿಸಿದ್ದಾಗ್ಯೂ ಶಿಕ್ಷಣ ಹಾಗೂ ಉದ್ಯೋಗಗಳನ್ನು ಎಲ್ಲಾ ಜಾತಿಯವರು ಪಡೆಯಲು ಸಾಧ್ಯವಾಗಲೇ ಇಲ್ಲ. ಬ್ರಾಹ್ಮಣೇತರರ ಚಳವಳಿ ಕ್ರಮೇಣ 'ಹಿಂದುಳಿದ ವರ್ಗಗಳ ಚಳವಳಿ' ಯಾಗಿ ಮಾರ್ಪಟ್ಟಿತು. ಮೇಲ್ಜಾತಿಯವರು ಎಲ್ಲಿ ಅಧಿಕ ಪ್ರಮಾಣದಲ್ಲಿದ್ದರೊ ಅಲ್ಲಿ ಈ ಚಳವಳಿ ವ್ಯಾಪಕವಾಗಿತ್ತು (ಶ್ರೀನಿವಾಸ್ ಎಂ.ಎನ್., ೧೯೭೨, ಪು. ೭೧).

ಮೈಸೂರು ಸಂಸ್ಥಾನದಲ್ಲಿ ಉಗ್ರರೂಪ ತಳೆದಿದ್ದ ಬ್ರಾಹ್ಮಣೇತರರ ಚಳವಳಿಯಲ್ಲಿ ಪ್ರಬಲ ಜಾತಿಗಳಾದ ಲಿಂಗಾಯತರು, ಒಕ್ಕಲಿಗರು ಪ್ರಮುಖ ಪಾತ್ರ ವಹಿಸಿದ್ದರು. ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಬಯಸಿದ್ದರು. ಈ ಅವಧಿಯಲ್ಲಿ 'ಜಾತಿ-ಚಾನೆಲ್' ಹೆಚ್ಚು

ಪರಿಣಾಮಕಾರಿಯಾಗಿದ್ದರಿಂದ ಪಾಶ್ಚಾತ್ಯ ಶಿಕ್ಷಣ ಪಡೆದವರು ತಮ್ಮ ಜಾತಿ ಸಂಘಟನೆಯ ನಾಯಕತ್ವ ವಹಿಸಿಕೊಳ್ಳಲು ಪೈಪೋಟಿ ನಡೆಸುತ್ತಿದ್ದರು. ೨೦ನೇ ಶತಮಾನದ ಆದಿಯಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರು ತಮ್ಮ ಹಿತರಕ್ಷಣೆಯ ಸಂಘಗಳನ್ನು ರಚಿಸಿಕೊಂಡು, ಬ್ರಾಹ್ಮಣರ ವಿರುದ್ಧ ಬಂಡಾಯವೆದ್ದು, ಬ್ರಾಹ್ಮಣೇತರರ ಚಳವಳಿಗೆ ಕಾರಣರಾದರು. ಲಿಂಗಾಯತರು ೧೯೦೫ ರಲ್ಲಿ 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಸ್ಥೆ' (MLEFA) ಯನ್ನೂ, ಒಕ್ಕಲಿಗರು ೧೯೦೬ ರಲ್ಲಿ 'ಒಕ್ಕಲಿಗರ ಸಂಘ' ವನ್ನೂ ಸ್ಥಾಪಿಸಿಕೊಂಡು ತಮ್ಮ ತಮ್ಮ ಜಾತಿಯವರಿಗೆ ಶಿಕ್ಷಣ ದೊರಕಿಸಿಕೊಡುವಲ್ಲಿ ತೀವ್ರ ಆಸಕ್ತಿ ತಳೆದಿದ್ದರು (ಮ್ಯಾನರ್ ಜೇಮ್ಸ್, ೧೯೭೭, ಪು. ೧೭೯). ತಮ್ಮ ತಮ್ಮಲ್ಲಿಯೇ Organisational expression ಬೆಳೆಸಿಕೊಂಡು ಬ್ರಾಹ್ಮಣ ವಿರೋಧಿ ನಿಲುವು ತಳೆದಿದ್ದರು. ಬ್ರಾಹ್ಮಣ ವಿರೋಧಿ ಅಲೆ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದಿತು (ಮ್ಯಾನರ್ ಜೇಮ್ಸ್, ೧೯೭೭, ಪು.೩೧-೩೩). ಜಾತಿ ಸಂಘಟನೆಗಳು, ಧಾರ್ಮಿಕ ಸಂಸ್ಥೆಗಳು ಮುಖ್ಯವಾಗಿ ವೀರಶೈವ ಮಠಗಳು ಬ್ರಾಹ್ಮಣೇತರರ ಚಳವಳಿಯನ್ನು ಪ್ರೋತ್ಸಾಹಿಸಿದವು. ಇದು ಕೇವಲ ಬ್ರಾಹ್ಮಣೇತರರ ಚಳವಳಿಯಾಗದೆ 'Anti-sectarian' ಚಳವಳಿಯೂ ಆಗಿತ್ತು (ಪಾರ್ವತಮ್ಮ ಸಿ., ೧೯೭೧, ಪು. ೧೮).

ಪಾಶ್ಚಾತ್ಯ ಶಿಕ್ಷಣ ಅವಶ್ಯಕವೆಂದು ಮನಗಂಡ ಲಿಂಗಾಯತರು ಶಿಕ್ಷಣದ ಮೇಲಿನ ತಮ್ಮ ಒಲವನ್ನು ದುಪ್ಪಟ್ಟು ಪಡಿಸಿಕೊಂಡರು. ಅಧಿಕ ಭೂಮಿಯನ್ನು ಹೊಂದಿದ್ದವರು ಹಾಸ್ಟೆಲ್‌ಗಳ ಸ್ಥಾಪನೆಗೆ ಮತ್ತು ವಿದ್ಯಾರ್ಥಿ ವೇತನಗಳಿಗೆ ನಿಧಿಯನ್ನು ದಾನವಾಗಿ ಕೊಡಲು ಇಚ್ಛಿಸಿದರು. ಮಿಲ್ಲರ್ ಸಮಿತಿ ವರದಿ ಜಾರಿಗೆ ಬಂದ ನಂತರ, ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಹೋರಾಟದಲ್ಲಿ ಜಯ ಬ್ರಾಹ್ಮಣೇತರರಿಗೆ ಲಭ್ಯವಾಗಿದ್ದರೂ, ಹೋರಾಟ ಮಾಡಿದವರೆಲ್ಲಾ ಪರೋಕ್ಷವಾಗಿ ಜಾತಿವಾದಿಗಳೇ ಆಗಿದ್ದರು. ಸರ್ಕಾರಿ ಉದ್ಯೋಗ, ನೇಮಕಾತಿಗಳಲ್ಲಿ ಬ್ರಾಹ್ಮಣೇತರರ ಪ್ರಮಾಣ ಸುಧಾರಿಸಿದರೂ ಕೂಡ 'ಜಾತಿ' ಪ್ರಬಲವಾಯಿತು. ಜಾತಿ-ಸಂಬಂಧಗಳೆಂದೂ ವರ್ಗ-ಸಂಬಂಧಗಳಾಗಿ ಪರಿವರ್ತನೆಗೊಳ್ಳಲೇ ಇಲ್ಲ. ಬ್ರಾಹ್ಮಣೇತರರ ಚಳವಳಿಯಲ್ಲಿ ನಾಯಕತ್ವ ವಹಿಸಿದ್ದರೂ ಕೂಡ ವರ್ಗ ಸಂಘಟನೆಯ ಕಡೆ ಗಮನ ಹರಿಸದೇ ಜಾತಿಗಳ ಪ್ರತ್ಯೇಕತೆಯನ್ನು ಪರಿಗಣಿಸಿದರು. ಎಲ್ಲಾ ಜಾತಿಯವರು ಸರ್ಕಾರ ನೀಡುವ ಅನುಕೂಲತೆಯನ್ನು ಪಡೆಯಲು ಜಾತಿ ಜಾತಿಗಳಲ್ಲಿಯೇ ಪೈಪೋಟಿ ನಡೆಸಿದರು. ಬ್ರಾಹ್ಮಣರು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ 'ಆದಾಯ'ಕ್ಕನುಗುಣವಾಗಿ ಮೀಸಲಾತಿಯನ್ನು ಒದಗಿಸಬೇಕೆಂದರೆ ಬ್ರಾಹ್ಮಣೇತರರು 'ಜಾತಿ' ಗನುಗುಣವಾಗಿ ಮೀಸಲಾತಿಯನ್ನು ಒದಗಿಸಬೇಕೆಂದರು. ಈ ನಡುವೆ ದಿವಾನ್ ವಿಶ್ವೇಶ್ವರಯ್ಯನವರು 'ಆದಾಯ' ಮತ್ತು 'ಜಾತಿ' ಯನ್ನು ಮೀಸಲಾತಿಗೆ ಮಾನದಂಡವಾಗಿ

ಬಳಸಬೇಕೆಂಬುದನ್ನು ತಿರಸ್ಕರಿಸಿ, 'ಮೆರಿಟೋಕ್ರಸಿ' ತತ್ವವನ್ನು ಮೀಸಲಾತಿಗೆ ಮಾನದಂಡವಾಗಿ ಬಳಸಬೇಕೆಂದರು (ಮ್ಯಾನರ್ ಜೇಮ್ಸ್, ೧೯೭೭, ಪು.೬೦). ಹಿಂದುಳಿದ ಜಾತಿಯವರು 'Truly backward' ಆಗಿದ್ದರು, ಅನುಕೂಲತೆಯನ್ನು ಪಡೆಯುವಲ್ಲಿ ವಿಫಲರಾದರು. ಹಿಂದುಳಿದ ವರ್ಗ ಚಳವಳಿಯಲ್ಲಿ 'Anti dominant caste' ಭಾವನೆ ಪ್ರಬಲವಾಗಿತ್ತು (ಎಂ.ಎನ್.ಶ್ರೀನಿವಾಸ್/ಪಾಣಿಣಿ, ೧೯೮೪, ಇಪಿಡಬ್ಲ್ಯು, ಪು.೬೯-೭೫).

೧೯೧೬ ರಿಂದ ೧೯೬೯ ರ ಮೊದಲ ಹಂತದಲ್ಲಿ ಬ್ರಾಹ್ಮಣರು-ಬ್ರಾಹ್ಮಣೇತರರೆಂದು ಹೋರಾಟ ನಡೆದರೆ, ೧೯೭೦ ರ ನಂತರ 'ನೂತನ ಹಿಂದುಳಿದ ವರ್ಗಗಳ ಚಳವಳಿ' ಹೊರಹೊಮ್ಮಿತು. ಶಿಕ್ಷಣ ಮತ್ತು ಉದ್ಯೋಗದ ಅನುಕೂಲತೆಯನ್ನು ಪಡೆಯಲು ಹೆಚ್ಚಿನ ಸೌಲಭ್ಯದ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು. ಆಂಗ್ಲಭಾಷಾ ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯವೆಂದು ಗ್ರಹಿಸಿದರು. ಸಾಮಾಜಿಕ ಚಲನೆಗೆ 'ಶಿಕ್ಷಣವೇ ಸಂಜೀವಿನಿ' ಎಂದು ಅರಿತರು.

ಬ್ರಾಹ್ಮಣೇತರರ ಚಳವಳಿಯ ನಂತರ ಶಿಕ್ಷಣವೆಂಬುದು ವಿಧಿತವಾಗದೆ ಸಾಧಿತವಾಯಿತು. ಕೆಲವರಲ್ಲಷ್ಟೇ ಕೇಂದ್ರಿತವಾಗಿದ್ದ 'ಜ್ಞಾನ ಸಂಪನ್ಮೂಲ' ಎಲ್ಲರಿಗೂ ಸಮಾನವಾಗಿ ವಿರತಣೆಯಾಗಬೇಕೆಂಬ ತುಡಿತ ಎಲ್ಲಾ ಜಾತಿಯವರಲ್ಲೂ ಕಂಡುಬಂದಿತು. ಕೆಲವರ ಸ್ವತ್ತಾಗಿದ್ದ ಶಿಕ್ಷಣ ಬಹುಸಂಖ್ಯಾತರ ಸ್ವತ್ತಾಗಬೇಕೆಂದು ಬ್ರಾಹ್ಮಣೇತರರ ಚಳವಳಿಯಲ್ಲಿ ಪ್ರಯತ್ನಿಸಲಾಯಿತು. ಆದರೆ ಶಿಕ್ಷಣದ ಹರವು ಅಸಮತೋಲನವಾಗಿಯೇ ಇತ್ತು. ಅಸ್ಪೃಶ್ಯತೆಯ ಹಣೆಪಟ್ಟಿಯನ್ನು ಹೊಂದಿದ್ದ ಕೆಳಜಾತಿಯ ವರ್ಗದವರು ಶಿಕ್ಷಣದ ಅನುಕೂಲತೆಯನ್ನು ಪಡೆಯಲು ಸಾಧ್ಯವಾಗಲಿಲ್ಲ.

೨.೪ ಹಿಂದುಳಿದ ವರ್ಗಗಳ ಚಳವಳಿ

ಹಿಂದುಳಿದ ವರ್ಗಗಳ ಹೋರಾಟದ ಮುಖ್ಯ ಗುರಿ ಜಾತಿ-ಜಾತಿಗಳ ಅಂತರವನ್ನು ಕಡಿಮೆ ಮಾಡುವುದಾಗಿತ್ತು. ದಕ್ಷಿಣ ಭಾರತದಲ್ಲಿ ೧೯೫೦ ರ ಅವಧಿಯಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದವರೆಲ್ಲರನ್ನು 'ಹಿಂದುಳಿದವರು' ಎಂದು ಕರೆಯಲಾಯಿತು. ಈ ಚಳವಳಿಯಲ್ಲಿ ಮುಸ್ಲಿಂರು, ಕ್ರಿಶ್ಚಿಯನ್ನರು ಮತ್ತು ಪಾರ್ಸಿಗಳಿದ್ದರು. ಮದ್ರಾಸ್ ಚಳವಳಿಯ ಕೇಂದ್ರ ಸ್ಥಳವಾಗಿತ್ತು. ಹಿಂದುಳಿದ ವರ್ಗಗಳ ಚಳವಳಿಯ ಪ್ರಕಾರ ಬ್ರಾಹ್ಮಣರು ಆರ್ಯರೆಂದು, ತಮಿಳರನ್ನು ದ್ರಾವಿಡರೆಂದು ಕರೆದು ಬ್ರಾಹ್ಮಣರು ಭಾರತಕ್ಕೆ ಬರುವಾಗ ಜಾತಿ ಎಂಬ 'Evil Institution' ನನ್ನು ತಂದರು ಎಂದು ಆರೋಪಿಸಿದರು. ಹೀಗೆ

ಪ್ರಾರಂಭವಾದ ಚಳವಳಿ ಕ್ರಮೇಣ ಎಲ್ಲಾ ರಾಜ್ಯಗಳಿಗೂ ಹರಡಿ ಕರ್ನಾಟಕದಲ್ಲೂ ಹರಡಿತು (ಎಂ.ಎನ್.ಶ್ರೀನಿವಾಸ್, ೧೯೭೨, ಪು. ೧೦೧-೧೦೪).

೧೯೦೯ ರಲ್ಲಿ ಬ್ರಿಟೀಷರು ಮಾರ್ಲೆ-ಮಿಂಟೋ ಸುಧಾರಣೆಗಳನ್ನು ಅನುಷ್ಠಾನಕ್ಕೆ ತಂದರು. ೧೯೦೬ ರಲ್ಲಿಯೇ ಮುಸ್ಲಿಂರಿಗೆ 'ಸೆಪರೇಟ್ ಕಮ್ಯೂನಲ್ ರೆಪ್ರೆಸೆಂಟೇಷನ್' ಕೊಡುತ್ತೇನೆಂದು ಆಶ್ವಾಸನೆ ನೀಡಿ, ೧೯೧೯ ರಲ್ಲಿ ಸಿಖ್ಖರಿಗೆ ಈ ಅನುಕೂಲತೆಯನ್ನು ನೀಡಿ ಆಂಗ್ಲೋ-ಇಂಡಿಯನ್ನರಿಗೆ 'ಸೆಪರೇಟ್ ಎಲೆಕ್ಟೋರೇಟ್' ಸೌಲಭ್ಯವನ್ನು ಒದಗಿಸಿದರು. ಹೀಗೆ ಬ್ರಿಟೀಷರು ಜಾತಿ ಧರ್ಮದ ಆಧಾರದ ಮೇಲೆ 'ಒಡೆದು ಆಳುವ ನೀತಿ' ಯನ್ನು ಅನುಸರಿಸಿದರು (ಗ್ರೋವರ್ ಬಿ.ಎಲ್., ೧೯೮೩, ಪು.೫೦೦-೫೦೩). ಮೈಸೂರು ಪ್ರಾಂತ್ಯದಲ್ಲಿ ೧೯೨೧ ರಿಂದ ೧೯೫೯ ರವರೆಗೂ ೧೦ ಹುದ್ದೆಗಳಲ್ಲಿ ೩ ಹುದ್ದೆಗಳಿಗೆ ಮಾತ್ರ ಬ್ರಾಹ್ಮಣರು ಸ್ಪರ್ಧಿಸಲು ಸಾಧ್ಯವಾಗಿತ್ತು. ೧೯೫೯ ರಲ್ಲಿ ಮೈಸೂರು ಸರ್ಕಾರವು ಆಜ್ಞೆಯನ್ನು ಹೊರಡಿಸಿ ಶೇ.೭೫ ರಷ್ಟು ಹಿಂದುಳಿದ ವರ್ಗಗಳಿಗೆ, ಅದರಲ್ಲಿ ಶೇ.೧೮ ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನವರಿಗೆ ಮೀಸಲಾಗಿಟ್ಟು, ಶೇ.೨೫ ರಷ್ಟು ಮಾತ್ರ ಸಾಮಾನ್ಯ ವರ್ಗದವರು ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿತು. ಆದರೆ ಮೈಸೂರು ಹೈಕೋರ್ಟು ಈ ಮೀಸಲಾತಿಯ ಆದೇಶವನ್ನು ತಿರಸ್ಕರಿಸಿತು (ಎಂ.ಎನ್.ಶ್ರೀನಿವಾಸ, ೧೯೭೨, ಪು.೨೧).

ಈ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಬಲ ಜಾತಿಗಳು ಸಂಸ್ಕೃತೀಕರಣಗೊಂಡು ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡವು. ಮೈಸೂರು ರಾಜ್ಯದಲ್ಲಿ ಲಿಂಗಾಯತರು ಸಾಂಸ್ಕೃತಿಕ ಮತ್ತು ಸಾಮಾಜಿಕ ಬದಲಾವಣೆಗೆ ಮೂಲವಾದರು. ಅಪಾರ ಸಂಪತ್ತನ್ನು ಹೊಂದಿದ್ದ ಗೌರವಾನ್ವಿತ ಧಾರ್ಮಿಕ ಸಂಸ್ಥೆಗಳು ಹುಟ್ಟಿಕೊಂಡವು. ಮಿಲ್ಲರ್ ಕಮಿಟಿ ವರದಿ ಪ್ರಕಾರ ಹಿಂದುಳಿದ ವರ್ಗದವರನ್ನು ಉದ್ಯೋಗಕ್ಕೆ ನೇಮಿಸುವಾಗ ಅವರ ವಯಸ್ಸನ್ನು ೨೫ ರಿಂದ ೨೮ ವರ್ಷಗಳಿಗೆ ಹೆಚ್ಚಿಸಲಾಯಿತು. ೧೯೨೧ ರಲ್ಲಿ 'ಕೇಂದ್ರೀಯ ನೇಮಕಾತಿ ಬೋರ್ಡ್'ನ್ನು ಸ್ಥಾಪಿಸಿ ಶೇ. ೭೫ ರಷ್ಟು ಉದ್ಯೋಗವನ್ನು ಹಿಂದುಳಿದ ವರ್ಗದವರಿಗೆ ಮೀಸಲಾಗಿಟ್ಟಿದ್ದರಿಂದ, ನೇಮಕಾತಿಯಲ್ಲಿ ಬ್ರಾಹ್ಮಣೇತರರ ಪ್ರಮಾಣ ಸ್ವಲ್ಪಮಟ್ಟಿಗೆ ಸುಧಾರಿಸಿತು.[೧]

೨೦ನೇ ಶತಮಾನದ ಮೊದಲ ದಶಕದಲ್ಲಿ ವೈದಿಕರ ಜಾತಿ ರಾಜಕೀಯವನ್ನು ಎದುರಿಸಲು, ಮೈಸೂರಿನ ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು ಮತ್ತು ಕುರುಬರು ತಮ್ಮ ತಮ್ಮ ಜಾತಿ

೧. ರಿಪೋರ್ಟ್ ಆಫ್ ದಿ ಸೆಕೆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಕಮೀಷನ್, ೧೯೮೬, ವಾ.೧, ಪು.೧೫, ಗೌರ್‍ನ್ಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

ಸಂಘಗಳನ್ನು ಪ್ರಾರಂಭಿಸಿ ಸವಲತ್ತಿಗಾಗಿ ಯಾಚಿಸುತ್ತಿದ್ದರು. ಕಟ್ಟಮಂಚಿ ರಾಮಲಿಂಗಾರೆಡ್ಡಿ (ಸಿ.ಆರ್.ರೆಡ್ಡಿ) ೧೯೧೭ ರಲ್ಲಿ ಮೈಸೂರಿನ ಮೊದಲ ರಾಜಕೀಯ ಪಕ್ಷ 'ಪ್ರಜಾಮಿತ್ರ ಮಂಡಳಿ'ಯನ್ನು ಸ್ಥಾಪಿಸಿದರು. ೧೯೨೩-೨೬ ರ ಅವಧಿಯಲ್ಲಿ ಲಿಂಗಾಯತರಿಗೆ ಮತ್ತು ಒಕ್ಕಲಿಗರಿಗೆ Supra-local Political awareness ಕಂಡುಬಂದಿತು. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಬ್ರಾಹ್ಮಣರಿಗೆ ಪ್ರಬಲ ಸ್ಪರ್ಧಿಯಾದರು. ಪ್ರಬಲ ಜಾತಿಗಳು ಸರ್ಕಾರದಿಂದ ಎಲ್ಲಾ ಅನುಕೂಲತೆ ಪಡೆಯುವಲ್ಲಿ ಏಕಸ್ವಾಮ್ಯಾಧಿಕಾರವನ್ನು ಪಡೆದರು. ಇದರಿಂದಾಗಿ ಪ್ರಬಲೇತರರು, ಲಿಂಗಾಯತರು ಮತ್ತು ಒಕ್ಕಲಿಗರ 'Ruthless manner' ಬಗ್ಗೆ ಬೇಸರವನ್ನು ವ್ಯಕ್ತಪಡಿಸಿದರು. ಪ್ರಬಲೇತರರು 'Truly backward' ಆಗಿದ್ದರೂ, ಅನುಕೂಲವನ್ನು ಪಡೆಯುವಲ್ಲಿ ವಿಫಲರಾದರು (ಶ್ರೀನಿವಾಸ್ ಎಂ.ಎನ್., ೧೯೭೨, ಪು. ೧೧೨-೧೧೩).

ಶಿಕ್ಷಣ ಮತ್ತು ಉದ್ಯೋಗದ ಅನುಕೂಲತೆಯನ್ನು ಪಡೆಯುವಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರು 'ಇತರೆ ಹಿಂದುಳಿದ ವರ್ಗ' ದವರೆಂದೇ ಪ್ರತಿಬಿಂಬಿಸಿಕೊಳ್ಳಲು ಇಚ್ಛಿಸಿದರು. ನಾಗನಗೌಡ ಕಮಿಟಿಯು ಈ ಆಧಾರದ ಮೇಲೆ 'ಹಿಂದುಳಿದ ಜಾತಿ' ಮತ್ತು 'ಅತ್ಯಂತ ಹಿಂದುಳಿದ ಜಾತಿ' ಎಂದು ವರ್ಗೀಕರಿಸಲು ಇಚ್ಛಿಸಿತು. ಪ್ರಬಲ ಜಾತಿಗಳು ಇದಕ್ಕೆ ಅವಕಾಶವನ್ನೀಯಲಿಲ್ಲ. ೧೯೧೬ ರಿಂದ ೧೯೪೭ ರ ಮೊದಲ ಹಂತದಲ್ಲಿ ಬ್ರಾಹ್ಮಣರು-ಬ್ರಾಹ್ಮಣೇತರರೆಂದು ಹೋರಾಟ ನಡೆದರೆ, ೧೯೭೦ ರ ನಂತರ 'ಇತರೆ ಹಿಂದುಳಿದ ವರ್ಗ' ದಲ್ಲಿಯೇ 'ಬಲಿಷ್ಠ ಹಿಂದುಳಿದ ಜಾತಿ' ಮತ್ತು 'ದುರ್ಬಲ ಹಿಂದುಳಿದ ಜಾತಿ' ಎಂದು ವಿಭಜನೆಯಾಯಿತು. ನೂತನ ಹಿಂದುಳಿದ ವರ್ಗಗಳ ಚಳವಳಿ ಹೊರಹೊಮ್ಮಿತು. 'ಮುಂದುವರಿದ ಬ್ರಾಹ್ಮಣೇತರರ' ವಿರುದ್ಧ 'ಹಿಂದುಳಿದ ಬ್ರಾಹ್ಮಣೇತರರ' ಹೋರಾಟ ಕಂಡುಬಂದಿತು. ದುರ್ಬಲ ಹಿಂದುಳಿದ ಜಾತಿಯವರೂ ಕೂಡ ಎಚ್ಚೆತ್ತು, ಮುಂದುವರಿದ ವರ್ಗದವರಿಗಿಂತ ತಮಗೆ ಹೆಚ್ಚಿನ ಸೌಲಭ್ಯದ ಅವಶ್ಯಕತೆಯಿದೆ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು. ಗ್ರಾಮೀಣ ಪ್ರದೇಶಗಳಲ್ಲಿ ಪ್ರಬಲ ಜಾತಿಗಳು ಹಿಂದುಳಿದ ಜಾತಿಯವರನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ನಡೆಸಿದ ಪ್ರಯತ್ನದಿಂದಾಗಿಯೇ ಇಂತಹ ಬೆಳವಣಿಗೆ ಬ್ರಾಹ್ಮಣೇತರರಲ್ಲಿ ಕಂಡುಬಂದಿತ್ತು (ಬಿ. ಕುಪ್ಪುಸ್ವಾಮಿ, ೧೯೭೨, ಪು.೨೩೨-೨೩೩).

ಮೇಲ್ಕಂಡ ಅಧ್ಯಯನವನ್ನು ಗಮನಿಸಿದಾಗ, ರಿಸ್ಲೇ ಹೇಳುವ ಹಾಗೆ 'Fusion has replaced fission' ಎಂದಿದ್ದಾನೆ (ಶ್ರೀನಿವಾಸ ಎಂ.ಎನ್., ೧೯೭೨, ಪು.೧೧೫). ಬ್ರಾಹ್ಮಣರ ಪ್ರಕಾರ ವ್ಯಕ್ತಿಯ 'ಆದಾಯ' ಕ್ಕನುಗುಣವಾಗಿ ಮೀಸಲಾತಿಯನ್ನು ಒದಗಿಸಬೇಕೆಂದರೆ ಬ್ರಾಹ್ಮಣೇತರರ ಪ್ರಕಾರ ಮೀಸಲಾತಿ 'ಜಾತಿ' ಆಧಾರವಾಗಿರಬೇಕೆಂದರು. ೧೯೬೦ ರಲ್ಲಿ ಹಿಂದುಳಿದ ಜಾತಿಯನ್ನು ಗುರುತಿಸಲು 'ನಾಗನಗೌಡ

ಕಮಿಟಿ' ಯನ್ನು ನೇಮಿಸಲಾಯಿತು. ೩೯ ಜಾತಿಗಳು 'ಹಿಂದುಳಿದ' ಮತ್ತು 'ಅತಿ ಹಿಂದುಳಿದ' ವರೆಂದು ಗುರುತಿಸಲಾಗಿದ್ದು, ಸರ್ಕಾರಿ ಸೇವೆಯಲ್ಲಿ ಶೇ.೬೩ ರಷ್ಟು ಮೀಸಲಾತಿಯನ್ನು ಒದಗಿಸಬೇಕೆಂದು, ಲಿಂಗಾಯತರು 'ಮುಂದುವರಿದ ಜಾತಿ' ಎಂದು ತನ್ನ ವರದಿಯನ್ನು ಸಲ್ಲಿಸಿತು. ಆದರೆ ಲಿಂಗಾಯತರಿಂದ ಪ್ರತಿರೋಧ ಕಂಡುಬಂದು, ಈ ವರದಿಯನ್ನು ಖಂಡಿಸಿದಾಗ, ಅವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಲಾಯಿತು. ಲೆಲ್ಹಾಡಶ್ಕಿನ್ ಇದನ್ನು 'Elite benefits' ಎಂದು ಕರೆದಿದ್ದಾರೆ (ಲೆಲ್ಹಾಡಶ್ಕಿನ್, ಇ.ಪಿ.ಡಬ್ಲ್ಯು, ೧೯೭೯, ಪು.೬೬೨).

ಕರ್ನಾಟಕದಲ್ಲಿ ಪ್ರಬಲೇತರ ಜಾತಿಗಳಲ್ಲಿ ದೇವರಾಜ ಅರಸ್ ರಾಜಕೀಯವಾಗಿ ಯಶಸ್ಸನ್ನು ಕಂಡರು. ೧೯೭೦ ರಿಂದ ಅರಸು ಹಿಂದುಳಿದ ಜಾತಿಯಲ್ಲಿಯೇ ಪ್ರಜ್ಞಾವಂತ ರಾಜಕಾರಣಿಯಾಗಿದ್ದರು. ಅವರ ಆಡಳಿತ ವೈಖರಿಯನ್ನು 'Pragmatic progressive' ಎಂದು ಕರೆಯಲಾಯಿತು. ಇವರ ಅವಧಿಯಲ್ಲಿ 'Anti dominant caste' ಭಾವನೆ ಪ್ರಬಲವಾಗಿತ್ತು. ಬಡತನ, ದಾರಿದ್ರ್ಯ, ಆದಾಯ ಅಸಮಾನತೆ, ಶೋಷಣೆಯನ್ನು ತಡೆಗಟ್ಟಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡರು. ೧೯೭೨ ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಬಲೇತರ ಜಾತಿಯ ಛಾಂಪಿಯನ್ ಆಗಬೇಕೆಂಬ ಬಯಕೆಯಿಂದ, ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಿಕೊಡಲೆಂದು, ಎಲ್.ಜಿ. ಹಾವನೂರ್ ಅಧ್ಯಕ್ಷತೆಯಲ್ಲಿ 'ಪ್ರಥಮ ಹಿಂದುಳಿದ ವರ್ಗ'ದ ಆಯೋಗವನ್ನು ನೇಮಿಸಿದರು. ೧೯೭೪ ರಲ್ಲಿ ಆಯೋಗ 'ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ'ಯನ್ನು ಪ್ರಮುಖವಾಗಿ ಪರಿಗಣಿಸಿ ತನ್ನ ವರದಿಯನ್ನು ಸಿದ್ಧಪಡಿಸಿತು. ಲಿಂಗಾಯತರನ್ನು ಮುಂದುವರಿದವರೆಂದು ಹೇಳಲಾಯಿತು. ಒಕ್ಕಲಿಗರನ್ನು ಹಿಂದುಳಿದ ವರ್ಗದಲ್ಲಿಯೇ ಉಳಿಸಿಕೊಂಡರು. ಈ ವರದಿಯು ಲಿಂಗಾಯತರ ತೀವ್ರ ಆಕ್ರೋಶಕ್ಕೆ ಗುರಿಯಾಯಿತು (ಎಂ.ಎನ್. ಶ್ರೀನಿವಾಸ್/ಪಾಣಿಣಿ, ಇ.ಪಿ.ಡಬ್ಲ್ಯು, ೧೯೮೪, ಪು.–೭೫).

ರಾಮಕೃಷ್ಣ ಹೆಗಡೆ ಕಾಲದಲ್ಲಿ 'ವೆಂಕಟಸ್ವಾಮಿ ಆಯೋಗ' ರಚನೆಯಾಯಿತು. ಬ್ರಾಹ್ಮಣರು, ಲಿಂಗಾಯತರು ಮತ್ತು ಒಕ್ಕಲಿಗರು ಮುಂದುವರಿದ ಜಾತಿ ಎಂದು ತನ್ನ ವರದಿಯನ್ನು ಸಲ್ಲಿಸಿದಾಗ ಲಿಂಗಾಯತರು ಅದರಲ್ಲೂ ಒಕ್ಕಲಿಗರು ವ್ಯಾಪಕವಾಗಿ ಖಂಡಿಸಿದರು. ರಾಜ್ಯ ಸರ್ಕಾರ ಈ ವರದಿಯನ್ನು ತಿರಸ್ಕರಿಸಿತು. ೧೯೮೯ ರಲ್ಲಿ ವೀರೇಂದ್ರ ಪಾಟೀಲ್, ಚಿನ್ನಪ್ಪ ರೆಡ್ಡಿ ನೇತೃತ್ವದಲ್ಲಿ 'ಮೂರನೇ ಹಿಂದುಳಿದ ಆಯೋಗ' ವನ್ನು ರಚಿಸಿದರು. ಈ ಆಯೋಗವು ಲಿಂಗಾಯತರು ಮತ್ತು ಒಕ್ಕಲಿಗರನ್ನೊಳಗೊಂಡು ಒಟ್ಟು ೩೨ ಜಾತಿಗಳನ್ನು ಹಿಂದುಳಿದ ವರ್ಗದಿಂದ ತೆಗೆದುಹಾಕಿತು. ಚಿನ್ನಪ್ಪ ರೆಡ್ಡಿ ವರದಿಯನ್ನೂ ತಿರಸ್ಕರಿಸಲಾಯಿತು (ರೇಖಾ ಕೌಲ್, ೧೯೯೩, ಪು.೭೫–೭೯). ಕ್ಯಾಬಿನೆಟ್ ಸಬ್ ಕಮಿಟಿಗೆ ಅಧ್ಯಯನ

ಮಾಡಲು ಸೂಚಿಸಲಾಯಿತು. ಸಂಪುಟ ಉಪಸಮಿತಿ ಹಿಂದುಳಿದ ವರ್ಗಕ್ಕೆ ಸೇರಿದ ವಿವಿಧ ಸಮುದಾಯಗಳನ್ನು ಪ್ರವರ್ಗ ೧, ೨ಎ, ೨ಬಿ ಮತ್ತು ೩ಎ, ೩ಬಿ ಎಂದು ವಿಂಗಡಿಸಿತು. ಈಗಲೂ ಇದೇ ಮೀಸಲಾತಿ ಕ್ರಮವನ್ನು ಅನುಸರಿಸಲಾಗುತ್ತಿದೆ.[೨]

ಸರ್ಕಾರವು ಸಾಮಾಜಿಕ-ಆರ್ಥಿಕ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗ ಶಿಕ್ಷಣ ಎಲ್ಲಾ ಜಾತಿಯವರಿಗೂ ದೊರೆಯುವಂತಾಗಬೇಕೆಂದು ಲಿಂಗಾಯತ ಮಠಗಳು ಶಿಕ್ಷಣ ನೀಡಲು ಮುಂದಾದವು. ಜೇಮ್ಸ್ ಮ್ಯಾನರ್‌ನ ಪ್ರಕಾರ, ಇತರ ಜಾತಿಯವರಿಗಿಂತ ಲಿಂಗಾಯತರು ಹೆಚ್ಚು 'ಕೊಹೆಸಿವ್' ಆಗಿದ್ದರೆಂದು, ಕೇಂದ್ರೀಯ ಸಂಸ್ಥೆಗಳಾದ 'ವಿರಕ್ತ ಮಠಗಳು' 'Supra-local' ಸಂಸ್ಥೆಗಳಾಗಿದ್ದು, ಮಠಗಳಲ್ಲಿನ ಸ್ವಾಮೀಜಿಯವರು ತಮ್ಮ ಪ್ರಬುದ್ಧತೆಯನ್ನು ಕಾಪಾಡಿಕೊಳ್ಳುತ್ತಿದ್ದರು ಎಂದಿದ್ದಾರೆ. ಕರ್ನಾಟಕದಲ್ಲಿ ಕಂಡುಬಂದ ಬ್ರಾಹ್ಮಣೇತರರ ಚಳವಳಿಯಲ್ಲಿಯೂ ಸ್ವಾಮೀಜಿಗಳು ಸಹಕರಿಸಿದ್ದು, ಶಿಕ್ಷಣ ಎಲ್ಲಾ ಜಾತಿ, ವರ್ಗ, ಲಿಂಗಗಳಿಗೂ ದೊರೆಯುವಂತಾಗಬೇಕೆಂದು ಆಶಿಸಿ, ಶಾಲಾ-ಕಾಲೇಜುಗಳನ್ನು ಸ್ಥಾಪಿಸಲು ಮುಂದಾದರು (ಮ್ಯಾನರ್ ಜೇಮ್ಸ್, ೧೯೭೭, ಪು.೩೮). ಜಡವಾಗಿದ್ದ ಸಮಾಜಕ್ಕೆ ಶಿಕ್ಷಣದಿಂದ ಚೈತನ್ಯ ನೀಡುವಲ್ಲಿ ಮಠಾಧಿಪತಿಗಳು ಕಾರ್ಯೋನ್ಮುಖರಾದರು. ಶಿಕ್ಷಣ ಎಲ್ಲಾ ಜಾತಿಯವರಿಗೂ ದೊರೆಯಲೆಂದು ಹಲವಾರು ಕ್ರಮಗಳನ್ನು ಕೈಗೊಳ್ಳಲಾಯಿತು. ಸುಸಂಘಟಿತವಾದ ಮಠಗಳ ಬೆಂಬಲ ಸಮುದಾಯಕ್ಕಿತ್ತು. ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಸ್ವಾಮೀಜಿಗಳು ಕೈಜೋಡಿಸಿದ್ದುಂಟು.

೨.೫ ಮಠಗಳ ಒಳಸಂಘರ್ಷ-ವಿಭಜನೆ

ಲಿಂಗಾಯತ ಮಠಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವಲ್ಲಿ ಸಾಕಷ್ಟು ಶ್ರಮಿಸಿರುವುದನ್ನು ಕಾಣಬಹುದಾಗಿದೆ. ಅವುಗಳು ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿದ್ದವು. ಕಾಲಧರ್ಮಕ್ಕನುಗುಣವಾಗಿ ಅರಮನೆಗಳ ಪ್ರಾಬಲ್ಯ ಕುಗ್ಗುತ್ತಿದ್ದಂತೆ ಗುರುಮನೆಗಳ ದೃಷ್ಟಿ ಸಾಮಾನ್ಯ ಜನತೆಯ ಕಡೆಗೂ ಹೊರಳಿದ್ದು ಸಮಾಧಾನಕರವಾದ ಸಂಗತಿಯಾಗಿದೆ. ಪ್ರಜಾಪ್ರಭುತ್ವ ನೀತಿ, ವೈಜ್ಞಾನಿಕ ಪ್ರಗತಿ ಮತ್ತು ಕ್ರಾಂತಿಗಳು ಜನರ ಮನಸ್ಸಿನಲ್ಲಿ ಬದಲಾವಣೆಗಳನ್ನುಂಟು ಮಾಡಿ ಪರಿವರ್ತನ ಕಾರ್ಯದಲ್ಲಿ ಪ್ರವೃತ್ತವಾದ ನಂತರದಲ್ಲಿ ಸಮಾಜದ ಗತಿ ನಿಧಾನವಾಗಿಯಾದರೂ ವ್ಯತ್ಯಾಸವಾಗಿದ್ದು ಕಂಡುಬರುತ್ತದೆ. ಸಾಮಾನ್ಯ ಜನತೆಯ ಉದ್ಧಾರದಲ್ಲಿ ತಮ್ಮ ಅಸ್ತಿತ್ವದ ಸಾರ್ಥಕತೆಯಿದೆ ಎಂಬುದನ್ನರಿತ ಮಠಗಳು ಶೈಕ್ಷಣಿಕ ಕಾರ್ಯಗಳಿಗೆ ತಮ್ಮನ್ನು ತಾವು ಪರಿಪೂರ್ಣ ಒಪ್ಪಿಕೊಂಡಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ.

---

೨. ಕರ್ನಾಟಕ ರಾಜ್ಯ ಪತ್ರ ಗುರುವಾರ ಏಪ್ರಿಲ್ ೧೧, ೨೦೦೨, ಭಾಗ-೧, ೧೦೦೩.

೧೨ನೇ ಶತಮಾನದ ಕ್ರಾಂತಿಯಿಂದಾಗಿ ಕಲ್ಯಾಣದಲ್ಲಿದ್ದ ಸಹಸ್ರಾರು ಜಂಗಮರು ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹೋದರು. ಮುಂದೆ ಸುಮಾರು ಎರಡು ಶತಮಾನಗಳ ಕಾಲ ವೀರಶೈವ ಮಠಗಳಾಗಿ ಪರಿವರ್ತಿತವಾದ ಶೈವ ಮಠಗಳಲ್ಲಿ ಪಂಚ ಪೀಠಾಧಿಪತಿಗಳು, ವೀರಶೈವ ಧರ್ಮಾಚರಣೆ ರಕ್ಷಣೆಗಾಗಿ ಸ್ಥಾಪಿಸಿದ ಪುತ್ರವರ್ಗ ಮಠಗಳಲ್ಲಿ ಹಾಗೂ ೧೫ನೇ ಶತಮಾನದ ವೇಳೆಗೆ ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ಏಳುನೂರೊಂದು ವಿರಕ್ತರು ನಾಡಿನಾದ್ಯಂತ ಸಂಚರಿಸಿ ಎಲ್ಲೆಡೆ ಸ್ಥಾಪಿಸಿದ ವಿರಕ್ತ ಮಠಗಳಲ್ಲಿ ವೀರಶೈವ ಧರ್ಮದ ಕೈಂಕರ್ಯ ಮುಂದುವರೆಯಿತು. ಕಲ್ಯಾಣದ ಕ್ರಾಂತಿಯಲ್ಲಿ ಹೊಮ್ಮಿದ ಜಂಗಮರು ಕಲ್ಯಾಣದಿಂದ ಹೊರಟು ಅಲ್ಲಲ್ಲಿ ಚದುರಿದ್ದು, ತಾವು ಉಳಿದುಕೊಂಡಲ್ಲೇ 'ಮಠ' ನಿರ್ಮಿಸಿಕೊಂಡು ಧಾರ್ಮಿಕ ಕಾರ್ಯ ನಡೆಸತೊಡಗಿದರು (ಅರ್ಚನ, ೧೯೮೪ ಪು.೧೦೦೯-೧೦೧೩)

ಹೀಗೆ ಪ್ರಾಚೀನ ಶೈವ-ವೀರಶೈವ ಆಚಾರ್ಯರ ಪರಂಪರೆಯಿಂದ ಬಂದ ಗುರುಸ್ಥಲ ಮಠಗಳು, ಜಂಗಮರು ತಾವೇ ನಿರ್ಮಿಸಿಕೊಂಡ ಹಾಗೂ ತೋಂಟದ ಸಿದ್ಧಲಿಂಗಯತಿಗಳ ಕಾಲದಲ್ಲಿಂದ ಸ್ಥಾಪಿಸಲ್ಪಟ್ಟವು. ವಿರಕ್ತ ಮಠಗಳು ಕಾರ್ಯ ನಿರ್ವಹಿಸತೊಡಗಿದವು. ಕೆಲವು ವೀರಶೈವ ಮಠಗಳಲ್ಲಿ ಕೇವಲ ಜ್ಞಾನಾರ್ಜನೆಗೆ ಅಷ್ಟೇ ಅಲ್ಲ ಜೀವನೋಪಾಯಕ್ಕೆ ಅನುಕೂಲವಾಗುವ ಕಸಬುಗಳನ್ನು ಕಲಿಸುವ ಏರ್ಪಾಡಿತ್ತೆಂದು ತಿಳಿದುಬರುತ್ತದೆ. ಶಿಕ್ಷಣ ಪ್ರಸಾರಕ್ಕಾಗಿ ವೀರಶೈವ ಮಠಗಳಲ್ಲಿ ಮೂರು ಪ್ರಕಾರದ ಮಠಗಳನ್ನು ಸಂಘಟಿಸಲಾಯಿತು. ಸಾಲಿಮಠ, ಓದಿಸು ಮಠ ಮತ್ತು ವಿರಕ್ತ ಮಠ. ವೀರಶೈವ ಶರಣರ ಪಾರುಪತ್ಯದಲ್ಲಿ ಈ ಮಠಗಳು ಶಿಕ್ಷಣ ಮತ್ತು ಸಾಹಿತ್ಯ ಕೇಂದ್ರಗಳಾಗಿ ಹಲವಾರು ಶತಮಾನಗಳವರೆಗೆ ನಾಡಿಗೆ ಸೇವೆ ಸಲ್ಲಿಸಿದವು (ಅರ್ಚನ, ೧೯೮೪ ಪು.೧೦೦೯-೧೦೧೩).

ಸಾಲಿಮಠ

ಈ ಮಠಗಳು ಆಧುನಿಕ ಮೂಲ ಶಿಕ್ಷಣ (Basic School) ಶಾಲೆಗಳನ್ನು ಹೋಲುತ್ತಿದ್ದವು. ಗಾಂಧೀಜಿಯವರ ವಾರ್ಧಾ ಶಿಕ್ಷಣ ಪ್ರತಿರೂಪವನ್ನು ಇಲ್ಲಿ ಗುರುತಿಸಬಹುದು. ಓದು, ಬರಹ, ಗಣಿತಗಳಲ್ಲದೆ ಕಡ್ಡಾಯವಾಗಿ ಯಾವುದಾದರೊಂದು ಕೈಗಾರಿಕೆಯನ್ನು ಕಲಿಸಲಾಗುತ್ತಿತ್ತು. ಈ ಮಠಗಳಲ್ಲಿ ನೂಲುವುದು, ನೇಯುವುದು, ಕೃಷಿ ವ್ಯವಸಾಯಗಳು ಮುಖ್ಯ ಕಾಯಕಗಳಾಗಿದ್ದವು. ಸಾಲಿಮಠಗಳು ಕೈಗಾರಿಕಾ ಶಾಲೆಗಳಾಗಿದ್ದವು (ಅರ್ಚನ, ೧೯೮೪, ಪು.೧೦೦೯-೧೦೧೩).

ಓದಿಸು ಮಠ

ಓದಿಸು ಮಠಗಳಲ್ಲಿ ಕೇವಲ ಓದುವುದು, ಬರೆಯುವುದನ್ನೊಳಗೊಂಡ 'ಪುಸ್ತಕ ಜ್ಞಾನ' (Bookish knowledge) ವನ್ನೇ ಕೊಡುತ್ತಿದ್ದರು. ಸಂಸ್ಕೃತದ ಅಧ್ಯಯನಕ್ಕೂ ತಕ್ಕಸ್ಥಾನವಿತ್ತು. ಸಾಲಿ ಮಠಗಳಲ್ಲಿ ಮುಗಿಸಿದ ಎಷ್ಟೋ ವಿದ್ಯಾರ್ಥಿಗಳು ಈ ಮಠಗಳಿಗೆ ಸೇರುತ್ತಿದ್ದರು. ಈ ಓದಿಸು ಮಠಗಳು ಕ್ರಿ.ಶ. ೧೯ನೇ ಶತಮಾನದ ಕೊನೆಗೆ ವೀರಶೈವ ಸಂಸ್ಕೃತ ಪಾಠಶಾಲೆಗಳಾಗಿ ಪರಿವರ್ತಿತವಾದವು. ಸಿದ್ಧಗಂಗಾ ಮತ್ತು ಸುತ್ತೂರು ಮಠಗಳು ಸಂಸ್ಕೃತ ಪಾಠಶಾಲೆಗಳನ್ನು ಹೊಂದಿರುವುದು ಮಹತ್ತರ ವಿಚಾರ (ಅರ್ಚನ, ೧೯೮೪, ಪು.೧೦೦೯-೧೦೧೩)

ವಿರಕ್ತ ಮಠಗಳು

ಅನುಭವ ಮಂಟಪದ ಮಾದರಿಯಲ್ಲಿ ವಿರಕ್ತ ಮಠಗಳು ಕಾರ್ಯ ಮಾಡುತ್ತಿದ್ದವು. ಈ ಮಠಗಳು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಸಾಲಿಮಠ ಮತ್ತು ಓದಿಸು ಮಠಗಳಲ್ಲಿ ಅಧ್ಯಯನವನ್ನು ಮುಗಿಸಿ ವಿದ್ಯಾರ್ಥಿಗಳು ಉಚ್ಚ ವ್ಯಾಸಂಗಕ್ಕಾಗಿ ವಿರಕ್ತ ಮಠಗಳಿಗೆ ಹೋಗುತ್ತಿದ್ದರು. ಸಮಾಜಕ್ಕೆ ಉಪಯುಕ್ತವಾದ ವೃತ್ತಿಗಳನ್ನು ಇಲ್ಲಿ ಕಲಿಸಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಇವು ಒಂದರ್ಥದಲ್ಲಿ ವೃತ್ತಿ ಮೂಲ ಶಿಕ್ಷಣ ಕೇಂದ್ರಗಳಾಗಿದ್ದವು (ಅರ್ಚನ, ೧೯೮೪ ಪು.೧೦೦೯-೧೦೧೩).

ಆದರೂ ಒಟ್ಟಾರೆ ಪರಂಪರೆ ಮತ್ತು ಸಂಪ್ರದಾಯದ ದೃಷ್ಟಿಯಿಂದ ಗುರುವರ್ಗದ ಮತ್ತು ವಿರಕ್ತವರ್ಗದ ಎರಡು ಪ್ರಕಾರಗಳೇ ಪ್ರಮುಖವಾದವು.

೧೫ ನೇ ಶತಮಾನದಲ್ಲಿ ಎರಡು ಬಗೆಯ ಮಠಗಳು ಕಂಡುಬರುತ್ತವೆ. ಗುರುಸ್ಥಲ ಅಥವಾ ಪಟ್ಟದ ಮಠ ಮತ್ತು ವಿರಕ್ತ ಮಠ. ಗುರುಸ್ಥಲ ಪಂಚಪೀಠಗಳೇ ಆಗಿವೆ[೩] (ಸಿ.ಪಾರ್ವತಮ್ಮ, ೧೯೭೧, ಪು.೮೯). ವಿರಕ್ತ ಮಠಗಳು ಬಸವನ ಚಿಂತನೆಗಳನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದವು (ಸದಾಶಿವಯ್ಯ ಹೆಚ್.ಎಂ., ೧೯೫೯, ಪು.೧೫೭-೧೫೯). ಗುರುಮಠ ಮತ್ತು ವಿರಕ್ತ ಮಠಗಳನ್ನು ಅಧ್ಯಯನ ಮಾಡಿದರೆ ಪಂಚಾಚಾರ್ಯರಿಗೂ, ವಚನಕಾರ್ಯರಿಗೂ ಕೆಲವು ವಿಷಯಗಳಲ್ಲಿ ಏಕಾಭಿಪ್ರಾಯವಿರುವಂತೆ ತೋರುವುದಿಲ್ಲ. ಪಂಚಾಚಾರ್ಯರು ವಚನಕಾರರಂತೆ ಸಮಾಜದ ಡೊಂಕುಗಳನ್ನು

ಟಿಪ್ಪಣಿ : ೩ ಪಂಚಾಚಾರ್ಯರು ಯುಗಯುಗದಲ್ಲಿಯೂ ಅವತರಿಸಿ ಧರ್ಮವನ್ನು ಉದ್ಧರಿಸುವರು ಎಂಬ ನಂಬಿಕೆ ವೀರಶೈವರಲ್ಲಿದೆ. ಕೃತಯುಗ, ತ್ರೇತಾಯುಗ ಹಾಗೂ ದ್ವಾಪರಯುಗಕ್ಕಿಂತಲೂ ಕಲಿಯುಗದಲ್ಲಿ ರೇವಣಸಿದ್ಧರು ಕೊಲ್ಲಿಪಾಕಿಯಲ್ಲಿಯೂ, ಮರುಳಸಿದ್ಧರು ವಟುಕ್ಷೇತ್ರದಲ್ಲಿಯೂ, ಪಂಡಿತಾರಾಧ್ಯರು ವಾರಣಾಸಿಯಲ್ಲಿ ಸ್ಥಾವರಲಿಂಗಗಳಿಂದ ಉದ್ಭವಿಸಿ ಕ್ರಮವಾಗಿ ರಂಭಾಪುರಿ, ಉಜ್ಜಯಿನಿ, ಶ್ರೀಗಿರಿ, ಹಿಮತ್ ಕೇದಾರ ಮತ್ತು ಕಾಶಿಗಳಲ್ಲಿ ಮಠಗಳನ್ನು ಸ್ಥಾಪಿಸಿರುವರೆಂದು ತಿಳಿಯುತ್ತದೆ. ಜಂಗಮರೇ ಈ ಐದೂ ಪೀಠಗಳಿಗೆ ಸ್ವಾಮೀಜಿಗಳಾಗಿರುತ್ತಾರೆ.

ತಿದ್ದಿ, ದುರಾಚಾರಗಳನ್ನು ಖಂಡಿಸಿದರೆಂದು ಹೇಳಲು ಸಾಧ್ಯವಿಲ್ಲ. ಅವರು ಸಂಪ್ರದಾಯ ಶರಣರು, ಆಧ್ಯಾತ್ಮ ಪ್ರಪಂಚದವರು, ಆಚಾರ್ಯ ಪದವಿಯಲ್ಲಿರತಕ್ಕವರು (ಶ್ರೀನಿವಾಸಮೂರ್ತಿ ಎಂ.ಆರ್., ೧೯೭೭, ಪು.೭). ಆದರೆ ಕಾಲಕ್ರಮೇಣ ವಿರಕ್ತ ಮಠಗಳು ಲೌಕಿಕ ಜೀವನದ ಸಮಸ್ಯೆಗಳ ಪರಿಹಾರದಲ್ಲಿ ಆಸಕ್ತಿ ವಹಿಸಿದವು. ಹಾಗೆಯೇ ಗುರುಸ್ಥಲದ ಮಠಗಳೂ ಕೂಡ ವೀರಶೈವ ಧರ್ಮ ಪ್ರಸಾರದಲ್ಲಿ, ಶೈಕ್ಷಣಿಕ ಪ್ರಗತಿಯಲ್ಲಿ ಹೆಚ್ಚು ಗಮನವನ್ನು ನೀಡಿದವು (ಸದಾಶಿವಯ್ಯ ಹೆಚ್.ಎಂ., ೧೯೫೯, ಪು.೧೫೨-೧೫೯). ಎಲ್ಲಾ ವಿವಿಧ ಮಠಗಳ ವ್ಯತ್ಯಾಸಗಳು ಕಡಿಮೆಯಾಗುತ್ತಾ ಬಂದು, ಇಂದು ಎಲ್ಲಾ ಮಠಗಳು ವಿದ್ಯಾ ಪ್ರಸಾರದಲ್ಲಿ ಹೆಚ್ಚು ಸ್ಪರ್ಧೆಯಲ್ಲಿ ನಿರತವಾಗಿವೆ.

ಬಸವ ತತ್ವ 'ಸಂಸ್ಕೃತ' ಶಿಕ್ಷಣದ ವಿರುದ್ಧ ಸಮರ ಸಾರಿತ್ತು. ಆದರೆ ವೀರಶೈವ ಮಠಗಳು ಮುಖ್ಯವಾಗಿ ವಿರಕ್ತ ಮಠಗಳು ಸಂಸ್ಕೃತ ಶಿಕ್ಷಣವನ್ನು ನೀಡಲು ಗಮನ ಹರಿಸಿದವು. ಇದಕ್ಕೆ ಪ್ರಮುಖ ಕಾರಣ ಸಂಸ್ಕೃತ ಶಿಕ್ಷಣದಲ್ಲಿ ಬ್ರಾಹ್ಮಣರ ಏಕಸ್ವಾಮ್ಯತೆಯನ್ನು ಮುರಿಯುವುದೇ ಆಗಿತ್ತು. ಶಿಕ್ಷಣ ನೀಡುವಲ್ಲಿ ವಿರಕ್ತ ಮಠಗಳಂತೆ, ಗುರುಸ್ಥಲದ ಮಠಗಳೂ ಮುಂದೆ ಬಂದವು. ವರ್ಣಾಶ್ರಮ ಧರ್ಮವನ್ನು ಕಿತ್ತೊಗೆದು ಎಲ್ಲಾ ಜಾತಿಯ ಮಕ್ಕಳಿಗೂ ಶಿಕ್ಷಣ ನೀಡಲು ವೀರಶೈವ ಮಠಗಳು ಸತ್ಸಂಕಲ್ಪ ಮಾಡಿದವು. ಇಂದು ಕನ್ನಡ ನಾಡಿನಲ್ಲಿ ಬಹುಸಂಖ್ಯಾ ಲಿಂಗಾಯತ ಮಠಗಳೂ, ಸಂಸ್ಥೆಗಳೂ ವಿದ್ಯಾ ಪ್ರಸಾರ ಕಾರ್ಯದಲ್ಲಿ ಭರದಿಂದ ಸೇವೆ ಸಲ್ಲಿಸುತ್ತಿವೆ. ನೂರಾರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಲಿವೆ. ಇದರಿಂದಾಗಿ ಎಲ್ಲಾ ಜಾತಿ-ವರ್ಗದವರು ಶಿಕ್ಷಣವನ್ನು ಪಡೆದು ಉನ್ನತ ಹುದ್ದೆಗಳನ್ನು ಹೊಂದುವಂತಾಗಿದೆ.

೧೮೮೩ ರಲ್ಲಿ ಧಾರವಾಡದಲ್ಲಿ ಪ್ರಪ್ರಥಮ ಶಿಕ್ಷಣ ಸಂಸ್ಥೆ 'ಲಿಂಗಾಯತರ ಶಿಕ್ಷಣ ಸಂಸ್ಥೆ' ಸ್ಥಾಪಿಸುವುದರ ಮೂಲಕ ಲಿಂಗಾಯತ ಪ್ರಬಲ ಜಾತಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿತು. ಈ ಶಿಕ್ಷಣ ಸಂಸ್ಥೆಯ ಪ್ರಮುಖ ಉದ್ದೇಶ ಪೂನಾ ಇಲ್ಲವೇ ಬಾಂಬೆಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ತೆರಳುವ ಲಿಂಗಾಯತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ನೀಡುವುದಾಗಿತ್ತು. ವಸಾಹತು ಕಾಲದಲ್ಲಿ ಬೆಳಗಾವಿ ಮತ್ತು ಧಾರವಾಡಗಳಲ್ಲಿ ಶಿಕ್ಷಣ ಸಂಸ್ಥೆಗಳು ಅಸ್ಥಿತ್ವದಲ್ಲಿರಲ್ಲಿಲ್ಲ. ಆದ್ದರಿಂದ ಬ್ರಿಟೀಷರು ಖಾಸಗಿಯವರಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ನೀಡಿದರು. ಆದ್ದರಿಂದ ೧೯೧೬ ರಲ್ಲಿ 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ' (KLES) ಯನ್ನು ಬೆಳಗಾವಿಯಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಪ್ರಮುಖ ಗುರಿ ಲಿಂಗಾಯತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದು ಹಾಗೂ ವಿದ್ಯಾರ್ಥಿ ವೇತನ ಒದಗಿಸುವುದು. ಆದರೆ ಜಾತಿ ಹೆಸರಿನಲ್ಲಿ

ಸಂಸ್ಥೆ ಸ್ಥಾಪಿಸಿದರೆ ಅನುದಾನವನ್ನು ನಿಲ್ಲಿಸಲಾಗುತ್ತದೆಂದು ಸರ್ಕಾರ ಸಾರ್ವಜನಿಕರ ಗಮನಕ್ಕೆ ತಂದಾಗ 'ಲಿಂಗಾಯತ' ಎಂಬ ಪದವನ್ನು ಕೈಬಿಟ್ಟು 'ಲಿಬರಲ್' ಪದವನ್ನು ಬಳಸಿತು. 'The substitution of liberal for Lingayat cleverly succeeds in preserving the identity of the society' ಎಂದಿದ್ದಾರೆ ಮದನ್ ಮತ್ತು ಹಾಲ್ಬರ್‌ರವರು (ಮದನ್ ಟಿ.ಎನ್/ ಬಿ.ಜಿ. ಹಾಲ್ಬರ್, ೧೯೭೨,ಪು.೧೩೩). ಆದರೆ ಹಣಕಾಸಿನ ನೆರವಿಲ್ಲದೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು ಅಸಾಧ್ಯವೆಂದು ಮನಗಂಡ ಈ ಸಂಸ್ಥೆಗಳು ಲಿಂಗಾಯತ ಮಠಗಳ ಬೆಂಬಲ ಕೋರಿದವು. ಶೈಕ್ಷಣಿಕ ಚಟುವಟಿಕೆಗಳ ಮಹತ್ವವನ್ನರಿತಿದ್ದ ಮಠಾಧೀಶರು ನೆರವು ನೀಡಲು ಸನ್ನದ್ಧರಾದರು. ಎಂ.ಎನ್.ಶ್ರೀನಿವಾಸ್ ಹೇಳುವಂತೆ ಇತರೆ ಜಾತಿಯವರಿಗೆ ಹೋಲಿಸಿದರೆ ಲಿಂಗಾಯತರು ಹೆಚ್ಚು 'Organised sect' ಆಗಿದ್ದರು. ಲಿಂಗಾಯತ ಮಠಗಳು ಇಂತಹ ಸಾಮಾಜಿಕ ಬದಲಾವಣೆಗೆ ಪೂರಕವಾಗಿ ಸ್ಪಂಧಿಸಿದವು–'The Lingayats a highly organized sect have shown much sensitivity to this new demand and Lingayat monasteries operate their own hostels, Schools and colleges (ಶ್ರೀನಿವಾಸ್ ಎಂ.ಎನ್., ೧೯೭೨, ಪು. ೧೪೦).

ಮೈಸೂರಿನಲ್ಲಿ ೧೯೦೫ ರಲ್ಲಿ 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಸ್ಥೆ' (MLEFA) ಯನ್ನು ಸ್ಥಾಪಿಸಲಾಯಿತು. ಲಿಂಗಾಯತ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ವಿದ್ಯಾರ್ಥಿ ವೇತನ ನೀಡಲು ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಹೆಚ್ಚು ಆಸಕ್ತಿ ವಹಿಸಿತು (ಪೌಟನ್ ಜೆ.ಪಿ., ೧೯೯೫, ಪು.೨೬೮–೨೬೯). ನಾಗರೀಕ ಸೇವಾ ನೌಕರಿಗಳಲ್ಲಿ ಲಿಂಗಾಯತರಿಗೆ ವಿನಾಯಿತಿಯನ್ನು ನೀಡಬೇಕೆಂದು ಸರ್ಕಾರದ ಮುಂದೆ ತಮ್ಮ ಬೇಡಿಕೆಯನ್ನಿಟ್ಟರು (ಮ್ಯಾನರ್ ಜೇಮ್ಸ್, ೧೯೭೭ ಪು. ೧೭೯). ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಿ, ೧೯೧೩ ರಲ್ಲಿ 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಸ್ಥೆ'ಗೆ ತಮ್ಮ ಪ್ರತಿನಿಧಿಗಳನ್ನು ಶಾಸನಸಭೆಗೆ ಕಳುಹಿಸುವಂತೆ ಸೂಚಿಸಿತು. ಈ ಪ್ರತಿನಿಧಿಗಳು ಲಿಂಗಾಯತರಿಗೆ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ವಿಶೇಷ ರಿಯಾಯಿತಿಗಳನ್ನು ನೀಡುವಂತೆ ತಮ್ಮ ಅಹವಾಲನ್ನು ಸರ್ಕಾರದ ಮುಂದಿಟ್ಟರು. ಆದರೆ ಇವರು ಜಾತಿ ಪ್ರತಿನಿಧಿಗಳಂತೆ ವಾದಗಳನ್ನು ಮಂಡಿಸುತ್ತಿದ್ದರಿಂದ ಸರ್ಕಾರ ೧೯೨೩ ರಲ್ಲಿ 'ವಿಶೇಷ ಪ್ರತಿನಿಧಿ' ಗಳನ್ನು ಕಳುಹಿಸುವ ಅಗತ್ಯವಿಲ್ಲವೆಂದು ಸೂಚಿಸಿತು. ಆದರೆ 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಸ್ಥೆ'ಯು ಸರ್ಕಾರದ ಈ ಕ್ರಮವನ್ನು ಬಲವಾಗಿ ವಿರೋಧಿಸಿತು. ೧೯೨೭ ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಲಿಂಗಾಯತರು ಶಾಸನಸಭೆಗೆ ಆಯ್ಕೆಗೊಂಡು, ಲಿಂಗಾಯತ ಸಮುದಾಯಕ್ಕುಂಟಾದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ

ಮಾಡಿಕೊಡುವಲ್ಲಿ ಹಾಗೂ ಸಂಪನ್ಮೂಲಗಳನ್ನು ಪಡೆಯುವಲ್ಲಿ ಸಫಲರಾದರು (ಮ್ಯಾನರ್ ಜೇಮ್ಸ್, ೧೯೭೭, ಪು.೪೫, ೧೮೧-೧೮೨).

ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಲಿಂಗಾಯತರು ಪ್ರಬಲರಾಗಲು 'ವಿರಕ್ತ ಮಠಗಳು' ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬೆಂಬಲಿಸಿದವು. ಕಾಲಾನಂತರ ಗುರುಮಠಗಳು ಇದೇ ಹಾದಿಯನ್ನನುಸರಿಸಿದವು. ಸಿರಿಗೆರೆಯ ತರಳುಬಾಳು ಮಠ ಚಿಕ್ಕಮಗಳೂರಿನಲ್ಲಿ (೧೯೧೩) ಮತ್ತು ದಾವಣಗೆರೆಯಲ್ಲಿ (೧೯೨೩) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿತು. ಇದೇ ರೀತಿ ಸುತ್ತೂರು ಬೃಹನ್ಮಠವು ಬಾಳೆಹೊನ್ನೂರು ಸಂಪ್ರದಾಯಕ್ಕೆ ಸೇರಿದ್ದರೂ ಕೂಡ ತನ್ನನ್ನು ತಾನು ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ (ಪೌಟನ್ ಜೆ.ಪಿ., ೧೯೯೫, ಪು.೨೬೮-೨೬೯). ಗ್ರಾಮಾಂತರ ಪ್ರದೇಶಗಳ ಬಡಮಕ್ಕಳಿಗೆ ಶಿಕ್ಷಣ ದೊರೆಯಬೇಕೆಂಬ ಹೆಬ್ಬಯಕೆಯಿಂದ ಜಾತಿ, ಮತ, ಲಿಂಗಭೇದವಿಲ್ಲದೇ ಜ್ಞಾನಾನ್ನ, ದಾಸೋಹಗಳ ಚಕ್ಷುಗಳನ್ನಿತ್ತು, ಶಿಕ್ಷಣದಿಂದ ಜೀವನ ಮಾರ್ಗ ರೂಪಿಸಿಕೊಳ್ಳಲು ಎಡೆ ನೀಡಿದ್ದು ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ ಇತಿಹಾಸದಲ್ಲಿಯೇ, ಅದರಲ್ಲೂ ಲಿಂಗಾಯತ ಮಠಗಳ ಜ್ಞಾನ ದಾಸೋಹ, ಅನ್ನ ದಾಸೋಹ ವ್ಯವಸ್ಥೆಯಲ್ಲಿಯೇ ಉದಾತ್ತ ಆಚರಣೆಯು ಅನುಪಮ ಸೇವೆಯಾಗಿದೆ. ಸಂಸ್ಕೃತ ಶಿಕ್ಷಣದ ಮೇಲಿನ ಬ್ರಾಹ್ಮಣರ ಏಕಸ್ವಾಮ್ಯತೆಯನ್ನು ಮುರಿಯುವ ಉದ್ದೇಶವನ್ನು ಮಠಾಧೀಶರು ಹೊಂದಿದ್ದರು. ಹಾಗೆಯೇ ಮಠಗಳು ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ಜೋತು ಬೀಳದೆ, ನೂತನ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡಿದ್ದರಿಂದ ಇದು 'ಕ್ರಾಂತಿಕಾರಿ ಸ್ಥಿತ್ಯಂತರ'ವೇ ಆಗಿತ್ತು. ಲಿಂಗಾಯತ ಮಠಗಳು ಕೇವಲ ಲಿಂಗಾಯತರಿಗಷ್ಟೆ ಶಿಕ್ಷಣವನ್ನು ನೀಡದೆ, ಕೆಳಸ್ಥರದವರು ಈ ಅನುಕೂಲ ಪಡೆಯುವಂತೆ ಅವಕಾಶ ಮಾಡಿಕೊಟ್ಟಿತು. ಶಿಕ್ಷಣ ಅವರೂ ಪಡೆಯುವಂತಾಗಲೆಂದು ಬಯಸಿ ಜನಪರ ನಿಲುವುಗಳನ್ನು ತೆಗೆದುಕೊಂಡಿತು. ವಸಾಹತು ಕಾಲದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ, ಬೆಳೆಸಿ, ಘನ ಸರ್ಕಾರಕ್ಕೆ ಮಾದರಿ ಆದದ್ದು ಇತಿಹಾಸವೇ ಆಗಿದೆ.

ಲಿಂಗಾಯತರು ಸಂಸ್ಕೃತವನ್ನು ಕಲಿಯಲೆಂದು ಅನೇಕ ವೀರಶೈವ ಮಠಗಳು 'ಸಂಸ್ಕೃತ' ಪಾಠಶಾಲೆಗಳನ್ನು ತೆರೆದವು. ಹೀಗೆ ಆರಂಭಗೊಂಡ ಪ್ರಥಮ ಶಾಲೆಯೆಂದರೆ ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ಸಂಬಂಧಿಸಿದ 'ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಪಾಠಶಾಲೆ'. ೧೯೦೧ ರಲ್ಲಿ ಆರಂಭಗೊಂಡ ಈ ಸಂಸ್ಕೃತ ಶಾಲೆಯಲ್ಲಿ ಅಧ್ಯಯನ ನಡೆಸುತ್ತಿದ್ದ ಲಿಂಗಾಯತ ವಿದ್ಯಾರ್ಥಿಗಳಿಗೆ ಉಚಿತ ವಸತಿ ಹಾಗೂ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಯಿತು. ೧೯೨೫ ರಲ್ಲಿ ಈ ಶಾಲೆಯನ್ನು

ಮಹಾವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಲಾಯಿತು. ಚಿತ್ರದುರ್ಗದ ಪ್ರಧಾನ ವಿರಕ್ತ ಮಠದ ಮಠಾಧೀಶರ ಆಶ್ರಯದಲ್ಲಿ ಮತ್ತೊಂದು ಮೈಲಿಗಲ್ಲನ್ನು 'ವಿರಕ್ತ ಮಠ'ಗಳು ತಲುಪಿದವು. ೧೯೦೭ ರಲ್ಲಿ 'ವೀರಶೈವ ವಿದ್ಯಾವರ್ಧಕ ನಿಧಿ ಸಂಘ' ವನ್ನು ದಾವಣಗೆರೆಯಲ್ಲಿ ಈ ಪ್ರಧಾನ ಮಠ ಸ್ಥಾಪಿಸಿತು. ದಾವಣಗೆರೆಯ ಲಿಂಗಾಯತ ವ್ಯಾಪಾರಿಗಳು ಸಂಘದ ಪ್ರಾರಂಭದ ಬಂಡವಾಳಕ್ಕೆ ಕಾಣಿಕೆ ಸಲ್ಲಿಸಿದರಲ್ಲದೆ, ಅಂಗಡಿಗಳಿಗೆ ಮಾರಾಟಕ್ಕೆ ಬರುತ್ತಿದ್ದ ಪ್ರತಿ ಚೀಲದಿಂದ ಒಂದು ಹಿಡಿಕಾಳನ್ನು ಮುಡಿಪಿಟ್ಟು ಅದರಿಂದ ಬಂದ ಹಣವನ್ನು ಸಂಘಕ್ಕೆ ನೀಡಿ ಲಿಂಗಾಯತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ವಿದ್ಯಾರ್ಥಿಗಳಿಗೆ ವಸತಿ ಮತ್ತು ದಾಸೋಹ ಸೌಲಭ್ಯಕ್ಕಾಗಿ ಈ ನಿಧಿಯನ್ನು ಬಳಸಲಾಗುತ್ತಿತ್ತು (ಷೌಟನ್ ಜೆ.ಪಿ., ೧೯೯೫, ಪು.೨೬೮-೨೬೯). ತುಮಕೂರು ಬಳಿಯ ಶ್ರೀ ಸಿದ್ಧಗಂಗಾ ಮಠವು ೧೯೧೭ ರಲ್ಲಿ ವೇದ ಪಾಠಶಾಲೆಯನ್ನು ಪ್ರಾರಂಭಿಸಿತು. ಶ್ರೀ ಅಟವಿ ಸ್ವಾಮಿಗಳಿಂದ ಪ್ರಾರಂಭವಾದ ವೇದಾಧ್ಯಯನ, ಶ್ರೀ ಉದ್ದಾನ ಶಿವಯೋಗಿಗಳಿಂದ ೧೯೧೭ ರಲ್ಲಿ ಅಧಿಕೃತವಾಗಿ ಸ್ಥಾಪಿಸಲ್ಪಟ್ಟಿತು. ೧೯೧೭ ರಲ್ಲಿ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದ ಕಾಲದಿಂದಲೇ ಹೊರಟ ಶಿಕ್ಷಣ ಪ್ರಭೆ ಕರ್ನಾಟಕದಾದ್ಯಂತ ಹರಿಯುತ್ತಿದೆ. ೧೯೩೭ ರಲ್ಲಿ 'ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು' ಎಂದು ಮನ್ನಣೆ ಪಡೆಯಿತು. ಇಪ್ಪತ್ತು ವಿದ್ಯಾರ್ಥಿಗಳೊಂದಿಗೆ ಈ 'ಸಂಸ್ಕೃತ ಶಾಲೆ'ಯನ್ನು ಪ್ರಾರಂಭಿಸಲಾಯಿತು (ಶಿವರುದ್ರಪ್ಪ ಜಿ., ೧೯೭೪, ಪು. ೨೬೦-೨೬೧).

ಸಮಾಜ ಸೇವೆ ಮಾಡಬೇಕೆಂಬ ಹಂಬಲದಿಂದ ಲೌಕಿಕ ಆಕಾಂಕ್ಷೆಗಳಿಗೊಳಪಡದೆ, ಘನತೆ, ಗೌರವಗಳಿಗೆ ಆಸೆ ಪಡದೆ ಕೇವಲ ಜನತೆಯ ಕಲ್ಯಾಣ ಮಾನವ ಧರ್ಮದ ಏಳಿಗೆ, ಜಗತ್ತಿನ ಉದ್ಧಾರ ಇವುಗಳನ್ನೇ ಪರಮ ಗುರಿಯಾಗಿಟ್ಟುಕೊಂಡು ಮಠಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಲಿಂಗಾಯತ ಸಮುದಾಯವು ಧರ್ಮದ ಚಟುವಟಿಕೆಗಳಿಗೆ ಅಡೆತಡೆಗಳುಂಟಾಗದೆ ಸುಗಮವಾಗಿ ನಡೆಸಿಕೊಂಡು ಹೋಗುವ ಅಧಿಕಾರಗಳನ್ನು ಮಠಗಳಿಗೆ ನೀಡಲಾಯಿತು. ಅದರ ಫಲವಾಗಿ ಕನ್ನಡ ನಾಡಿನ ಲಿಂಗಾಯತ ಮಠಗಳು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕೇಂದ್ರ ಸ್ಥಾನಗಳಾಗಿ ಪರಿಣಮಿಸಿವೆ. ಹೀಗೆ ಶಿಕ್ಷಣ ಕ್ಷೇತ್ರ ಪ್ರವೇಶಿಸಿದ ಮಠಗಳಲ್ಲಿ ತುಮಕೂರು ಜಿಲ್ಲೆಯ ಕ್ಯಾತ್ಸಂದ್ರದಲ್ಲಿರುವ ಶ್ರೀ ಸಿದ್ಧಗಂಗಾ ಮಠವೂ ಒಂದು. ಕೇವಲ ನಗರ ಪ್ರದೇಶಗಳಲ್ಲಿ ಶಾಲಾ-ಕಾಲೇಜುಗಳನ್ನು ತೆರೆಯದೆ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿ, ಮಠ ಧಾರ್ಮಿಕ ಕೇಂದ್ರ ಮಾತ್ರವೇ ಅಲ್ಲ, ಅದು ಸಾಮಾಜಿಕ ಸಂಸ್ಥೆಯೂ ಕೂಡ ಹೌದು ಎಂಬುದನ್ನು ಸಾಬೀತುಪಡಿಸಿದೆ. ಒಟ್ಟು ೧೨೨ ಶಾಲಾ-ಕಾಲೇಜುಗಳನ್ನು ಇಂದು ಕರ್ನಾಟಕದಾದ್ಯಂತ ಸ್ಥಾಪಿಸಿದೆ.

೧೯೧೭ ರಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಕೃತ ಪಾಠಶಾಲೆಯ ಮೂಲಕ ತುಮಕೂರು ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಡಿಗಲ್ಲನ್ನು ಹಾಕಿದ ಆಗಿನ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಉದ್ದಾನ ಸ್ವಾಮಿಗಳು, ಹಾಗೆಯೇ ಅದಕ್ಕೆ ಪೂರಕವಾಗಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯ, ಶ್ರೀಮಠದ ಮುಂದಿನ ಶೈಕ್ಷಣಿಕ ಸಾಧನೆಯ ಬುನಾದಿಯಾಯಿತು. ೧೯೪೧ ರಲ್ಲಿ ಶ್ರೀ ಮಠದ ಮಠಾಧ್ಯಕ್ಷರಾದ ಇಂದಿನ ಶಿವಕುಮಾರಸ್ವಾಮಿಗಳ ದೂರದೃಷ್ಟಿ ಹಾಗೂ ವಿದ್ವತ್ ಪ್ರತಿಭೆಯ ಪರಿಣಾಮವಾಗಿ ಅವರ ತ್ರಿವಿಧ ದಾಸೋಹದಲ್ಲಿ ಜ್ಞಾನ ದಾಸೋಹಕ್ಕೆ ಹೊಸ ಆಯಾಮ ದೊರೆಯಿತು. ೧೯೧೭ ರಲ್ಲಿ ಪ್ರಾರಂಭವಾದ ಸಂಸ್ಕೃತ ಶಾಲೆಯನ್ನು ೧೯೩೭ ರಂದು ಸಂಸ್ಕೃತ ಕಾಲೇಜನ್ನಾಗಿಸುವುದರ ಮೂಲಕ ಇಡೀ ರಾಷ್ಟ್ರದಲ್ಲಿಯೇ ಬೃಹತ್ ಸಂಸ್ಥೆಯನ್ನಾಗಿಸಿದ ಕೀರ್ತಿ ಶಿವಕುಮಾರಸ್ವಾಮೀಜಿಯವರಿಗೆ ಸಲ್ಲುತ್ತದೆ. ೧೯೪೧ ರಲ್ಲಿ ಸಿದ್ಧಗಂಗಾ ಮಠದ ಪೀಠವನ್ನಲಂಕರಿಸಿದ ಶ್ರೀ ಶಿವಕುಮಾರಸ್ವಾಮೀಜಿ ಶಕ್ತಿಯಾಗಿದ್ದಾರೆ. ಅತ್ಯಂತ ದೊಡ್ಡ 'ಶಿಕ್ಷಣ ಪ್ರಸಾರಕ' ಎಂದು ಇವರನ್ನು ಗೌರವಿಸಲಾಗಿದೆ. ಫೆಬ್ರವರಿ ೩೦, ೧೯೮೮ ರಂದು ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಮಠದ ಉತ್ತರಾಧಿಕಾರಿಯಾಗಿ ವಿದ್ಯುಕ್ತವಾಗಿ ನೇಮಕಗೊಂಡು ಸೇವಾಪಥದಲ್ಲಿ ಮುಂದುವರಿಯುತ್ತಿದ್ದಾರೆ (ಶ್ರೀ ಸಿದ್ಧಗಂಗಾಕ್ಷೇತ್ರ, ೨೦೦೪, ಪು.೧-೭). ಗ್ರಾಮೋದ್ಧಾರದ ಸಾಮಾಜಿಕ ಕಲ್ಪನೆಯನ್ನು ಅಕ್ಷರಶಃ ಜಾರಿಗೊಳಿಸುತ್ತಿರುವ ಶ್ರೀ ಸಿದ್ಧಗಂಗಾ ಮಠ ಗ್ರಾಮಗಳ ಅಭಿವೃದ್ಧಿಯಾಗಬೇಕಾದರೆ ಎಲ್ಲರೂ ಸಾಕ್ಷರರಾಗಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ಮಕ್ಕಳ ಅಕ್ಷರ ಜ್ಞಾನಕ್ಕೆ ಆದ್ಯತೆ ನೀಡಿತು. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಕಲಿಯುವ ಆಸಕ್ತ ಮಕ್ಕಳ ನೆರವಿಗೆ ಮಠ ನಿಂತಿತು.

೧೯೬೦ ರ (ನಂ.೧೭) 'ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್' ಪ್ರಕಾರ ಜುಲೈ ೧೭, ೧೯೬೩ ರಂದು 'ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆ' ಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಗೆ ಅನೇಕ ಗಣ್ಯರ ಉದಾರವಾದ ಕೊಡುಗೆ ಬಹುಮುಖ್ಯ ಕಾರಣವಾಗಿದೆ. ಈ ಸಂಸ್ಥೆಯ ಬೆಳವಣಿಗೆಯ ಹಿಂದೆ ಜಿ.ಎಂ. ಸಿದ್ಧರಾಮಯ್ಯ, ಕೆಂಪಹೊನ್ನಯ್ಯ, ಎಂ.ವಿ. ಶಿವಪ್ಪ, ಎ.ಕೆ. ಪಾರ್ಶ್ವನಾಥ, ಮಲ್ಲಿಕಾರ್ಜುನಯ್ಯ, ರೇವಣಾರಾಧ್ಯ, ನಂಜುಂಡಯ್ಯ, ಬಸವಯ್ಯ, ಅನಂತರಾಮಶೆಟ್ಟಿ, ಮರಿಸ್ವಾಮಪ್ಪ ಮೊದಲಾದವರನ್ನು ಕಾಣಬಹುದಾಗಿದೆ. ಸಿದ್ಧಗಂಗಾ ಶಿಕ್ಷಣ ಸಂಸ್ಥೆ ತನ್ನ ಅಭಿವೃದ್ಧಿಗಾಗಿ ೧೫ ಜನರಿರುವ ಆಡಳಿತ ಮಂಡಳಿಯನ್ನು ಹೊಂದಿದೆ (ಆನ್ಯುಯಲ್ ರಿಪೋರ್ಟ್ ಮತ್ತು ಅಕೌಂಟ್ಸ್, ೨೦೦೫-೦೬, ಪು.೧).

ಶ್ರೀ ಸಿದ್ಧಗಂಗಾ ಮಠದ ಆಡಳಿತ ಮಂಡಳಿಗೆ ಶ್ರೀ ಶಿವಕುಮಾರಸ್ವಾಮಿಜೀಯವರೇ ಅಧ್ಯಕ್ಷರಾಗಿದ್ದಾರೆ. ೬ ಜನ ನಿರ್ದೇಶಕರನ್ನು ಪೋಷಕರೆಂದು (Patrons) ನೇಮಕ ಮಾಡಿಕೊಳ್ಳಲಾಗಿದೆ. ೮೧ ಜನ ಆಜೀವ ಸದಸ್ಯರಿದ್ದಾರೆ. ಇದುವರೆವಿಗೂ ೩೪ ಸಾರ್ವತ್ರಿಕ ಸಭೆ ನಡೆದಿದ್ದು, ಈ ವಾರ್ಷಿಕ ಸಭೆಯಲ್ಲಿ ಶಾಲಾ-ಕಾಲೇಜುಗಳ ಆದಾಯ-ವೆಚ್ಚಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗೆ ಮಠ ಸಾಕಷ್ಟು ಬಂಡವಾಳವನ್ನು ತೊಡಗಿಸಿದೆ (ಆನ್ಯುಯಲ್ ರಿಪೋರ್ಟ್ ಮತ್ತು ಅಕೌಂಟ್ಸ್, ೨೦೦೫-೦೬, ಪು.೧-೨).

ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ಶಿಕ್ಷಣ ಎನ್ನುವುದು ಒಂದು ಮುಖ್ಯವಾದ ಆದಾನವಾಗಿದ್ದು, ಶಿಕ್ಷಣ ಕೇವಲ ಉಳ್ಳವರಿಗೆ ಮಾತ್ರ ದೊರೆಯುವುದಲ್ಲ, ಇತರರು ಶಿಕ್ಷಣವನ್ನು ಪಡೆಯುವಂತಾಗಬೇಕು. ಹಾಗಾಗಿ ವರ್ಗೀಕೃತ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರುವುದೇ ಸಮಾನ ಅವಕಾಶಗಳು. ಈಗಾಲಿಟೇರಿಯನ್ ಸಮಾಜವನ್ನು ಸೃಷ್ಟಿಸುವುದೇ ಶ್ರೀ ಸಿದ್ಧಗಂಗಾ ಮಠದ ಉದ್ದೇಶ. ಒಟ್ಟಿನಲ್ಲಿ ಹೇಳುವುದಾದರೆ, ವೀರಶೈವ ಧರ್ಮದಲ್ಲಿ ಮಠಗಳ ವ್ಯವಸ್ಥೆಯು ಮಹತ್ವಪೂರ್ಣವಾದುದು. ಜನ ಜೀವನದ ಸಮಸ್ತ ಭಾಗಗಳ ಮೇಲೂ ವಿವಿಧ ರೀತಿಯಲ್ಲಿ ಮಠಗಳು ತಮ್ಮ ಪ್ರಭಾವವನ್ನು ಬೀರುತ್ತಾ ಬಂದಿವೆ. ಕಾಲ, ಸಂದರ್ಭಕ್ಕನುಗುಣವಾಗಿ ಮಠಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದು ಜನರ ಔನ್ನತ್ಯದ ಕಡೆಗೆ ದೃಷ್ಟಿಯಿಟ್ಟು, ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿವೆ.

ಲಿಂಗಾಯತರು ತಮ್ಮನ್ನು ತಾವು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಮುಖ್ಯ ಕಾರಣ ಬ್ರಾಹ್ಮಣ ಸಮುದಾಯದ ಏಕಸ್ವಾಮ್ಯತೆಯನ್ನು ಕೊನೆಗಾಣಿಸುವುದಾಗಿತ್ತು. ಲಿಂಗಾಯತ ಸಮುದಾಯದಲ್ಲಿ 'ವಿರಕ್ತ ಮಠ'ಗಳು ಹೆಚ್ಚು ಶಿಕ್ಷಣ ಪ್ರಸಾರ ಕೈಗೊಂಡವು. ಅಂತಹ ವಿರಕ್ತ ಮಠವೇ ಶ್ರೀ ಸಿದ್ಧಗಂಗಾ ಮಠ. ಈ ಬೃಹತ್ ಸಂಸ್ಥೆಗಳ ಬೆಳವಣಿಗೆಯ ಹಿಂದೆ ಶ್ರೀ ಶಿವಕುಮಾರಸ್ವಾಮೀಜಿಯವರ ಪಾತ್ರ ಗಣನೀಯವಾದದ್ದು, ವರ್ಣಾಶ್ರಮ ಧರ್ಮವನ್ನು ಕಿತ್ತೊಗೆದು ಎಲ್ಲಾ ಜಾತಿಯ ಮಕ್ಕಳಿಗೂ ಶಿಕ್ಷಣ ನೀಡಲು ಮಠ ಸತ್ಸಂಕಲ್ಪ ಮಾಡಿತು.

೨.೬ ಅಧ್ಯಯನಗಳ ಸಮೀಕ್ಷೆ

ಪ್ರತಿಯೊಬ್ಬರು ಹುಟ್ಟಿನಿಂದಲೇ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಮೈಗೂಡಿಸಿ ಕೊಂಡಿರುತ್ತಾರೆ. ಶಿಕ್ಷಣ ಹಲವಾರು ಮೂಲಗಳಿಂದ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಸಫಲಗೊಳಿಸಲು ಮತ್ತು ಆಚರಣೆಗೆ ತರುವುದು ಸಾಕಷ್ಟು ಸಂಭವನೀಯವಾದದ್ದು. ಆದರೂ ಎಲ್ಲಾ ಪ್ರಾಂತ್ಯಗಳಲ್ಲೂ ಶಿಕ್ಷಣವನ್ನು ಸಮನಾಗಿ ಹರಡಲಾಗಿದೆಯೇ? ಸ್ತ್ರೀ-ಪುರುಷರು ಶಿಕ್ಷಣವನ್ನು ಸಮನಾಗಿ ಪಡೆಯುತ್ತಿದ್ದಾರೆಯೇ ? ಶಿಕ್ಷಣವನ್ನು ಪಡೆದ ನಂತರ ಎಲ್ಲರು ಸಮಾನವಾಗಿ ಉದ್ಯೋಗಾವಕಾಶಗಳನ್ನು ಪಡೆಯುತ್ತಿದ್ದಾರೆಯೇ ? ಶಿಕ್ಷಣದ ಮೇಲೆ ಎಷ್ಟು ವೆಚ್ಚವನ್ನು ಕೈಗೊಳ್ಳಬೇಕು ? ಇಂತಹ ವೆಚ್ಚಗಳನ್ನು ಯಾರು ಭರಿಸಬೇಕು ? ಆರ್ಥಿಕತೆಯಲ್ಲಿ ಶಿಕ್ಷಣವನ್ನು ಹೇಗೆ ಸಮ್ಮಿಲನಗೊಳಿಸಬೇಕು? ಶ್ರಮವನ್ನು ಭಿನ್ನವಾಗಿಸುವಲ್ಲಿ ಶಿಕ್ಷಣ ಒಂದು ನಿಯೋಗಿಯೇ ? ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವೆಷ್ಟು ? ಶಿಕ್ಷಕರ-ವಿದ್ಯಾರ್ಥಿಗಳ ಅನುಪಾತವೆಷ್ಟು ? ಹೀಗೆ ಶಿಕ್ಷಣ ಕ್ಷೇತ್ರದಲ್ಲಿ ಕಾಣಿಸಿಕೊಂಡ ಇಂತಹ ಹಲವಾರು ಪ್ರಶ್ನೆಗಳಿಗೆ ಭಾರತದಲ್ಲಿ ಹಲವಾರು ಅಧ್ಯಯನಗಳನ್ನು ನಡೆಸಲಾಗಿದೆ. ಶ್ಲಟ್ಜ್ (Vicious Circle in Education), ಕಾರ್ನಿಕ್ (Gujarat study), ಜಾರ್ಜ್ (Tamilnadu study) ಹಾಗೂ ಸಾಲುಂಕೆ, ಪಂಚಮುಖಿ, ಶ್ರೀ ವಾಸ್ತವ, ಗುಪ್ತಾ ಮೊದಲಾದವರ ಅಧ್ಯಯನಗಳು ಮಕ್ಕಳು ಶಾಲೆ ಬಿಡಲು ಕಾರಣಗಳನ್ನು ಹುಡುಕುವುದಾಗಿದೆ. ಈ ಅಧ್ಯಯನಗಳು ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದ ಅಧ್ಯಯನಗಳೆ ಆಗಿವೆ.

ಕರ್ನಾಟಕದಲ್ಲಿಯೂ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಕುರಿತು ಅನೇಕ ಅಧ್ಯಯನಗಳು ನಡೆದಿವೆ. ವೀರಶೈವ ಮಠಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಲು ಕಾರಣಗಳೇನೆಂಬುದನ್ನು ಡಾ. ಜಿ. ಶಿವರುದ್ರಪ್ಪನವರು, Contributions of Veerashaiva Mathas to the Development of Education in Karnataka ದಲ್ಲಿ ಐತಿಹಾಸಿಕವಾಗಿ ಅಧ್ಯಯನ ನಡೆಸಿದ್ದಾರೆ. ಡಾ. ಹೆಚ್.ಎಂ. ಸದಾಶಿವಯ್ಯನವರು 'A comparative study of two Veerashaiva Monasteries' ನಲ್ಲಿ ಚಿತ್ರದುರ್ಗದ ಬೃಹನ್ಮಠ ಮತ್ತು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಅಧ್ಯಯನವನ್ನು ಕೈಗೊಂಡಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ಅಂಶಗಳಿಗೆ ಒತ್ತು ನೀಡಿರುವರು. ಶ್ರೀ ಸಿದ್ಧಗಂಗಾ ಮಠದ ಆದಾಯದ ಮೂಲಗಳು ಯಾವುವು? ಉಚಿತ ವಸತಿ ನಿಲಯದಲ್ಲಿ ಯಾವ ಯಾವ ಜಾತಿಗೆ ಸೇರಿದ ವಿದ್ಯಾರ್ಥಿಗಳಿರುವರು? ಒಟ್ಟು ಎಷ್ಟು ಶಾಲಾ-ಕಾಲೇಜುಗಳನ್ನು ನಡೆಸುತ್ತಿವೆ ಎಂಬುದರ ಬಗ್ಗೆ ಸೂಕ್ಷ್ಮ ಚಿತ್ರಣವನ್ನು ತಮ್ಮ ಅಧ್ಯಯನದಲ್ಲಿ ನೀಡಿದ್ದಾರೆ.

Philanthropy ಗುರಿಯನ್ನಿಟ್ಟುಕೊಂಡು ಶಿಕ್ಷಣ ಪ್ರವೇಶಿಸಿದ ಮಠಗಳು ಸಾಮಾಜಿಕ ಬದಲಾವಣೆಗೆ ಸ್ಪಂದಿಸಿ, ತಾಂತ್ರಿಕ ಶಿಕ್ಷಣಗಳನ್ನು ನೀಡಲು ಮುಂದೆ ಬಂದು ಹೇಗೆ Profit hunger ಆದವು ಎಂಬುದನ್ನು ರೇಖಾ ಕೌಲ್‌ರವರು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ತಾಂತ್ರಿಕ ಶಿಕ್ಷಣವನ್ನು ತಮ್ಮ ಅಧ್ಯಯನದಲ್ಲಿ ಕೇಂದ್ರ ಬಿಂದುವಾಗಿಟ್ಟು 'Caste, Class and Education' ಕೃತಿಯಲ್ಲಿ ಖಾಸಗಿ ಸಂಸ್ಥೆಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಸ್ವೀಕರಿಸುವ 'ಕ್ಯಾಪಿಟೇಷನ್ ಫೀ'ಗೆ ಪ್ರಾಶಸ್ತ್ಯ ನೀಡಿದ್ದಾರೆ. ಲೋಕಕಲ್ಯಾಣಕ್ಕಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದ ಮಠಗಳು ಇಂದು ತಾಂತ್ರಿಕ ಶಿಕ್ಷಣ ಕೋರ್ಸ್‌ಗಳನ್ನು ತೆರೆದು ಲಾಭದ ಕಡೆಗೆ ಗಮನ ಹರಿಸುತ್ತಿವೆ ಎಂಬುದನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. ಆದರೆ ಧಾರ್ಮಿಕ ಸಂಸ್ಥೆಗಳಾದ ವೀರಶೈವ ಮಠಗಳು ಸ್ಥಾಪಿಸಲ್ಪಟ್ಟಿರುವ ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದೇ ಇಲ್ಲವೆಂದು ಹೇಳಬಹುದು. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ತನ್ನ ಸಾಮಾಜಿಕ ಆಯಾಮಗಳನ್ನು ಹೇಗೆ ವಿಸ್ತರಿಸಿಕೊಂಡಿದೆ ಎಂಬುದನ್ನು ಅಧ್ಯಯನ ಮಾಡುವುದೇ ಮುಖ್ಯವಾದದ್ದು. ಅದರಲ್ಲೂ ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಪ್ರೌಢಶಾಲಾ ಅಧ್ಯಯನ ಇನ್ನೂ ಪ್ರಮುಖವಾದದ್ದು. ಶ್ರೀ ಸಿದ್ಧಗಂಗಾಮಠ ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಿಸುತ್ತಿರುವ ಜವಾಬ್ದಾರಿಯುತ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಮಠ ಜಾತ್ಯತೀತವಾಗಿ ಜ್ಞಾನದಾಸೋಹ ಮತ್ತು ಅನ್ನದಾಸೋಹ ಕಾಯಕದಲ್ಲಿ ತೊಡಗಿಕೊಂಡಿದ್ದು, ಸಾಮಾಜಿಕ ಹೊಣೆಯನ್ನು ಹೊತ್ತಿದೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀ ಸಿದ್ಧಗಂಗಾ ಮಠದ ಸಾಮಾಜಿಕ ಆಯಾಮಗಳನ್ನು ಈ ಮೂಲಕ ಅಧ್ಯಯನ ಮಾಡಲಾಗುತ್ತದೆ.

ಕೊನೆಯ ಮಾತು

ಐತಿಹಾಸಿಕವಾಗಿ ಮತ್ತು ಸಾಮಾಜಿಕವಾಗಿ ಕಂಡುಬಂದ ಬದಲಾವಣೆಗಳಿಂದಾಗಿ ಲಿಂಗಾಯತ ಮಠಗಳು ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಶಿಕ್ಷಣ ಕ್ಷೇತ್ರದ ಚಟುವಟಿಕೆಗಳು ವಿಸ್ತರಣೆ ಹೊಂದಿದವು. ಶಿಕ್ಷಣ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು ಹೊಂದಿದ್ದ ಬ್ರಾಹ್ಮಣರಿಗೆ ಸೂಕ್ತ ಉತ್ತರ ನೀಡಲು ಲಿಂಗಾಯತ ಮಠಗಳು ಸಜ್ಜಾದವು. ಜಾತಿ ಮಡಿವಂತಿಕೆಯಿಂದಿದ್ದ ಸಮಾಜವನ್ನು, ಶಿಕ್ಷಣ ನೀಡುವುದರ ಮೂಲಕ ಜಾತ್ಯತೀತ ಸಮಾಜವನ್ನು ಸ್ಥಾಪಿಸ ಹೊರಟವು. ಹಾಗಾಗಿ ಕನ್ನಡ ನಾಡಿನ ಲಿಂಗಾಯತ ಮಠಗಳು ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರಗಳಾಗಿವೆ. ವಿರಕ್ತ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿವೆ.

ಗ್ರಂಥಋಣ

೧. **ಗೋಖಲೆ ಬಿ.ಜಿ.,** *ಏನ್ಷಿಯಂಟ್ ಇಂಡಿಯಾ, ಹಿಸ್ಟರಿ ಅಂಡ್ ಕಲ್ಚರ್,* ಏಷಿಯಾ ಪಬ್ಲಿಷಿಂಗ್ ಹೌಸ್, ಬಾಂಬೆ, ೧೯೫೨.

೨. **ಗ್ರೋವರ್ ಬಿ.ಎಲ್,** *ಎ ನ್ಯೂ ಲುಕ್ ಆನ್ ಮಾಡ್ರನ್ ಹಿಸ್ಟರಿ,* ಪಿ.ಎಸ್. ಚಾಂದ್ ಅಂಡ್ ಕಂಪನಿ ಲಿಮಿಟೆಡ್, ನ್ಯೂ ಡೆಲ್ಲಿ, ೧೯೮೩.

೩. **ಕಾಮತ್ ಎ.ಆರ್.,** ಏಜುಕೇಷನ್ ಅಂಡ್ ಸೋಶಿಯಲ್ ಚೇಂಜ್, *ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* ೩೧ ಜುಲೈ ೧೯೮೨. ಪು. ೧೨೪೩.

೪. **ಕುಪ್ಪುಸ್ವಾಮಿ ಬಿ.,** ಸೋಶಿಯಲ್ ಚೇಂಜ್ ಇನ್ ಇಂಡಿಯಾ, ವಿಕಾಸ್ ಪಬ್ಲಿಷಿಂಗ್ ಹೌಸ್ ಪ್ರೈ. ಲಿ., ನ್ಯೂ ಡೆಲ್ಲಿ, ೧೯೭೨ .

೫. **ಲೆಲ್ಹಾ ಡಶ್ಕಿನ್,** ಬ್ಯಾಕ್‌ವರ್ಡ್ ಕ್ಲಾಸ್ ಬೆನಿಫಿಟ್ಸ್ ಅಂಡ್ ಸೋಶಿಯಲ್ ಕ್ಲಾಸ್ ಇನ್ ಇಂಡಿಯಾ, *ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* ೭ ಏಪ್ರಿಲ್, ೧೯೭೯.

೬. **ಮದನ್ ಟಿ.ಎನ್/ ಬಿ.ಜಿ. ಹಾಲ್ಬರ್,** ಕ್ಯಾಸ್ಟ್ ಅಂಡ್ ಕಮ್ಯುನಿಟಿ ಇನ್ ದಿ ಪ್ರೈವೇಟ್ ಅಂಡ್ ಪಬ್ಲಿಕ್ ಎಜುಕೇಷನ್ ಆಫ್ ಮೈಸೂರ್ ಸ್ಟೇಟ್ ಇನ್ ; ಸುಸಾನ್ನೆ ಹೋಬರ್ ರುಡಾಲ್ಫ್, ಲಾಯ್ಡ್ ಅಂಡ್ ರುಡಾಲ್ಫ್(ಇಡಿಎಸ್.), *ಎಜುಕೇಷನ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ* : ಸ್ಟಡೀಸ್ ಇನ್ ಆರ್ಗ್‌ನೈಸೇಶನ್, ಸೊಸೈಟಿ ಅಂಡ್ ಪಾಲಿಸಿ ; ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೭೨.

೭. **ಮಹಾಜನ್ ವಿ.ಡಿ. / ಆರ್.ಆರ್. ಸೇಠ್,** *ಇಂಡಿಯಾ ಸಿನ್ಸ್ ೧೫೨೬,* ಎಸ್. ಚಾಂದ್ ಅಂಡ್ ಕಂ. ನ್ಯೂ ಡೆಲ್ಲಿ, ೧೯೫೮.

೮. **ಮಹಾಜನ್ ವಿ.ಡಿ.** *ಏನ್ಷಿಯಂಟ್ ಇಂಡಿಯಾ,* ಎಸ್. ಚಾಂದ್ ಅಂಡ್ ಕಂ, ನ್ಯೂ ಡೆಲ್ಲಿ, ೨೦೦೫.

೯. **ಮ್ಯಾನರ್ ಜೇಮ್ಸ್,** *ಪೊಲಿಟಿಕಲ್ ಚೇಂಜ್ ಇನ್ ಆನ್ ಇಂಡಿಯನ್ ಸ್ಟೇಟ್; ಮೈಸೂರ್ ೧೯೧೭- ೧೯೫೫,* ಮನೋಹರ್ ಬುಕ್ ಸರ್ವಿಸ್, ನ್ಯೂ ಡೆಲ್ಲಿ, ೧೯೭೭.

೧೦. **ಮ್ಯಾನರ್ ಜೇಮ್ಸ್,** 'ದಿ ಎವುಲುಷನ್ ಆಫ್ ಪೊಲಿಟಿಕಲ್ ಎರೆನಾಸ್ ಅಂಡ್ ಯೂನಿಟ್ಸ್ ಆಫ್ ಸೋಷಿಯಲ್ ಅರ್ಗನೈಸೇಷನ್: ದಿ ಲಿಂಗಾಯಟ್ಸ್ ಅಂಡ್ ಒಕ್ಕಲಿಗಾಸ್ ಆಫ್ ಪ್ರಿನ್ಸ್‌ಲೀ ಮೈಸೂರು' ಇನ್ ಎಂ.ಎನ್. ಶ್ರೀನಿವಾಸ್ (ಇಡಿ.ಎಸ್.) *ಡೈಮೆನ್‌ಷನ್ಸ್ ಆಫ್ ಸೋಷಿಯಲ್ ಚೇಂಜ್ ಇನ್ ಇಂಡಿಯಾ,* ಅಲೈಡ್ ಪಬ್ಲಿಷರ್ಸ್, ನ್ಯೂಡೆಲ್ಲಿ, ೧೯೭೭.

೧೧. **ಮಜುಮ್‌ದಾರ್ ಆರ್**.ಸಿ., *ಏನ್ಸಿಯಂಟ್ ಇಂಡಿಯಾ*, ಮೋತಿಲಾಲ್ ಬನಾರ್ಸಿದಾಸ್, ಬನಾರಸ್, ೨೦೦೫.

೧೨. **ಪಾರ್ವತಮ್ಮ ಸಿ**, *ಪಾಲಿಟಿಕ್ಸ್ ಅಂಡ್ ರಿಲೀಜಿಯನ್*, ಸ್ಟೆರ್ಲಿಂಗ್ ಪಬ್ಲಿಷರ್ಸ್ ಪ್ರೈ. ಲಿಮಿಟೆಡ್, ನ್ಯೂಡೆಲ್ಲಿ, ೧೯೭೧.

೧೩. **ರೇಖಾ ಕೌಲ್**, *ಕ್ಯಾಸ್ಟ್, ಕ್ಲಾಸ್ ಅಂಡ್ ಎಜುಕೇಷನ್*, ಸೇಜ್ ಪಬ್ಲಿಕೇಷನ್, ನ್ಯೂ ಡೆಲ್ಲಿ, ೧೯೯೩.

೧೪. **ಸದಾಶಿವಯ್ಯ ಹೆಚ್.ಎಂ.**, *ಎ ಕಂಪಾರಿಟಿವ್ ಸ್ಟಡಿ ಆಫ್ ಟೂ ವೀರಶೈವ ಮೊನಾಸ್ಟರೀಸ್*, ಥೀಸಿಸ್ ಸಬ್‌ಮಿಟೆಡ್ ಫಾರ್ ದಿ ಪಿಎಚ್.ಡಿ. ಡಿಗ್ರಿ, ಮೈಸೂರು ಯೂನಿವರ್ಸಿಟಿ, ಮೈಸೂರು, ೧೯೫೯.

೧೫. **ಶಿವರುದ್ರಪ್ಪ ಜಿ.**, *ಕಾಂಟ್ರಿಬುಷನ್ಸ್ ಆಫ್ ವೀರಶೈವ ಮಠಾಸ್ ಟು ದಿ ಡೆವೆಲಪ್‌ಮೆಂಟ್ ಆಫ್ ಎಜುಕೇಷನ್ ಇನ್ ಕರ್ನಾಟಕ*, ಪಿಎಚ್.ಡಿ. ಥೀಸಿಸ್, ಮೈಸೂರು ಯೂನಿವರ್ಸಿಟಿ, ಮೈಸೂರು, ೧೯೭೪.

೧೬. **ಔಟನ್ ಜೆ.ಪಿ.**, *ರೆವುಲ್ಯುಷನ್ ಆಫ್ ದಿ ಮಿಸ್ಟಿಕ್ಸ್, ಆನ್ ದಿ ಸೋಷಿಯಲ್ ಆಸ್‌ಪೆಕ್ಟ್ಸ್ ಆಫ್ ವೀರಶೈವಿಸಂ*, ನ್ಯೂ ಡೆಲ್ಲಿ, ಮೋತಿಲಾಲ್ ಬನಾರ್ಸಿದಾಸ್ ಪಬ್ಲಿಷರ್ಸ್ ಪ್ರೈ. ಲಿಮಿಟೆಡ್, ೧೯೯೫.

೧೭. **ಶ್ರೀನಿವಾಸ್ ಎಂ.ಎನ್.**, *ಸೋಷಿಯಲ್ ಚೇಂಜ್ ಇನ್ ಮಾಡ್ರನ್ ಇಂಡಿಯಾ*, ಓರಿಯಂಟ್ ಲಾಂಗ್‌ಮನ್ ಲಿ., ನ್ಯೂ ಡೆಲ್ಲಿ, ೧೯೭೭.

೧೮. **ಶ್ರೀನಿವಾಸ್ ಎಂ.ಎನ್.**, *ದಿ ಡಾಮಿನೆಂಟ್ ಕ್ಯಾಸ್ಟ್ ಅಂಡ್ ಅದರ್ ಎಸ್ಸೇಸ್*, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಮದ್ರಾಸ್, ೧೯೮೭.

೧೯. **ಶ್ರೀನಿವಾಸ ಎಂ.ಎನ್. / ಪಾನಿನಿ**, ಪಾಲಿಟಿಕ್ಸ್ ಅಂಡ್ ಸೊಸೈಟಿ ಇನ್ ಕರ್ನಾಟಕ, *ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ **XIX**, ನಂ. ೨, ೧೯೮೪.

೨೦. **ವಾದ್ವಾನಿ ಎಂ.ಆರ್. / ಎ.ಎಲ್. ಡಿಸೌಜ**, *ಮಾಡ್ರನ್ ಇಂಡಿಯಾ ೧೮೦೦–೧೯೬೪*, ಶೇತ್ ಪಬ್ಲಿಷರ್ಸ್, ಬಾಂಬೆ, ೧೯೮೦.

೨೧. **ಕರ್ನಾಟಕ ಸರ್ಕಾರ**, *ಕರ್ನಾಟಕ ರಾಜ್ಯ ಪತ್ರ* ಬೆಂಗಳೂರು, ಏಪ್ರಿಲ್, ೧೧, ೨೦೦೨, ಭಾಗ–೧೧,

೨೨. **ಅರ್ಚನ** ಸಂ. ಡಾ. ಎಚ್.ಪಿ.ಮಲ್ಲೇದೇವರು, *ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಿತಿ*, ಮೈಸೂರು, ೧೯೮೪.

೨೩. **ಜವಳಿ ಬಿ.ಸಿ**, ಶ್ರೀ ಬಸವೇಶ್ವರರ ಸಾಮಾಜಿಕ ಸಾಧನೆ, ಪ್ರ. ಶ್ರೀ. ಶಾಂತೇಶ ಪಾಟೀಲ, *ಶ್ರೀ ಬಸವೇಶ್ವರ*, ಮೈಸೂರು ಸರ್ಕಾರ, ೮ ನೇ ಶತಮಾನೋತ್ಸವ ಸಮಿತಿ, ೧೯೬೭.

೨೪. **ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್,** *ಸಿದ್ಧಗಂಗಾ ಮಠ,* ೨೦೦೨-೦೩.

೨೫. **ಶ್ರೀ ಸಿದ್ಧಗಂಗಾ ಕ್ಷೇತ್ರ,** ಪ್ರ. ಹಳೆ ವಿದ್ಯಾರ್ಥಿಗಳ ಸಂಘ, *ಶ್ರೀ ಸಿದ್ಧಗಂಗಾ ಮಠ,* ತುಮಕೂರು, ೨೦೦೪.

೨೬. **ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ,** *ಶ್ರೀ ಸಿದ್ಧಗಂಗಾ ಮಠ,* ತುಮಕೂರು, ೨೦೦೭.

ಅಧ್ಯಾಯ – ೩

ಕ್ಷೇತ್ರ ಪರಿಚಯ

ಅಧ್ಯಾಯ – ೩

ಕ್ಷೇತ್ರ ಪರಿಚಯ

೩.೧ ತುಮಕೂರು ಜಿಲ್ಲೆ

ತುಮಕೂರು ಜಿಲ್ಲೆಯು ರಾಜ್ಯದ ೨೭ ಜಿಲ್ಲೆಗಳಲ್ಲಿ ಒಂದು ಪ್ರಮುಖವಾದ ಜಿಲ್ಲೆಯಾಗಿದ್ದು, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯಾಗಿದೆ. ಪ್ರಾಕೃತಿಕ ಸಂಪತ್ತಿನಿಂದ ಕೂಡಿದ್ದು ಪ್ರಾಗೈತಿಹಾಸ ಹೊಂದಿರುವ ತುಮಕೂರು ಪ್ರೇಕ್ಷಣೀಯ ಮತ್ತು ಸಿದ್ಧಪುರುಷರ ತಪೋಭೂಮಿ. ತೆಂಗುಬೆಳೆಗೆ ಹೆಸರಾದ ಸ್ಥಳ. ಪ್ರಸಿದ್ಧ ಸಾಹಿತಿಗಳ, ಸ್ವಾತಂತ್ರ್ಯಯೋಧರ ಮತ್ತು ಶಿಲ್ಪಕಲಾ ವೈಭವದಿಂದ ಕೂಡಿರುವ ಪ್ರದೇಶ. ಕೃಷಿ, ಕೈಗಾರಿಕೆ, ಗುಡಿಗಾರಿಕೆ ಉದ್ಯಮಗಳನ್ನು ಹೊಂದಿರುವ ತುಮಕೂರು ಜಿಲ್ಲೆಯ ಸ್ಥೂಲ ಪರಿಚಯ ಮಹತ್ವವಾದದ್ದು. ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು, ಹಲವಾರು ಧರ್ಮ, ಜಾತಿಗಳನ್ನೊಳಗೊಂಡ ಅನೇಕ ರಾಜರ ಪಾಳೇಗಾರರ ಶಾಸನಗಳನ್ನು ಹೊಂದಿರುವ ಜಿಲ್ಲೆ ತುಮಕೂರು.

ಐತಿಹಾಸಿಕವಾಗಿ ಈ ಪ್ರದೇಶವನ್ನು ನೊಳಂಬರು, ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರದಸರು, ಮೈಸೂರರಸರು ಈ ಜಿಲ್ಲೆಯ ವಿವಿಧ ಪ್ರದೇಶಗಳಿಗೆ ತಮ್ಮ ಆಡಳಿತವನ್ನು ವಿಸ್ತರಿಸಿದ್ದರು. ಈ ಜಿಲ್ಲೆಯಲ್ಲಿ ದೊರೆತಿರುವ ಶಿಲಾಶಾಸನಗಳು, ವೀರಗಲ್ಲುಗಳು ತುಮಕೂರು ಜಿಲ್ಲೆಯ ಪ್ರಾಚೀನ ಇತಿಹಾಸದ ಬಗ್ಗೆ ವಿಪುಲ ಮಾಹಿತಿ ನೀಡುತ್ತವೆ.

ತುಮಕೂರಿನ ಹೆಸರೆ ವಿಶಿಷ್ಟವಾಗಿದ್ದು, ಈ ನಗರಕ್ಕೆ ತನ್ನದೇ ಆದ ಭವ್ಯ ಇತಿಹಾಸವಿದೆ. ಇಂದಿನ ಕೈದಾಳದ ಸುತ್ತಲಿನ ಪ್ರದೇಶವನ್ನು 'ಕ್ರೀಡಾಪುರ'ವೆಂದು ಕರೆಯುತ್ತಿದ್ದು, ಅದರ ಅರಸರು ಗಂಗದೊರೆಗಳ

ಮಿತ್ರರಾಗಿದ್ದರು. ಆದರೆ ಕ್ರೀಡಾಪುರದ ಉತ್ತರ ಭಾಗದಲ್ಲಿದ್ದ ನೊಳಂಬರು ಈ ಸಂಸ್ಥಾನದ ಮೇಲೆ ಪದೆ-ಪದೆ ದಾಳಿಯನ್ನು ಮಾಡುತ್ತಿದ್ದರು. ಇಂತಹ ದಾಳಿಯ ಮುನ್ಸೂಚನೆಯನ್ನು ಪಡೆಯಲು ಕ್ರೀಡಾಪುರದ ಸಂಸ್ಥಾನದವರು ದೂರದಲ್ಲಿರುವ ಗಡಿ ಪ್ರದೇಶದ ದಿಣ್ಣೆಯ ಮೇಲೆ ಕಾವಲುಗಾರರನ್ನಿಟ್ಟಿದ್ದರು. ಇವರು ಸೇನೆ ದೂರದಿಂದಲೇ ಆಗಮಿಸುತ್ತಿರುವುದನ್ನು ಕಂಡು ತಮಟೆ ನಗಾರಿಗಳನ್ನು ಬಲವಾಗಿ ಬಾರಿಸುತ್ತಿದ್ದರು. ಈ ಟುಂಕಿಯ ಸದ್ದನ್ನು ಕೇಳಿಸಿಕೊಂಡ ಕ್ರೀಡಾಪುರದರಸರು ಕೋಟೆಯ ಬಾಗಿಲನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಟುಂಕಿಯನ್ನು ಬಾರಿಸುವ ಈ ಕಾವಲುಗಾರರು ಯಾವಾಗಲೂ ಕ್ರೀಡಾಪುರಕ್ಕೆ ೪-೫ ಕಿ.ಮೀ. ದೂರದಲ್ಲಿರುವ ದಿಣ್ಣೆಯ ಮೇಲೇಯೇ ನೆಲೆಸುತ್ತಿದ್ದುದರಿಂದ ಹಾಗೂ ಮುಂದೆ ಊರಾಗಿ ಬೆಳೆದು ಟುಂಕಿಯೂರು, ಟುಂಕೂರು ಅಥವಾ ತುಮಕೂರು ಎಂದಾಯಿತು (ಡಾ.ಡಿ.ಎನ್. ಯೋಗೀಶ್, ೧೯೯೮, ಪು.೧).

ಸಮಕಾಲೀನ ದಾಖಲೆಗಳನ್ನು ಪರಿಶೀಲಿಸಿದಾಗ ತುಮಕೂರು ಹೆಸರಿನ ಉಲ್ಲೇಖವನ್ನು ಕ್ರಿ.ಶ. ೧೦ ನೇ ಶತಮಾನದ 'ಸೋಮೇಕಟ್ಟೆ' ಶಾಸನವೊಂದರಲ್ಲಿ 'ಳ್ತುಮ್ಮೆಗೂರು', 'ತುಮ್ಮೆಗೂರು', 'ತುಂಬೆವೂರು' ಎಂದು ಉಲ್ಲೇಖವಾಗಿದೆ (ಲೆವೀಸ್ ರೈಸ್, ೧೯೯೭ ಪು. ೧೬೨).

'ಸೋಮೇಕಟ್ಟೆ ಶಾಸನ' ದಲ್ಲಿ

------- ಶಕವರ್ಷ ------ ಕ್ಷಶನೆಂಬ

ದೊಳ್ತುಮ್ಮಗೂರ ಕೆಲುಲೆಯವೊಳದೊ

ಎಂದು ಮುಂದುವರೆಯುತ್ತದೆ. ಈ ಶಾಸನವೇ ಮೊಟ್ಟ ಮೊದಲು ತುಮಕೂರಿನ ಹೆಸರನ್ನು ದಾಖಲಿಸುವ ಶಾಸನವಾಗಿರುವುದು ಗಮನಾರ್ಹವಾಗಿದೆ (ಡಾ.ಡಿ.ಎನ್.ಯೋಗೀಶ್, ೧೯೯೮, ಪು.೧). 'ಳ್ತುಮ್ಮೆಗೂರು', 'ತುಮ್ಮೆಗೂರು', 'ತುಂಬೆವೂರು' ಕ್ರಮೇಣ ಜನರ ರೂಢಿಗತ ಭಾಷೆಯಿಂದ ತುಮಕೂರು ಆಗಿದೆ ಎಂದು ಚರಿತ್ರಾಕಾರರು ಉಲ್ಲೇಖಿಸಿದ್ದಾರೆ. ಈ ಭಾಗದ ಜನಪದರ ನಂಬಿಕೆಯಂತೆ 'ತುಂಬೆ' ಹೂವಿನ ಗಿಡಗಳು ಅಪಾರವಾದ್ದರಿಂದ 'ತುಂಬೆಯೂರು', 'ತುಮ್ಮೆಗೂರು' ಎಂದು ಕರೆಯುತ್ತಿದ್ದ ಊರೇ ಇಂದಿನ ತುಮಕೂರಾಗಿದೆ (ಲೆವೀಸ್ ರೈಸ್, ೧೯೯೭, ಪು. ೧೬೨).

೧೫ನೇ ಶತಮಾನದ ಚೆನ್ನವೀರ ಜಂಗಮದೇವ ವಿರಚಿತ. 'ಷಟ್‌ಸ್ಥಲ ವಲ್ಲಭ' ಎಂಬ ಕಾವ್ಯದಲ್ಲಿ 'ತುಮಕೂರಿಂದಂ ಭಕ್ತರು' ಎಂದು ಹೇಳಲಾಗಿದೆ. ಹೀಗೆ ೧೧ ನೇ ಶತಮಾನದಲ್ಲಿ 'ತುಮ್ಮೆಗೂರು' ಎಂದು ಇದ್ದದ್ದು, ೧೫ನೇ ಶತಮಾನದ ವೇಳೆಗೆ 'ತುಮಕೂರು' ಎಂದಾಯಿತು. ಮತ್ತೊಂದು ಸಂಶೋಧನೆಯ ಪ್ರಕಾರ ಶಿವಾರ್ಚನೆಗೆ ಪ್ರಸಿದ್ಧವಾದ ತುಂಬೆ ಹೂವಿನ ವನಗಳನ್ನು ಬೆಳೆಸುತ್ತಿದ್ದ ಪದ್ಧತಿ ಈ ಪ್ರದೇಶದಲ್ಲಿತ್ತು. ಈ ಹೆಸರನ್ನು ಸಮರ್ಥಿಸಲು ಹಲವು ಪ್ರಮುಖ ಅಂಶಗಳು ಕಂಡುಬರುತ್ತವೆ. ತುರುವೇಕೆರೆ ತಾಲ್ಲೋಕಿನಲ್ಲಿ 'ತುಂಬೆವಾಡಿ', 'ತುಂಬಾಡಿ' ಇದ್ದು, ಶ್ರೀ ಸಿದ್ಧಲಿಂಗೇಶ್ವರರು ತುಮಕೂರು ಪಟ್ಟಣಕ್ಕೆ ಆಗಮಿಸಿದಾಗ ತುಂಬೆ ಹೂವಿನ ಪವಾಡವಾಯಿತೆನ್ನಲಾಗಿದೆ (ಡಾ.ಡಿ.ಎನ್. ಯೋಗೀಶ್, ೧೯೯೮, ಪು.೧). ಹೀಗೆ ೧೧ ನೇ ಶತಮಾನದಲ್ಲಿ 'ತುಮ್ಮೆಗೂರು' ಎಂದು ಇದ್ದದ್ದು ೧೫ನೇ ಶತಮಾನದ ವೇಳೆಗೆ ತುಮಕೂರು ಎಂದಾಗಿದೆ.

ತುಮಕೂರಿನಲ್ಲಿ ರಾಜಮನೆತನಗಳಲ್ಲಿ ಆಡಳಿತ ನಡೆಸಿದ ಮೊದಲ ಅರಸರೆಂದರೆ ಗಂಗರು. ಮಿಡಿಗೇಶಿ ಬಳಿ ದೊರೆತಿರುವ 'ಶ್ರೀ ಪುರುಷ ಶಾಸನ' (೭೨೬-೭೭೭) ಮತ್ತು ಕಿಬ್ಬನಹಳ್ಳಿ ಬಳಿ ದೊರೆತಿರುವ 'ಸತ್ಯವಾಕ್ಯ ನೊಳಂಬಕುಲಾಂತಕ' (೯೬೩-೯೭೪) ಶಾಸನಗಳು ಗಂಗರ ಆಡಳಿತವನ್ನು ವಿವರಿಸುತ್ತದೆ. (ಲೆವೀಸ್ ರೈಸ್, ೧೮೯೭ ಪು. ೧೬೨).

ದಕ್ಷಿಣದಲ್ಲಿ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಪ್ರಬಲರಾಗಿದ್ದಾಗ ಸ್ಥಳೀಯವಾಗಿ ತುಮಕೂರು ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದವರೆಂದರೆ ನೊಳಂಬರಸರು. ಪಲ್ಲವ ವಂಶಕ್ಕೆ ಸೇರಿದ ನೊಳಂಬರು ಅಥವಾ ನೊಣಬರು ಜಿಲ್ಲೆಯ ಉತ್ತರದ ತಾಲ್ಲೋಕುಗಳಲ್ಲಿ ಹೆಚ್ಚು ಹೆಸರಾಗಿದ್ದವರು. ಅವರ ರಾಜ್ಯ 'ನೊಳಂಬವಾಡಿ' ಎಂದು ಹೆಸರು ಪಡೆದಿತ್ತು. ಶಿರಾ ತಾಲ್ಲೋಕಿನ ಉತ್ತರ ಗಡಿಯಲ್ಲಿರುವ 'ಹೆಂಜೇರು' ಅಥವಾ 'ಪೆಂಜೇರು' ನೊಳಂಬರಸರ ರಾಜಧಾನಿಯಾಗಿತ್ತು. ಖ್ಯಾತ ಶಾಸನ ತಜ್ಞನಾದ ಲೆವೀಸ್ ರೈಸ್ ಹೆಂಜೇರನ್ನು ಮಡಕಶಿರಾ ತಾಲ್ಲೋಕಿನ 'ಹೇಮಾವತಿ' ಎಂದು ಗುರುತಿಸಿದನು. ಪಾವಗಡ ತಾಲ್ಲೋಕಿನ ನಿಡುಗಲ್ಲಿನ ಮೇಲೆ ನೊಳಂಬರು ತಮ್ಮ ಪ್ರಭುತ್ವವನ್ನು ಪಡೆದಿದ್ದರು. ಶಿರಾ ತಾಲ್ಲೋಕಿನಲ್ಲಿ ಹಲವಾರು ಪ್ರದೇಶಗಳು ನೊಳಂಬವಾಡಿ ರಾಜ್ಯದ ಅಂಗಗಳಾಗಿದ್ದವು. (ಲೆವೀಸ್ ರೈಸ್, ೧೮೯೭ ಪು. ೧೬೩).

ಕ್ರಿ.ಶ. ೧೬೩೦ ರಲ್ಲಿ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ತುಮಕೂರನ್ನು ಮೈಸೂರಿಗೆ ಒಳಪಡಿಸಿಕೊಂಡ ನಂತರ ಇದು ಮೈಸೂರರಸರ ಪ್ರಭುತ್ವಕ್ಕೆ ಒಳಪಟ್ಟಿತು. ಬಿಜಾಪುರದ ದಂಡನಾಯಕ ಕ್ರಿ.ಶ. ೧೬೩೮ ರಲ್ಲಿ ಸಿರಾದ ಮೇಲೆ ದಾಳಿ ಮಾಡಿದಾಗ ತುಮಕೂರನ್ನು ಆಕ್ರಮಿಸುವ

ಯೋಚನೆಯಲ್ಲಿದ್ದರೂ ಕೂಡ ಕಾರಣಾಂತರದಿಂದ ಕೈ ಬಿಟ್ಟು ಬೆಂಗಳೂರಿನ ಕಡೆಗೆ ಮುನ್ನುಗ್ಗಿ ಅದನ್ನು ಗೆದ್ದಕೊಂಡನು. ಈ ಸಂದರ್ಭದಲ್ಲಿ ತುಮಕೂರು ಜನತೆ ಮೈಸೂರು ಒಡೆಯರ ಅಧೀನದಲ್ಲಿ ಸಂರಕ್ಷಿತವಾಗಿದ್ದುದರಿಂದ ಈ ಭಾಗದ ಜನತೆಗೆ ಮೈಸೂರು ರಾಜ್ಯದ ಮೇಲೆ ಗೌರವ ಘನತೆಗಳು ಹೆಚ್ಚಾದವು. ಚಿಕ್ಕದೇವರಾಜ ಒಡೆಯರು ತಮ್ಮ ರಾಜ್ಯವನ್ನು ಪ್ರಾಂತ್ಯಗಳನ್ನಾಗಿ ವಿಭಾಗಿಸಿದಾಗ ತುಮಕೂರು ಕೂಡ ಒಂದು ವಿಭಾಗವಾಗಿ ತಾಲ್ಲೋಕಿನ ಸ್ಥಾನಮಾನವನ್ನು ಪಡೆದುಕೊಂಡಿತು. ಕಾಲಕ್ರಮೇಣ ಈ ನಗರ ಹೈದರ್-ಟಿಪ್ಪುವಿನ ಆಳ್ವಿಕೆಗೆ ಒಳಪಟ್ಟಿತು. ೧೭೯೯ ರಲ್ಲಿ ಟಿಪ್ಪು ಹತನಾದ ನಂತರ ಮೈಸೂರು ರಾಜ್ಯವು ಇಮ್ಮಡಿ ಕೃಷ್ಣರಾಜ ಒಡೆಯರಿಗೆ ವರ್ಗವಾದ ಮೇಲೆ ತುಮಕೂರು ಪ್ರಾಂತ್ಯವು ಮಧುಗಿರಿ ಫೌಜುದಾರಿಗೆ ಸೇರಿತು. ೧೮೩೧ ರಲ್ಲಿ ಬ್ರಿಟೀಷರು ಈ ರಾಜ್ಯವನ್ನು ವಹಿಸಿಕೊಂಡಾಗ ಇದನ್ನು ೮ ಜಿಲ್ಲೆಗಳನ್ನಾಗಿ ವಿಭಾಗಿಸಲ್ಪಟ್ಟು, ತುಮಕೂರು ಸಹ ಒಂದು ಜಿಲ್ಲೆಯಾಗಿ ಚಿತ್ರದುರ್ಗ ಡಿವಿಜ಼ನ್ನಿಗೆ ಸೇರಿತು. ೧೮೬೩ ರಲ್ಲಿ ಚಿತ್ರದುರ್ಗ ಡಿವಿಜ಼ನ್ನಿಂದ ಬೇರ್ಪಡಿಸಿ ನಂದಿದುರ್ಗ ಡಿವಿಜ಼ನ್ನಿಗೆ ಸೇರಿತು. ೧೮೮೨ ರಲ್ಲಿ ಚಿತ್ರದುರ್ಗವನ್ನು ತುಮಕೂರಿನ ಒಂದು ಸಬ್-ಡಿವಿಜ಼ನ್ ಆಗಿ ಮಾಡಿದರು. ಆದರೆ ೧೮೮೬ ರಲ್ಲಿ ಚಿತ್ರದುರ್ಗವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಿದಾಗ ಪಾವಗಡ, ತುಮಕೂರು ಜಿಲ್ಲೆಗೆ ಸೇರಿತು (ಡಾ.ಡಿ.ಎನ್. ಯೋಗೀಶ್, ೧೯೯೮, ಪು.೧). ಈ ಅವಧಿಯಲ್ಲಿ ತುಮಕೂರು ಜಿಲ್ಲೆಯ ವ್ಯಾಪ್ತಿಗೆ ಒಟ್ಟು ೮ ತಾಲ್ಲೋಕುಗಳಿದ್ದವು. ಚಿಕ್ಕನಾಯಕನಹಳ್ಳಿ, ಗುಬ್ಬಿ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು ಮತ್ತು ತುಮಕೂರು(ಲೆವೀಸ್ ರೈಸ್, ೧೮೯೭ ಪು. ೧೫೫). ೧೮೯೧ ರ ಅವಧಿಯಲ್ಲಿ ತುಮಕೂರು ಜಿಲ್ಲೆಯ ವಿಸ್ತಾರ ಮತ್ತು ಜನಸಂಖ್ಯೆ ಈ ಕೆಳಕಂಡಂತಿದೆ.

ವಿಸ್ತೀರ್ಣ ಮತ್ತು ಜನಸಂಖ್ಯೆ: ೧೮೯೧ ರ ಜನಗಣತಿ ಪ್ರಕಾರ

ಕ್ರಸಂ.	ತಾಲ್ಲೋಕು	ವಿಸ್ತೀರ್ಣ (ಚದರ ಮೈಲುಗಳಲ್ಲಿ)	ಜನಸಂಖ್ಯೆ (೧೮೯೧ ರ ಪ್ರಕಾರ)
೧.	ಚಿಕ್ಕನಾಯಕನಹಳ್ಳಿ	೫೩೨	೫೧೬೨೦
೨.	ಗುಬ್ಬಿ	೫೫೨	೭೩೫೭೦
೩.	ಕುಣಿಗಲ್	೩೮೧	೬೬೫೦೨
೪.	ಮಧುಗಿರಿ	೫೯೬	೯೭೯೭೩
೫.	ಪಾವಗಡ	೫೩೨	೫೩೩೭೭
೬.	ಶಿರಾ	೫೯೯	೬೮೩೨೭
೭.	ತಿಪಟೂರು	೫೧೦	೭೮೮೬೭
೮.	ತುಮಕೂರು	೪೫೨	೯೦೭೮೮
	ಒಟ್ಟು	**೪೧೫೪**	**೫೮೧೦೧೮**

ಆಧಾರ : ಲೆವೀಸ್ ರೈಸ್, ೧೮೯೭ ಪು. ೧೫೫.

ಆದರೆ ಇಂದು ತುಮಕೂರು ಜಿಲ್ಲೆಯ ವಿಸ್ತೀರ್ಣ ಮತ್ತು ಜನಸಂಖ್ಯೆಯಲ್ಲಿ ಬೃಹತ್ ಬದಲಾವಣೆ ಕಂಡುಬಂದಿದೆ. ಜಿಲ್ಲಾ ವಿಸ್ತೀರ್ಣವು ಹೆಚ್ಚಾಗಿದ್ದು ಜನಸಂಖ್ಯೆಯು ಹೆಚ್ಚಾಗಿದೆ.

ವಿಸ್ತೀರ್ಣ ಮತ್ತು ಜನಸಂಖ್ಯೆ : ೨೦೦೧ ರ ಜನಗಣತಿ ಪ್ರಕಾರ

ಕ್ರ ಸಂ.	ತಾಲ್ಲೋಕು	ವಿಸ್ತೀರ್ಣ (ಚ.ಕಿ. ಗಳಲ್ಲಿ)	ಒಟ್ಟು	ಗಂಡು	ಹೆಣ್ಣು	ಗ್ರಾಮೀಣ	ನಗರ	ಜನ ಸಾಂದ್ರತೆ (ಪ್ರತಿ ಚ.ಕಿ.)	ಲೈಂಗಿಕ ಪ್ರಮಾಣ
೧.	ಚಿಕ್ಕನಾಯಕನಹಳ್ಳಿ	೧೧೧೩	೨೦೯೬೨೨	೧೦೫೫೫೯	೧೦೪೦೬೩	೧೮೭೨೩೩	೨೨೩೮೯	೧೮೮	೯೮೬
೨.	ಗುಬ್ಬಿ	೧೨೨೧	೨೫೬೪೧೩	೧೨೯೬೮೨	೧೨೬೭೩೧	೨೩೯೬೦೮	೧೬೮೦೫	೨೧೦	೯೭೭
೩.	ಕೊರಟಗೆರೆ	೬೫೨	೧೬೦೯೫೨	೮೧೮೬೨	೭೯೦೯೦	೧೪೭೨೯೭	೧೩೬೫೫	೨೪೭	೯೬೬
೪.	ಕುಣಿಗಲ್	೯೮೧	೨೩೬೦೩೦	೧೧೬೬೧೬	೧೧೯೪೧೪	೨೦೫೬೮೭	೩೦೩೪೩	೨೪೧	೧೦೨೪
೫.	ಮಧುಗಿರಿ	೧೧೩೧	೨೬೫೮೮೪	೧೩೫೩೨೦	೧೩೦೫೬೪	೨೩೯೫೮೦	೨೬೩೦೪	೨೩೫	೯೬೫
೬.	ಪಾವಗಡ	೧೩೫೮	೨೪೬೨೫೫	೧೨೫೭೯೮	೧೨೦೪೫೭	೨೧೮೧೮೭	೨೮೦೬೮	೧೮೧	೯೫೮
೭	ಶಿರಾ	೧೫೫೧	೩೦೧೪೭೩	೧೫೩೭೩೩	೧೪೭೭೪೦	೨೫೧೩೮೫	೫೦೦೮೮	೧೯೪	೯೬೧
೮.	ತಿಪಟೂರು	೭೮೫	೨೧೭೧೨೪	೧೦೯೭೯೯	೧೦೭೩೨೫	೧೬೪೦೨೦	೫೩೧೦೪	೨೭೭	೯೭೭
೯.	ತುಮಕೂರು	೧೦೨೬	೫೧೬೬೬೧	೨೬೮೩೪೧	೨೪೮೩೨೦	೨೬೭೭೩೨	೨೪೮೯೨೯	೫೦೪	೯೨೫
೧೦.	ತುರುವೇಕೆರೆ	೭೭೮	೧೭೪೨೯೭	೮೭೦೯೧	೮೭೨೦೬	೧೫೬೭೮೦	೧೭೫೧೭	೨೪೪	೧೦೦೧
೧೧.	ಜಿಲ್ಲಾ ಮೊತ್ತ	೧೦೫೯೬	೨೫೮೪೭೧೧	೧೩೧೩೮೦೧	೧೨೭೦೯೧೦	೨೦೭೭೫೦೯	೫೦೭೨೦೨	೨೪೪	೯೬೭

ಆಧಾರ : ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೦೫, ಪು.೫

೨೦೦೧ ರ ಜನಗಣತಿ ಪ್ರಕಾರ ತುಮಕೂರು ಜಿಲ್ಲೆಯ ಒಟ್ಟು ಜನಸಂಖ್ಯೆ ೨೫೮೪೭೧೧. ಗ್ರಾಮೀಣ ಜನಸಂಖ್ಯೆ ೨೦೭೭೫೦೯ ರಷ್ಟಿದ್ದು, ನಗರ ಜನಸಂಖ್ಯೆ ೫೦೭೨೦೨ ರಷ್ಟಿದೆ. ವಿಸ್ತೀರ್ಣವೂ ಕೂಡ ೧೮೯೧ ರ ಅವಧಿಯ ೪೧೫೪ ಚದುರ ಮೈಲುಗಳಿಂದ ೨೦೦೧ ರ ಅವಧಿಗೆ ೧೦೫೯೬ ಚದರ ಕಿ.ಮೀ. ಗಳಿಗೆ ವಿಸ್ತರಿಸಿದೆ.

ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಕಲ್ಪತರು ನಾಡೆಂದು ಪ್ರಸಿದ್ಧಿಯಾಗಿರುವ ತುಮಕೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣಾರ್ಧದ ಪೂರ್ವ ಭಾಗದಲ್ಲಿರುತ್ತದೆ. ಜಿಲ್ಲೆಯು ೧೦೫೯೭ ಚದರ ಕಿ.ಮೀ. ವ್ಯಾಪ್ತಿಯ ವಿಸ್ತೀರ್ಣವನ್ನು ಹೊಂದಿದ್ದು, ಭೌಗೋಳಿಕವಾಗಿ ಈ ಜಿಲ್ಲೆಯು ೧೨°-೪೫' ರಿಂದ ೧೪°-೨೦' ಉತ್ತರ ಅಕ್ಷಾಂಶ ಮತ್ತು ೭೬°-೨೦' ರಿಂದ ೭೭°-೩೧' ಪೂರ್ವ ರೇಖಾಂಶಗಳ ನಡುವೆ ಬರುತ್ತದೆ. ಜಿಲ್ಲೆಯ ಭೂ ಮೇಲ್ಮೈ ಲಕ್ಷಣವು ಅಸಮತೋಲನವಾಗಿದ್ದು, ವಿಶಿಷ್ಟತೆಯಿಂದ ಕೂಡಿದೆ. ಜಿಲ್ಲೆಯ ಈಶಾನ್ಯ ಭಾಗವು (ಪಾವಗಡ ತಾ.) ಜಿಲ್ಲೆಯಿಂದ ಸಂಪೂರ್ಣವಾಗಿ ಬೇರ್ಪಟ್ಟಿದೆ. ತುಮಕೂರು ಜಿಲ್ಲೆಯು ವಿಸ್ತೀರ್ಣದಲ್ಲಿ ರಾಜ್ಯದ ಜಿಲ್ಲೆಗಳಲ್ಲಿಯೇ ಮೂರನೇ ಸ್ಥಾನವನ್ನು ಹೊಂದಿದೆ. ಅಂದರೆ ರಾಜ್ಯದ ವಿಸ್ತೀರ್ಣದ ಶೇ.೫.೫೩ ರಷ್ಟಿದೆ. ಜಿಲ್ಲೆಯ ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳು, ಪಶ್ಚಿಮಕ್ಕೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ಉತ್ತರಕ್ಕೆ ಚಿತ್ರದುರ್ಗ ಜಿಲ್ಲೆ ಮತ್ತು ದಕ್ಷಿಣಕ್ಕೆ ಮಂಡ್ಯ ಜಿಲ್ಲೆಗಳಿಂದ ಆವೃತ್ತವಾಗಿದೆ. ತುಮಕೂರು ಜಿಲ್ಲೆಯು ೧೦ ತಾಲ್ಲೋಕುಗಳನ್ನೊಳಗೊಂಡಿದೆ. ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು, ತುಮಕೂರು ಹಾಗೂ ತುರುವೇಕೆರೆ. ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ಮೂರು ಉಪ-ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ-ತುಮಕೂರು ಉಪ-ವಿಭಾಗದಲ್ಲಿ ತುಮಕೂರು, ಗುಬ್ಬಿ, ಕುಣಿಗಲ್ ತಾಲ್ಲೋಕುಗಳು; ತಿಪಟೂರು ಉಪ-ವಿಭಾಗದಲ್ಲಿ ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೋಕುಗಳು ಹಾಗೂ ಮಧುಗಿರಿ ಉಪ-ವಿಭಾಗದಲ್ಲಿ ಮಧುಗಿರಿ, ಕೊರಟಗೆರೆ, ಪಾವಗಡ ಮತ್ತು ಶಿರಾ ತಾಲ್ಲೋಕುಗಳು (ತುಮಕೂರು ಜಿಲ್ಲೆ ಅಂಕಿ-ಅಂಶಗಳ ನೋಟ, ೨೦೦೩-೦೪, ಪು.೫೯).

ಜಿಲ್ಲೆಯ ಭೂ-ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೮೧೮.೫೧ ಮೀಟರ್ ಎತ್ತರದಲ್ಲಿದೆ. ಜಿಲ್ಲೆಯು ಸಮತೋಲನವಾದ ಹವಾಗುಣ ಹೊಂದಿದ್ದು, ಒಣಹವೆಯಿಂದ ಕೂಡಿರುತ್ತದೆ. ನೈರುತ್ಯ ಮಾರುತಗಳಿಂದ ಜೂನ್ ತಿಂಗಳಿನಲ್ಲಿ ಮಳೆ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳಿನವರೆಗೂ, ಈಶಾನ್ಯ ಮಾರುತಗಳಿಂದ ಅಕ್ಟೋಬರ್ ತಿಂಗಳಿನಿಂದ ನವೆಂಬರ್ ಕೊನೆಯವರೆವಿಗೂ ಮಳೆ ಬೀಳುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಚಳಿಗಾಲ ಪ್ರಾರಂಭವಾಗಿ ಫೆಬ್ರವರಿ ಅಂತ್ಯದವರೆವಿಗೂ ಇರುತ್ತದೆ. ಬೇಸಿಗೆಯು ಮಾರ್ಚ್ ತಿಂಗಳಿನಿಂದ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆವಿಗೂ ಇರುತ್ತದೆ. ಜಿಲ್ಲೆಯ ವಾಡಿಕೆ ಮಳೆಯ ಪ್ರಮಾಣ ಸುಮಾರು ೫೪೦.೭ ಮಿ.ಮೀ ಹಾಗೂ ವಾಸ್ತವಿಕ ಮಳೆಯ ಪ್ರಮಾಣ ಸುಮಾರು ೪೧೬.೮ ಮಿ.ಮೀ (ತುಮಕೂರು ಜಿಲ್ಲೆ ಅಂಕಿ-ಅಂಶಗಳ ನೋಟ, ೨೦೦೩-೦೪, ಪು.೫೯).

೩.೨ ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ

ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿಯನ್ನು ವ್ಯಕ್ತಪಡಿಸುವುದು ಶಿಕ್ಷಣ ಮತ್ತು ಸಾಕ್ಷರತೆ. ಸಾಕ್ಷರತೆಯನ್ನು ಆಧುನೀಕರಣದ 'ಹರಿಕಾರ' ಎಂದು ಹೇಳಲಾಗಿದೆ. ಅಮರ್ತ್ಯ ಸೇನ್ ಪ್ರಕಾರ ಸಾಕ್ಷರತೆಯು ಅಭಿವೃದ್ಧಿಯ 'ಸಾಧನ' ವೂ ಹೌದು ಮತ್ತು 'ಸಾಧ್ಯ' ವೂ ಹೌದು. ಶಿಕ್ಷಣ ಮತ್ತು ಸಾಕ್ಷರತೆಗೆ 'ಅಂತಸ್ಥವಾದ' ಗುಣವಿದೆ. ಅಭಿವೃದ್ಧಿಯು ಅಭಿವ್ಯಕ್ತವಾಗುವ ಪರಿಯೇ ಸಾಕ್ಷರತೆ. ಮನುಷ್ಯನ 'ಧಾರಣ ಶಕ್ತಿ' ಯನ್ನು ಒದಗಿಸುವ ಒಂದು ಶಕ್ತಿಯೇ 'ಸಾಕ್ಷರತೆ'. ಮನುಷ್ಯನ 'ಸಾಕ್ಷರತೆಯ ವೈಫಲ್ಯ' ವನ್ನು 'ಅಭಿವೃದ್ಧಿಯ ವೈಫಲ್ಯ' ವೆಂದೇ ಪರಿಗಣಿಸಿದ್ದಾರೆ. ಇಂತಹ ವಿಚಾರ ಪ್ರಣಾಳಿಕೆಯನ್ನು 'ಮಾನವಮುಖಿ ಅಭಿವೃದ್ಧಿ' ಎಂದು ಕರೆಯಲಾಗಿದೆ. ಮೆಹಬೂಬ್ ಉಲ್ ಹಕ್‌ರವರು ಯು.ಎನ್.ಡಿ.ಪಿ.ಗೆ ಸಿದ್ಧಪಡಿಸಿ ಕೊಟ್ಟ 'ಮಾನವಮುಖಿ ಅಭಿವೃದ್ಧಿ' ವರದಿಗಳಲ್ಲಿ ಅಭಿವೃದ್ಧಿಯನ್ನು ಅಳೆಯಲು ಆರೋಗ್ಯ – ಸಾಕ್ಷರತೆ– ವರಮಾನ ಮೂರನ್ನು ಒಳಗೊಂಡಂತೆ ಸೂಚ್ಯಂಕವನ್ನು ಬಳಸಿದ್ದಾರೆ. ಇದೇ 'ಮಾನವಮುಖಿ ಅಭಿವೃದ್ಧಿ ಸೂಚ್ಯಂಕ' (ಡಾ.ಟಿ.ಆರ್.ಚಂದ್ರಶೇಖರ್, ೧೯೯೯, ಪು.೬೬–೬೭). ೨೦೦೭ ರ ಪ್ರಕಾರ ಕರ್ನಾಟಕವು ಮಾನವಮುಖಿ ಅಭಿವೃದ್ಧಿ ಸೂಚಿ ಸಂಖ್ಯೆಯಲ್ಲಿ ಆರನೇ ಸ್ಥಾನದಲ್ಲಿದೆ.

ಭಾರತದ ಐತಿಹಾಸಿಕ ಅಧ್ಯಯನವನ್ನು ಮಾಡಿದರೆ ಶಿಕ್ಷಣ ಪಡೆಯುವಲ್ಲಿ ಬ್ರಾಹ್ಮಣರು ಮಂಚೂಣಿಯಲ್ಲಿದ್ದರು. ಕಾಲಾನಂತರ 'ಮೀಸಲಾತಿ' ಯನ್ನು ಒದಗಿಸಿದ್ದರಿಂದ ಎಲ್ಲಾ ಜಾತಿಯವರು ಶಿಕ್ಷಣ ಪಡೆಯುವಂತಾಯಿತು. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆವಿಗು ಸಾಕಷ್ಟು ಬದಲಾವಣೆಗಳು ಕಂಡುಬಂದಿರುವುದು ಶಿಕ್ಷಣದ ಇತಿಹಾಸವನ್ನು ಅರ್ಥೈಸಿಕೊಂಡರೆ ತಿಳಿದುಬರುತ್ತದೆ. ತುಮಕೂರು ಜಿಲ್ಲೆಯು ಇಂತಹ ಬದಲಾವಣೆಗಳಿಂದ ಹೊರತಾಗಿಲ್ಲ.

ಭಾರತದ ಐತಿಹಾಸಿಕ ಅಧ್ಯಯನದಲ್ಲಿ ಕಂಡುಬಂದಂತೆ ಕರ್ನಾಟಕದ ಇತಿಹಾಸದಲ್ಲಿಯೂ ಅಗ್ರಹಾರ, ಮಠ ಮತ್ತು ಘಟಿಕೆಗಳೆಂಬ ವಿದ್ಯಾಸಂಸ್ಥೆಗಳು ಹರಡಿಕೊಂಡಿದ್ದವು. ಅಗ್ರಹಾರವೆಂದರೆ ಬ್ರಾಹ್ಮಣ ಪಂಡಿತರು ವಾಸಿಸುತ್ತಿದ್ದ ಗ್ರಾಮ. ತಮ್ಮ ಜ್ಞಾನಾನ್ವೇಷಣೆಯಲ್ಲಿ ನಿರಂತರವಾಗಿ ನಿರತರಾಗಲು ಅನುಕೂಲವಾಗುವಂತೆ ಭೂಮಿ, ವಸತಿ ಮೊದಲಾದ ಸೌಕರ್ಯಗಳನ್ನು ಅವರಿಗೆ ಒದಗಿಸಲಾಗುತ್ತಿತ್ತು ಪ್ರತಿಯೊಂದು ಅಗ್ರಹಾರದಲ್ಲಿಯೂ ಒಂದು ಪ್ರಾಥಮಿಕ ಶಾಲೆಯಿದ್ದು ಅಲ್ಲಿ ಒಬ್ಬ ಪಂಡಿತನು ಇರುತ್ತಿದ್ದನು. ಅವನು ಮಾಡುತ್ತಿದ್ದ 'ಬಾಲಶಿಕ್ಷೆ' ಅಥವಾ 'ಕನ್ನಡ ಶಿಕ್ಷಣ' ಕ್ಕೆ ಪ್ರತಿಫಲವಾಗಿ ಅವನಿಗೆ ಭೂಮಿಯನ್ನು ಕೊಡಲಾಗುತ್ತಿತ್ತು. ಇವರನ್ನು ಕನ್ನಡ ಪಂಡಿತರೆಂದೇ ಕರೆಯಲಾಗುತ್ತಿತ್ತು. ದೇವಸ್ಥಾನಕ್ಕೆ ಸೇರಿದಂತೆ

ಮಠಗಳಿದ್ದವು. ಈ ಮಠಗಳಲ್ಲಿ ವಸತಿ ಸೌಕರ್ಯ ಮತ್ತು ಊಟದ ಸೌಕರ್ಯಗಳಿತ್ತು. ಈ ಮಠಗಳು ವಿದ್ಯಾಕೇಂದ್ರಗಳಾಗಿದ್ದು, ಬೌದ್ಧರ ವಿಹಾರಗಳ ಅನುಕರಣೆಯಿದ್ದಿರಬಹುದೆಂದು ಹೇಳಲಾಗಿದೆ. ಘಟಿಕಾಸ್ಥಾನಗಳು ವಿದ್ವಾಂಸರ ವಿದ್ವತ್ತನ್ನು ಪರೀಕ್ಷಿಸುವ ಕೇಂದ್ರಗಳಾಗಿದ್ದವು. ಈ ಅಧ್ಯಯನವನ್ನು ಗಮನಿಸಿದರೆ ತುಮಕೂರು ಜಿಲ್ಲೆಯಲ್ಲಿಯೂ ಅಗ್ರಹಾರಗಳು ಮತ್ತು ಮಠಗಳನ್ನು ಸಾಕಷ್ಟು ಕಾಣಬಹುದಾಗಿದೆ. ಇದಕ್ಕೆ ಪೂರಕ ಪುರಾವೆ ಎಂದರೆ ತುಮಕೂರು ಜಿಲ್ಲೆಯ ಶೆಟ್ಟಿಕೆರೆಯಲ್ಲಿನ (ಚಿಕ್ಕನಾಯ್ಕನಹಳ್ಳಿ ತಾಲ್ಲೋಕು) ಪುರಾಣಭಟ್ಟನು ಗ್ರಾಮದ ಮಕ್ಕಳಿಗೆ ಓದು, ಬರಹ ಮತ್ತು ಗಣಿತಗಳನ್ನು ಕಲಿಸುತ್ತಿದ್ದನು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಶಿಕ್ಷಣವನ್ನು ಪಡೆಯುವಲ್ಲಿ ಆಸಕ್ತರಾಗಿದ್ದರು. ಬ್ರಾಹ್ಮಣರು ಓದು ಬರಹದ ಕಡೆ ಗಮನಹರಿಸಿದರೆ ಕ್ಷತ್ರಿಯರು ಮಿಲಿಟರಿ ತರಬೇತಿ ಪಡೆಯುವಲ್ಲಿ ಆಸಕ್ತರಾಗಿದ್ದರು. ವೈಶ್ಯರು ವ್ಯಾಪಾರ ಮಾಡುವಲ್ಲಿ ಮೇಲುಗೈ ಸಾಧಿಸಿದ್ದರು (ಸೂರ್ಯನಾಥ್‌ಯು.ಕಾಮತ್, ೧೯೮೬, ಪು.೧-೩).

೧೭ ನೇ ಶತಮಾನದ ಅಂತ್ಯಭಾಗದಲ್ಲಿ ಮುಸಲ್ಮಾನರ ಆಳ್ವಿಕೆಯಲ್ಲಿ ಎಲ್ಲಾ ಪ್ರದೇಶಗಳಲ್ಲು ಒಂದೇ ರೀತಿಯ ಶಿಕ್ಷಣವು ಆಚರಣೆಯಲ್ಲಿತ್ತು. ಮಸೀದಿಗಳು ಅದರಲ್ಲಿಯು ನಗರಗಳಲ್ಲಿ, ಶಿಕ್ಷಣ ಮತ್ತು ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿದ್ದವು. ಮಕ್ತಬಗಳು ಮತ್ತು ಮದ್ರಸಾಗಳು, ಎರಡಸ್ತರದ ಇಸ್ಲಾಂ ಶಿಕ್ಷಣದ ಸಂಸ್ಥೆಗಳಾಗಿದ್ದವು. ಮಕ್ತಬಗಳಲ್ಲಿ ಶಿಕ್ಷಣ ಮಟ್ಟವು ಪ್ರಾಥಮಿಕ ಹಂತವಾಗಿದ್ದು, ಮದ್ರಸಾಗಳಲ್ಲಿ ಪ್ರೌಢ ಅಥವಾ ಇನ್ನೂ ಹೆಚ್ಚಿನ ಮಟ್ಟದ್ದಾಗಿತ್ತು. ಮೈಸೂರಿನಲ್ಲಿ ಮುಸಲ್ಮಾನರ ಆಡಳಿತ ಪ್ರಬಲವಾಗಿದ್ದಾಗ (೧೭೬೧-೧೭೯೯), ಅದರಲ್ಲಿಯೂ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಮುಸಲ್ಮಾನರ ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಕಾಲಾನಂತರ ಸರ್ಕಾರವು ಸರ್ವರೂ ಹೊಂದುವಂತೆ ವ್ಯವಸ್ಥಿತ ಶಿಕ್ಷಣ ಪದ್ಧತಿಯನ್ನು ರೂಪಿಸಿದ ಕಾಲದಲ್ಲಿ ಪ್ರತ್ಯೇಕವಾಗಿ ಉರ್ದುಶಾಲೆಗಳು ಸ್ಥಾಪಿತವಾಗಿ, ಸರ್ಕಾರವು ಅವುಗಳನ್ನು ನಡೆಸುತ್ತಿತ್ತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೬೬).

೧೮೩೩ ರವರೆಗೆ ರಾಜ್ಯದಲ್ಲಿ ಶಿಕ್ಷಣವನ್ನು ಧಾರ್ಮಿಕ ನಾಯಕರೇ ನೋಡಿಕೊಳ್ಳುತ್ತಿದ್ದರು. ೧೮೩೩ ರಲ್ಲಿ ಅಂದಿನ ಮೈಸೂರು ಮಹಾರಾಜರಾದ ಮೂರನೇ ಶ್ರೀ ಕೃಷ್ಣರಾಜ್ ಒಡೆಯರ್ ಮೈಸೂರು ನಗರದಲ್ಲಿ ಒಂದು ಆಂಗ್ಲಭಾಷಾ ಶಾಲೆಯನ್ನು ಸ್ಥಾಪಿಸಿದರು. ಅಲ್ಲಿ ಶಿಕ್ಷಣವು ಉಚಿತವಾಗಿತ್ತು. ಸರ್ ಚಾರ್ಲ್ಸವುಡ್‌ನ ವರದಿಯ ಫಲವಾಗಿ ಭಾರತದ ಇತರ ಭಾಗಗಳಂತೆ ಕರ್ನಾಟಕದಲ್ಲಿಯೂ ಆಧುನಿಕ ಶಿಕ್ಷಣವು ವ್ಯವಸ್ಥಿತವಾಗಿ ೧೮೫೪ ರಲ್ಲಿ ಆರಂಭವಾಯಿತು. ವುಡ್‌ನ 'ಡಿಸ್‌ಪ್ಯಾಚ್' ಅಥವಾ 'ಪತ್ರ' ಶಿಕ್ಷಣ

ಪ್ರಗತಿಯಲ್ಲಿ ಒಂದು ಪ್ರಮುಖ ಮೈಲಿಗಲ್ಲು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯ ಪು.೪೬೭). ಇದನ್ನು ಭಾರತದಲ್ಲಿ ಇಂಗ್ಲೀಷ್ ವಿಧ್ಯಾಭ್ಯಾಸದ 'ಮ್ಯಾಗ್ನಕಾರ್ಟ' ಎಂದೇ ಕರೆಯಲಾಗಿದೆ. ಚಾರ್ಲ್ಸವುಡ್ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕ ಮಂಡಳಿಯ ಅಧ್ಯಕ್ಷನಾಗಿದ್ದು, ೧೮೫೪ ರಲ್ಲಿ ಭಾರತದ ಶಿಕ್ಷಣ ವ್ಯವಸ್ಥೆಯ ಬಗೆಗೆ ವಿವರವಾದ ಪತ್ರವೊಂದನ್ನು ಪ್ರಕಟಿಸಿದನು. ಭಾರತದಲ್ಲಿ ಪಾಶ್ಚಿಮಾತ್ಯ ಶಿಕ್ಷಣವನ್ನು ಜಾರಿಗೆ ತರಬೇಕೆಂದನು. ಪ್ರಾಥಮಿಕ ಶಿಕ್ಷಣ ದೇಶೀಯ ಭಾಷೆಯಲ್ಲಿದ್ದು, ಪ್ರೌಢಶಿಕ್ಷಣ ಇಂಗ್ಲೀಷ್ ಮತ್ತು ದೇಶೀಯ ಭಾಷೆಗಳೆರಡರಲ್ಲಿಯೂ ಇರಬೇಕೆಂದನು. ಶಿಕ್ಷಕರ ತರಬೇತಿಗೆ ಪ್ರತ್ಯೇಕ ತರಬೇತಿ ಕಾಲೇಜುಗಳಿರಬೇಕೆಂದನು. ಪ್ರತಿಯೊಂದು ಪ್ರಾಂತ್ಯದಲ್ಲಿಯೂ 'ಕಾಲೇಜು ಶಿಕ್ಷಣ ಇಲಾಖೆ' ಇರಬೇಕೆಂದನು. ಈ ಪರಿಪತ್ರದಿಂದಾಗಿ ೧೮೫೫ ರ ವೇಳೆಗೆ ಎಲ್ಲಾ ಪ್ರಾಂತ್ಯಗಳಲ್ಲು 'ಸಾರ್ವಜನಿಕ ಶಿಕ್ಷಣ ಇಲಾಖೆ' ಯನ್ನು ಸ್ಥಾಪಿಸಲಾಯಿತು. ಈ ಅವಧಿಯಲ್ಲಿ ಭಾರತದಲ್ಲಿ ಶಿಕ್ಷಣ ಪದ್ಧತಿಯು ತ್ವರಿತಗತಿಯಲ್ಲಿ ಪಾಶ್ಚಿಮಾತ್ಯೀಕರಣಗೊಂಡಿತು. ಆಗಿನ ಕಾಲದ ಬಹುತೇಕ ಶಾಲೆಗಳು ಮತ್ತು ಕಾಲೇಜುಗಳು ಐರೋಪ್ಯ ಮುಖ್ಯಾಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿದ್ದು ಕ್ರೈಸ್ತ ಧರ್ಮ ಪ್ರಚಾರಕರು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಆಸಕ್ತಿವಹಿಸಿದರು. ಕಾಲಾಂತರದಲ್ಲಿ ಭಾರತೀಯರು ಸಹ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾದರು (ಬಿ.ಎಲ್. ಗ್ರೋವರ್,೧೯೮೩, ಪು.೩೪೪-೩೪೬).

೧೮೮೨ ರಲ್ಲಿ ಬ್ರಿಟೀಷ್ ಸರ್ಕಾರವು ೧೮೫೪ ರಿಂದ ಇಲ್ಲಿಯವರೆಗಿನ ಶಿಕ್ಷಣದ ಪ್ರಗತಿಯನ್ನು ಅಧ್ಯಯನ ಮಾಡಿ ಮುಂದಿನ ಪ್ರಗತಿಗೆ ಸಲಹೆ ಮಾಡಲು ಹಂಟರ್‌ನ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಿತು. ಈ ಆಯೋಗವನ್ನು ಪ್ರಮುಖವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ವ್ಯವಸ್ಥೆಯ ಬಗೆಗೆ ಅಧ್ಯಯನ ನಡೆಸಲು ಮತ್ತು ಸುಧಾರಣೆಗಳನ್ನು ಸೂಚಿಸಲು ಕೇಳಿಕೊಳ್ಳಲಾಗಿದ್ದಿತು. ಈ ಆಯೋಗವು ಎಲ್ಲಾ ಪ್ರಾಂತ್ಯಗಳಿಗೆ ಭೇಟಿಯಿತ್ತು, ವಿಷಯ ಸಂಗ್ರಹಣೆಮಾಡಿ ೧೮೮೩ ರಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನೊಪ್ಪಿಸಿತು. ಹಂಟರ್ ಆಯೋಗವು ಕೆಲವು ಪ್ರಮುಖ ಸುಧಾರಣೆಗಳನ್ನು ಸೂಚಿಸಿತು.

ಅ. ಈ ಆಯೋಗವು ಪ್ರಾಥಮಿಕ ವಿದ್ಯಾಭ್ಯಾಸದ ಸುಧಾರಣೆಗೆ ಹೆಚ್ಚಿನ ಗಮನ ನೀಡಲು ಸರ್ಕಾರವನ್ನು ಒತ್ತಾಯಿಸಿತು. ಎಲ್ಲ ಹಂತಗಳಲ್ಲಿ ಖಾಸಗಿಯವರಿಗೂ ಅವಕಾಶ ನೀಡಲು ಬಯಸಿದರೂ ಸಹ ಪ್ರಾಥಮಿಕ ಶಿಕ್ಷಣದಲ್ಲಿ ಸರ್ಕಾರವೇ ಹೆಚ್ಚಿನ ಆಸಕ್ತಿ ವಹಿಸಬೇಕೆಂದಿತು. ಪ್ರಾಥಮಿಕ ಶಿಕ್ಷಣವನ್ನು ಜಿಲ್ಲಾ ಮತ್ತು ಪೌರ ಸಮಿತಿಗಳ ವ್ಯಾಪ್ತಿಗೆ ವರ್ಗಾಯಿಸಲು ಸೂಚನೆ ನೀಡಿತು. ಸ್ಥಳೀಯ ಸಂಸ್ಥೆಗಳು ಶಿಕ್ಷಣ ತೆರಿಗೆಯನ್ನು ಹಾಕಲು ಅಧಿಕಾರ ನೀಡಲಾಯಿತು.

ಆ. ಪ್ರೌಢಶಾಲಾ ಶಿಕ್ಷಣದ ಬಗೆಗೆ ಎರಡು ವಿಧಾನಗಳನ್ನು ಸೂಚಿಸಲಾಯಿತು. ಒಂದು ವಿಶ್ವವಿದ್ಯಾನಿಲಯದ ಪದವಿಗೆ ಅನುಕೂಲವಾಗುವ ಸಾಮಾನ್ಯ ಶಿಕ್ಷಣ, ಮತ್ತೊಂದು ವ್ಯಾಪಾರಿಕ ಮತ್ತು ಔದ್ಯೋಗಿಕ ಶಿಕ್ಷಣ.

ಇ. ಈ ಆಯೋಗವು ಶಿಕ್ಷಣ ವಲಯದಲ್ಲಿ ಖಾಸಗಿ ಆಸಕ್ತಿ ಮತ್ತು ಉದ್ಯಮವನ್ನು ಬೆಂಬಲಿಸಲು ಸರ್ವಯತ್ನ ಮಾಡಬೇಕೆಂದು ಸೂಚನೆ ನೀಡಿತು. ಇದಕ್ಕಾಗಿ ಉದಾರವಾದ ಅನುದಾನವನ್ನು ನೀಡಬೇಕೆಂದು ಮತ್ತು ಖಾಸಗಿ ಶಾಲೆಗಳು ಮತ್ತು ಸರ್ಕಾರಿ ಶಾಲೆಗಳಿಗೆ ಸಮಾನ ಮಾನ್ಯತೆ ನೀಡಬೇಕೆಂದಿತು. ಸರ್ಕಾರವು ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣ ವಲಯದಿಂದ ಆದಷ್ಟು ಬೇಗ ಹಿಂತೆಗೆಯಬೇಕೆಂದು ಸೂಚಿಸಿತು.

ಈ. ಪ್ರಾಂತೀಯ ನಗರಗಳನ್ನು ಬಿಟ್ಟು ಮಹಿಳೆಯರ ಶಿಕ್ಷಣವು ಗ್ರಾಮಾಂತರ ಪ್ರದೇಶಗಳಿಗೆ ಹರಡದೆ ಇರುವುದರ ಬಗೆಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿ, ಸರ್ಕಾರದ ಗಮನವನ್ನು ಸೆಳೆದು ಅದರ ವಿಸ್ತರಣೆಗೆ ಹೆಚ್ಚಿನ ಆಸಕ್ತಿ ವಹಿಸುವಂತೆ ಸೂಚನೆ ನೀಡಿತು. (ಬಿ.ಎಲ್.ಗ್ರೋವರ್, ೧೯೮೩, ಪು. ೩೪೬-೩೪೭).

ಈ ಆಯೋಗದ ವರದಿಯ ನಂತರದ ಮುಂದಿನ ೨೦ ವರ್ಷಗಳಲ್ಲಿ ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣದ ವರದಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲ್ಪಟ್ಟಿತ್ತು. ಹಲವಾರು ಭಾರತೀಯರು ಉದಾರವಾಗಿ ದಾನದತ್ತಿಗಳನ್ನು ನೀಡಿ ವಿದ್ಯಾಭ್ಯಾಸ ಪ್ರಗತಿಗೆ ಮತ್ತು ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಕಾರಣರಾದರು. ಹಲವು ಬಗೆಯ ಶಿಕ್ಷಣ ಸಂಸ್ಥೆಗಳು ಅಸ್ಥಿತ್ವಕ್ಕೆ ಬಂದವು (ಬಿ.ಎಲ್. ಗ್ರೋವರ್, ೧೯೮೩, ಪು.೩೪೬- ೩೪೮).

೧೮೫೪ ರ ಅವಧಿಯಲ್ಲಿ ಮೈಸೂರು, ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ನಿರ್ದೇಶಕರ ಮುಷ್ಠಿಯಲ್ಲಿತ್ತು. ಚಾರ್ಲ್ಸ್‌ವುಡನ್ ವರದಿಯ ಆಧಾರದ ಮೇಲೆ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಆಧುನಿಕ ಶಿಕ್ಷಣವನ್ನು ರೂಪಿಸಿದ್ದರು. ಡೆವೆರಿಕ್ಸ್ ಮೈಸೂರು ರಾಜ್ಯದ ಜ್ಯುಡಿಷಿಯಲ್ ಕಮೀಷನರ್ 'ಆಧುನಿಕ ಶಿಕ್ಷಣ ಯೋಜನೆ' ಯನ್ನು ಸಿದ್ಧಪಡಿಸಿದನು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೬೭). ಈ ಯೋಜನೆಯ ಪ್ರಕಾರ, ಕಮೀಷನರ್ ಅಧೀನದಲ್ಲಿ ಅವರ ನೇರ ನೇತೃತ್ವದಲ್ಲಿ ಒಂದು ಇಲಾಖೆ ಇರಬೇಕೆಂದೂ, ಅದರ ಮುಖ್ಯಸ್ಥರಾಗಿ ಶಿಕ್ಷಣ ನಿರ್ದೇಶಕರು ಇರತಕ್ಕದೆಂದೂ, ಅವರಿಗೆ ಸಹಾಯಕ ಸಿಬ್ಬಂದಿಯು ಇರತಕ್ಕದೆಂದೂ ಈ ಯೋಜನೆಯಲ್ಲಿ

ವಿವರಿಸಲಾಯಿತು. ೧೮೬೮ ರಲ್ಲಿ ಮಿ.ರೈಸ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೋಬಳಿ ಶಿಕ್ಷಣ ಪದ್ಧತಿಯನ್ನು ವಿವರಿಸಿದನು. ಇವನ ಪ್ರಕಾರ ಪ್ರತಿಯೊಂದು ಹೋಬಳಿಯಲ್ಲಿಯೂ ಒಂದೊಂದು ಶಾಲೆಯನ್ನು ಆರಂಭಿಸಬೇಕೆಂದನು. ಅದಕ್ಕೆ ಅವಶ್ಯಕವಾಗಿರುವ ಶಾಲಾ ಕಟ್ಟಡವನ್ನು ಪೂರೈಸಲಾಗುತ್ತದೆಂದನು. ೧೮೭೧-೭೨ ರ ಅವಧಿಯಲ್ಲಿ ಎಲ್ಲಾ ತಾಲ್ಲೋಕುಗಳಲ್ಲಿ 'ಮಾತೃ ಭಾಷೆ' ಗೆ ಸಂಬಂಧಪಟ್ಟ ಶಾಲೆಗಳನ್ನೇ ತೆರೆಯಬೇಕೆಂದನು. ಈ ಮೇಲ್ಕಂಡ ಎಲ್ಲಾ ಪೂರಕ ಸಂದರ್ಭಗಳಿಂದಾಗಿ ೧೯೦೦ ರ ವೇಳೆಗೆ ಪ್ರೌಢಶಾಲಾ ಶಿಕ್ಷಣ ದೊರೆಯುವ ಹಂತಕ್ಕೆ ಶಿಕ್ಷಣ ಕ್ಷೇತ್ರ ಬೆಳೆಯಿತು. ಶಿಕ್ಷಕರಿಗೆ ತರಬೇತಿ ನೀಡಲು 'ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆ' ಯನ್ನು ಎಲ್ಲಾ ಪ್ರಾಂತ್ಯದಲ್ಲೂ ಸ್ಥಾಪಿಸಲು ಇಚ್ಛಿಸಲಾಯಿತು. ತುಮಕೂರಿನಲ್ಲೂ ಶಿಕ್ಷಕರಿಗೆ ತರಬೇತಿ ನೀಡಲು 'ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆ' ಯನ್ನು ಸ್ಥಾಪಿಸಲಾಯಿತು. ಇದೇ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆಂದೇ 'ಎಂಪ್ರೆಸ್ ಗರ್ಲ್ಸ್ ಸ್ಕೂಲ' ನ್ನು ತುಮಕೂರಿನಲ್ಲಿ ತೆರೆಯಲಾಯಿತು. ೧೯೨೨-೨೩ ರ ಅವಧಿಗೆ 'ಎಂಪ್ರೆಸ್ ಗರ್ಲ್ಸ್ ಸ್ಕೂಲ'ನ್ನು ಪ್ರೌಢಶಾಲಾ ಸ್ಥಾನಕ್ಕೆ ಏರಿಸಲಾಯಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೬೬-೪೬೭). ಮೈಸೂರಿನ ರಾಜಮನೆತನಕ್ಕೆ ರಾಜ್ಯದ ಆಡಳಿತವು ದೊರೆತ ಮೇಲೆ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಅಲ್ಲಿಂದೀಚೆಗೆ ಶಿಕ್ಷಣವು ಎಲ್ಲಾ ದಿಸೆಗಳಲ್ಲೂ ಪ್ರಗತಿ ಹೊಂದಲಾರಂಭಿಸಿತು.

೧೯೧೧-೧೯೧೬ ರ ಅವಧಿಯಲ್ಲಿ ಶಿಕ್ಷಣದ ಇತಿಹಾಸದಲ್ಲಿ ಅನೇಕ ನೂತನ ಯೋಜನೆಗಳನ್ನು ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲಾಯಿತು. ೧೯೧೩ ರಲ್ಲಿ ಮೈಸೂರು ಸಂಸ್ಥಾನವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿತು. ಬರೋಡ ಸಂಸ್ಥಾನದ ನಂತರ ಕಡ್ಡಾಯ ಶಿಕ್ಷಣವನ್ನು ಆರಂಭಿಸಿದ ದೇಶೀಯ ಸಂಸ್ಥಾನಗಳಲ್ಲಿ ಮೈಸೂರು ಎರಡನೆಯದು. ೧೯೧೩ ರ ಮೈಸೂರು ಪ್ರಾಥಮಿಕ ಶಿಕ್ಷಣ ನಿಬಂಧನೆಯು ಸಾರ್ವತ್ರಿಕ ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿತು (ಸೂರ್ಯನಾಥ್‌ಯು.ಕಾಮತ್. ೧೯೮೬, ಪು..೧೨). ಇದೇ ಅವಧಿಯಲ್ಲಿ ಭಾರತದಲ್ಲಿ ಬೇರೆ ಬೇರೆ ರಾಜ್ಯಗಳು 'ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ'ನ್ನು ಜಾರಿಗೆ ತಂದವು. ಆ ಕ್ರಮವನ್ನೇ ಅನುಸರಿಸಿ ಮೈಸೂರು ರಾಜ್ಯದಲ್ಲಿಯೂ'ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್' ಪದ್ಧತಿಯನ್ನು ೧೯೧೩ ರಲ್ಲಿ ಜಾರಿಗೆ ತರಲಾಯಿತು. (ಮೈಸೂರು ಸ್ಟೇಟ್ ಗೆಜೆಟೀಯರ್,೧೯೬೯, ಪು.೪೬೭).

ಹಂಟರ್ ವರದಿಯಂತೆ, ಮೈಸೂರು ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಸಂಸ್ಥೆಗಳಿಗೆ ಅಂದರೆ ಜಿಲ್ಲಾ ಬೋರ್ಡುಗಳಿಗೆ ಮತ್ತು ನಗರ ಸಭೆಗಳಿಗೆ ವಹಿಸಿಕೊಡಲಾಯಿತು. ಈ ವರ್ಗಾವಣೆಯಾದ ಮೇಲೆ

ಶಾಲೆಗಳ ಸಂಖ್ಯೆಗಳು ಅಧಿಕವಾಗಲಿಲ್ಲ, ದಕ್ಷತೆಯು ಉತ್ತಮವಾಗಿರಲಿಲ್ಲ. ಆದುದರಿಂದ ೧೯೪೧ ರಲ್ಲಿ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಮತ್ತೆ ತನ್ನ ಅಧೀನಕ್ಕೆ ತೆಗೆದುಕೊಂಡಿತು. ೧೯೩೦ ರ 'ಮೈಸೂರು ಎಲಿಮೆಂಟರಿ ಎಜುಕೇಶನ್ ರೆಗ್ಯುಲೇಶನ್ ಕಾಯಿದೆ' ಪ್ರಕಾರ ಸ್ಥಳೀಯ ಅಧಿಕಾರಿಗಳೇ ಪ್ರಾಥಮಿಕ ಶಿಕ್ಷಣವನ್ನು ನೋಡಿಕೊಳ್ಳಬೇಕು ಮತ್ತು ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕು. ಇದೇ ಅವಧಿಯಲ್ಲಿ ೬ ರಿಂದ ೧೨ ವರ್ಷದ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯ ಮಾಡಲಾಯಿತು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ರಾಜ್ಯ ಸರ್ಕಾರವು 'ಎಜುಕೇಷನ್ ಸೆಸ್' ನ್ನು ವಿಧಿಸಿತು. ಆದರೂ ಸ್ಥಳೀಯ ಅಧಿಕಾರಿಗಳು ಪ್ರಾಥಮಿಕ ಶಿಕ್ಷಣ ಅಭಿವೃದ್ಧಿಗೆ ಅಷ್ಟೇನೂ ಮಹತ್ವವನ್ನು ನೀಡಲಿಲ್ಲ. ಆದ್ದರಿಂದಲೇ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ತನ್ನ ಅಧೀನಕ್ಕೆ ತೆಗೆದುಕೊಂಡು, ಪ್ರಾಥಮಿಕ ಶಿಕ್ಷಣಾಭಿವೃದ್ಧಿಗೆ ಶ್ರಮಿಸಿತು. ೧೯೪೧ ರಲ್ಲಿ "ಎಲಿಮೆಂಟರಿ ಎಜುಕೇಶನ್ ಆಕ್ಟ್" ನ್ನು ಫೆಬ್ರವರಿಯಲ್ಲಿ ಕಾಯಿದೆಯನ್ನಾಗಿ ರೂಪಿಸಿ ಜುಲೈ ಒಂದರಿಂದ ಜಾರಿಗೆ ತರಲಾಯಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೭೨).

ಪ್ರಾಥಮಿಕ ಶಿಕ್ಷಣ ಎಲ್ಲಿಂದ ಎಲ್ಲಿಯವರೆಗೆ ಇರಬೇಕೆಂಬುದು ಪ್ರಶ್ನೆಯಾಯಿತು. ಏಕೆಂದರೆ ವಿಭಿನ್ನ ರಾಜ್ಯಗಳು ವಿಭಿನ್ನ ಧೋರಣೆಗಳನ್ನು ಅನುಸರಿಸುತ್ತಿದ್ದವು. ೧೯೫೪–೫೫ ರ ವರೆಗೆ ೧ ರಿಂದ ೪ ನೇ ತರಗತಿಯವರೆಗೆ 'ಪ್ರಾಥಮಿಕ ಶಿಕ್ಷಣ' ಎಂದು ಕರೆಯಲಾಗುತ್ತಿತ್ತು. ೫ನೇ ತರಗತಿಯಿಂದ ೮ನೇ ತರಗತಿಯವರೆಗಿನ ಶಿಕ್ಷಣವನ್ನು 'ಮಿಡಲ್ ಸ್ಕೂಲ್' ಎಂದು ಕರೆಯಲಾಗುತ್ತಿತ್ತು. ಹೀಗೆ ಗೊಂದಲದ ಗೂಡಾಗಿದ್ದು ಪ್ರಾಥಮಿಕ ಶಿಕ್ಷಣ ಎಲ್ಲಿಂದ ಎಲ್ಲಿಯವರೆಗಿರಬೇಕೆಂದು ಅಧ್ಯಯನ ಮಾಡಲು 'ಎಜುಕೇಷನ್ ರಿಫಾರ್ಮ ಕಮಿಟಿ' ಯನ್ನು ರಚಿಸಲಾಯಿತು. ಈ ಕಮಿಟಿಯ ಪ್ರಕಾರ ನಾಲ್ಕು ವರ್ಷದ ಪ್ರಾಥಮಿಕ ಶಿಕ್ಷಣದಿಂದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಲು ಸಾಧ್ಯವಿಲ್ಲವೆಂದಿತು ೧೯೫೩ ರಲ್ಲಿ ತನ್ನ ವರದಿಯನ್ನು ಈ ಕಮಿಟಿಯು ಸರ್ಕಾರಕ್ಕೆ ಒಪ್ಪಿಸಿದಾಗ, ಪ್ರಾಥಮಿಕ ಶಿಕ್ಷಣವನ್ನು ನಾಲ್ಕು ವರ್ಷಗಳಿಗೆ ಬದಲಾಗಿ ೬ ವರ್ಷಗಳೆಂದು ಪರಿಗಣಿಸಬೇಕೆಂದಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೭೩).

ಆದರೆ ಈ ವರದಿಯಿಂದ ಸರ್ಕಾರ ತೃಪ್ತವಾಗಲಿಲ್ಲ. ಆದ್ದರಿಂದ 'ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಶನ್' ನನ್ನು ನೇಮಿಸಲಾಯಿತು. ಈ ಕಮಿಟಿಯ ವರದಿಯ ಪ್ರಕಾರ, ಮಗು ೪ ವರ್ಷಗಳ ಕಾಲ ಮಾಡುವ ಅಧ್ಯಯನವನ್ನು ಪ್ರಾಥಮಿಕ ಶಿಕ್ಷಣವೆಂದೂ, ಆನಂತರದ ೪ ವರ್ಷಗಳ ಕಾಲದ ಅಧ್ಯಯನವನ್ನು ಉನ್ನತ ಮಟ್ಟದ್ದೆಂದೂ, ಹೀಗೆ ಎಂಟು ವರ್ಷಗಳ ಕಾಲದ ಅಧ್ಯಯನವನ್ನು ಪ್ರಾಥಮಿಕ ಶಿಕ್ಷಣವೆಂದು ತನ್ನ ವರದಿಯಲ್ಲಿ ವಿವರಿಸಿತು. ಇದನ್ನು ಒಪ್ಪಿಕೊಂಡ ಸರ್ಕಾರ, ೧೯೫೫–೫೬ ರ

ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣವೆಂದರೆ ೧ ನೇ ತರಗತಿಯಿಂದ ೮ನೇ ತರಗತಿಯವರೆಗೆಂದು ಸರ್ಕಾರ ಘೋಷಿಸಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೭೫).

೧೯೫೬ ರಲ್ಲಿ ಸರ್ಕಾರ ಗಮನಿಸಿದಂತೆ, ರಾಜ್ಯದೊಳಗಡೆಯೇ ಪ್ರಾಥಮಿಕ ಶಿಕ್ಷಣ ಏಕರೂಪವಾಗಿರಲಿಲ್ಲ. ಈ ಭಿನ್ನತೆಯನ್ನು ಅಧ್ಯಯನ ಮಾಡಲು ಡಿಸೆಂಬರ್ ೧೯೫೬ ರಲ್ಲಿ ಪುನಃ ಮತ್ತೊಂದು ವಿಶೇಷ ಕಮಿಟಿಯನ್ನು ನೇಮಿಸಿತು. ಇದೇ "ಮೈಸೂರು ಶಿಕ್ಷಣ ಏಕೀಕರಣ ಸಲಹಾ ಸಮಿತಿ" (ಮೈಸೂರು ಎಜುಕೇಶನಲ್ ಇಂಟೀಗ್ರೇಷನ್ ಅಡ್ವೆಸರಿ ಕಮಿಟಿ). ಈ ಕಮಿಟಿಯ ವರದಿಯಿಂದ ಪ್ರಾಥಮಿಕ ಮತ್ತು ದ್ವಿತೀಯ ಹಂತಗಳಲ್ಲಿ ಶಿಕ್ಷಣವನ್ನು ಪುನರ್ ರಚಿಸಲಾಯಿತು. ಈ ಕಮಿಟಿಯ ಪ್ರಕಾರ ಜೂನಿಯರ್ ಪ್ರಾಥಮಿಕ ಶಾಲೆ ಎಂದರೆ ಒಂದರಿಂದ ಏಳನೇ ತರಗತಿಯವರೆಗೆ, ಮಾಧ್ಯಮಿಕ ಶಾಲೆ ಎಂದರೆ ಒಂದರಿಂದ ನಾಲ್ಕನೇ ತರಗತಿಯವರೆಗೆ, ಸೀನಿಯರ್ ಪ್ರೈಮರಿ ಇಲ್ಲವೆ ಮಾಧ್ಯಮಿಕ ಶಾಲೆ ಎಂದರೆ ಐದರಿಂದ ಏಳನೇ ತರಗತಿವರೆಗೆ, ಹೀಗೆ ಏಳು ವರ್ಷಗಳ ಕಾಲದ ಅಧ್ಯಯನವನ್ನು ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಯೆಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಸರ್ಕಾರವೂ ಕೂಡ ಈ ವರದಿಯನ್ನು ಒಪ್ಪಿಕೊಂಡಿತು. ಪ್ರಾಥಮಿಕ ಶಿಕ್ಷಣದಲ್ಲಿ ಏಕತೆಯನ್ನು ತರಲು ಇದು ಒಂದು ಮುಖ್ಯ ಹೆಜ್ಜೆಯಾಯಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೭೫-೪೭೬).

ಮೈಸೂರು ಶಿಕ್ಷಣ ಏಕೀಕರಣ ಸಲಹಾ ಸಮಿತಿಯ ಪ್ರಕಾರ ರಾಜ್ಯದಲ್ಲಿ ನಾಲ್ಕು ವರ್ಷಗಳ 'ಹೈಯರ್ ಸೆಕೆಂಡರಿ ಎಜುಕೇಷನ್' ಏಕರೀತಿಯದ್ದಾಗಿರಬೇಕು. ಕಾಲೇಜು ಪೂರ್ವ ಶಿಕ್ಷಣ ಒಟ್ಟಾರೆಯಾಗಿ ಹನ್ನೊಂದು ವರ್ಷಗಳಾಗಿರಬೇಕೆಂದು ತನ್ನ ವರದಿಯಲ್ಲಿ ತಿಳಿಸಿತು. ಸರ್ಕಾರ ಈ ವರದಿಯನ್ನು ಒಪ್ಪಿಕೊಂಡು ಹೈಯರ್ ಸೆಕೆಂಡರಿ ಸ್ಕೂಲ್ ಅಥವಾ ವಿವಿಧೋದ್ದೇಶ ಪ್ರೌಢಶಾಲೆಗಳ (ಮಲ್ಟಿ ಪರಪಸ್ ಸ್ಕೂಲ್) ಯೋಜನೆಯನ್ನು ೧೯೫೫-೫೬ ರಲ್ಲಿ ಜಾರಿಗೆ ತಂದಿತು. ೧೯೬೦-೬೧ ರ ಅವಧಿಯಲ್ಲಿ ಅಧಿಕೃತವಾಗಿ ಆಚರಣೆಗೆ ಬಂದಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೮೪).

ಈ ಅವಧಿಯಲ್ಲಿ ಪ್ರೌಢಶಾಲೆಗಳಲ್ಲಿ ಮೂರು ರೀತಿಯ ಪ್ರೌಢಶಾಲೆಗಳನ್ನು ಕಾಣಬಹುದಾಗಿದೆ- ಮುನಿಸಿಪಲ್ ಹೈಸ್ಕೂಲು, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳು. ಸ್ಥಳೀಯ ಸಂಸ್ಥೆಗಳು ಶಿಕ್ಷಣದ ಮಹತ್ವವನ್ನರಿತು ಪ್ರೌಢಶಾಲೆಗಳನ್ನು ಸ್ಥಾಪಿಸಲು ಇಚ್ಛಿಸಿದವು. ಸರ್ಕಾರವೂ ಇಂತಹ ಸ್ಥಳೀಯ ಸಂಸ್ಥೆಗಳಿಗೆ ಸಹಾಯ ಹಸ್ತ ನೀಡಲು ಇಚ್ಛಿಸಿತು. ೧೯೬೬-೬೭ ರ ಅವಧಿಯಲ್ಲಿ ಗುಬ್ಬಿ, ತುರುವೇಕೆರೆ,

ಪಾವಗಡ ಮತ್ತು ಶಿರಾ ತಾಲ್ಲೋಕುಗಳಲ್ಲಿ ಮುನಿಸಿಪಲ್ ಪ್ರೌಢಶಾಲೆಗಳನ್ನು ಸ್ಥಾಪಿಸಲಾಗಿತ್ತು. ಸಾರ್ವಜನಿಕ ಸಂಘಗಳು ಹಾಗೂ ವೈಯಕ್ತಿಕವಾಗಿಯೂ ಪ್ರೌಢಶಾಲೆಗಳನ್ನು ಸ್ಥಾಪಿಸಲು ಸರ್ಕಾರ ಅನುಮತಿ ನೀಡಿದ್ದರಿಂದ, ಅನುದಾನಿತ ಶಾಲೆಗಳನ್ನು ಸ್ಥಾಪಿಸಲಾಯಿತು. "ಮೈಸೂರು ಎಜುಕೇಷನಲ್ ಗ್ರಾಂಟ್ ಇನ್ ಕೋಡ್" ನಿಯಮದ ಪ್ರಕಾರ ಪ್ರೌಢಶಾಲೆಗಳಿಗೆ ಸರ್ಕಾರವು ಅನುದಾನವನ್ನು ನೀಡಿತು. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸುವ ಶಾಲೆಗಳಿಗೆ ಶೇ. ೮೫ ರಷ್ಟು ಅನುದಾನವನ್ನು, ನಗರ ಪ್ರದೇಶಗಳಲ್ಲಿ ಸ್ಥಾಪಿಸುವ ಪ್ರೌಢಶಾಲೆಗಳಿಗೆ ಶೇ.೮೦ ರಷ್ಟು ಅನುದಾನವನ್ನು ಸರ್ಕಾರ ನೀಡಲು ಇಚ್ಛಿಸಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೮೫-೪೮೬). ೧೯೪೮ ರಲ್ಲಿ ಜಿಲ್ಲಾ ಬೋರ್ಡುಗಳು ಪ್ರೌಢಶಾಲೆಗಳನ್ನು ಆರಂಭಿಸಿದವು. ರಾಜ್ಯದಲ್ಲಿ ಪ್ರೌಢಶಿಕ್ಷಣ ವಿಸ್ತರಿಸಲು ಇದು ಕಾರಣವಾಯಿತು (ಸೂರ್ಯನಾಥ್ ಯು. ಕಾಮತ್, ೧೯೮೬, ಪು. ೧೬).

ಏಕೀಕರಣದ (೧೯೫೪) ಮೊದಲ ದಿನಗಳಲ್ಲಿ 'ಸೆಕೆಂಡರಿ ಎಜುಕೇಷನ್' ಪದದ ಅರ್ಥ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿತ್ತು. ಕೆಲವು ಪ್ರದೇಶಗಳಲ್ಲಿ ೧ ರಿಂದ ೧೧ ನೇ ತರಗತಿಯವರೆಗೆ ಇದ್ದರೆ, ಇನ್ನೂ ಕೆಲವು ಕಡೆ ೧ ರಿಂದ ೧೦ ನೇ ತರಗತಿಯವರೆಗೆ ಇತ್ತು. ಕೆಲವು ಶಾಲೆಗಳಲ್ಲಿ ೮ ರಿಂದ ೧೧ ನೇ ತರಗತಿಗಳನ್ನು ಪ್ರೌಢಶಾಲೆ ಎಂದು ಕರೆದರೆ, ಇನ್ನೂ ಕೆಲವು ಶಾಲೆಗಳಲ್ಲಿ ೮ ರಿಂದ ೧೦ ನೇ ತರಗತಿಯವರೆಗಿನ ಶಾಲೆಗಳಿಗೆ ಪ್ರೌಢಶಾಲೆಗಳೆಂದು ಕರೆಯುತ್ತಿದ್ದರು. ಉದಾ:- ಕಲ್ಬುರ್ಗಿ ಪ್ರದೇಶದಲ್ಲಿ ಪ್ರೌಢಶಿಕ್ಷಣದ ಅವಧಿಯು ಹತ್ತು ವರ್ಷದ್ದಾಗಿದ್ದು, ಪ್ರಾಥಮಿಕ ಶಿಕ್ಷಣದ ಅವಧಿಯು ಮತ್ತು ಪ್ರೌಢಶಿಕ್ಷಣವೂ ಸೇರಿಕೊಂಡಿತ್ತು. ಬೇರೆಲ್ಲ ಪ್ರದೇಶಗಳ ಶಿಕ್ಷಣದ ಅವಧಿಯು ಹನ್ನೊಂದು ವರ್ಷದಾಗಿದ್ದು, ಪ್ರಾಥಮಿಕ ಶಿಕ್ಷಣದ ಅವಧಿಯು ಏಳು ಅಥವಾ ಎಂಟು ವರ್ಷದ್ದಾಗಿತ್ತು. ಹೀಗೆ ಬೇರೆ ಬೇರೆ ವಲಯಗಳಲ್ಲಿದ್ದ ಪ್ರೌಢಶಾಲೆ ಶಿಕ್ಷಣದ ರೀತಿಯೂ ಬೇರೆ ಬೇರೆ ಆಗಿದ್ದು ಪಠ್ಯವಸ್ತು ಮತ್ತು ಪರೀಕ್ಷೆಗಳಲ್ಲಿ ಭಿನ್ನತೆ ಇದ್ದುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಶಿಕ್ಷಣ ಏಕತಾ ಸಲಹಾ ಸಮಿತಿಯು ಪ್ರೌಢಶಾಲಾ ಶಿಕ್ಷಣವು ನಾಲ್ಕು ವರ್ಷದ್ದಾಗಿರಬೇಕೆಂದು ಶಿಫಾರಸ್ಸು ಮಾಡಿತ್ತು. ಆದರೆ ೧೯೬೨-೬೩ ರ ಹೊತ್ತಿಗೆ ಪ್ರೌಢಶಾಲಾ ಶಿಕ್ಷಣದಲ್ಲಿ ಏಕರೂಪತೆ ಕಂಡು ಬಂದು ಪಠ್ಯವಸ್ತು ಮತ್ತು ಪರೀಕ್ಷೆಯು ಎಲ್ಲಾ ಶಾಲೆಗಳಲ್ಲೂ ಒಂದೇ ಆದವು. ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ೧೯೬೬ ರಲ್ಲಿ ಒಂದು ಶಾಸನಬದ್ಧ ಸಂಸ್ಥೆಯಾಯಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ನಿರ್ವಹಿಸುವ ಕಾರ್ಯವನ್ನು ಈ ಮಂಡಳಿಗೆ ವಹಿಸಲಾಯಿತು (ಸೂರ್ಯನಾಥ್.ಯು.ಕಾಮತ್, ೧೯೮೬, ಪು. ೧೮-೨೦).

ತುಮಕೂರು ಜಿಲ್ಲೆಯಲ್ಲಿ 'ಎಂಪ್ರೆಸ್ ಗರ್ಲ್ಸ್ ಸ್ಕೂಲ್' ಪ್ರಥಮ ಶಾಲೆಯಾಗಿದ್ದು, ೧೯೨೨-೨೩ ರ ಅವಧಿಯಲ್ಲಿ ಪ್ರೌಢಶಾಲಾ ಮಟ್ಟಕ್ಕೆ ಈ ಶಾಲೆಯನ್ನು ಉನ್ನತ ಸ್ಥಾನಕ್ಕೇರಿಸಲಾಯಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೬೭). ಆರಂಭಕಾಲದಿಂದಲೂ ಖಾಸಗೀ ಸಂಸ್ಥೆಗಳು ಶಿಕ್ಷಣಕ್ಕೆ ತಕ್ಕ ಸಹಾಯವನ್ನು ಕೊಡುತ್ತಾ ಬಂದಿವೆ. ಶಿಕ್ಷಣದಲ್ಲಿ ಪ್ರಗತಿಯಾಗಲು ಇದು ಮುಖ್ಯ ಕಾರಣ. ತುಮಕೂರು ಜಿಲ್ಲೆಯಲ್ಲಿ ವಿದ್ಯುಕ್ತವಾಗಿ ಶಾಲೆಯನ್ನು ಪ್ರಾರಂಭಿಸಿದವರೆಂದರೆ ಚಿಕ್ಕನಾಯ್ಕನಹಳ್ಳಿಯ ಜಿ.ವಿ. ನಾರಾಯಣಮೂರ್ತಿಯವರು. ಜಿ.ವಿ. ನಾರಾಯಣಮೂರ್ತಿ ೧೯೪೩ ರಲ್ಲಿ ಚಿಕ್ಕನಾಯ್ಕನಹಳ್ಳಿಯಲ್ಲಿ "ದೇಶೀಯ ವಿದ್ಯಾಪೀಠ" ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಇದು ತುಮಕೂರು ಜಿಲ್ಲೆಯ ಪ್ರಥಮ ಖಾಸಗಿ ಪ್ರೌಢಶಾಲೆ. ಜಿ.ವಿ.ನಾರಾಯಣಮೂರ್ತಿ ಶಿಕ್ಷಣ ತಜ್ಞರಾಗಿ, ಸಮಾಜ ಸೇವಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಕನಕಪುರ, ಮಾಯಸಂದ್ರ, ಚಿಕ್ಕನಾಯ್ಕನಹಳ್ಳಿಗಳಲ್ಲಿ ಹಲವು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿದರು (ಜಯಮಂಗಲಿ, ೨೦೦೨. ಪು..೨೪೨).

ತುರುವೇಕೆರೆ ತಾಲ್ಲೋಕಿನ ಬಾಣಸಂದ್ರದ ಹುಚ್ಚೇಗೌಡರು ಹುಟ್ಟು ಹೋರಾಟಗಾರರು. ಶಿಕ್ಷಣ ಎಲ್ಲರಿಗೂ ತಲುಪಬೇಕೆಂಬ ಅಪಾರ ಆಸೆ ಇತ್ತು. ಮೊದಲು ಬಾಣಸಂದ್ರ ತಿಪಟೂರು ತಾಲ್ಲೋಕಿಗೆ ಒಳಪಟ್ಟಿತ್ತು. ತಿಪಟೂರಿನಲ್ಲಿ ಒಕ್ಕಲಿಗ ವಿದ್ಯಾರ್ಥಿಗಳಿಗೆಂದೇ ೧೯೩೫ ರಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಇವರು ತುಮಕೂರಿನ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ೧೯೪೭ ರಿಂದ ಗಣನೀಯ ಸೇವೆಯನ್ನು ಐದು ವರ್ಷಗಳ ಕಾಲ ಸಲ್ಲಿಸಿದರು. ಆ ಸಮಯದಲ್ಲಿ ಮಾಯಸಂದ್ರದಲ್ಲಿ ನೆಹರು ಅವರ ಹೆಸರಿನಲ್ಲಿ ಪ್ರೌಢಶಾಲೆಯನ್ನು ತೆರೆಯಲು ಅಲ್ಲಿಯ ಗ್ರಾಮಸ್ಥರು ಇಚ್ಛಿಸಿದರು. ಆದರೆ ಕಟ್ಟಡವಿರಲಿಲ್ಲ. ಹುಚ್ಚೇಗೌಡರ ಬಳಿ ಹೋಗಿ ಮಾಯಸಂದ್ರದ ಪ್ರವಾಸಿ ಮಂದಿರವನ್ನು ಕೇಳಿಕೊಂಡಾಗ, ತಿಂಗಳಿಗೆ ಒಂದು ರೂ. ಬಾಡಿಗೆಗೆ ಪ್ರವಾಸಿ ಮಂದಿರವನ್ನು ಕೊಡಲು ಹುಚ್ಚೇಗೌಡರು ಇಚ್ಛಿಸಿದರು. ಇದರಿಂದ ಪ್ರಭಾವಿತರಾದ ಹುಚ್ಚೇಗೌಡರು ಶಿಕ್ಷಣ ಪ್ರಸಾರ ಕೈಗೊಳ್ಳಲು 'ಶ್ರೀ ವಿದ್ಯಾವರ್ಧಕ ಸಹಕಾರ ಸಂಘ' ವನ್ನು ಹುಟ್ಟು ಹಾಕಿ, ೧೯೫೫ ರಲ್ಲಿ ಪ್ರೌಢಶಾಲೆಯನ್ನು ಆರಂಭಿಸಿದರು. ಗೌಡರು ಶಾಲೆ ಪ್ರಾರಂಭಿಸಲು ತಮ್ಮ ಮನೆಯನ್ನೇ ಬಿಟ್ಟುಕೊಟ್ಟಿದ್ದರು. ಈಗ ಅಲ್ಲಿ "ಶ್ರೀ ವಿದ್ಯಾವರ್ಧಕ ಸಹಕಾರ ಸಂಘ ಸಂಯುಕ್ತ ಪದವಿ-ಪೂರ್ವ ಕಾಲೇಜು" ಇದೆ (ಕವಿತಾಕೃಷ್ಣ, ೨೦೦೩, ಪು. ೨೪-೨೭).

ಜಿಲ್ಲಾ ಕೇಂದ್ರವಾದ ತುಮಕೂರಿನಲ್ಲಿ ಒಂದೇ ಸರ್ಕಾರಿ ಪ್ರೌಢಶಾಲೆ ೧೯೪೩ ರವರೆಗೂ ಇತ್ತು. ಮಕ್ಕಳ ಸಂಖ್ಯೆ ಅಧಿಕವಾಗಿ ಒಂದೇ ಒಂದು ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆಯುವುದು ದುರ್ಲಭವಾಗಿತ್ತು.

ಈ ಪರಿಸ್ಥಿತಿಯನ್ನು ಮನಗಂಡು ಶಿವಕುಮಾರಸ್ವಾಮೀಜಿಯವರು ೧೯೪೪ ರಲ್ಲಿ "ಶ್ರೀ ಸಿದ್ಧಗಂಗಾ ಪ್ರೌಢಶಾಲೆ" ಯನ್ನು ಸ್ಥಾಪಿಸಿದರು (ಸಿದ್ಧಗಂಗಾಶ್ರೀ, ೧೯೮೧, ಪು. ೨೭೮).


ದಲಿತರ ಉದ್ಧಾರಕ್ಕೆ ೧೯೪೨ ರಲ್ಲಿ ಕೆಲಸಕ್ಕೆ (ತುಮಕೂರಿನ ನಾರ್ಮಲ್ ಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕ) ರಾಜೀನಾಮೆ ಇತ್ತು, ಸಮಾಜ ಸೇವೆಗೆ ಅದರಲ್ಲೂ ದಲಿತೋದ್ಧಾರಕ್ಕೆ ಟೊಂಕ ಕಟ್ಟಿ ನಿಂತ ಧೀಮಂತ ವ್ಯಕ್ತಿ ಹೆಚ್.ಎಂ.ಗಂಗಾಧರಯ್ಯ. ಸಿದ್ಧಗಂಗಾ ಕ್ಷೇತ್ರವನ್ನೇ ಮಾದರಿಯಾಗಿಟ್ಟಕೊಂಡು ವ್ಯಕ್ತಿಯೇ ಶಕ್ತಿಯಾಗಿ ಕಟ್ಟಿದ ಶಿಕ್ಷಣ ಸಂಸ್ಥೆ "ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ". ೧೯೫೯ ರಲ್ಲಿ ಪ್ರಾರಂಭವಾದ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜುಗಳು, ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮೂಲಕ ಬೆಳೆದು ನಿಂತಿದೆ. ಎಲ್ಲರಿಗೂ ಶಿಕ್ಷಣ ದೊರೆಯಬೇಕೆಂಬ ಹಂಬಲದಿಂದ ೧೯೫೯ ರಲ್ಲಿ ಗೊಲ್ಲಹಳ್ಳಿಯಲ್ಲಿ (ಈಗ ಸಿದ್ಧಾರ್ಥ ನಗರ) ಸಿದ್ಧಾರ್ಥ ಪ್ರೌಢಶಾಲೆಯನ್ನು ಆರಂಭಿಸಿದರು (ಜಯಮಂಗಲಿ ೨೦೦೨, ಪು.೨೫೭). ಸಿದ್ಧಾರ್ಥ ಸಂಸ್ಥೆಯ ಮಹತ್ವಪೂರ್ಣ ಮತ್ತೊಂದು ಸಾಧನೆಯೆಂದರೆ ಮಹಾಮಾನವತಾವಾದಿ ಗೌತಮಬುದ್ಧನ ಉಪದೇಶಗಳನ್ನು ಬೋಧಿಸಲು ಶಾಲೆಗಳನ್ನು ಪ್ರಾರಂಭಿಸಿ, ಬೌದ್ಧ ಗುರುಗಳಿಂದ ವಿದ್ಯಾರ್ಥಿಗಳಿಗೆ ಬುದ್ಧನ ನೀತಿ ತತ್ವಗಳನ್ನು ಬೋಧಿಸುವ, ಸಾರುವ ಕೈಂಕರ್ಯವನ್ನು ಕೈಗೊಂಡಿರುವುದು ಇತಿಹಾಸದ ನೆನಹುಗಳನ್ನು ಮುಂದಿಡುತ್ತದೆ. ಶಿವಕುಮಾರಸ್ವಾಮೀಜಿಯವರನ್ನು 'ಶಿಕ್ಷಣ ಪ್ರಸಾರಕ' ಎಂದು ಗೌರವಿಸಿದರೆ, ಹೆಚ್.ಎಂ.ಗಂಗಾಧರಯ್ಯನವರನ್ನು 'ಶಿಕ್ಷಣ ಭೀಷ್ಮ' ಎಂದು ಗೌರವಿಸಲಾಗಿದೆ.


ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳೊಂದಿಗೆ ಅನೇಕ ಮಠಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಪ್ರಗತಿಗೆ ಕಾರಣವಾಗಿವೆ ಹಾಗೂ ಪೂರಕವಾಗಿವೆ. ಇವುಗಳು ತುಮಕೂರು ಜಿಲ್ಲೆಯ ಪ್ರಗತಿಯ ಧ್ಯೋತಕಗಳು, ಅಭಿವೃದ್ಧಿ ಮಾರ್ಗದ ದಾರಿದೀಪಗಳು ಎಂದರೆ ಅತಿಶಯೋಕ್ತಿಯಲ್ಲ. ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಒಟ್ಟು ಶಾಲೆಗಳ ಸಂಖ್ಯೆ ಈ ಕೆಳಕಂಡಂತಿದೆ.

ಪಟ್ಟಿ ೧ : ತುಮಕೂರು ಜಿಲ್ಲೆಯ ಒಟ್ಟು ಕಿರಿಯ, ಹಿರಿಯ, ಮತ್ತು ಪ್ರೌಢಶಾಲೆಗಳ ಸಂಖ್ಯೆ

ವರ್ಷ	ಒಟ್ಟು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	ಒಟ್ಟು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	ಒಟ್ಟು ಪ್ರೌಢಶಾಲೆಗಳ ಸಂಖ್ಯೆ
೧೯೪೦-೪೧	೮೫೧	೦	೦
೧೯೬೦-೬೧	೧೪೧೨	೦	೦
೧೯೬೬-೬೭	೦	೦	೯೦
೩೧ ಮಾರ್ಚ್ ೧೯೬೮	೧೬೮೧	೨೯೭	೦
೨೦೦೨-೨೦೦೩	೨೩೨೭	೧೫೨೨	೫೪೮
೨೦೦೫-೦೬	೨೩೨೫	೧೫೮೧	೫೨೮

ಆಧಾರ : ಅ. ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೭೪ – ೪೮೭.
ಆ. ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ, ೨೦೦೨-೦೩, ಪು.೮-೨೯.
ಇ. ಸಮಗ್ರ ಅಂಕಿ-ಅಂಶ, ೨೦೦೬ ಪು.೯-೩೫.





ಮೇಲ್ಕಂಡ ಅಂಕಿ-ಅಂಶಗಳನ್ನು ಗಮನಿಸಿದರೆ ೧೯೪೦-೪೧ ರಲ್ಲಿ ಒಟ್ಟು ೮೫೧ ಕಿರಿಯ ಪ್ರಾಥಮಿಕ ಶಾಲೆಗಳಿದ್ದು, ೧೯೬೦-೬೧ ರಲ್ಲಿ ೧೪೧೨ ಕ್ಕೆ ಹೆಚ್ಚಾಗಿವೆ. ಮಾರ್ಚ್ ೩೧, ೧೯೬೮ ರ ವೇಳೆಗೆ ೧೬೮೧ ಕಿರಿಯ ಪ್ರಾಥಮಿಕ ಶಾಲೆಗಳಿದ್ದು, ೨೦೦೨-೨೦೦೩ ರ ಅವಧಿಯಲ್ಲಿ ಒಟ್ಟು ೨೩೨೭ ಶಾಲೆಗಳಿವೆ. ೨೦೦೫-೦೬ ರಲ್ಲಿ ಒಟ್ಟು ೨೩೨೫ ಶಾಲೆಗಳಿವೆ. ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಬೃಹತ್ ಪ್ರಮಾಣದಲ್ಲಿ ಅಧಿಕವಾಗಿವೆ. ಮಾರ್ಚ್ ೩೧, ೧೯೬೮ ರಲ್ಲಿ ಕೇವಲ ೨೯೭ ಇದ್ದ ಶಾಲೆಗಳ ಸಂಖ್ಯೆ, ೨೦೦೨-೨೦೦೩ ರಲ್ಲಿ ೧೫೨೨ ರಿಂದ ೨೦೦೫-೦೬ ರ ಅವಧಿಗೆ ೧೫೮೧ ಕ್ಕೆ ಏರಿದೆ. ಪ್ರೌಢಶಾಲೆಗಳ ಸಂಖ್ಯೆಯು ಅಧಿಕವಾಗಿರುವುದು ಕಂಡುಬರುತ್ತದೆ. ೧೯೬೬-೬೭ ರ ಅವಧಿಯಲ್ಲಿ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ೯೦ ಇದ್ದದ್ದು, ೨೦೦೨-೦೩ ರ ಅವಧಿಯಲ್ಲಿ ೫೪೮ ಕ್ಕೆ ಏರಿದೆ. ಆದರೆ ೨೦೦೫-೦೬ ರ ಅವಧಿಯಲ್ಲಿ ೫೨೮ ಕ್ಕೆ ಇಳಿದಿದೆ.


ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಪ್ರಮುಖ ಪಾತ್ರವನ್ನು ವಹಿಸಬೇಕೆಂದು ಹಂಟರ್ ಆಯೋಗದ ವರದಿಯಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಹಾಗೆಯೇ ಖಾಸಗಿಯವರು ಶಾಲೆಗಳನ್ನು ಸ್ಥಾಪಿಸಿದಲ್ಲಿ ಅನುದಾನವನ್ನು ನೀಡಲಾಗುವುದೆಂದು ಪ್ರಸ್ತಾಪಿಸಲಾಗಿತ್ತು. ತುಮಕೂರು ಜಿಲ್ಲೆಯಲ್ಲಿಯೂ ಸರ್ಕಾರ ಶಾಲೆಗಳನ್ನು ನಡೆಸುವುದರಲ್ಲಿ ಮುಂಚೂಣಿಯಲ್ಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳು, ಖಾಸಗಿ ಅನುದಾನಿತ ಶಾಲೆಗಳು ಮತ್ತು ಖಾಸಗಿ ಅನುದಾನರಹಿತ ಶಾಲೆಗಳೆಂದು ಸ್ಪಷ್ಟವಾಗಿ ವಿವರಿಸಲಾಗಿದೆ.

ಆಡಳಿತದ ಅನುಕೂಲಕ್ಕಾಗಿ ತುಮಕೂರು ಜಿಲ್ಲೆಯನ್ನು ೧೦ ತಾಲ್ಲೋಕುಗಳಾಗಿ, ಶೈಕ್ಷಣಿಕ ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯನ್ನು ದಕ್ಷಿಣ ಮತ್ತು ಉತ್ತರ ವಲಯಗಳನ್ನಾಗಿ ವಿಂಗಡಿಸಲಾಗಿದೆ. ತುಮಕೂರು ದಕ್ಷಿಣ ವಲಯವು ೬ ತಾಲ್ಲೋಕುಗಳನ್ನು, ಉತ್ತರ ವಲಯವು ೪ ತಾಲ್ಲೋಕುಗಳನ್ನು ಒಳಗೊಂಡಿದೆ. ತುಮಕೂರು ದಕ್ಷಿಣ ವಲಯದ ಕೇಂದ್ರ ಕಛೇರಿ ತುಮಕೂರಿನಲ್ಲಿದ್ದು, ತುಮಕೂರು, ತಿಪಟೂರು, ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ಕುಣಿಗಲ್ ಮತ್ತು ಗುಬ್ಬಿ ತಾಲ್ಲೋಕುಗಳನ್ನೊಳಗೊಂಡಿದೆ. ತುಮಕೂರು ಉತ್ತರ ವಲಯದ ಕೇಂದ್ರ ಕಛೇರಿ ಮಧುಗಿರಿಯಲ್ಲಿದ್ದು, ಮಧುಗಿರಿ, ಪಾವಗಡ, ಸಿರಾ ಮತ್ತು ಕೊರಟಗೆರೆ ತಾಲ್ಲೋಕುಗಳನ್ನೊಳಗೊಂಡಿದೆ (ಜಿಲ್ಲಾ ಪಂಚಾಯತ್ ಆಡಳಿತ ವರದಿ, ೨೦೦೩-೦೪, ಪು.೩೦).

ಪಟ್ಟಿ ೨ : ಸರ್ಕಾರಿ, ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಸಂಖ್ಯೆ

	ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ			ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ			ಪ್ರೌಢಶಾಲೆಗಳ ಸಂಖ್ಯೆ		
ವರ್ಷ	ಸರ್ಕಾರಿ	ಖಾಸಗಿ ಅನು ದಾನಿತ	ಖಾಸಗಿ ಅನುದಾನ ರಹಿತ	ಸರ್ಕಾರಿ	ಖಾಸಗಿ ಅನು ದಾನಿತ	ಖಾಸಗಿ ಅನುದಾನ ರಹಿತ	ಸರ್ಕಾರಿ	ಖಾಸಗಿ ಅನು ದಾನಿತ	ಖಾಸಗಿ ಅನು ದಾನರಹಿತ
೨೦೦೨–೨೦೦೩	೨೨೫೧ ೯೬.೭೩%	೦೯ ೦.೩೯%	೬೭ ೨.೮೮%	೧೩೧೯ ೮೬.೬೬%	೫೭ ೩.೭೫%	೧೪೬ ೯.೫೯%	೧೪೧ ೨೫.೭೩%	೨೨೬ ೪೧.೨೪%	೧೮೧ ೩೩.೦೨%
		ಒಟ್ಟು	೨೩೨೭		ಒಟ್ಟು	೧೫೨೨		ಒಟ್ಟು	೫೪೮
೨೦೦೫–೨೦೦೬	೨೨೧೨ ೯೫.೧೪%	೧೧ ೦.೪೭%	೧೦೨ ೪.೩೮%	೧೩೦೫ ೮೨.೫೪%	೮೧ ೫.೧೨%	೧೯೫ ೧೨.೩೩%	೧೭೪ ೩೨.೯೫%	೨೩೨ ೪೩.೯೩%	೧೨೨ ೨೩.೧೦%
		ಒಟ್ಟು	೨೩೨೫		ಒಟ್ಟು	೧೫೮೧		ಒಟ್ಟು	೫೨೮

ಆಧಾರ: ಅ. ಶೈಕ್ಷಣಿಕ ಅಂಕಿ–ಅಂಶಗಳ ಪಕ್ಷಿನೋಟ, ೨೦೦೨–೦೩, ಪು.೮–೨೯.
ಆ. ಸಮಗ್ರ ಅಂಕಿ–ಅಂಶ, ೨೦೦೬, ಪು. ೯–೩೫.





೨೦೦೨-೨೦೦೩ ರಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಒಟ್ಟು ೨೨೫೧ ಇದ್ದದ್ದು ೨೦೦೫-೦೬ ರಲ್ಲಿ ಇದರ ಸಂಖ್ಯೆ ೨೨೧೨ ಕ್ಕೆ ಇಳಿದಿದೆ. ಇದಕ್ಕೆ ಕಾರಣ ಕೆಲವು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಶಾಲೆಗೆ ಪ್ರವೇಶಾತಿ ಪಡೆಯದಿರುವುದು ಇಲ್ಲವೆ ಅರ್ಧದಲ್ಲಿಯೇ ಶಾಲೆ ಬಿಟ್ಟಿರುವುದು ಕಾರಣವಿರುತ್ತದೆ. ಆದರೆ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಸಂಖ್ಯೆ ಇದಕ್ಕೆ ವ್ಯತಿರಿಕ್ತವಾಗಿದೆ. ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ ೨೦೦೨-೦೩ ರಲ್ಲಿ ೯ ಇದ್ದದ್ದು, ೨೦೦೫-೦೬ ರಲ್ಲಿ ೧೧ ಕ್ಕೆ ಏರಿದೆ. ಖಾಸಗಿ ಆನುದಾನರಹಿತ ಶಾಲೆಗಳ ಸಂಖ್ಯೆ ೨೦೦೨-೦೩ ರಲ್ಲಿ ೬೭ ಇದ್ದದ್ದು, ೨೦೦೫-೦೬ ರಲ್ಲಿ ೧೦೨ ಕ್ಕೆ ಏರಿದೆ. ಸರ್ಕಾರಿ ಕಿರಿಯ ಶಾಲೆಗಳ ಸಂಖ್ಯೆ ಶೇ. ೯೬.೭೩ ರಿಂದ ಶೇ. ೯೫.೧೪ ಕ್ಕೆ ಇಳಿದರೆ, ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ ಶೇ. ೦.೩೯ ರಿಂದ ಶೇ. ೦.೪೭ ಕ್ಕೆ ಏರಿದ್ದು, ಖಾಸಗಿ ಅನುದಾನರಹಿತ ಶಾಲೆಗಳ ಸಂಖ್ಯೆ ಶೇ.೨.೮೮ ರಿಂದ ಶೇ.೪.೩೮ ಕ್ಕೆ ಬೃಹತ್ ಸಂಖ್ಯೆಯಲ್ಲಿ ಅಧಿಕಗೊಂಡಿದೆ.

೨೦೦೨-೨೦೦೩ ರಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಒಟ್ಟು ೧೩೧೯ ಇದ್ದದ್ದು, ೨೦೦೫-೦೬ ರಲ್ಲಿ ೧೩೦೫ ಕ್ಕೆ ಇಳಿದಿದೆ. ಶೇ. ೮೬.೬೬ ರಿಂದ ಶೇ. ೮೨.೫೪ ಕ್ಕೆ ಇಳಿದಿದೆ. ಆದರೆ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಸಂಖ್ಯೆ ಅಧಿಕಗೊಂಡಿದೆ. ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ ೫೭ ರಿಂದ ೮೧ ಕ್ಕೆ ಹೆಚ್ಚಾಗಿದ್ದು, ಶೇ. ೩.೭೫ ರಿಂದ ಶೇ. ೫.೧೨ ಕ್ಕೆ ಹೆಚ್ಚಾಗಿದೆ. ಖಾಸಗಿ ಅನುದಾನರಹಿತ ಶಾಲೆಗಳ ಸಂಖ್ಯೆ ೧೪೬ ಶಾಲೆಗಳಿಂದ ೧೯೫ ಕ್ಕೇರಿದೆ. ಶೇಕಡಾವಾರು ೯.೫೯ ರಿಂದ ಶೇ. ೧೨.೩೩ ಕ್ಕೇರಿದೆ.

ತುಮಕೂರು ಜಿಲ್ಲೆಯಲ್ಲಿ ೨೦೦೨-೦೩ ರಲ್ಲಿ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ೫೪೮. ಆದರೆ ೨೦೦೫-೦೬ ರಲ್ಲಿ ಪ್ರೌಢಶಾಲೆಗಳ ಸಂಖ್ಯೆ ೫೨೮ ಕ್ಕೆ ಇಳಿದಿದೆ. ಒಟ್ಟು ೨೦ ಶಾಲೆಗಳ ಸಂಖ್ಯೆ ಕಡಿಮೆಯಾಗಿದೆ. ಅನೇಕ ಅನುದಾನರಹಿತ ಶಾಲೆಗಳು ಶಾಲೆಗಳನ್ನು ನಡೆಸಲು ಸಾಧ್ಯವಾಗದಿರುವುದೇ ಇದಕ್ಕೆ ಪ್ರಮುಖ ಕಾರಣ. ಆದ್ದರಿಂದ ಅಂತಹ ಶಾಲೆಗಳನ್ನು ಮುಚ್ಚಲಾಯಿತು. ಉತ್ತಮ ಶಿಕ್ಷಕರಿಲ್ಲದಿರುವುದು, ವಿದ್ಯಾರ್ಥಿಗಳ ಪ್ರವೇಶಾವಕಾಶ ಕಡಿಮೆ ಇದ್ದದ್ದು, ಉತ್ತಮ ಕೊಠಡಿಗಳಿಲ್ಲದಿರುವುದು........ ಹೀಗೆ ಅನೇಕ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಅನುದಾನರಹಿತ ಶಾಲೆಗಳನ್ನು ಮುಚ್ಚಲಾಯಿತು.

೨೦೦೨-೨೦೦೩ ರಲ್ಲಿ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ೧೪೧. ೨೦೦೫-೦೬ ರಲ್ಲಿ ಈ ಪ್ರೌಢಶಾಲೆಗಳ ಸಂಖ್ಯೆ ೧೭೪ ಕ್ಕೇರಿತು. ಅಂದರೆ ಶೇ. ೨೫.೭೩ ರಿಂದ ಶೇ. ೩೨.೯೫ ಕ್ಕೇರಿತು. ಆದರೆ ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ ೨೦೦೨-೦೩ ರಲ್ಲಿ ೨೨೬ ಇದ್ದದ್ದು, ೨೦೦೫-೦೬ ರಲ್ಲಿ ೨೩೨ ಕ್ಕೇರಿದೆ. ಶೇಕಡಾವಾರು ೪೧.೨೪ ರಿಂದ ೪೩.೯೩ ರಷ್ಟಿದೆ. ಆದರೆ ಅನುದಾನರಹಿತ ಶಾಲೆಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿರುವುದು ಕಂಡುಬರುತ್ತದೆ. ೨೦೦೨-೦೩ ರಲ್ಲಿ ೧೮೧ ಇದ್ದದ್ದು, ೨೦೦೫-೦೬ ರ ವೇಳೆಗೆ ೧೨೨ ಕ್ಕಿಳಿಯಿತು. ಶೇ. ೩೩.೦೨ ರಿಂದ ಶೇ. ೨೩.೧೦ ಕ್ಕೆ ಇಳಿಯಿತು.

ಶಿಕ್ಷಣ ಕ್ಷೇತ್ರ ಪ್ರಗತಿಯ ದಾಪುಗಾಲು ಹಾಕಿದಂತೆ ಪ್ರೌಢಶಾಲೆಗಳು ಅಧಿಕಗೊಂಡವು. ಆದರೂ ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆಯೇ ಇಂದಿಗೂ ಅಧಿಕವಾಗಿರುವುದು. ಕಾರಣ ತುಮಕೂರು ಜಿಲ್ಲೆಯಲ್ಲಿ ಸಾಕಷ್ಟು ಖಾಸಗಿ ಸಂಘ-ಸಂಸ್ಥೆಗಳು, ಮಠಗಳು ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸಿವೆ. ಪ್ರಮುಖವಾಗಿ ತಿಪಟೂರಿನ ಕಲ್ಪತರು ವಿದ್ಯಾಸಂಸ್ಥೆ, ತುಮಕೂರಿನ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ತುಮಕೂರಿನ ಸಿದ್ಧಗಂಗಾ ಮಠ, ಕುಣಿಗಲ್ ಮತ್ತು ತುರುವೇಕೆರೆಯಲ್ಲಿನ ಆದಿಚುಂಚನಗಿರಿ ಮಠ, ನೊಣವಿನಕೆರೆ ಮತ್ತು ತುರುವೇಕೆರೆಯಲ್ಲಿ ಕಾಡಸಿದ್ಧೇಶ್ವರ ಮಠ.......ಹೀಗೆ ಅನೇಕ ಮಠ ಮಾನ್ಯಗಳು ವ್ಯಾಪಕವಾಗಿ ಶಿಕ್ಷಣ ಪ್ರವೇಶಿಸಿ ದೀನದಲಿತರಿಗೆ, ಬಡವರಿಗೆ, ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಕಾಯಕದಲ್ಲಿ ತೊಡಗಿವೆ.


೩.೩ ಗ್ರಾಮಿಣ ಮತ್ತು ನಗರ ಶಾಲೆಗಳು

ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿಯೇ ಕೇಂದ್ರೀಕೃತವಾಗಿರುವುದು ಅಂಕಿ-ಅಂಶಗಳ ಮೂಲಕ ಕಂಡುಬರುತ್ತದೆ. ೨೦೦೫-೨೦೦೬ ರಲ್ಲಿ ಒಟ್ಟು ೪೪೩೪ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳಿವೆ. ಶೇಕಡಾವಾರು ೮೮.೮೬ ರಷ್ಟಿದೆ. ಶೇ.೧೧.೧೪ ರಷ್ಟು ಶಾಲೆಗಳು ನಗರ ಪ್ರದೇಶಗಳಲ್ಲಿವೆ. ಶೇ.೯೫.೧೦ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೮೩.೪೩ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೭೭.೬೫ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ.ಶೇ.೪.೯೦ ರಷ್ಟು ಕಿರಿಯ ಪ್ರಾಥಮಿಕ ಪಾಠಶಾಲೆಗಳು, ಶೇ.೧೬.೫೭ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೨೨.೩೫ ರಷ್ಟು ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿವೆ.

ಪಟ್ಟಿ ೩ : ಗ್ರಾಮೀಣ ಮತ್ತು ನಗರ ಶಾಲೆಗಳು

ಕ್ರ.ಸಂ.	ವರ್ಷ	ಶಾಲೆಗಳು	ಗ್ರಾಮೀಣ	ನಗರ	ಒಟ್ಟು
೧.	೨೦೦೫-೦೬	ಕಿರಿಯ ಪ್ರಾಥಮಿಕ ಶಾಲೆಗಳು	೨೨೧೧ ೯೫.೦೦%	೧೧೪ ೪.೯೦%	೨೩೨೫. ೧೦೦%
		ಹಿರಿಯ ಪ್ರಾಥಮಿಕ ಶಾಲೆಗಳು	೧೩೧೯ ೮೩.೪೩%	೨೬೨ ೧೬.೫೭%	೧೫೮೧ ೧೦೦%
		ಪ್ರೌಢಶಾಲೆಗಳು	೪೧೦ ೭೭.೬೫%	೧೧೮ ೨೨.೩೫%	೫೨೮ ೧೦೦%
೨.		ಒಟ್ಟು	೩೯೪೦ ೮೮.೮೬%	೪೯೪ ೧೧.೧೪%	೪೪೩೪ ೧೦೦%

ಆಧಾರ : ಸಮಗ್ರ ಅಂಕಿ-ಅಂಶಗಳು, ೨೦೦೬, ಪು. ೪೫-೧೦೭.







ಗ್ರಾಮೀಣ ಮತ್ತು ನಗರ ಪ್ರದೇಶಗಳಿಂದ ಒಟ್ಟು ೨೩೨೫ ಕಿರಿಯ ಪ್ರಾಥಮಿಕ ಶಾಲೆಗಳಿದ್ದು ೧೫೮೧ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ೫೨೮ ಪ್ರೌಢಶಾಲೆಗಳಿವೆ. ಒಟ್ಟು ೪೪೩೪ ಶಾಲೆಗಳು ತುಮಕೂರು ಜಿಲ್ಲೆಯಲ್ಲಿವೆ. ಕ್ರಮವಾಗಿ ಒಟ್ಟು ೨೩೨೫ ಶಾಲೆಗಳು ಕಿರಿಯ ಪ್ರಾಥಮಿಕ ಶಾಲೆಗಳಾಗಿದ್ದು, ೨೨೧೧ ಗ್ರಾಮೀಣ ಪ್ರದೇಶಗಳಲ್ಲಿದ್ದು, ೧೧೪ ಶಾಲೆಗಳು ನಗರ ಪ್ರದೇಶಗಳಲ್ಲಿರುತ್ತವೆ. ಶೇ. ೯೫.೦೯ ರಷ್ಟು ಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಕೇಂದ್ರಿತವಾಗಿದ್ದು, ಶೇ.೪.೯೦ ರಷ್ಟು ನಗರ ಪ್ರದೇಶಗಳಲ್ಲಿವೆ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶೇ.೮೩.೪೩ ರಷ್ಟು ಗ್ರಾಮೀಣ ಪ್ರದೇಶಗಳಲ್ಲಿದ್ದರೆ, ಶೇ. ೧೬.೫೭ ರಷ್ಟು ನಗರ ಪ್ರದೇಶಗಳಲ್ಲಿವೆ. ಪ್ರೌಢಶಾಲೆಗಳಲ್ಲಿ ಶೇ.೭೭.೬೫ ರಷ್ಟು ಮೇಲ್ಕಂಡ ಗ್ರಾಮೀಣ ಪ್ರದೇಶಗಳಲ್ಲಿಯೂ ಶೇ. ೨೨.೩೫ ರಷ್ಟು ನಗರ ಪ್ರದೇಶಗಳಲ್ಲಿಯೂ ಕಾಣಬಹುದಾಗಿದೆ. ಮೇಲ್ಕಂಡ ಅಧ್ಯಯನವನ್ನು ಗಮನಿಸಿದರೆ ಸರ್ಕಾರದ ಪಾತ್ರ ಶೈಕ್ಷಣಿಕ ಬೆಳವಣಿಗೆಯಲ್ಲಿ ಗಮನಾರ್ಹವಾಗಿದೆ. ಖಾಸಗಿ ಪ್ರವೇಶವೇನೂ ಮಹತ್ವವನ್ನು ಪಡೆದಿಲ್ಲ. ಈ ಕೆಳಕಂಡ ಪಟ್ಟಿಯಲ್ಲಿ ಗ್ರಾಮೀಣ ಮತ್ತು ನಗರ ಶಾಲೆಗಳ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ವಿವರವನ್ನು ಅಂಕಿ–ಅಂಶಗಳ ಮೂಲಕ ತೋರಿಸಲಾಗಿದೆ.

ಪಟ್ಟಿ ೪ : ಗ್ರಾಮೀಣ ಮತ್ತು ನಗರ ಶಾಲೆಗಳ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ವಿವರ

ಕ್ರಮ	ವರ್ಷ	ಶಾಲೆಗಳ ವಿಧ	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು	೧೦ ನೇ ತರಗತಿ ೬+೯+೧ ೨
೧	೨	೩	೪	೫	೬	೭	೮	೯	೧೦	೧೧	೧೨	೧೩
			ಕಿರಿಯ ಪ್ರಾಥಮಿಕ ಶಾಲೆ			ಹಿರಿಯ ಪ್ರಾಥಮಿಕ ಶಾಲೆ			ಪ್ರೌಢಶಾಲೆಗಳು			ಒಟ್ಟು ನಗರ ಮತ್ತು ಗ್ರಾಮೀಣ ಶಾಲೆಗಳು
೧	೨೦೦೫ ೨೦೦೬	ಸರ್ಕಾರಿ	೨೧೩೫ ೯೬.೫೨%	೭೭ ೩.೪೮%	೨೨೧೨ ೧೦೦%	೧೧೯೬ ೯೧.೭೧%	೧೦೮ ೮.೨೮%	೧೩೦೪ ೧೦೦%	೧೪೮ ೮೫.೫೪%	೨೫ ೧೪.೪೫%	೧೭೩ ೧೦೦%	೩೬೮೯ ೮೩.೧೯%
		ಅನು ದಾನಿತ	೬ ೫೪.೫೪%	೫ ೪೫%	೧೧ ೧೦೦%	೪೫ ೫೪.೮೭	೩೭ ೪೫.೧೨%	೮೨ ೧೦೦%	೧೮೫ ೭೯.೪೦%	೪೮ ೨೦.೬೦%	೨೩೩ ೧೦೦%	೩೨೬ ೭.೩೫%
		ಅನು ದಾನ ರಹಿತ	೭೦ ೬೮.೬೨%	೩೨ ೩೧.೩೭%	೧೦೨ ೧೦೦%	೭೮ ೪೦.%	೧೧೭ ೬೦.೦%	೧೯೫ ೧೦೦%	೭೭ ೬೩.೧೧%	೪೫ ೩೬.೮೯%	೧೨೨ ೧೦೦%	೪೧೯ ೯.೪೪%
೨		ಒಟ್ಟು	೨೨೧೧ ೯೫.೦೯%	೧೧೪ ೪.೯೦%	೨೩೨೫ ೧೦೦%	೧೩೧೯ ೮೩.೪೩%	೨೬೨ ೧೬.೫೭%	೧೫೮೧ ೧೦೦%	೪೧೦ ೭೭.೬೫%	೧೧೮ ೨೨.೩೫%	೫೨೮ ೧೦೦%	೪೪೩೪ ೧೦೦.%

ಆಧಾರ : ಸಮಗ್ರ ಅಂಕಿ – ಅಂಶ, ೨೦೦೬, ಪು. ೪೫–೧೦೭.


೪೦೦೦
೩೫೦೦
೩೦೦೦
೨೫೦೦
೨೦೦೦
೧೫೦೦
೧೦೦೦
೫೦೦
೦
ಸರ್ಕಾರಿ
ಅನುದಾನಿತ
ಅನುದಾನರಹಿತ
೨೦೦೫ ೨೦೦೬
೨೦೦೫ ೨೦೦೬
೨೦೦೫ ೨೦೦೬
ಗ್ರಾಮೀಣ
ನಗರ
ಒಟ್ಟು
ಗ್ರಾಮೀಣ
ನಗರ
ಒಟ್ಟು
ಗ್ರಾಮೀಣ
ನಗರ
ಒಟ್ಟು
೧೦ ನೇ ತರಗತಿ
೬+೯+೧೨



೨೦೦೫-೦೬ ರ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಗಣನೀಯವಾಗಿದೆ. ಶೇ.೯೬.೫೨ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೯೧.೭೧ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೮೫.೫೪ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಶೇ.೩.೪೮ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೮.೨೮ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೧೪.೪೫ ರಷ್ಟು ಪ್ರೌಢಶಾಲೆಗಳು ಮಾತ್ರ ನಗರ ಪ್ರದೇಶಗಳಲ್ಲಿವೆ.

ಅನುದಾನಿತ ಶಾಲೆಗಳಲ್ಲಿ ಶೇ.೫೪.೫೪ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೫೪.೮೭ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೭೯.೪೦ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಶೇ.೪೫.೪೫ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೪೫.೧೨ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೨೦.೬೦ ರಷ್ಟು ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿವೆ.

ಅನುದಾನರಹಿತ ಶಾಲೆಗಳಲ್ಲಿ ಶೇ.೬೮.೬೨ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೪೦ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೬೩.೧೧ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಶೇ.೩೧.೩೭ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ.೬೦ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೩೬.೮೯ ರಷ್ಟು ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿವೆ.

ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಗ್ರಾಮೀಣ ಮತ್ತು ನಗರ ಶಾಲೆಗಳಲ್ಲಿ ಒಟ್ಟು ಶೇ.೯೫.೦೯ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ. ೮೩.೪೩ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ. ೭೭.೬೫ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಒಟ್ಟು ಶೇ. ೪.೯೦. ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ. ೧೬.೫೭ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ. ೨೨.೨೫ ರಷ್ಟು ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿವೆ.

ಒಟ್ಟು ೪೪೩೪ ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಿವೆ. ಇದರಲ್ಲಿ ಒಟ್ಟು ಶೇ. ೮೩.೧೯ ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಶೇ. ೭.೩೫ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇ.೯.೪೪ ರಷ್ಟು ಪ್ರೌಢಶಾಲೆಗಳನ್ನು ಕಾಣಬಹುದು. ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಧಿಕ ಶಾಲೆಗಳನ್ನು ತೆರೆದು, ನಗರ ಪ್ರದೇಶಗಳನ್ನು ಕಡೆಗಣಿಸಿದೆ, ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಆಲೋಚಿಸಿದೆ.

೩.೪ ಮಕ್ಕಳ ದಾಖಲಾತಿ ಪ್ರಮಾಣ


ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರ ಹಿರಿದು. ಶಿಕ್ಷಣ ಕ್ಷೇತ್ರದ ಅಧ್ಯಯನ ಅರ್ಥಶಾಸ್ತ್ರದಲ್ಲಿ ಆಡಂ ಸ್ಮಿತ್‌ನ ಕಾಲದಿಂದಲೂ ಮಹತ್ವ ಪಡೆದಿದೆ. ಸ್ಮಿತ್ ಪ್ರಕಾರ ಯಾರಿಗೆ ಶಿಕ್ಷಣ ಪಡೆಯಲು ಸಾಧ್ಯವಿಲ್ಲವೋ ಅಂತಹವರಿಗೆ ಸರ್ಕಾರ ಮುಕ್ತವಾಗಿ ಶಿಕ್ಷಣ ಅವಕಾಶವನ್ನು ಕಲ್ಪಿಸಬೇಕು[೧] (ಲೆವೀಸ್ ಎಚ್. ಹ್ಯಾನೇ, ೧೯೭೭, ಪು.೨೩೨). ಏಕೆಂದರೆ ಶಿಕ್ಷಣ, ಕೇವಲ ಶಿಕ್ಷಣವನ್ನು ಪಡೆದ ವ್ಯಕ್ತಿಗೆ ಮಾತ್ರ ಅನುಕೂಲವಾಗದೆ ಅದು ಸಮಾಜದ ಅಭಿವೃದ್ಧಿಗೂ ನೆರವಾಗಬೇಕು. ತುಮಕೂರು ಜಿಲ್ಲೆಯಲ್ಲಿ ಶಿಕ್ಷಣ ಪಡೆಯಲು ೧ ರಿಂದ ೧೦ ನೇ ತರಗತಿವರೆಗೂ ದಾಖಲಾದ ಮಕ್ಕಳ ವಿವರ ಈ ಕೆಳಕಂಡಂತಿದೆ.

ಪಟ್ಟಿ ೫ : ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಮಕ್ಕಳ ದಾಖಲಾತಿ ಪ್ರಮಾಣ

	ಕಿರಿಯ ಪ್ರಾಥಮಿಕ ಶಾಲೆ			ಹಿರಿಯ ಪ್ರಾಥಮಿಕ ಶಾಲೆ			ಪ್ರೌಢಶಾಲೆಗಳು		
ವರ್ಷ	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
೧೯೪೦-೪೧	೨೬೫೧೭ ೭೫.೯೬%	೮೩೮೮ ೨೪.೦೩%	೩೪೯೦೫ ೧೦೦.%	-	-	-	-	-	-
೧೯೬೦-೬೧	೪೮೫೧೩ ೬೮.೯೯%	೨೧೭೬೬ ೩೦.೯೫%	೭೦೩೦೯ ೧೦೦.%	-	-	-	-	-	-
೧೯೬೬-೬೭	-	-	-	-	-	-	೨೨೦೦೮ ೭೭.೧೩%	೬೪೫೮ ೨೧.೯೧%	೨೮೪೬೬ ೧೦೦%
೩೧ರ ಮಾರ್ಚ್೧೯೬೮	೫೩೭೦೪ ೫೭.೯೦%	೩೯೦೩೮ ೪೨.೦೯%	೯೨೭೪೨ ೧೦೦%	೨೭೩೪೬ ೬೦.೬೮%	೧೭೭೨೨ ೩೯.೩೨%	೪೫೦೬೮ ೧೦೦.%	-	-	-
೨೦೦೨-೦೩	೧೧೦೧೧೯ ೫೧.೬೮%	೧೦೨೯೨೫ ೪೮.೩೧%	೨೧೩೦೪೪ ೧೦೦.%	೮೦೪೫೭ ೫೨.೩೯%	೭೩೦೮೯ ೪೭.೬೦%	೧೫೩೫೪೬ ೧೦೦%	೬೬೫೭೮ ೫೬.೬೫%	೫೦೯೨೮ ೪೩.೩೫%	೧೧೭೫೦೬ ೧೦೦.%
೨೦೦೫-೦೬	೯೧೭೯೪ ೫೧.೬೦%	೮೬೦೭೮ ೪೮.೩೯%	೧೭೭೮೭೨ ೧೦೦.%	೭೩೫೦೦ ೫೦.೯೫%	೭೦೭೪೭ ೪೯.೦೪%	೧೪೪೨೪೭ ೧೦೦.%	೫೪೨೬೮ ೫೨.೪೩%	೪೯೨೧೮ ೪೭.೫೬%	೧೦೩೪೮೬ ೧೦೦%

ಆಧಾರ : ಅ. ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು. ೪೭೪-೪೭೬, ೪೮೭.
ಆ. ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ, ೨೦೦೨-೦೩, ಪು. ೧೭-೧೯, ೩೬.
ಇ. ಸಮಗ್ರ ಅಂಕಿ-ಅಂಶ, ೨೦೦೬, ಪು. ೩೬೩-೩೬೫.

ಟಿಪ್ಪಣಿ : 1. Adam Smith–"In the Case of those who couldn't afford an education, the Government might profitably provide for free schooling."



೧೨೦೦೦೦
೧೦೦೦೦೦
೮೦೦೦೦
೬೦೦೦೦
೪೦೦೦೦
೨೦೦೦೦
೦
ಕಿರಿಯ ಪ್ರಾಥಮಿಕ ಶಾಲೆ
ಹಿರಿಯ ಪ್ರಾಥಮಿಕ ಶಾಲೆ
ಪ್ರೌಢಶಾಲೆಗಳು
ವರ್ಷ
೧೯೫೦-೫೧
೧೯೬೦-೬೧
೧೯೬೬-೬೭
೩೧ರ ಮಾರ್ಚ್೧೯೬೮
೨೦೦೨-೦೩
೨೦೦೫-೦೬

೧೯೪೦-೪೧ ರಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ (೧ ರಿಂದ ೪) ದಾಖಲಾದ ಬಾಲಕರ ಪ್ರಮಾಣ ೨೬೫೧೭. ಅಂದರೆ ಶೇ.೭೫.೯೬ ರಷ್ಟು. ಇದೇ ಅವಧಿಯಲ್ಲಿ ದಾಖಲಾದ ಬಾಲಕಿಯರ ಪ್ರಮಾಣ ೮೩೮೮, ಅಂದರೆ ಶೇ.೨೪.೦೩ ರಷ್ಟು. ಆದ್ದರಿಂದ ಈ ಅವಧಿಯಲ್ಲಿ ಒಟ್ಟು ದಾಖಲಾತಿ ೩೪೯೦೫. ೧೯೬೦-೬೧ ರ ಅವಧಿಯಲ್ಲಿ ಒಟ್ಟು ದಾಖಲಾತಿ ದ್ವಿಗುಣಗೊಂಡರೂ ಶೇಕಡಾವಾರು ಪ್ರಮಾಣದಲ್ಲಿ ಬಾಲಕರ ದಾಖಲಾತಿ ಕಡಿಮೆಯಾದರೆ, ಬಾಲಕಿಯರ ದಾಖಲಾತಿ ಮಾರ್ಜಿನ್‌ನಲ್ಲಿ ಹೆಚ್ಚುತ್ತಾ ಸಾಗಿದೆ. ಒಟ್ಟು ದಾಖಲಾದ ಒಟ್ಟು ಮಕ್ಕಳ ಸಂಖ್ಯೆ ೭೦೩೮೯. ಇದರಲ್ಲಿ ಬಾಲಕರ ದಾಖಲಾತಿ ೪೮೫೧೩ ರಷ್ಟಿದ್ದರೆ, ಬಾಲಕಿಯರ ದಾಖಲಾತಿ ೨೧೭೬೬ ರಷ್ಟು. ಶೇ.೬೮.೯೯ ರಷ್ಟು ಬಾಲಕರ ದಾಖಲಾತಿ ಇದ್ದು ೧೯೪೦-೪೧ ರ ಅವಧಿಗಿಂತ ಶೇಕಡಾವಾರು ಪ್ರಮಾಣದಲ್ಲಿ ಇಳಿಮುಖವಾಗಿದೆ. ಬಾಲಕಿಯರ ದಾಖಲಾತಿ ಪ್ರಮಾಣ ಗಣನೀಯವಾಗಿ ಹೆಚ್ಚಳ ಕಂಡುಬಂದಿದೆ. ೨೧೭೬೬ ಬಾಲಕಿಯರು ದಾಖಲಾಗಿದ್ದು ಶೇ.೩೦.೯೫ ರಷ್ಟು ಕಂಡುಬರುತ್ತದೆ. ೧೯೬೮ ರ ಅಂಕಿ-ಅಂಶಗಳ ಪ್ರಕಾರವು ಬಾಲಕಿಯರ ದಾಖಲಾತಿ ಬಾಲಕರ ದಾಖಲಾತಿಗಿಂತ ಅಧಿಕವಾಗಿದೆ. ಬಾಲಕರ ದಾಖಲಾತಿ ೫೩೭೦೪ ಇದ್ದು, ಬಾಲಕಿಯರ ದಾಖಲಾತಿ ೩೯೦೩೮ ರಷ್ಟಿದೆ. ಶೇ.೫೭.೯೦ ರಷ್ಟು ಬಾಲಕರು ದಾಖಲಾದರೆ, ಶೇ.೪೨.೦೯ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ೨೦೦೨-೦೩ ರ ಅವಧಿಯಲ್ಲಿ ಬಾಲಕರ ದಾಖಲಾತಿಯ ಸಮೀಪವಿದೆ. ಬಾಲಕರು ೧೧೦೧೧೯ ಸಂಖ್ಯೆಯಲ್ಲಿ ದಾಖಲಾಗಿದ್ದರೆ, ಬಾಲಕಿಯರ ದಾಖಲಾತಿ ೧೦೨೯೨೫ ರಷ್ಟು. ಶೇ.೫೧.೬೮ ರಷ್ಟು ಬಾಲಕರಿದ್ದರೆ, ಶೇ.೪೮.೩೧ ರಷ್ಟು ಬಾಲಕಿಯರಿದ್ದಾರೆ. ೨೦೦೫-೦೬ ರಲ್ಲಿ ಬಾಲಕ-ಬಾಲಕಿಯರ ದಾಖಲಾತಿಳೆರಡು ಕಡಿಮೆಯಾಗಿದ್ದು ಗಣನೀಯವಾಗಿ ಇಳಿಮುಖವಾಗಿದೆ. ಈ ಅವಧಿಯಲ್ಲಿ ೯೧೭೭೪ ಬಾಲಕರು ದಾಖಲಾಗಿದ್ದು, ೮೬೦೭೮ ಬಾಲಕಿಯರು ದಾಖಲಾಗಿದ್ದಾರೆ. ಶೇಕಡಾವಾರು ಬಾಲಕರು ಶೇ.೫೧.೬೦ ರಷ್ಟಿದ್ದು, ಬಾಲಕಿಯರು ಶೇ.೪೮.೩೯ ರಷ್ಟಿದ್ದಾರೆ.

೩೧ ರ ಮಾರ್ಚ್ ೧೯೬೮ ರ ಅವಧಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಒಟ್ಟು ಮಕ್ಕಳ ದಾಖಲಾತಿ ಪ್ರಮಾಣ ೪೫೦೬೮. ಶೇ.೬೦.೬೮ ರಷ್ಟು ಬಾಲಕರು ದಾಖಲಾಗಿದ್ದರೆ, ಬಾಲಕಿಯರು ಶೇ.೩೯.೩೨ ರಷ್ಟು ಮಾತ್ರ ದಾಖಲಾಗಿದ್ದಾರೆ. ಆದರೆ ೨೦೦೨-೦೩ ಮತ್ತು ೨೦೦೫-೦೬ ರ ಅವಧಿಯಲ್ಲಿ ಬಾಲಕಿಯರ ದಾಖಲಾತಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಧಿಕವಾಗಿದೆ. ಕ್ರಮವಾಗಿ ಶೇ.೪೭.೬೦ ಮತ್ತು ಶೇ.೪೯.೦೪. ಅದರೂ ಬಾಲಕರೆ ದಾಖಲಾತಿಯಲ್ಲಿ ಮೇಲುಗೈಯನ್ನು ಸಾಧಿಸಿದ್ದಾರೆ. ೨೦೦೨-೦೩ ರ ಅವಧಿಯಲ್ಲಿ ಶೇ. ೫೨.೩೯ ರಷ್ಟು ಮತ್ತು ೨೦೦೫-೦೬ ರ ಅವಧಿಯಲ್ಲಿ ಶೇ.೫೦.೯೫.

ರಷ್ಟು ಬಾಲಕರು ದಾಖಲಾಗಿದ್ದಾರೆ. ಆದ್ದರಿಂದ ೨೦೦೫-೦೬ ರ ಅವಧಿಯಲ್ಲಿ ಬಾಲಕಿಯರ ದಾಖಲಾತಿ ಬಾಲಕರ ದಾಖಲಾತಿಯ ಸಮೀಪವಿರುವುದು ಕಂಡುಬರುತ್ತದೆ.


೧೯೬೬-೬೭ ರ ಅವಧಿಯಲ್ಲಿ ಪ್ರೌಢಶಾಲೆಗಳ ದಾಖಲಾತಿ ಪಟ್ಟಿಯನ್ನು ಅಧ್ಯಯನ ಮಾಡಿದರೆ ಶೇ.೭೭.೧೩ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ.೨೧.೯೧ ರಷ್ಟು ಮಾತ್ರ ಬಾಲಕಿಯರು ದಾಖಲಾಗಿದ್ದಾರೆ. ಆರ್ಥಿಕಾಭಿವೃದ್ಧಿ ಹೊಂದಿದಂತೆ ಶಾಲೆಗಳ ಸಂಖ್ಯೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅಧಿಕವಾದಂತೆ, ಬಾಲಕಿಯರ ದಾಖಲಾತಿಯು ಅಧಿಕವಾಗಿರುವುದು ಕಂಡುಬರುತ್ತದೆ. ೨೦೦೨-೦೩ ಮತ್ತು ೨೦೦೫-೦೬ ರ ಅವಧಿಯಲ್ಲಿ ಕ್ರಮವಾಗಿ ಬಾಲಕಿಯರ ದಾಖಲಾತಿ ಶೇ.೪೩.೩೫ ಮತ್ತು ಶೇ.೪೭.೫೬ ರಷ್ಟಿದೆ. ಆದರೂ ಶೇ.೫೦ ರಷ್ಟನ್ನು ಮೀರಲು ಸಾಧ್ಯವೇ ಆಗಿಲ್ಲ. ಆದರೆ ಬಾಲಕರ ದಾಖಲಾತಿ ಕ್ರಮವಾಗಿ ಶೇ. ೫೬.೬೫ ಮತ್ತು ಶೇ.೫೨.೪೩. ಮಧ್ಯಾಹ್ನದ ಬಿಸಿಯೂಟ, ಮರಳಿ ಶಾಲೆಗೆ ಬಾ, ಕಂಪ್ಯೂಟರ್ ಶಿಕ್ಷಣ—ಇತ್ಯಾದಿ ಅನುಕೂಲಗಳಿಂದಾಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಅಧಿಕವಾಗಿದೆ.

೧ ರಿಂದ ೪ನೇ ತರಗತಿಯವರೆಗೆ, ೫ ರಿಂದ ೭ನೇ ತರಗತಿಯವರೆಗೆ ಮತ್ತು ೮ರಿಂದ ೧೦ ನೇ ತರಗತಿಯವರೆಗೆ ಗಮನಿಸಿದರೆ, ಬಾಲಕಿಯರ ದಾಖಲಾತಿ ಕಡಿಮೆಯಾಗಿರುವುದು ಕಂಡುಬಂದಿದೆ.


ಪಟ್ಟಿ ೬ : ಪ್ರಾಥಮಿಕ ಮತ್ತು ಪ್ರೌಢಶಾಲೆ ಬಾಲಕಿಯರ ದಾಖಲಾತಿ ಪ್ರಮಾಣ

ಕ್ರಸಂ.	ವರ್ಷ	ತರಗತಿ	ಒಟ್ಟು ಶಾಲಾ ದಾಖಲಾತಿ	ಬಾಲಕಿಯರು	ಶೇಕಡಾವಾರು.
೧.	೨೦೦೨-೦೩	೧ - ೪ ೫ - ೭ ೮ - ೧೦	೨೧೩೦೪೪ ೧೫೩೫೪೬ ೧೧೭೫೦೬	೧೦೨೯೨೫ ೭೩೦೮೯ ೫೦೯೨೮	೪೮.೩೧ ೪೭.೬೦ ೪೩.೩೫
೨.	೨೦೦೫-೦೬	೧ - ೪ ೫ - ೭ ೮ - ೧೦	೧೭೭೮೭೨ ೧೪೪೨೪೭ ೧೦೩೪೮೬	೮೬೦೭೮ ೭೦೭೪೭ ೪೯೨೧೮	೪೮.೩೯ ೪೯.೦೪ ೪೭.೫೬

ಆಧಾರ : ಅ. ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ, ೨೦೦೨-೦೩, ಪು. ೧೭-೩೬.
ಆ. ಸಮಗ್ರ ಅಂಕಿ-ಅಂಶ, ೨೦೦೬, ಪು.೩೬೩-೩೬೫.



೨೦೦೨-೦೩ ರಲ್ಲಿ ೧ ರಿಂದ ೪ ನೇ ತರಗತಿಯವರೆಗೆ ಬಾಲಕಿಯರ ದಾಖಲಾತಿ ಪ್ರಮಾಣ ಶೇ. ೪೮.೩೧ ರಷ್ಟಿದ್ದು, ೭ನೇ ತರಗತಿಯವರೆಗೆ ದಾಖಲಾತಿ ಪ್ರಮಾಣ ಶೇ. ೪೭.೬೦ ರಷ್ಟಿದ್ದು, ೮ ರಿಂದ ೧೦ ನೇ ತರಗತಿಯವರೆಗೆ ಶೇ. ೪೩.೩೫ ರಷ್ಟಿದೆ. ೨೦೦೫-೦೬ ರಲ್ಲಿಯೂ ೧ ರಿಂದ ೪ನೇ ತರಗತಿಯವರೆಗೆ ಬಾಲಕಿಯರ ದಾಖಲಾತಿ ಪ್ರಮಾಣ ಶೇ. ೪೮.೩೯ ರಷ್ಟಿದ್ದು, ೫ ರಿಂದ ೭ನೇ ತರಗತಿಯವರೆಗೆ ದಾಖಲಾತಿ ಪ್ರಮಾಣ ಶೇ. ೪೯.೦೪ ರಷ್ಟಿದ್ದು, ೮ ರಿಂದ ೧೦ ನೇ ತರಗತಿಯವರೆಗೆ ಬಾಲಕಿಯರ ದಾಖಲಾತಿ ಪ್ರಮಾಣ ಶೇ.೪೭.೫೬ ರಷ್ಟಿದೆ. ಬಾಲಕಿಯರ ದಾಖಲಾತಿ ಪ್ರಮಾಣ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಹೋಲಿಸಿದರೆ ಕಡಿಮೆಯಾಗಿರುವುದು ಕಂಡುಬರುತ್ತಿದೆ. ೨೦೦೨-೦೩ ರಲ್ಲಿ ಪ್ರಾಥಮಿಕ ಶಾಲಾ ದಾಖಲಾತಿ ಶೇ. ೪೮.೩೧ ಇದ್ದದ್ದು, ಪ್ರೌಢಶಾಲೆಯಲ್ಲಿ ಶಾಲಾ ದಾಖಲಾತಿ ಶೇ. ೪೩.೩೫ ಕ್ಕೆ ಇಳಿದಿದೆ. ೨೦೦೫-೦೬ ರಲ್ಲಿಯೂ ಪ್ರಾಥಮಿಕ ಶಾಲಾ ದಾಖಲಾತಿ ಶೇ.೪೮.೩೯ ಇದ್ದದ್ದು, ಪ್ರೌಢಶಾಲೆಗೆ ಅವರ ಶಾಲಾ ದಾಖಲಾತಿ ಶೇ. ೪೭.೫೬ ರಷ್ಟಿದೆ. ಹೆಣ್ಣು ಮಕ್ಕಳು ಪ್ರೌಢಾವಸ್ಥೆಯನ್ನು ತಲುಪುವುದು, ಲಿಂಗ-ಅನುಪಾತವು ವ್ಯತ್ಯಾಸದಿಂದ ಕೂಡಿರುವುದು, ನಗರ ಪ್ರದೇಶಗಳಿಗೆ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದು.......ಮೊದಲಾದ ಕಾರಣಗಳಿಂದ ಬಾಲಕಿಯರ ದಾಖಲಾತಿ ಪ್ರಮಾಣ ಕಡಿಮೆಯಾಗಿದೆ.



ಪಟ್ಟಿ ೭ : ೨೦೦೧ ರ ಜನಗಣತಿ ಪ್ರಕಾರ ೦-೭ ವಯೋಮಾನದ ಒಟ್ಟು ಜನಸಂಖ್ಯೆ, ಸಾಕ್ಷರತೆ ಮತ್ತು ಲಿಂಗ - ಅನುಪಾತ

ಕ್ರ.ಸಂ	ವಿಷಯಗಳು	ತುಮಕೂರು ಜಿಲ್ಲೆ	
೧.	ಜನಸಂಖ್ಯೆ		
	ಒಟ್ಟು :	೨೨೮೮೧೪೫	೧೦೦%
	ಬಾಲಕರು :	೧೧೬೨೬೬೯	೫೦.೮೨%
	ಬಾಲಕಿಯರು :	೧೧೨೫೪೭೬	೪೯.೧೮%
೨.	ಸಾಕ್ಷರತೆ ೭+		
	ಒಟ್ಟು :	೧೫೩೭೩೩೨	೧೦೦%
	ಬಾಲಕರು :	೮೯೩೮೩೫	೫೮.೧೪%
	ಬಾಲಕಿಯರು :	೬೪೩೪೯೭	೪೧.೮೬%
೩	ಸಾಕ್ಷರರಲ್ಲಿ ಲಿಂಗ-ಅನುಪಾತ ೭+	೭೨೦	-
೪	೦-೬ ವಯೋಮಾನದ ಮಕ್ಕಳ ಲಿಂಗ-ಅನುಪಾತ	೯೫೨	-
೫	ಒಟ್ಟು ಜನಸಂಖ್ಯೆಯಲ್ಲಿ ಲಿಂಗ-ಅನುಪಾತ	೯೬೬	-

ಆಧಾರ : ಸೆನ್ಸಸ್ ಆಫ್ ಇಂಡಿಯಾ, ೨೦೦೧, ಪು.೭೮-೮೨, ೨೧೮.

೨೦೦೧ ರ ಜನಗಣತಿಯ ಪ್ರಕಾರ ೦-೭ ವಯೋಮಾನದ ಮಕ್ಕಳ ಒಟ್ಟು ಪ್ರಮಾಣ ೨೨೮೮೧೪೫. ಬಾಲಕಿಯರ ಪ್ರಮಾಣ ಶೇ. ೪೯.೧೮ ರಷ್ಟಿದ್ದು, ಬಾಲಕರ ಪ್ರಮಾಣ ಶೇ. ೫೦.೮೨ ರಷ್ಟಿದೆ. ಆದರೆ ಸಾಕ್ಷರತೆ ಲಿಂಗ-ಅನುಪಾತಗಳನ್ನು ಪರಿಗಣಿಸಿದಲ್ಲಿ ಬಾಲಕಿಯರ ಪ್ರಮಾಣ ತುಂಬಾ ಕೆಳಮಟ್ಟದಲ್ಲಿದೆ. ೭+ ವರ್ಷಗಳ ನಂತರದ ಸಾಕ್ಷರತೆಯನ್ನು ಪರಿಗಣಿಸಿದರೆ ಬಾಲಕರ ಸಾಕ್ಷರತೆ ಶೇ.೫೮.೧೪ ದಷ್ಟಿದ್ದರೆ, ಬಾಲಕಿಯರ ಸಾಕ್ಷರತೆ ಪ್ರಮಾಣ ಶೇ. ೪೧.೮೬ ರಷ್ಟಿದೆ. ಬಾಲಕರಿಗೆ ಹೋಲಿಸಿದಲ್ಲಿ ಬಾಲಕಿಯರ ಸಾಕ್ಷರತೆ ಪ್ರಮಾಣ ಬಹಳ ಕಡಿಮೆ ಇದೆ. ಸಾಕ್ಷರರಲ್ಲಿ ಲಿಂಗ-ಅನುಪಾತ ೭+ ನಂತರ ೭೨೦ ಇದೆ. ೦-೬ ವಯೋಮಾನದ ಮಕ್ಕಳ ಲಿಂಗ-ಅನುಪಾತವು ೯೫೨ ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲೂ ಲಿಂಗ-ಅನುಪಾತ ೯೬೬ ರಷ್ಟಿದೆ.

೩.೫ ಶಾಲಾ ದಾಖಲಾತಿ - ಸಾಮಾಜಿಕ ಆಯಾಮಗಳು

ಪ್ರಾಥಮಿಕ ಶಿಕ್ಷಣವನ್ನು (೧ರಿಂದ ೧೦ ನೇ ತರಗತಿಯವರೆಗೆ) ಸಾರ್ವತ್ರೀಕರಿಸುವುದು ಮತ್ತು ಶಿಕ್ಷಣ ಎಲ್ಲಾ ಜಾತಿಯ ಎಲ್ಲಾ ವರ್ಗದ ಮಕ್ಕಳಿಗೆ ದೊರಕಿಸುವುದೇ ಸರ್ಕಾರದ ಆದ್ಯಕರ್ತವ್ಯ. ಸಂವಿಧಾನ


ರಚನೆಯಾದ ಹತ್ತು ವರ್ಷದ ಅವಧಿಯೊಳಗೆ ಎಲ್ಲಾ ರಾಜ್ಯಗಳು ಶಿಕ್ಷಣವನ್ನು ಕಡ್ಡಾಯ ಮಾಡಬೇಕೆಂದು ಕೇಂದ್ರ ಸರ್ಕಾರ ಘೋಷಿಸಿತು. ೧೯೮೬ ರ 'ರಾಷ್ಟ್ರೀಯ ಶಿಕ್ಷಣ ನೀತಿಯ' ಪ್ರಕಾರ 'ಶಿಕ್ಷಣ ಎಲ್ಲರಿಗೂ ದೊರೆಯಬೇಕೆಂದು' (EFA- Education For All) ಘೋಷಿಸಿತು (ಆರ್.ಗೋವಿಂದ, ೨೦೦೨, ಪು.೧). ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತುಳಿತಕ್ಕೊಳಗಾದವರು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಪಡೆಯಬೇಕೆಂಬುದೇ ಸರ್ಕಾರದ ಹಂಬಲ. ಸಾಮಾಜಿಕ ಆಯಾಮಗಳಲ್ಲಿ ಜಾತಿ ಸ್ವರೂಪವನ್ನು ಪರಿಗಣಿಸಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ದಾಖಲಾದ ಮಕ್ಕಳ ಸಾಮಾಜಿಕ ಸ್ವರೂಪವನ್ನು ಕೋಷ್ಟಕದ ಸಹಾಯದಿಂದ ವಿವರಿಸಲಾಗಿದೆ.

೨೦೦೨-೦೩ ರ ಅವಧಿಯಲ್ಲಿ ಪರಿಶಿಷ್ಟ ಜಾತಿಯಲ್ಲಿ ೧ ರಿಂದ ೪ನೇ ತರಗತಿಯವರೆಗೆ ಪರಿಗಣಿಸಿದಲ್ಲಿ ಶೇ.೫೧.೮೩ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ.೪೮.೧೬ ರಷ್ಟು ಬಾಲಕಿಯರು ದಾಖಲೆಯಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ. ೫೩.೩೨ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೭.೬೮ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಜಾತಿಗೆ ಹೋಲಿಸಿದಲ್ಲಿ ಪರಿಶಿಷ್ಟ ಪಂಗಡದಲ್ಲಿ ಬಾಲಕಿಯರ ಶಿಕ್ಷಣ ಪಡೆಯುವ ಶೇಕಡಾವಾರು ಪ್ರಮಾಣ ಕಡಿಮೆ ಇದೆ. ಇತರೆ ಜಾತಿಯವರಲ್ಲಿ ಬಾಲಕರ ದಾಖಲಾತಿಯು ಶೇ. ೫೧.೫೭ ರಷ್ಟಿದ್ದರೆ, ಬಾಲಕಿಯರು ಶೇ. ೪೮.೪೨ ರಷ್ಟು ದಾಖಲಾಗಿದ್ದಾರೆ. ೫ ರಿಂದ ೭ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಶೇ. ೫೧.೯೯ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೮.೦೧ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ. ೫೨.೦೧ ರಷ್ಟು ಬಾಲಕರು ಮತ್ತು ಶೇ. ೪೭.೯೯ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ. ೫೨.೫೫ ರಷ್ಟು ಬಾಲಕರು ಮತ್ತು ಶೇ. ೪೭.೪೪ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

ಪಟ್ಟಿ ೮ : ೧ ರಿಂದ ೧೦ ನೇ ತರಗತಿಗಳಲ್ಲಿ ದಾಖಲಾದ ಮಕ್ಕಳ ಸಾಮಾಜಿಕ ಸ್ವರೂಪ.

ಕ್ರಮ ಸಂ.	ವರ್ಷ	ತರಗತಿ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ			ಎಲ್ಲಾ ಜಾತಿಯ ಒಟ್ಟು ವಿದ್ಯಾರ್ಥಿಗಳು
			ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	೬+೯+೧೨
೧	೨	೩	೪	೫	೬	೭	೮	೯	೧೦	೧೧	೧೨	೧೩
೧	೨೦೦೨-೦೩	೧-೪	೨೩೯೩೪	೨೨೨೩೭	೪೬೧೭೧	೮೭೬೮	೭೯೯೨	೧೬೭೬೦	೭೭೪೧೭	೭೨೬೯೬	೧೫೦೧೧೩	೨೧೩೦೪೪
			೫೧.೮೩%	೪೮.೧೬%	೧೦೦%	೫೩.೩೨%	೪೭.೬೮%	೧೦೦%	೫೧.೫೭%	೪೮.೪೨%	೧೦೦%	೪೪.೦೦%
		೫-೭	೧೬೦೭೯	೧೪೮೪೩	೩೦೯೨೨	೬೬೧೦	೬೦೯೮	೧೨೭೦೮	೫೭೭೬೮	೫೨೧೪೮	೧೦೯೯೧೬	೧೫೩೫೪೬
			೫೧.೯೯%	೪೮.೦೧%	೧೦೦%	೫೨.೦೧	೪೭.೯೯%	೧೦೦%	೫೨.೫೫%	೪೭.೪೪%	೧೦೦%	೩೧.೭೧%
		೮-೧೦	೧೦೫೧೫	೮೪೨೪	೧೮೯೩೯	೪೭೨೪	೩೭೯೬	೮೫೨೦	೫೧೩೩೯	೩೮೭೦೮	೯೦೦೪೭	೧೧೭೫೦೬
			೫೫.೫೨%	೪೪.೪೭%	೧೦೦%	೫೫.೪೫%	೪೪.೫೫%	೧೦೦%	೫೭.೦೧%	೪೨.೯೮%	೧೦೦%	೨೪.೨೭%
	ಒಟ್ಟು	೧-೧೦	೫೦೫೨೮	೪೫೫೦೪	೯೬೦೩೨	೨೦೧೦೨	೧೭೮೮೬	೩೭೯೮೮	೧೮೬೫೨೪	೧೬೩೫೫೨	೩೫೦೦೭೬	೪೮೪೦೯೬
			೫೨.೬೨%	೪೭.೩೮%	೧೦೦%	೫೨.೯೨%	೪೭.೦೮%	೧೦೦%	೫೩.೨೮%	೪೬.೭೨%	೧೦೦%	೧೦೦%
೨	೨೦೦೫.೦೬	೧-೪	೧೯೬೫೪	೧೮೪೪೮	೩೮೧೦೨	೭೩೨೬	೭೫೭೬	೧೪೯೦೨	೬೪೮೧೪	೬೦೦೫೪	೧೨೪೮೬೮	೧೭೭೮೭೨
			೫೧.೫೮%	೪೮.೪೨%	೧೦೦%	೪೯.೧೬%	೫೦.೮೪%	೧೦೦%	೫೧.೯೦%	೪೮.೧೦%	೧೦೦%	೪೧.೭೯%
		೫-೭	೧೫೯೯೨	೧೪೭೦೫	೩೦೬೯೭	೬೨೬೭	೫೭೧೬	೧೧೯೮೩	೫೧೨೪೧	೫೦೩೨೬	೧೦೧೫೬೭	೧೪೪೨೪೭
			೫೨.೧೦%	೪೭.೯೦%	೧೦೦%	೫೨.೩೦%	೪೭.೭೦%	೧೦೦%	೫೦.೪೫%	೪೯.೫೫%	೧೦೦%	೩೩.೮೯%
		೮-೧೦	೧೦೮೫೩	೯೪೪೪	೨೦೨೯೭	೪೭೪೪	೪೩೯೪	೯೧೩೮	೩೮೬೭೧	೩೫೩೮೦	೭೪೦೫೧	೧೦೩೪೮೬
			೫೩.೪೭%	೪೬.೫೩%	೧೦೦%	೫೧.೯೨%	೪೮.೦೮%	೧೦೦%	೫೨.೨%	೪೭.೭೮%	೧೦೦%	೨೪.೩೨%
	ಒಟ್ಟು	೧-೧೦	೪೬೪೯೯	೪೨೫೯೭	೮೯೦೯೬	೧೮೩೩೭	೧೭೬೮೬	೩೬೦೨೩	೧೫೪೭೨೬	೧೪೫೭೬೦	೩೦೦೪೮೬	೪೨೫೬೦೫
			೫೨.೧೯%	೪೭.೮೧%	೧೦೦%	೫೦.೯೦%	೪೯.೧೦%	೧೦೦%	೫೧.೫೦%	೪೮.೫೦%	೧೦೦%	೧೦೦%

ಆಧಾರ : ಅ. ಶೈಕ್ಷಣಿಕ ಅಂಕಿ- ಅಂಶಗಳ ಪಕ್ಷಿನೋಟ, ೨೦೦೨-೦೩, ಪು.೧೭-೪೦.
ಆ. ಸಮಗ್ರ ಅಂಕಿ-ಅಂಶ, ೨೦೦೬, ಪು. ೩೫೯-೩೬೫.


೯೦೦೦೦
೮೦೦೦೦
೭೦೦೦೦
೬೦೦೦೦
೫೦೦೦೦
೪೦೦೦೦
೩೦೦೦೦
೨೦೦೦೦
೧೦೦೦೦
0
೧-೪
೫-೭
೮-೧೦
೨೦೦೨-೦೩
೨೦೦೩-೦೪
ಪರಿಶಿಷ್ಟ ಜಾತಿ ಬಾಲಕರು
ಪರಿಶಿಷ್ಟ ಜಾತಿ ಬಾಲಕಿಯರು
ಪರಿಶಿಷ್ಟ ಪಂಗಡ ಬಾಲಕರು
ಪರಿಶಿಷ್ಟ ಪಂಗಡ ಬಾಲಕಿಯರು
ಇತರೆ ಬಾಲಕರು
ಇತರೆ ಬಾಲಕಿಯರು

೨೦೦೨-೦೩ ರ ಅವಧಿಯಲ್ಲಿ ಪರಿಶಿಷ್ಟ ಜಾತಿಯಲ್ಲಿ ೧ ರಿಂದ ೪ನೇ ತರಗತಿಯವರೆಗೆ ಪರಿಗಣಿಸಿದಲ್ಲಿ ಶೇ.೫೧.೮೩ ರಷ್ಟು ಬಾಲಕರು ದಾಖಲಾಗಿದ್ದರೆ ಶೇ.೪೮.೧೬ ರಷ್ಟು ಬಾಲಕಿಯರು ದಾಖಲೆಯಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೫೩.೩೨ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ.೪೭.೬೮ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಜಾತಿಗೆ ಹೋಲಿಸಿದಲ್ಲಿ ಪರಿಶಿಷ್ಟ ಪಂಗಡದಲ್ಲಿ ಬಾಲಕಿಯರ ಶಿಕ್ಷಣ ಪಡೆಯುವ ಶೇಕಡಾವಾರು ಪ್ರಮಾಣ ಕಡಿಮೆ ಇದೆ. ಇತರೆ ಜಾತಿಯವರಲ್ಲಿ ಬಾಲಕರ ದಾಖಲಾತಿಯು ಶೇ.೫೧.೫೭ ರಷ್ಟಿದ್ದರೆ, ಬಾಲಕಿಯರು ಶೇ.೪೮.೪೨ ರಷ್ಟು ದಾಖಲಾಗಿದ್ದಾರೆ. ೫ ರಿಂದ ೭ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಶೇ.೫೧.೯೯ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೮.೦೧ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೫೨.೦೧ ರಷ್ಟು ಬಾಲಕರು ಮತ್ತು ಶೇ.೪೭.೯೯ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ.೫೨.೫೫ ರಷ್ಟು ಬಾಲಕರು ಮತ್ತು ಶೇ.೪೭.೪೪ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೮ ರಿಂದ ೧೦ ನೇ ತರಗತಿಯನ್ನು ಪರಿಗಣಿಸಿದಲ್ಲಿ ಪರಿಶಿಷ್ಟ ಜಾತಿಯಲ್ಲಿ ಬಾಲಕರು ಶೇ. ೫೫.೫೨ ರಷ್ಟು ಮತ್ತು ಶೇ. ೪೪.೪೭ ರಷ್ಟು ಬಾಲಕಿಯರು ದಾಖಲಾಗಿದ್ದರೆ, ಪರಿಶಿಷ್ಟ ಪಂಗಡದಲ್ಲಿ ಶೇ. ೫೫.೪೫ ರಷ್ಟು ಬಾಲಕರು ಮತ್ತು ಶೇ. ೪೪.೪೫ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ. ೫೭.೦೧ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೨.೯೮, ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೧ ರಿಂದ ೧೦ ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಒಟ್ಟು ಶೇ. ೫೨.೬೨ ರಷ್ಟು ಬಾಲಕರು, ಶೇ. ೪೭.೩೮ ರಷ್ಟು ಬಾಲಕಿಯರು ದಾಖಲಾಗಿದ್ದರೆ, ಪರಿಶಿಷ್ಟ ಪಂಗಡದಲ್ಲಿ ಶೇ. ೫೨.೯೨ ರಷ್ಟು ಬಾಲಕರು ಮತ್ತು ಶೇ. ೪೭.೦೮ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಬಾಲಕರು ಶೇ. ೫೩.೨೮ ರಷ್ಟು ದಾಖಲಾಗಿದ್ದರೆ, ಬಾಲಕಿಯರು ಶೇ. ೪೬.೭೨ ರಷ್ಟು ದಾಖಲಾಗಿದ್ದಾರೆ.

ಮೇಲ್ಕಂಡ ಕೋಷ್ಟಕದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಎಲ್ಲಾ ಜಾತಿಯವರಲ್ಲಿಯೂ ಬಾಲಕಿಯರ ದಾಖಲಾತಿ ಬಾಲಕರ ದಾಖಲಾತಿಗಿಂತ ಎರಡೂ ಅವಧಿಯಲ್ಲಿಯೂ ಕಡಿಮೆಯಿದೆ. ೨೦೦೨-೦೩ ರ ಅವಧಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಹೋಲಿಸಿದಲ್ಲಿ, ಇತರೆ ಜಾತಿಯವರ ಬಾಲಕಿಯರ ದಾಖಲಾತಿಯೂ ಕಡಿಮೆ ಇದೆ. ಶೇ.೪೭.೩೮ ರಷ್ಟು ಪರಿಶಿಷ್ಟ ಜಾತಿ

ಬಾಲಕಿಯರು ದಾಖಲಾಗಿದ್ದರೆ, ಪರಿಶಿಷ್ಟ ಪಂಗಡದವರು ಶೇ.೪೭.೦೮ ರಷ್ಟು ದಾಖಲಾಗಿದ್ದಾರೆ. ಆದರೆ ಇತರೆ ಜಾತಿಯವರಲ್ಲಿ ಶೇ. ೪೬.೭೨ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೨೦೦೫-೦೬ ರ ಅವಧಿಯಲ್ಲಿ ೧ ರಿಂದ ೪ನೇ ತರಗತಿಯವರೆಗೆ ಪರಿಗಣಿಸಿದಲ್ಲಿ ಪರಿಶಿಷ್ಟ ಜಾತಿಯಲ್ಲಿ ಶೇ. ೫೧.೫೮ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೮.೪೨ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ. ೪೯.೧೬ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೫೦.೮೪ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ. ೫೧.೯೦ ರಷ್ಟು ಬಾಲಕರು ದಾಖಲಾಗಿದ್ದರೆ ಶೇ. ೪೮.೧೦ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೫ ರಿಂದ ೭ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಶೇ. ೫೨.೧೦ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೭.೯೦ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಪಂಗಡದವರಲ್ಲಿ ಶೇ. ೫೨.೩೦ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೭.೯೦ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ. ೫೦.೪೫ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೯.೫೫ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೮ ರಿಂದ ೧೦ ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಶೇ. ೫೩.೪೭ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೬.೫೩ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೫೧.೯೨ ರಷ್ಟು ಬಾಲಕರು ದಾಖಲಾಗಿದ್ದರೆ, ಶೇ. ೪೮.೦೮ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಶೇ. ೫೨.೨೨ ರಷ್ಟು ಜಾತಿಯವರಲ್ಲಿ ಬಾಲಕರು ದಾಖಲಾಗಿದ್ದರೆ, ಶೇ. ೪೭.೭೮ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೧ ರಿಂದ ೧೦ ನೇ ತರಗತಿಯವರೆಗೆ ಪರಿಶಿಷ್ಟ ಜಾತಿಯಲ್ಲಿ ಶೇ. ೫೨.೧೯ ರಷ್ಟು ಬಾಲಕರು, ಶೇ. ೪೭.೮೧ ರಷ್ಟು ಬಾಲಕಿಯರು ದಾಖಲಾಗಿದ್ದು, ಪರಿಶಿಷ್ಟ ಪಂಗಡದಲ್ಲಿ ಶೇ. ೫೦.೯೦ ರಷ್ಟು ಬಾಲಕರು ಮತ್ತು ಶೇ. ೪೯.೧೦ ರಷ್ಟು ಬಾಲಕಿಯರು ದಾಖಲಾಗಿದ್ದಾರೆ. ಇತರೆ ಜಾತಿಯವರಲ್ಲಿ ಶೇ. ೫೧.೫೦ ರಷ್ಟು ಬಾಲಕರು ಮತ್ತು ಶೇ. ೪೮.೫೦ ರಷ್ಟು ಬಾಲಕಿಯರು ದಾಖಲಾಗಿದ್ದಾರೆ.

೨೦೦೫-೦೬ ರ ಅವಧಿಯಲ್ಲಿ ಬಾಲಕಿಯರ ದಾಖಲಾತಿಯು ಇತರೆ ಜಾತಿಯವರಲ್ಲಿ ಉತ್ತಮಗೊಂಡಿದೆ. ೨೦೦೨-೦೩ ಕ್ಕೆ ಹೋಲಿಸಿದಲ್ಲಿ ೨೦೦೫-೦೬ ರ ಅವಧಿಯಲ್ಲಿ ಎಲ್ಲಾ ಜಾತಿಯವರಲ್ಲಿಯೂ ಬಾಲಕಿಯರ ದಾಖಲಾತಿ ಅಧಿಕವಾಗಿದೆ. ಆದರೆ ೨೦೦೫-೦೬ ರ ಅವಧಿಯಲ್ಲಿ ಬಾಲಕರ ದಾಖಲಾತಿ ಎಲ್ಲಾ ಜಾತಿಯವರಲ್ಲಿಯೂ ಕಡಿಮೆಯಾಗಿದೆ.

೧ ರಿಂದ ೧೦ ನೇ ತರಗತಿಗಳಲ್ಲಿ ದಾಖಲಾದ ಮಕ್ಕಳ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡದಲ್ಲಿ ದಾಖಲಾತಿ ಪ್ರಮಾಣ ಕಡಿಮೆಯಿದೆ. ಪರಿಶಿಷ್ಟ ಜಾತಿಯಲ್ಲಿ ಉತ್ತಮ ದಾಖಲಾತಿ ಕಾಣಲು ಸಾಧ್ಯ ಇತರೆ ಜಾತಿಯವರಲ್ಲಿಯೂ ದಾಖಲಾತಿ ಪ್ರಮಾಣ ಕಡಿಮೆಯಿದೆ.


೩.೬ ವಿದ್ಯಾರ್ಥಿಗಳ – ಶಿಕ್ಷಕರ ಅನುಪಾತ

ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಮಕ್ಕಳ ಸಂಖ್ಯೆ, ಶಾಲೆಗಳ ಸಂಖ್ಯೆ ಅಭಿವೃದ್ಧಿ ಹೊಂದಿರುವುದುಂಟು.

ಪಟ್ಟಿ ೯ : ವಿದ್ಯಾರ್ಥಿಗಳ – ಶಿಕ್ಷಕರ ಅನುಪಾತ

ವಿಧ	ವರ್ಷ	ಸರ್ಕಾರಿ	ಅನುದಾನಿತ	ಅನುದಾನರಹಿತ	ಒಟ್ಟು	ವಿದ್ಯಾರ್ಥಿಗಳ –ಶಿಕ್ಷಕರ ಅನುಪಾತ
ಪ್ರಾಥಮಿಕ ೧–೭	೨೦೦೨–೦೩	೧೦೮೫೮ ೮೪.೯೦%	೪೨೨ ೩.೨೯%	೧೫೦೯ ೧೧.೭೯%	೧೨೭೮೯ ೧೦೦.%	೨೭:೧
	೨೦೦೫–೦೬	೧೦೫೨೨ ೮೦.೯೮%	೫೩೮ ೪.೧೪%	೧೯೩೩ ೧೪.೮೭%	೧೨೯೯೩ ೧೦೦%	೨೪.೭೯:೧
ಪ್ರೌಢಶಾಲೆ ೮–೧೦	೨೦೦೨–೦೩	೧೪೯೯ ೨೭.೭೬%	೨೬೫೦ ೪೯.೦೮%	೧೨೫೦ ೨೩.೧೫%	೫೩೯೯ ೧೦೦%	೨೧.೭೬:೧
	೨೦೦೫–೦೬	೧೧೧೭ ೩೨.೫೨%	೧೫೪೭ ೪೫.೦೪%	೭೭೦ ೨೨.೪೨%	೩೪೩೪ ೧೦೦.%	೩೦.೧೪:೧

ಆಧಾರ : ಅ. ಶೈಕ್ಷಣಿಕ ಅಂಕಿ–ಅಂಶಗಳ ಪಕ್ಷಿನೋಟ, ೨೦೦೨–೦೩, ಪು. ೧೧–೩೬.
ಆ. ಸಮಗ್ರ ಅಂಕಿ–ಅಂಶ, ೨೦೦೬, ಪು.೩೦೯–೩೩೮



ಪ್ರಾಥಮಿಕ ಹಂತದಲ್ಲಿ ೨೦೦೨-೦೩ ರಲ್ಲಿ ಒಟ್ಟು ೧೨೭೮೯ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದರು. ಇದರಲ್ಲಿ ಶೇ. ೮೪.೯೦ ರಷ್ಟು ಸರ್ಕಾರಿ ಶಾಲೆಗಳಲ್ಲೂ, ಶೇ. ೩.೨೯ ರಷ್ಟು ಅನುದಾನಿತ ಶಾಲೆಗಳಲ್ಲೂ ಮತ್ತು ಶೇ. ೧೧.೭೯ ರಷ್ಟು ಅನುದಾನರಹಿತ ಶಾಲೆಗಳಲ್ಲೂ ಕರ್ತವ್ಯ ನಿರ್ವಹಿಸಿದ್ದಾರೆ. ೨೦೦೫-೦೬ ರಲ್ಲಿ ಒಟ್ಟು ೧೨೯೯೩ ರಷ್ಟು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದರು. ಇದರಲ್ಲಿ ಶೇ.೮೦.೯೮ ರಷ್ಟು ಶಿಕ್ಷಕರು ಸರ್ಕಾರಿ ಶಾಲೆಗಳಲ್ಲೂ, ಶೇ. ೪.೧೪ ರಷ್ಟು ಅನುದಾನಿತ ಶಾಲೆಗಳಲ್ಲೂ ಮತ್ತು ಶೇ. ೧೪.೮೭ ರಷ್ಟು ಅನುದಾನರಹಿತ ಶಾಲೆಗಳಲ್ಲೂ ಕಾರ್ಯನಿರ್ವಹಿಸುತ್ತಿದ್ದಾರೆ. ೨೦೦೫-೦೬ ರ ಅವಧಿಯಲ್ಲಿ ಸರ್ಕಾರಿ ನೌಕರರ ಪ್ರಮಾಣ ಕಡಿಮೆಯಾಗಿರುವುದು ಕಂಡುಬರುತ್ತದೆ. ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಶಿಕ್ಷಕರ ಪ್ರಮಾಣ ಅಧಿಕವಾಗಿದೆ. ೨೦೦೨-೦೩ ರಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿ ಅನುಪಾತ ೨೭.೪೬ ಇದ್ದದ್ದು, ೨೦೦೫-೦೬ ರ ಅವಧಿಯಲ್ಲಿ ಶೇ. ೨೪.೭೯ ಕ್ಕೆ ಇಳಿದಿದೆ.

ಪ್ರೌಢಶಾಲಾ ಹಂತದಲ್ಲಿ ಒಟ್ಟು ೫೩೯೯ ಶಿಕ್ಷಕರು, ೨೦೦೨-೦೩ ರ ಅವಧಿಯಲ್ಲಿದ್ದರೆ, ೨೦೦೫-೦೬ ರ ಅವಧಿಯಲ್ಲಿ ೩೪೩೪ ಕ್ಕೆ ಇಳಿದಿದೆ. ೨೦೦೨-೦೩ ರ ಅವಧಿಯಲ್ಲಿ ಶೇ. ೨೭.೭೬ ರಷ್ಟು ಸರ್ಕಾರಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ, ಶೇ. ೪೯.೦೮ ರಷ್ಟು ಅನುದಾನಿತ ಮತ್ತು ಶೇ.೨೩.೧೫



ರಷ್ಟು ಅನುದಾನರಹಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ೨೦೦೫-೦೬ ರ ಅವಧಿಯಲ್ಲಿ ಶೇ. ೩೨.೫೨ ರಷ್ಟು ಸರ್ಕಾರಿ ಶಾಲೆಗಳಲ್ಲೂ, ಶೇ. ೪೫.೦೪ ರಷ್ಟು ಅನುದಾನಿತ ಪ್ರೌಢಶಾಲೆಗಳಲ್ಲೂ ಮತ್ತು ಶೇ. ೨೨.೪೨ ರಷ್ಟು ಅನುದಾನರಹಿತ ಪ್ರೌಢಶಾಲೆಗಳಲ್ಲೂ ಕಾರ್ಯ ನಿರ್ವಹಿಸುತ್ತಿದ್ದರು. ೨೦೦೨-೦೩ ರಲ್ಲಿ ಶಿಕ್ಷಕ ವಿದ್ಯಾರ್ಥಿ ಅನುಪಾತ ೨೧.೭೬ ರಷ್ಟಿದ್ದು, ೨೦೦೫-೦೬ ರಲ್ಲಿ ೩೦.೧೪ ಕ್ಕೆ ಏರಿದೆ. ಸರ್ಕಾರ ಶಿಕ್ಷಕರ ಉದ್ಯೋಗ ಪ್ರಮಾಣವನ್ನು ಹೆಚ್ಚಿಸುತ್ತಿರುವುದರಿಂದ ಹಾಗೂ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಯೋಜನೇತರ ವೆಚ್ಚಗಳನ್ನು ಕೈಗೊಳ್ಳುತ್ತಿರುವುದರಿಂದ ಶಿಕ್ಷಕರ-ವಿದ್ಯಾರ್ಥಿಗಳ ಅನುಪಾತದಲ್ಲಿಯೂ ಹೆಚ್ಚಳವನ್ನು ಕಾಣಬಹುದಾಗಿದೆ. ಆದರೂ ಶಿಕ್ಷಕರ ಪ್ರಮಾಣವನ್ನು ಇನ್ನೂ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಬೇಕು. ೧ ರಿಂದ ೧೦ ನೇ ತರಗತಿಯವರೆಗೆ ಹೆಚ್ಚಿನ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಸಾಗಬೇಕು.

೩.೭ ಸಾಕ್ಷರತೆ

ಒಂದು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮಟ್ಟವನ್ನು ನಿರ್ಧರಿಸುವ ಅನೇಕ ಅಂಶಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಡೆಸಿರುವ ಪ್ರಗತಿಯು ಒಂದು. ಅದರಲ್ಲಿಯೂ ಶಿಕ್ಷಣ ಮತ್ತು ಸಾಕ್ಷರತೆಗಳ ಮಹತ್ವ ಅಗಾಧವಾದದ್ದು. ನಮ್ಮ ರಾಷ್ಟ್ರದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಸಾಧನೆಯಾಗದಿರುವುದಕ್ಕೆ ಶಿಕ್ಷಣದ ಹರವು ಅಸಮತೋಲನದಿಂದಿರುವುದು. ಸಾಕ್ಷರತೆ ಎನ್ನುವುದು ಅಭಿವೃದ್ಧಿಯ ಚಿಲುಮೆ. ಇದು ಅಭಿವೃದ್ಧಿಯ ಅಪೇಕ್ಷೆಯನ್ನು ಪ್ರಬಲಗೊಳಿಸುತ್ತದೆ.

'ಸಾಕ್ಷರತೆ' ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುತ್ತದೆ. ಕ್ರಿಯಾತ್ಮಕ ಪರಿಶ್ರಮ ಮತ್ತು ಉಜ್ವಲ ಭವಿಷ್ಯವನ್ನು ನಿರ್ಧರಿಸಲು ಅಗತ್ಯವಿರುವ ಸ್ವಯಂಶಕ್ತಿಯನ್ನು ಸಾಕ್ಷರತೆ ಒದಗಿಸುತ್ತದೆ. ಸಾಮಾಜಿಕ ಸ್ಥರವಿನ್ಯಾಸದಲ್ಲಿ ಕಂಡುಬರುವ ಸಾಮಾಜಿಕ ಮತ್ತು ಆರ್ಥಿಕ ವಿಷವರ್ತುಲವನ್ನು ತೊಡೆದುಹಾಕಲು ಸಾಕ್ಷರತೆ ಅನಿವಾರ್ಯ. ಶಿಕ್ಷಣ ಜನರ ಶಕ್ತಿಯಾಗಿ ಹೊರಹೊಮ್ಮಿದಲ್ಲಿ 'ಅಸಾಧ್ಯ' ವಾದುದನ್ನು 'ಸಾಧ್ಯ' ವನ್ನಾಗಿಸಲು ಸಾಧ್ಯ.

ಸಾಕ್ಷರತೆಯು ಮಧ್ಯಯುಗದಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಒಡಮೂಡಿಸಿದರೆ, ಆಧುನಿಕ ಯುಗದಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಶೋಧನೆಗಳ ಬಗ್ಗೆ ಜನಸಮುದಾಯದಲ್ಲಿ ಆಸಕ್ತಿ ಕೆರಳಿಸಿತು. ಆಧುನಿಕ

ಕಾಲದಲ್ಲಿ ಜನತೆ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಶ್ರಮಿಸುವುದಕ್ಕೆ ಸಾಕ್ಷರತೆಯಿಂದ ಒಡಮೂಡಿದ ಪ್ರಜ್ಞೆ ಮೂಲಕಾರಣವಾಗಿದೆ. ಸಾಮಾಜಿಕ ಪುನರುತ್ಥಾನಕ್ಕೆ ಸಾಕ್ಷರತೆಯೊಂದೇ ದಾರಿ.

ಭಾರತ ಸ್ವಾತಂತ್ರ್ಯಾನಂತರ, ಹೊಸ ಸನ್ನಿವೇಶ ಮತ್ತು ಹೊಸ ಪರಿಸ್ಥಿತಿಗಳಲ್ಲಿ ಶೈಕ್ಷಣಿಕ ಪ್ರಗತಿಯ ಬಗ್ಗೆ ಆಡಳಿತಗಾರರು ಮನಃಪೂರ್ವಕ ಕಾಳಜಿ ವಹಿಸಿದರೂ ಅನೇಕ ಕಾರಣಗಳಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ನಾನಾ ಬಗೆಯ ಸಮಸ್ಯೆಗಳು ಮೊಳಕೆಯೊಡೆದವು. ಭಾಷಾಂಧತೆ, ಆರ್ಥಿಕ ಮತ್ತು ಸಾಮಾಜಿಕ ಹಿನ್ನಡೆ, ನಗರೀಕರಣ, ಕೈಗಾರಿಕೀಕರಣ, ಪ್ರಾಂತೀಯತೆ, ಜಾತೀಯತೆ ಮತ್ತು ಧರ್ಮ, ಭಾಷೆತತ್ವ ಆಧಾರಿತ ಸಂಕುಚಿತ ಮನೋದೃಷ್ಟಿಕೋನದ ಶಿಕ್ಷಣ ಪದ್ಧತಿಯಿಂದ ಶಿಕ್ಷಣ ಅಭಿವೃದ್ಧಿಯು ಕುಂಠಿತಗೊಳ್ಳತೊಡಗಿತು. ವ್ಯಕ್ತಿಯ ವಿಕಸನ, ಸಾಮಾಜಿಕ ಅವಕಾಶಗಳನ್ನು ತನ್ನದಾಗಿಸಿಕೊಳ್ಳಲು ಶಿಕ್ಷಣ ಮತ್ತು ಸಾಕ್ಷರತೆ ಇಂದು ಅನಿವಾರ್ಯ. ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ಆಧ್ಯಯನ ಮಾಡಿದರೆ ಎರಡು ವಿಷಯಗಳು ಗೋಚರವಾಗುತ್ತದೆ.

ಅ. ನಮ್ಮ ರಾಷ್ಟ್ರ ಹಮ್ಮಿಕೊಂಡ ಆರ್ಥಿಕ ಮತ್ತು ಸಾಮಾಜಿಕ ಯೋಜನೆಗಳಲ್ಲಿ ಸಾಧಿಸಿದ ಅಭಿವೃದ್ಧಿ ಅಗಾಧವಾದುದು.

ಆ. ಇದೇ ಅವಧಿಯಲ್ಲಿ ವೈಫಲ್ಯಗಳೂ ಅಗಾಧವಾದದ್ದು.

ಇವು ಪರಸ್ಪರ ವಿರೋಧವಾಗಿದ್ದರೂ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಅನಿವಾರ್ಯವಾದದ್ದು. ಭಾರತ ಆರ್ಥಿಕ ಯೋಜನೆಗಳಲ್ಲಿ ಮತ್ತು ನೀತಿಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಮುಖ್ಯವಾಗಿಯೇ ಇಲ್ಲ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಉತ್ತಮ ಸಾರ್ವಜನಿಕ ನೀತಿಯನ್ನು ರೂಪಿಸದಿರುವುದೇ ಅನಭಿವೃದ್ಧಿಗೆ ಕಾರಣ. ಶಿಕ್ಷಣ ಮತ್ತು ಆರೋಗ್ಯ ದೊರೆತಲ್ಲಿ, ಸಾಕ್ಷರತೆ ಮತ್ತು ಉದ್ಯೋಗ ತನಗೆ ತಾನೇ ವೃದ್ಧಿಯಾಗುತ್ತದೆ. ಸಮಾಜೋರ್ಥಿಕ ಅಂಶಗಳಾದ ಬಾಲಕಾರ್ಮಿಕ, ಲಿಂಗ–ಅಸಮಾನತೆಗಳನ್ನು ನಿವಾರಿಸುತ್ತದೆ. ಮಹಿಳೆಯರಿಗೆ ಶಿಕ್ಷಣ ದೊರೆತಲ್ಲಿ ಲಿಂಗ–ಅಸಮಾಮಾನತೆಯು ಕಡಿಮೆಯಾಗುತ್ತದೆ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯, ಪು.೧೫). ಅನಕ್ಷರತೆಯನ್ನು ಹೋಗಲಾಡಿಸುವುದರಿಂದ ಶಿಕ್ಷಣ ಕ್ಷೇತ್ರದಲ್ಲಷ್ಟೇ ಸಮಾನತೆಯನ್ನು ಸಾಧಿಸುವುದಲ್ಲದೆ, ಸಾಮಾಜಿಕ ಪಿಡುಗುಗಳಾದ ಜಾತಿ, ವರ್ಗ, ಲಿಂಗ ಅಸಮಾನತೆ.......ಮೊದಲಾದವುಗಳನ್ನು ಹೋಗಲಾಡಿಸಲು ಸಾಧ್ಯ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯, ಪು.೯೭.).

ಪುರುಷರು–ಮಹಿಳೆಯರ ನಡುವೆ ಸಾಕ್ಷರತೆ ಅಸಮಾನತೆ, ಗ್ರಾಮೀಣ–ನಗರಗಳಲ್ಲಿ ಸಾಕ್ಷರತೆ ಅಸಮಾನತೆ, ಜಾತಿ–ಜಾತಿಗಳಲ್ಲಿ ಸಾಕ್ಷರತೆ ಅಸಮಾನತೆ.......ಹೀಗೆ ವಿಭಿನ್ನ ಸಾಮಾಜಿಕ ಗುಂಪುಗಳಲ್ಲಿ ವಿಭಿನ್ನ ಸಾಕ್ಷರತೆ ಮಟ್ಟವನ್ನು ಕಾಣಬಹುದು. ಸಾಕ್ಷರತೆ ದರ ಕಡಿಮೆಯಿರುವುದರಿಂದಲೇ, ಶಿಕ್ಷಣದ ಮಟ್ಟವೂ ಕುಸಿದಿರುವುದು. ಹೆಣ್ಣುಮಕ್ಕಳ ಸಾಕ್ಷರತೆ ದರ ಗಂಡುಮಕ್ಕಳ ಸಾಕ್ಷರತೆ ದರಕ್ಕಿಂತ ಕಡಿಮೆಯಿರುವುದರಿಂದ ಲಿಂಗ–ಸಂಬಂಧಿ ನೆಲೆಯಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ. ಸಾಮಾಜಿಕ ಸ್ಥರ–ವಿನ್ಯಾಸದಲ್ಲಿ ಶ್ರೇಣಿಯನ್ನು ನೀಡಲಾಗಿದೆ. ಆದ್ದರಿಂದ ಲಿಂಗ–ಸಂಬಂಧಿ ಮತ್ತು ಜಾತಿ–ಸಂಬಂಧಿ ನೆಲೆಯಲ್ಲಿ ಸಾಕ್ಷರತೆಯನ್ನು ಅಧ್ಯಯನ ಮಾಡುವುದು ಬಹುಮುಖ್ಯವಾಗಿದೆ.


ಪ್ರಾಚೀನ ಕಾಲದಲ್ಲಿ ಶಿಕ್ಷಣ, ಜ್ಞಾನಪ್ರಸಾರ ಮೌಖಿಕವಾಗಿ ನಡೆಯುತ್ತಿತ್ತು. ಜನರು ತಮಗೆ ಅವಶ್ಯಕತೆಯಿರುವಷ್ಟು ಅಕ್ಷರವನ್ನು ಕಲಿಯುತ್ತಿದ್ದರು. ಸರಳ ಪತ್ರವನ್ನು ಯಾವುದೇ ಭಾಷೆಯಲ್ಲಿ ಓದುವ ಮತ್ತು ಬರೆಯುವ ವ್ಯಕ್ತಿಗಳನ್ನು ಸಾಕ್ಷರರು ಎಂದು ಕರೆಯುತ್ತಿದ್ದರು. ೧೮೯೧ ರ ಜನಗಣತಿ ಪ್ರಕಾರ 'ಕಲಿತಿರುವವ', 'ಅಕ್ಷರಸ್ಥ' ಮತ್ತು 'ಅನಕ್ಷರಸ್ಥ' ಎಂದು ವರ್ಗೀಕರಿಸಲಾಯಿತು. ಆದರೆ ೧೯೧೧ ರಲ್ಲಿ ಅಕ್ಷರಸ್ಥ ಮತ್ತು ಅನಕ್ಷರಸ್ಥ ಪದಗಳ ನಡುವೆ ಸ್ಪಷ್ಟ ವಿವರಣೆಯನ್ನು ನೀಡಲಾಯಿತು. ಯಾರಿಗೆ ಪತ್ರಗಳನ್ನು ಓದಲು ಮತ್ತು ಬರೆಯಲು ಬರುವುದೋ ಅವರನ್ನು 'ಅಕ್ಷರಸ್ಥ' ಎನ್ನಲಾಯಿತು. ೧೯೫೧ ರ ಜನಗಣತಿ ಪ್ರಕಾರ ಯಾರಿಗೆ ಓದಲು ಮತ್ತು ಬರೆಯಲು ಬರುವುದೋ ಅವರನ್ನು 'ಅಕ್ಷರಸ್ಥ'ರೆನ್ನಲಾಯಿತು. ಯಾರಿಗೆ ಓದಲು ಬರುವುದೋ ಮತ್ತು ಬರೆಯಲು ಬರುವುದಿಲ್ಲವೋ ಅವರನ್ನು 'ಅನಕ್ಷರಸ್ಥ'ರು ಎನ್ನಲಾಯಿತು. ಸಾಕ್ಷರತೆಗೆ ೧೯೬೧ ರಲ್ಲಿ ಜನಗಣತಿ ಪ್ರಕಾರ ಯಾವ ವ್ಯಕ್ತಿಗೆ ಓದುವ ಮತ್ತು ಬರಹ ಸಾಮರ್ಥ್ಯಗಳೆರೆಡೂ ಇದೆಯೋ ಅವರನ್ನು ಸಾಕ್ಷರರೆಂದು ಪರಿಗಣಿಸಲಾಯಿತು (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೬೭–೪೬೮). ತುಮಕೂರು ಜಿಲ್ಲೆಯಲ್ಲಿ ೧೯೫೧ ರ ಅವಧಿಯಲ್ಲಿ ಒಟ್ಟು ಸಾಕ್ಷರತೆ ಶೇ.೧೭.೪೮ ರಷ್ಟಿದ್ದು ೧೯೬೧ ರಲ್ಲಿ ಶೇ.೨೨. ೬೪ ಕ್ಕೆ ಏರಿತು.

ಪಟ್ಟಿ ೧೦ : ಸಾಕ್ಷರತೆ ಪ್ರಮಾಣ


		ಜನಸಂಖ್ಯೆ			ಅಕ್ಷರರು		
ಕ್ರಸಂ.	ವರ್ಷ	ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು	ಒಟ್ಟು
೧.	೧೯೫೧	೫೮೭೯೮೮ ೫೧.೦೬%	೫೬೩೩೭೪ ೪೮.೯೩%	೧೧೫೧೩೬೨ ೧೦೦%	೧೬೨೦೭೪ ೨೭.೫೬%	೩೯೨೧೧ ೬.೯೬%	೨೦೧೨೮೫ ೧೭.೪೮%
೨.	೧೯೬೧	೬೯೯೧೯೧ ೫೧.೧೩%	೬೬೮೨೧೧ ೪೮.೮೬%	೧೩೬೭೪೦೨ ೧೦೦%	೨೩೭೫೯೮ ೩೩.೯೮%	೭೧೯೯೪ ೧೦.೭೭%	೩೦೯೫೯೨ ೨೨.೬೪%

ಆಧಾರ : ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೪೬೯.

೧೯೫೧



೧೯೬೧








೧೯೫೧ ರ ಅವಧಿಯಲ್ಲಿ ಪುರುಷರ ಸಾಕ್ಷರತೆ ಶೇ.೨೭.೫೬ ರಷ್ಟಿದ್ದು ೧೯೬೧ ರ ಅವಧಿಯಲ್ಲಿ ಶೇ. ೩೩.೯೮ ಕ್ಕೇರಿತು. ಮಹಿಳಾ ಸಾಕ್ಷರತೆ ಇದೇ ಅವಧಿಯಲ್ಲಿ ಕ್ರಮವಾಗಿ ಶೇ.೬.೯೬ ರಿಂದ ಶೇ. ೧೦.೭೭ ಕ್ಕೇರಿತು. ಪುರುಷ ಸಾಕ್ಷರತೆಗೆ ಹೋಲಿಸಿದಲ್ಲಿ ಮಹಿಳಾ ಸಾಕ್ಷರತೆ ಬಹಳ ಕಡಿಮೆಯಿರುವುದು ಗೋಚರಿಸುತ್ತದೆ. ಶಾಲೆಗಳ ಸಂಖ್ಯೆಗಳು ಕಡಿಮೆ ಇರುವುದು ಒಂದು ಕಾರಣವಾದರೆ ದೂರದ ಪ್ರದೇಶಗಳಿಗೆ ಹೆಣ್ಣು ಮಕ್ಕಳನ್ನು ಶಿಕ್ಷಣ ಪಡೆಯಲು ಕಳುಹಿಸದಿರುವುದು ಮತ್ತೊಂದು ಕಾರಣ.

ಪಟ್ಟಿ ೧೧ : ಸಾಕ್ಷರತೆ : ೨೦೦೧ ರ ಜನಗಣತಿ ಪ್ರಕಾರ

ಕ್ರ.ಸಂ.	೨೦೦೧ ರ ಜನಗಣತಿ ಪ್ರಕಾರ	ಸಾಕ್ಷರತೆ (ಶೇಕಡಾವಾರು)
೧.	ಒಟ್ಟು :	೬೭.೦
	ಅ. ಪುರುಷರು :	೭೬.೮
	ಆ. ಮಹಿಳೆಯರು :	೫೬.೯
೨.	ಗ್ರಾಮೀಣ	
	ಒಟ್ಟು :	೬೩.೪
	ಅ. ಪುರುಷರು :	೭೪.೨
	ಆ. ಮಹಿಳೆಯರು :	೫೨.೩
೩.	ನಗರ	
	ಒಟ್ಟು :	೮೧.೮
	ಅ. ಪುರುಷರು :	೮೬.೯
	ಆ. ಮಹಿಳೆಯರು :	೭೬.೩
೪.	ಪರಿಶಿಷ್ಟ ಜಾತಿ	
	ಒಟ್ಟು :	೪೭.೭೪
	ಅ. ಪುರುಷರು :	೫೬.೯೭
	ಆ. ಮಹಿಳೆಯರು :	೩೮.೫೨
೫.	ಪರಿಶಿಷ್ಟ ಪಂಗಡ	
	ಒಟ್ಟು :	೫೩.೨೬
	ಅ. ಪುರುಷರು :	೬೨.೧೪
	ಆ. ಮಹಿಳೆಯರು :	೪೪.೩೮

ಆಧಾರ : ಅ. ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೨೦೦೫, ಪು.೧೨.
ಆ. ಸಮಗ್ರ ಅಂಕಿ-ಅಂಶ, ೨೦೦೭-೦೮, ಪು.೨೮೪.



೨೦೦೧ ರ ಅವಧಿಯಲ್ಲಿ ಮಹಿಳಾ ಸಾಕ್ಷರತೆ ಗಣನೀಯವಾಗಿ ಹೆಚ್ಚಾದರೂ, ಪುರುಷ ಸಾಕ್ಷರತೆಗಿಂತ ಕಡಿಮೆಯಿದೆ. ಶೇ.೬೭ ರಷ್ಟು ತುಮಕೂರು ಜಿಲ್ಲೆ ಸಾಕ್ಷರತೆಯನ್ನು ಸಾಧಿಸಿದ್ದು, ಶೇ.೭೬.೮ ರಷ್ಟು ಪುರುಷ ಸಾಕ್ಷರತೆಯಿದ್ದು, ಶೇ.೫೬.೯ ರಷ್ಟು ಮಹಿಳಾ ಸಾಕ್ಷರತೆಯಿದೆ. ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆ ಶೇ.೬೩.೪ ರಷ್ಟಿದ್ದು, ಪುರುಷ ಸಾಕ್ಷರತೆ ಶೇ. ೭೪.೨ ರಷ್ಟಿದ್ದು ಮತ್ತು ಮಹಿಳಾ ಸಾಕ್ಷರತೆ ಶೇ.೫೨.೩ ರಷ್ಟಿದೆ. ನಗರದ ಒಟ್ಟು ಸಾಕ್ಷರತೆ ಶೇ. ೮೧.೮ ರಷ್ಟು. ಇದರಲ್ಲಿ ಪುರುಷರ ಸಾಕ್ಷರತೆ ಶೇ. ೮೬.೯ ರಷ್ಟಿದ್ದರೆ, ಮಹಿಳೆಯರ ಸಾಕ್ಷರತೆ ಶೇ.೭೬.೩ ರಷ್ಟಿದೆ. ಗ್ರಾಮೀಣ ಮತ್ತು ನಗರ ಸಾಕ್ಷರತೆಗಳಲ್ಲೂ ಮಹಿಳಾ ಸಾಕ್ಷರತೆ ಕಡಿಮೆಯಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಲ್ಲಿಯೂ ಮಹಿಳಾ ಸಾಕ್ಷರತೆ ಪುರುಷ ಸಾಕ್ಷರತೆಗಿಂತ ಕಡಿಮೆಯಿದೆ. ಪರಿಶಿಷ್ಟ ಜಾತಿಯ ಸಾಕ್ಷರತೆ ಪರಿಶಿಷ್ಟ ಪಂಗಡಕ್ಕಿಂತ ಎಲ್ಲಾ ಮೂಲಗಳಿಂದಲೂ ಕಡಿಮೆಯಿದೆ. ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರತೆ ದರ ಶೇ.೪೭.೭೪ ರಷ್ಟಿದ್ದು, ಪುರುಷ ಸಾಕ್ಷರತೆ ಶೇ.೫೬.೯೭ ರಷ್ಟಿದ್ದು, ಮಹಿಳಾ ಸಾಕ್ಷರತೆಯು ಶೇ.೩೮.೫೨ ರಷ್ಟಿದೆ. ಪರಿಶಿಷ್ಟ ಪಂಗಡದ ಒಟ್ಟು


ಸಾಕ್ಷರತೆಯು ಶೇ.೫೩.೨೬ ರಷ್ಟಿದ್ದರೆ, ಪುರುಷ ಸಾಕ್ಷರತೆಯು ಶೇ.೬೨.೧೪ ರಷ್ಟಿದ್ದು, ಮಹಿಳಾ ಸಾಕ್ಷರತೆಯು ಶೇ.೪೪.೩೮ ರಷ್ಟಿದೆ. ಲಿಂಗಾಧಾರಿತ, ಪ್ರದೇಶಾಧಾರಿತ, ಜಾತಿ ಆಧಾರಿತ.......ಯಾವ ದೃಷ್ಟಿಕೋನದಿಂದ ಅಧ್ಯಯನ ಮಾಡಿದರು ಮಹಿಳಾ ಸಾಕ್ಷರತೆ ಕಡಿಮೆಯಿದೆ.

ತುಮಕೂರು ಜಿಲ್ಲೆಯಲ್ಲಿ ಸಾಕ್ಷರತೆ ದರ ಹೆಚ್ಚುತ್ತಲೆ ಇದ್ದರೂ ಮಹಿಳಾ ಸಾಕ್ಷರತೆ ದರ ನಿರೀಕ್ಷಿಸಿದಷ್ಟು ಪ್ರಮಾಣಕ್ಕೆ ಏರಲು ಸಾಧ್ಯವಾಗುತ್ತಿಲ್ಲ. ಪ್ರೌಢಶಾಲಾ ಹಂತದಲ್ಲಿ ಹೆಣ್ಣು ಮಕ್ಕಳ ದಾಖಲಾತಿಯು ಕಡಿಮೆಯಾಗುವುದರಿಂದಲೇ, ಹೆಣ್ಣು ಮಕ್ಕಳ ಸಾಕ್ಷರತೆ ಕಡಿಮೆಯಿರುತ್ತದೆ. ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಗು ಪ್ರೌಢಾವಸ್ಥೆಗೆ ಬಂದ ನಂತರ ಪೋಷಕರು ಶಾಲೆಗಳಿಗೆ ಕಳುಹಿಸುವುದಿಲ್ಲ. ಹೀಗೆ ಅನೇಕ ಕಾರಣಗಳಿಂದಾಗಿ ಮಹಿಳಾ ಸಾಕ್ಷರತೆ ಪುರುಷ ಸಾಕ್ಷರತೆಗಿಂತ ಕಡಿಮೆಯಿದೆ.

ಪಟ್ಟಿ ೧೨ : ಗ್ರಾಮೀಣ–ನಗರ ಸಾಕ್ಷರತೆ : ೨೦೦೧ ರ ಜನಗಣತಿ ಪ್ರಕಾರ

ಕ್ರ ಸಂ.	ತಾಲ್ಲೋಕು	ಗ್ರಾಮೀಣ			ನಗರ			ಒಟ್ಟು		
		ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು	ಒಟ್ಟು	ಪರುಷರು	ಮಹಿಳೆಯರು	ಒಟ್ಟು
೧	ಚಿಕ್ಕನಾಯಕನಹಳ್ಳಿ	೭೮.೬	೫೯.೩	೬೯.೦	೮೭.೫	೭೩.೦	೮೦.೩	೭೯.೫	೬೦.೮	೭೦.೨
೨	ಗುಬ್ಬಿ	೭೫.೮	೫೬.೭	೬೬.	೮೯.೨	೭೯.೪	೮೪.೪	೭೬.೭	೫೮.೨	೬೭.
೩	ಕೊರಟಗೆರೆ	೭೨.೧	೪೯.೯	೬೧.೨	೮೬.೫	೭೨.೧	೭೯.೪	೭೩.೩	೫೧.೮	೬೨.೭
೪	ಕುಣಿಗಲ್	೭೦.೧	೪೮.೦	೫೮.	೮೪.೩	೭೨.೫	೭೮.೬	೭೨.೦	೫೧.೦	೬೧.
೫	ಮಧುಗಿರಿ	೭೧.೨	೪೬.೭	೫೯.೧	೮೫.೭	೭೩.೪	೭೯.೭	೭೨.೭	೪೯.೪	೬೧.೧
೬	ಪಾವಗಡ	೬೬.೭	೪೧.೦	೫೪.	೮೩.೨	೬೭.೦	೭೫.೩	೬೮.೬	೪೪.೦	೫೬.
೭	ಶಿರಾ	೭೧.೩	೪೭.೮	೫೯.	೮೨.೦	೭೦.೩	೭೬.೩	೭೩.೧	೫೧.೪	೬೨.
೮	ತಿಪಟೂರು	೮೨.೪	೬೨.೫	೭೨.೫	೮೭.೮	೭೭.೭	೮೨.೯	೮೩.೭	೬೬.೨	೭೫.೧
೯	ತುಮಕೂರು	೭೬.೮	೫೫.೮	೬೬.೭	೮೮.೧	೭೯.೧	೮೩.೮	೮೨.೩	೬೭.೧	೭೫.
೧೦	ತುರುವೇಕೆರೆ	೮೦.೬	೫೯.೧	೬೯.೮	೯೦.೭	೮೦.೧	೮೫.೬	೮೧.೭	೬೧.೧	೭೧.೪
	ಒಟ್ಟು	೭೪.೨	೫೨.೩	೬೩.	೮೬.೯	೭೬.೩	೮೧.೮	೭೬.೮	೫೬.೯	೬೭.

ಆಧಾರ : ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೨೦೦೫, ಪು.೧೨.


ತುರುವೇಕೆರೆ
ತುಮಕೂರು
ತಿಪಟೂರು
ಶಿರಾ
ಪಾವಗಡ
ಮಧುಗಿರಿ
ಕುಣಿಗಲ್
ಕೊರಟಗೆರೆ
ಗುಬ್ಬಿ
ಚಿಕ್ಕನಾಯಕನಹಳ್ಳಿ
೦ ೧೦ ೨೦ ೩೦ ೪೦ ೫೦ ೬೦ ೭೦ ೮೦ ೯೦ ೧೦೦
ಒಟ್ಟು ಮಹಿಳೆಯರು
ಒಟ್ಟು ಪುರುಷರು
ನಗರ ಮಹಿಳೆಯರು
ನಗರ ಪುರುಷರು
ಗ್ರಾಮೀಣ ಮಹಿಳೆಯರು
ಗ್ರಾಮೀಣ ಪುರುಷರು

೩.೮ ವಿದ್ಯಾರ್ಥಿ ನಿಲಯಗಳು

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಅಕ್ಷರ, ಆರೋಗ್ಯದಷ್ಟೇ ಮಹತ್ವವಾದದ್ದು ಆಹಾರವೂ ಕೂಡ. ಅಕ್ಷರ, ಅನ್ನ ಮತ್ತು ಆಸನ ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ವ್ಯಕ್ತಪಡಿಸುವ ಚಲಕಗಳು. ಆದ್ದರಿಂದ ತುಮಕೂರು ಜಿಲ್ಲೆಯಲ್ಲಿ ಸರ್ಕಾರದೊಂದಿಗೆ, ಖಾಸಗಿಯವರು ಮತ್ತು ಮಠಮಾನ್ಯಗಳು ಅಕ್ಷರಜ್ಞಾನ ನೀಡುವುದಲ್ಲದೆ ಅನ್ನ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಉಚಿತ ವಸತಿ ಸೌಲಭ್ಯಗಳನ್ನು ನೀಡಿ ಯಾರು ಶಿಕ್ಷಣವನ್ನು ಪಡೆಯುವುದರಿಂದ ವಂಚಿತರಾಗುತ್ತಿದ್ದರೋ, ಅಂತಹವರಿಗೆ ಸಹಾಯ ಹಸ್ತವನ್ನು ಈ ಮೂರು ಸಾಮಾಜಿಕ ಸಂಸ್ಥೆಗಳು ದೊರಕಿಸಿಕೊಡುತ್ತಿವೆ. ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಸಿದ್ಧಗಂಗಾ ಮಠ ಗಮನಾರ್ಹವಾದ ಸೇವೆಯನ್ನು ಸಲ್ಲಿಸುತ್ತಿದೆ. ಖಾಸಗಿಯವರು ಸರ್ಕಾರದ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸಮಾಜಮುಖಿಯಾಗಿದ್ದಾರೆ. ಕೊಡುಗೈ ದಾನಿಗಳಿಂದ ಸ್ಥಾಪಿಸಿದಂತಹ ವಿದ್ಯಾರ್ಥಿ ನಿಲಯಗಳು ಇಂದಿಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಟ್ರಸ್ಟ್‌ಗಳು ಸಮಾಜೋದ್ಧಾರದ ಉದ್ದೇಶವನ್ನಿಟ್ಟುಕೊಂಡು, ವಿದ್ಯಾರ್ಥಿಗಳ ಅಭ್ಯುದಯಕ್ಕೆ ಟೊಂಕಕಟ್ಟಿ ನಿಂತಿವೆ. ಜಾತಿ ಪ್ರಧಾನ ಸಮಾಜದಲ್ಲಿ, ಜಾತಿ ವಿದ್ಯಾರ್ಥಿನಿಲಯಗಳೂ ಇವೆ. ಯಾವುದೇ ಜಾತಿ ವಿದ್ಯಾರ್ಥಿನಿಲಯಗಳಿರಲಿ, ಅವುಗಳ ಮೂಲೋದ್ದೇಶ ಮಕ್ಕಳಿಗೆ ಶಿಕ್ಷಣ ಕೊಡುವುದೇ ಅಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ಪಾತ್ರವು ಮಹತ್ವವಾದದ್ದು. ಸರ್ಕಾರವೂ ಕೂಡ ಈ ಕೈಂಕರ್ಯದಲ್ಲಿ ಹಿಂದೆ ಬಿದ್ದಿಲ್ಲ ಸರ್ಕಾರವೂ ಕೂಡ ಬಡಮಕ್ಕಳಿಗೆ ಅದರಲ್ಲೂ ಹಿಂದುಳಿದ ಜಾತಿ ಪಂಗಡದವರಿಗೆ ಸಾಕಷ್ಟು ಶಿಕ್ಷಣ ಸೌಲಭ್ಯವನ್ನೊದಗಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿಲ್ಲವೆಂದು ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಜಿಲ್ಲೆಯಾದ್ಯಂತ ವಸತಿ ಸೌಲಭ್ಯಗಳನ್ನೊದಗಿಸಲು ಇಚ್ಛಿಸಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದರೊಂದಿಗೆ ಹಿಂದುಳಿದ ವರ್ಗದವರ ವಿದ್ಯಾರ್ಥಿ ನಿಲಯಗಳನ್ನೂ ಸ್ಥಾಪಿಸಿತು.

೧೯೬೭-೬೮ ರ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ಒಟ್ಟು ೬ ಬಾಲಕರ ಮತ್ತು ೬ ಬಾಲಕಿಯರ ವಸತಿ ನಿಲಯಗಳನ್ನು ಸ್ಥಾಪಿಸಿತು. ಒಟ್ಟು ೩೦೦ ವಿದ್ಯಾರ್ಥಿಗಳಿಗೆ ಮತ್ತು ೨೬೦ ವಿದ್ಯಾರ್ಥಿನಿಯರಿಗೆ ಈ ವಸತಿ ಸೌಲಭ್ಯಗಳಲ್ಲಿ ಅವಕಾಶವನ್ನು ಕಲ್ಪಿಸಲಾಯಿತು. ೬ ಬಾಲಕರ ವಸತಿ ನಿಲಯಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಯಿತು-ತುರುವೇಕೆರೆ, ಕುಣಿಗಲ್, ಚಿಕ್ಕನಾಯ್ಕನಹಳ್ಳಿ, ಕಳ್ಳಂಬೆಳ್ಳ, ಪಾವಗಡ ಮತ್ತು ಮಧುಗಿರಿ (ಮೈಸೂರುಸ್ಟೇಟ್ ಗೆಜೆಟೀಯರ್, ೧೯೬೯, ಪು.೫೩೮-೫೩೯). ಆರು ಬಾಲಕಿಯರ ವಸತಿ ನಿಲಯಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಯಿತು-ತುಮಕೂರು,

ತುರುವೇಕೆರೆ, ಕುಣಿಗಲ್, ತಿಪಟೂರು, ಮಧುಗಿರಿ ಮತ್ತು ಗುಬ್ಬಿ. ಈ ಅವಧಿಯಲ್ಲಿ ವಸತಿನಿಲಯಗಳಿಗೆ ಅನುಮೋದಿಸಿದ ಒಟ್ಟು ಹಣ ರೂ ೧೫೧೨೧೨. ಆದರೆ ವಾಸ್ತವಿಕ ವೆಚ್ಚ ರೂ ೧೪೯೭೫೫ (ಮೈಸೂರು ಸ್ಟೇಟ್ ಗೆಜೆಟೀಯರ್, ೧೯೬೯, ಪು.೫೩೮-೫೩೯).


ಸಮಾಜ ಕಲ್ಯಾಣ ಇಲಾಖೆಯು ಇದೇ ಅವಧಿಯಲ್ಲಿ ಇತರೆ ಹಿಂದುಳಿದ ಜಾತಿಯವರಿಗೂ ವಸತಿ ಸೌಲಭ್ಯ ಕಲ್ಪಿಸಲು ಮುಂದಾಗಿ ' ಸಾರ್ವಜನಿಕ ವಿದ್ಯಾರ್ಥಿ ನಿಲಯ' ಗಳನ್ನು ಸ್ಥಾಪಿಸಲಿಚ್ಛಿಸಿತು. ಹಾಗಾಗಿ ಮೂರು ಸಾರ್ವತ್ರಿಕ ವಸತಿ ನಿಲಯಗಳಿಗೆ ಅನುದಾನ ನೀಡಿತು. ಈ ವಿದ್ಯಾರ್ಥಿ ನಿಲಯಗಳು ಗೊಲ್ಲಹಳ್ಳಿ (ತುಮಕೂರು ತಾಲ್ಲೋಕು) ಹಂದನಕೆರೆ (ಚಿಕ್ಕನಾಯಕನಹಳ್ಳಿ ತಾಲ್ಲೋಕು) ಮತ್ತು ಮಿಡಿಗೇಶಿ (ಮಧುಗಿರಿ ತಾಲ್ಲೋಕು) ಗಳಲ್ಲಿವೆ. ಈ ವಸತಿನಿಲಯಗಳಲ್ಲಿ ೧೨೦ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಯಿತು. ೧೯೬೭-೬೮ ರಲ್ಲಿ ೩೦೩೨೦, ರೂ.ಗಳನ್ನು ಅನುಮೋದಿಸಲಾಯಿತು (ಮೈಸೂರುಸ್ಟೇಟ್ ಗೆಜೆಟೀಯರ್, ೧೯೬೯, ಪು ೫೩೮-೫೩೯).

ಕಾಲಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾದಂತೆ ವಸತಿನಿಲಯಗಳ ಸಂಖ್ಯೆಯು ಅಧಿಕವಾಗಿದೆ. ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವಿದ್ಯಾರ್ಥಿ ನಿಲಯಗಳೆಂದು ವರ್ಗೀಕರಿಸಿದೆ. ಈ ವಿಂಗಡಣೆಯಲ್ಲಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿವೆ. ಸರ್ಕಾರವು ಕೆಲವು ಹಾಸ್ಟೆಲ್‌ಗಳಿಗೆ ಅನುದಾನವನ್ನು ನೀಡುತ್ತಿದೆ. ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳಲ್ಲಿ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಒಟ್ಟು ೬೧. ಈ ಹಾಸ್ಟೆಲ್‌ಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೩೭೧೩. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಒಟ್ಟು ೨೧. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨೦೫೦. ಮೆಟ್ರಿಕ್-ಪೂರ್ವ ಅನುದಾನಿತ ವಿದ್ಯಾರ್ಥಿ ನಿಲಯಗಳು ಒಟ್ಟು ೧೬. ಒಟ್ಟು ೭೭೭ ವಿದ್ಯಾರ್ಥಿಗಳಿಗೆ ಅನುಮತಿ ನೀಡಲಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೮೦೦. ಒಟ್ಟು ೮ ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ (ತುಮಕೂರು ಜಿಲ್ಲೆ ಅಂಕಿ- ಅಂಶಗಳ ನೋಟ, ೨೦೦೪-೨೦೦೫, ಪು.೫೪).

ಪಟ್ಟಿ ೧೩ : ವಿದ್ಯಾರ್ಥಿ ನಿಲಯಗಳು ಮತ್ತು ಸಾಮಾಜಿಕ ಆಯಾಮಗಳು

ಕ್ರ. ಸಂ.		ಮೆಟ್ರಿಕ್ ಪೂರ್ವ							ಮೆಟ್ರಿಕ್ ನಂತರದ					
		ಜಾತಿ	ವಿದ್ಯಾರ್ಥಿ ನಿಲಯಗಳು			ವಿದ್ಯಾರ್ಥಿಯ ಸಂಖ್ಯೆ			ವಿದ್ಯಾರ್ಥಿ ನಿಲಯಗಳು			ವಿದ್ಯಾರ್ಥಿಗಳ ಸಂಖ್ಯೆ		
	ವರ್ಷ	ವಿವರ	ಸರ್ಕಾರಿ	ಅನು ದಾನಿತ	ಒಟ್ಟು	ಸರ್ಕಾರಿ	ಅನು ದಾನಿತ	ಒಟ್ಟು	ಸರ್ಕಾರಿ	ಅನು ದಾನಿತ	ಒಟ್ಟು	ಸರ್ಕಾರಿ	ಅನು ದಾನಿತ	ಒಟ್ಟು
೧.	೨೦೦೩-೦೪	ಪರಿಶಿಷ್ಟ ಜಾತಿ	೬೧ ೫೪.೯೫%	೧೬ ೭೨.೭೨%	೭೭ ೫೭.೮೯%	೩೭೧೩ ೫೯.೨೯%	೭೭೭ ೭೫.೨೯%	೪೪೯೦ ೬೨.೧೦%	೨೧ .೭೦%	೮ ೮೮.೮೮%	೨೯ ೭೪.೩೫%	೨೦೫೦ ೭೬.೨೦%	೮೦೦ ೯೬.೯೬%	೨೮೫೦ ೮೫.೯%
		ಪರಿಶಿಷ್ಟ ಪಂಗಡ	೪ ೩.೬೦%	೧ ೪.೫೪%	೦೫ ೩.೭೫%	೧೭೫ ೨.೮೨%	೪೮ ೪.೬೫%	೨೨೩ ೩೦.೦೮%	-	-	-	-	-	-
		ಹಿಂದುಳಿದ ವರ್ಗ	೪೬ ೪೧.೪೪%	೫ ೨೨.೭೨%	೫೧ ೩೮.೩೪%	೨೩೧೦ ೩೭.೨೭%	೨೦೭ ೨೦.೦೫%	೨೫೧೭ ೩೪.೮೧%	೯ ೩೦%	೦೧ ೧೧.೧೧%	೧೦ ೨೫.೬೪	೬೦೪ ೨೩.೭೯%	೨೫ ೩.೦೩%	೬೬೫ ೨೦.೪೦%
		ಒಟ್ಟು	೧೧೧ ೧೦೦%	೨೨ ೧೦೦%	೧೩೩ ೧೦೦%	೬೧೯೮ ೧೦೦%	೧೦೩೨ ೧೦೦%	೭೨೩೦ ೧೦೦%	೩೦ ೧೦೦%	೦೯ ೧೦೦%	೩೯ ೧೦೦%	೨೬೯೦ ೧೦೦%	೮೨೫ ೧೦೦%	೩೫೧೫ ೧೦೦%

ಆಧಾರ : ತುಮಕೂರು ಜಿಲ್ಲೆ ಅಂಕಿ-ಅಂಶಗಳ ನೋಟ, ೨೦೦೪-೦೫, ಪು.೫೪-೫೬.



೨೦೦೩-೦೪ ರ ಅವಧಿಯಲ್ಲಿ ಶೇ.೫೪.೯೫ ಮತ್ತು ಶೇ.೭೦ ರಷ್ಟು ಸರ್ಕಾರಿ ನಿಲಯಗಳು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಇದೇ ಜಾತಿಯವರಿಗೆ ಶೇ.೭೨.೭೨ ಮತ್ತು ಶೇ.೮೮.೮೮ ರಷ್ಟು ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ. ಆದರೆ ಪರಿಶಿಷ್ಟ ಪಂಗಡದವರು ಸೌಲಭ್ಯ ವಂಚಿತರಾಗಿದ್ದಾರೆ. ಶೇ.೩.೬೦ ರಷ್ಟು ಸರ್ಕಾರಿ ಮತ್ತು ಶೇ.೪.೫೪ ರಷ್ಟು ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮಾತ್ರವಿದೆ. ಆದರೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಸೌಲಭ್ಯವನ್ನು ಹಿಂದುಳಿದ ವರ್ಗದವರಿಗೆ ಶೇ.೪೧.೪೪ ರಷ್ಟು ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು, ಶೇ.೩೦ ರಷ್ಟು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿವೆ. ಶೇ.೨೨.೭೨ ಮತ್ತು ಶೇ.೧೧.೧೧ ರಷ್ಟು ಅನುದಾನಿತ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿವೆ.

ಪರಿಶಿಷ್ಟ ಪಂಗಡದ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ೪. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೭೫. ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಯಾವುದೇ ವಿದ್ಯಾರ್ಥಿ ನಿಲಯಗಳಿಗೆ ಅನುಮತಿಯನ್ನು ನೀಡಿರುವುದಿಲ್ಲ. ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ೧. ಒಟ್ಟು ೪೮ ವಿದ್ಯಾರ್ಥಿಗಳಿಗೆ ಅನುಮತಿ ನೀಡಲಾಗಿದೆ. ಮೆಟ್ರಿಕ್ ನಂತರದ ಯಾವುದೇ ಅನುದಾನಿತ ವಿದ್ಯಾರ್ಥಿ ನಿಲಯಗಳಿಲ್ಲ (ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೦೫, ಪು.೫೫).

ಹಿಂದುಳಿದ ವರ್ಗದವರ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ಮೆಟ್ರಿಕ್-ಪೂರ್ವ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಒಟ್ಟು ೪೬. ಒಟ್ಟು ೨೩೧೦ ವಿದ್ಯಾರ್ಥಿಗಳಿಗೆ ಅನುಮತಿಯನ್ನು ನೀಡಲಾಗಿದೆ. ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಒಟ್ಟು ೯. ಒಟ್ಟು ೬೦೪ ವಿದ್ಯಾರ್ಥಿಗಳಿಗೆ ಅನುಮತಿ ನೀಡಲಾಗಿದೆ. ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಒಟ್ಟು ಸಂಖ್ಯೆ ೫. ಒಟ್ಟು ೨೦೭ ವಿದ್ಯಾರ್ಥಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ೧. ಒಟ್ಟು ೨೫ ವಿದ್ಯಾರ್ಥಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಸರ್ಕಾರ ಸ್ಥಾಪಿಸಿದ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚು ಅನುಕೂಲತೆ ಪಡೆದಿರುವುದು ಪರಿಶಿಷ್ಟ ಜಾತಿಯವರು. ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅಷ್ಟೇನು


ಪ್ರಯೋಜನವಾಗಿಲ್ಲ. ಆದರೂ ಈ ಎಲ್ಲಾ ಜಾತಿ ಮತ್ತು ವರ್ಗದವರನ್ನು ಪರಿಗಣಿಸಿದರೆ, ಮೆಟ್ರಿಕ್ ಪೂರ್ವದಲ್ಲಿ ಒಟ್ಟು ೧೩೩ ವಿದ್ಯಾರ್ಥಿನಿಲಯಗಳಿಂದ ೭೨೩೦ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ದೊರೆಯುವುದರಿಂದ ವಿದ್ಯಾರ್ಥಿಗಳು ನಗರ ಶಿಕ್ಷಣ ಪಡೆಯಲು ಸಾಧ್ಯವಾಗಿದೆ. ಹಾಗೆಯೇ ಮೆಟ್ರಿಕ್ ನಂತರದಲ್ಲಿ ಒಟ್ಟು ೩೯ ವಿದ್ಯಾರ್ಥಿ ನಿಲಯಗಳಿಂದ ೩೩೧೫ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ಸೌಲಭ್ಯ ದೊರೆತಿದೆ. ಸರ್ಕಾರ ಈ ಮೂರು ಜಾತಿಯವರಿಗೆ ಸಾಕಷ್ಟು ಹಣವನ್ನು ಖರ್ಚುಮಾಡುತ್ತಿದೆ. ಆದರೂ ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯವಿಲ್ಲದಿರುವುದು ಖೇದಕರವಾಗಿದೆ. ಸರ್ಕಾರ ಈ ಮೂರು ವರ್ಗದ ಜಾತಿಯವರಿಗೆ ಸಾಕಷ್ಟು ಹಣವನ್ನು ಖರ್ಚುಮಾಡುತ್ತಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಯೋಜನೆ ಮತ್ತು ಯೋಜನೇತರ ವೆಚ್ಚಗಳಲ್ಲಿ ಬಹುಪಾಲು ಪರಿಶಿಷ್ಟ ಜಾತಿಯವರಿಗೆ ವಿನಿಯೋಗಿಸಲಾಗಿದೆ. ೨೦೦೩-೦೪ ರಲ್ಲಿ ಯೋಜನಾ ವೆಚ್ಚದಲ್ಲಿ ಪರಿಶಿಷ್ಟ ಜಾತಿಯವರಿಗೆ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಗೊಳಿಸಿದ ಹಣ ಶೇ. ೮೦.೬೯ ರಷ್ಟು. ಆದರೆ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಶೇ.೯.೬೭ ಮತ್ತು ಶೇ.೯.೬೩ ರಷ್ಟು ಮಾತ್ರ ಬಿಡುಗಡೆಗೊಳಿಸಿದೆ. ಆದರೆ ವೆಚ್ಚ ಕ್ರಮವಾಗಿ ಶೇ.೮೨.೧೨, ಶೇ.೯.೬೨ ಮತ್ತು ಶೇ.೮.೨೫ ರಷ್ಟು. ಯೋಜನೇತರ ವೆಚ್ಚಗಳಲ್ಲಿ ಬಿಡುಗಡೆಯಾದ ಮೊತ್ತ ಶೇ.೬೨.೧೪, ಶೇ.೫.೩೨ ಮತ್ತು ಶೇ.೩೨.೫೩. ಆದರೆ ವೆಚ್ಚ ಪ್ರಮಾಣ ಶೇ.೫೬.೦೮, ಶೇ.೫.೨೪ ಮತ್ತು ಶೇ.೩೮.೬೬ ರಷ್ಟು. ಸಮಾಜ ಕಲ್ಯಾಣ ಇಲಾಖೆಯು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಸ್ಟೆಲ್‌ಗಳನ್ನು ತೆರೆದು ನಡೆಸಲಾಗುತ್ತಿದ್ದು, ಅವುಗಳಲ್ಲಿನ ವಸತಿದಾರರಿಗೆ ಊಟೋಪಚಾರ, ಸಮವಸ್ತ್ರ, ಪಠ್ಯ-ಪುಸ್ತಕಗಳನ್ನು ಉಚಿತವಾಗಿ ಪೂರೈಸುವುದು, ಸಿಬ್ಬಂದಿ ವೇತನ, ಕಟ್ಟಡದ ಬಾಡಿಗೆ, ನಿರ್ಮಾಣ ವೆಚ್ಚಗಳನ್ನು ಭರಿಸಬೇಕು. ಜಿಲ್ಲೆಯಲ್ಲಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಹೆಣ್ಣುಮಕ್ಕಳಿಗೆ, ವಿಶೇಷ ವಿದ್ಯಾರ್ಥಿ ವೇತನಗಳನ್ನು ಅಂದರೆ ವಿಶೇಷ ಪ್ರೋತ್ಸಾಹ ಶಿಷ್ಯ ವೇತನವನ್ನು ನೀಡಲಾಗುತ್ತಿದೆ (ಜಿಲ್ಲಾ ಪಂಚಾಯತ್ ಆಡಳಿತ ವರದಿ, ೨೦೦೩-೦೪, ಪು.೮೫).

ಪಟ್ಟಿ ೧೪ : ವಿದ್ಯಾರ್ಥಿ ನಿಲಯಗಳಲ್ಲಿ ಸರ್ಕಾರ ಕೈಗೊಂಡ ಜಾತಿವಾರು ವೆಚ್ಚ. : ೨೦೦೩-೦೪ (ಲಕ್ಷ ರೂ.ಗಳಲ್ಲಿ)

ವೆಚ್ಚ ರೂಪ	ಜಾತಿ ವಿವರ	ಜಿಲ್ಲಾ ಪಂಚಾಯತ್ ನಿಂದ ಬಿಡುಗಡೆಗೊಳಿಸಿದ ಹಣ	ಶೇಕಡಾವಾರು	ಖರ್ಚು ಮಾಡಿದ ಹಣ	ಶೇಕಡಾವಾರು
ಯೋಜನಾ ವೆಚ್ಚ	ಪರಿಶಿಷ್ಟ ಜಾತಿ	೨೪೬.೫೫	೮೦.೬೯	೨೫೪.೦೭	೮೨.೧೨
	ಪರಿಶಿಷ್ಟ ವರ್ಗ	೨೯.೫೫	೯.೬೭	೨೯.೭೭	೯.೬೨
	ಹಿಂದುಳಿದ ವರ್ಗ	೨೯.೪೩	೯.೬೩	೨೫.೫೪೪	೮.೨೫
	ಒಟ್ಟು	೩೦೫.೫೩	೧೦೦	೩೦೯.೩೮೪	೧೦೦
ಯೋಜನೇತರ ವೆಚ್ಚ	ಪರಿಶಿಷ್ಟ ಜಾತಿ	೫೨೦.೬೮	೬೨.೧೪	೫೧೩.೦೬	೫೬.೦೮
	ಪರಿಶಿಷ್ಟ ವರ್ಗ	೪೪.೬೧	೫.೩೨	೪೭.೯೭	೫.೨೪
	ಹಿಂದುಳಿದ ವರ್ಗ	೨೭೨.೫೭	೩೨.೫೩	೩೫೩.೭೦	೩೮.೬೬
	ಒಟ್ಟು	೮೩೭-೮೬	೧೦೦	೯೧೪.೭೩	೧೦೦

ಆಧಾರ : ಜಿಲ್ಲಾ ಪಂಚಾಯತ್ ಆಡಳಿತ ವರದಿ , ೨೦೦೩-೦೪, ಪು.೮೩,೮೬.



ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಹಾಸಿಗೆ, ಹೊದಿಕೆ, ತಟ್ಟೆ-ಲೋಟ, ಪಾತ್ರೆ ಇತ್ಯಾದಿ ಸಾಮಗ್ರಿಗಳನ್ನು ನೀಡುತ್ತದೆ. ಹಿಂದುಳಿದ ವರ್ಗಗಳ ೧, ೨ಎ, ೨ಬಿ, ೩ಎ, ಮತ್ತು ೩ಬಿ ಗಳಿಗೆ ಸೇರಿದ ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೋಷಕರ ಆದಾಯ ಮತ್ತು ಮೆರಿಟ್ ಆಧಾರದ ಮೇಲೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ (ಜಿಲ್ಲಾ ಪಂಚಾಯತ್ ಆಡಳಿತ ವರದಿ, ೨೦೦೩-೦೪, ಪು.೮೯).

ಯೋಜನೆ ಮತ್ತು ಯೋಜನೇತರ ಒಟ್ಟು ಬಿಡುಗಡೆಗೊಳಿಸಿದ ಹಣ ರೂ. ೧೧೪೩.೩೯ ಲಕ್ಷಗಳು ಆದರೆ ವೆಚ್ಚ ರೂ. ೧೨೨೪.೧೧೪ ಲಕ್ಷಗಳು ಬಿಡುಗಡೆಗೊಳಿಸಿದ ಹಣಕ್ಕಿಂತ ರೂ.೮೦.೭೨೪ ಲಕ್ಷ ಹೆಚ್ಚುವರಿ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕೇವಲ ಸರ್ಕಾರಿ ಸಂಸ್ಥೆಗಳಲ್ಲದೆ, ಮಠ ಮಾನ್ಯಗಳು, ಖಾಸಗಿಯವರು ಪ್ರಯತ್ನಿಸಿದ್ದಾರೆ. ಬಡಮಕ್ಕಳಿಗೆ ವಸತಿಸೌಲಭ್ಯಗಳನ್ನೊದಗಿಸಿ, ಅನ್ನ ಸೌಲಭ್ಯವನ್ನು ನೀಡಿ, ದಾರಿದೀಪವಾದವರಲ್ಲಿ ಹಲವರು ಪ್ರಮುಖರಿದ್ದಾರೆ. ಮುಖ್ಯವಾಗಿ ಶ್ರೀ ಶಿವಕುಮಾರಸ್ವಾಮೀಜಿ, ಗುಬ್ಬಿ ತೋಟದಪ್ಪ, ಜಿ.ಎಂ. ಸಿದ್ಧರಾಮಣ್ಣ, ನಿಡಸಾಲೆ ಚನ್ನಂಜಪ್ಪ, ಹೆಚ್.ಎಂ ಗಂಗಾಧರಯ್ಯ, ಅಮವಾಸ್ಯೆ ಮಲ್ಲಣ್ಣ, ಕೆಂಪಹೊನ್ನಯ್ಯ, ಹುಚ್ಚೇಗೌಡರು .... ಮೊದಲಾದವರು.

ಗುಬ್ಬಿ ತೋಟದಪ್ಪನವರು ಸ್ಥಾಪಿಸಿದ ವಸತಿ ನಿಲಯ ಬೆಂಗಳೂರು ರೈಲ್ವೇ ಸ್ಟೇಷನ್ ಸಮೀಪವೇ ಇದೆ. ೧೮೯೭ ರಲ್ಲಿ ಬಸ್ ಸ್ಟ್ಯಾಂಡ್ ಬಳಿ ಜಾಗವನ್ನು ಕೊಂಡು, ಕಟ್ಟಿಸಿದ ವಸತಿನಿಲಯ ಇಂದಿಗೂ ಮುಂದುವರೆದು ರಾಜ್ಯಾದ್ಯಂತ ಬಡಜನತೆಗೆ ಆಶಾಕಿರಣವಾಗಿದೆ. ಆದರೆ ಗುಬ್ಬಿಯಲ್ಲಿಯೇ ಇವರು ಸ್ಥಾಪಿಸಿದ ವಸತಿ ನಿಲಯ ದೀರ್ಘಕಾಲವಿರಲಿಲ್ಲ. ಇವರ ಸೇವೆಯನ್ನು ಗಮನಿಸಿ ಶ್ರೀ ಕೃಷ್ಣರಾಜ ಒಡೆಯರ್‌ರವರು 'ಧರ್ಮಪ್ರವರ್ತ' ಎಂದು, ಐದನೇ ಜಾರ್ಜ್ ಇವರನ್ನು 'ರಾವ್‌ಬಹದ್ದೂರ್' ಎಂದು ಪ್ರಶಸ್ತಿ ನೀಡಿ ಗೌರವಿಸಿದರು (ಜಯಮಂಗಲಿ, ೨೦೦೨, ಪು.೨೪೯).

ಜಿ.ಎಂ. ಸಿದ್ಧರಾಮಣ್ಣ ೧೯೨೭ ರಲ್ಲಿ ಸ್ವಂತ ವ್ಯವಹಾರ ಆರಂಭಿಸಿ, 'ಶ್ರೀ ಜಿ.ಎಂ. ಸಿದ್ಧರಾಮಣ್ಣ ಮಂಡಿ ಮರ್ಚೆಂಟ್ ಅಂಡ್ ಕಮೀಷನ್ ಏಜೆಂಟ್' ಸ್ಥಾಪಿಸಿದರು. ಉತ್ತಮ ವ್ಯಾಪಾರದಿಂದಾಗಿ ಅಧಿಕ ಲಾಭ ಸಂಪಾದಿಸಿದರು. ಮಕ್ಕಳಿಲ್ಲದ ಸಿದ್ಧರಾಮಣ್ಣ ಈ ಲಾಭದ ಹಣ ಸಮಾಜಕ್ಕೆ ಉಪಯುಕ್ತವಾಗಬೇಕೆಂದು ಯೋಚಿಸಿದಾಗ 'ಶ್ರೀ ಜಿ.ಎಂ. ಸಿದ್ಧರಾಮಣ್ಣ ಟ್ರಸ್ಟ್' ಸ್ಥಾಪಿಸಿದರು. ಏಳುಮಂದಿ ಧರ್ಮದರ್ಶಿಗಳನ್ನು ಹೊಂದಿದ್ದ ಈ ಟ್ರಸ್ಟ್‌ಗೆ ತಮ್ಮ ಸಕಲ ಚರ ಮತ್ತು ಸ್ಥಿರಾಸ್ಥಿಗಳನ್ನು ಸಮಾಜಕ್ಕೆ ದಾನವಾಗಿ ನೀಡಿದರು. ಇಂದಿಗೂ ತುಮಕೂರು ಬಸ್ ಸ್ಟ್ಯಾಂಡ್ ಬಳಿಯಿರುವ 'ಸಿದ್ಧರಾಮಣ್ಣ ಹಾಸ್ಟೆಲ್' ಸಾಕಷ್ಟು ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವನ್ನೊದಗಿಸಿ, ಬಡಜನತೆಗೆ ಜ್ಞಾನದೀವಿಗೆಯಾಗಿದೆ (ಜಯಮಂಗಲಿ, ೨೦೦೨, ಪು.೨೫೧).

ಸಿದ್ಧರಾಮಣ್ಣನವರಂತೆ ನಿಡಸಾಲೆ ಚನ್ನಂಜಪ್ಪನವರು ಬಡಮಕ್ಕಳಿಗೆ ಅನುಕೂಲವಾಗಲೆಂದು ತಮ್ಮ ದುಡಿಮೆ ಹಣದಲ್ಲಿ ವಿದ್ಯಾರ್ಥಿ ನಿಲಯವನ್ನು ಕಟ್ಟಿಸಬೇಕೆಂದು ನಿರ್ಧರಿಸಿ, ತುಮಕೂರು ಉಪ್ಪಾರಹಳ್ಳಿ ರೈಲ್ವೇಗೇಟಿನ ಪಕ್ಕದಲ್ಲಿ ಭವ್ಯವಾದ ಕಲ್ಲಿನ ಕಟ್ಟಡವನ್ನು ೧೯೪೫ ರಲ್ಲಿ ಕಟ್ಟಿಸಿದರು. ಹದಿಮೂರು ಎಕರೆ ಗದ್ದೆಯನ್ನು ಸಹ ದಾನವಾಗಿ ನೀಡಿದ್ದರು. ವಿದ್ಯಾರ್ಥಿನಿಲಯ ಸುಗಮವಾಗಿ ನಡೆಯಲು 'ಧರ್ಮಪ್ರವರ್ತ ಗುಬ್ಬಿ ನಿಡಸಾಲೆ ಚನ್ನಂಜಪ್ಪನವರ ಫ್ರೀ ಬೋರ್ಡಿಂಗ್ ಟ್ರಸ್ಟ್ ಫಂಡ್' ಮತ್ತು 'ವೀರಶೈವ ಉಚಿತ ವಿದ್ಯಾರ್ಥಿ ನಿಲಯದ ಟ್ರಸ್ಟ್ ಫಂಡ್' ೧೯೪೫ ರಲ್ಲಿ ರಿಜಿಸ್ಟರ್ ಮಾಡಿಸಿದರು. ಬ್ಯಾಂಕ್‌ನಲ್ಲಿ ಹಣವನ್ನು ಇಡುಗಂಟಾಗಿಟ್ಟು, ಅದರಲ್ಲಿ ಬರುವ ಬಡ್ಡಿಯಿಂದ ಡಾಕ್ಟರ್ ಓದುವ ಇಬ್ಬರು, ಇಂಜಿನೀಯರಿಂಗ್ ಓದುವ ಇಬ್ಬರು, ಬಿ.ಎಸ್‌ಸಿ ಓದುವ ಇಬ್ಬರು, ಒಟ್ಟು ಆರು ಜನ ವಿದ್ಯಾರ್ಥಿಗಳಿಗೆ ತಲಾ ಮಾಹೆಯಾನ ಹದಿನೆಂಟು ರೂಪಾಯಿಗಳಂತೆ ವಿದ್ಯಾರ್ಥಿ ವೇತನ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದರು. 'ಗುಬ್ಬಿ ನಿಡಸಾಲೆ

ಚನ್ನಂಜಪ್ಪನವರ ವಿದ್ಯಾರ್ಥಿವೇತನ' ಉಪಯೋಗಿಸಿಕೊಂಡು ಸಾವಿರಾರು ಮಂದಿ ವಿದ್ಯಾವಂತರಾಗಿದ್ದಾರೆ (ಜಯಮಂಗಲಿ, ೨೦೦೨, ಪು.೨೫೩).

ಸಿದ್ಧಗಂಗಾ ಕ್ಷೇತ್ರದಲ್ಲಿ ಬೆಳ್ಳಿಪಲ್ಲಕ್ಕಿ ಉತ್ಸವ ಪ್ರಾರಂಭಕ್ಕೆ ಮತ್ತು ಸಿದ್ಧಗಂಗಾ ಇಂಜಿನೀಯರಿಂಗ್ ಕಾಲೇಜಿನಲ್ಲಿ ಲೈಬ್ರರಿ ಕಟ್ಟಡ ಕಟ್ಟಲು ಅಪಾರವಾದ ಧನಸಹಾಯ ನೀಡಿದವರು ಟಿ.ಎನ್. ಕೆಂಪಹೊನ್ನಯ್ಯನವರು. ೧೯೩೪ ರಲ್ಲಿ ತುಮಕೂರಿನ ಆಸ್ಪತ್ರೆಯಲ್ಲಿ ೨ ವಾರ್ಡ್‌ಗಳನ್ನು, ಬಿ.ಹೆಚ್. ರಸ್ತೆಯಲ್ಲಿ ಹೆಣ್ಣುಮಕ್ಕಳ ಹಾಸ್ಟೆಲ್ಲನ್ನು ಕಟ್ಟಿಸಿಕೊಟ್ಟಿದ್ದಾರೆ. ಇದಲ್ಲದೆ ನಾಗವಲ್ಲಿಯಲ್ಲಿ ಪಶುವೈದ್ಯ ಶಾಲೆ ಮತ್ತು ಆಸ್ಪತ್ರೆ ಕಟ್ಟಡವನ್ನು ಹಾಗೂ ಸಿದ್ಧಗಂಗಾ ಕ್ಷೇತ್ರದಲ್ಲಿ ಒಂದು ಅತಿಥಿ ಗೃಹವನ್ನು ಕಟ್ಟಿಸಿಕೊಟ್ಟಿದ್ದಾರೆ. ಅಕ್ಷರಜ್ಞಾನದೊಂದಿಗೆ ಆರೋಗ್ಯಕ್ಕೂ ಮಹತ್ವ ನೀಡಿದ್ದಾರೆ (ಜಯಮಂಗಲಿ, ೨೦೦೨, ಪು.೨೪೪).

ಬಾಣಸಂದ್ರದ ಹುಚ್ಚೇಗೌಡರು ಎಲ್ಲರೂ ಅಕ್ಷರಸ್ಥರಾಗಬೇಕೆಂದು ಬಯಸಿದ್ದರು. ೧೯೩೫ ರಲ್ಲಿ ಇವರು ರಾಜಕೀಯ ಪ್ರವೇಶ ಮಾಡಿದಾಗ ಬಾಣಸಂದ್ರ ತಿಪಟೂರು ತಾಲ್ಲೋಕಿಗೆ ಸೇರಿತ್ತು. ಜೊತೆಗೆ ಕೊಬ್ಬರಿ ವ್ಯವಹಾರವು ತಿಪಟೂರಿನೊಂದಿಗಿತ್ತು. ಆ ಸಮಯದಲ್ಲಿ ತಿಪಟೂರಿನಲ್ಲೊಂದು ಬಾಡಿಗೆ ಮನೆ ಪಡೆದು ತಮ್ಮ ಸ್ವಂತ ಖರ್ಚಿನಲ್ಲಿಯೇ ಒಕ್ಕಲಿಗ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿನಿಲಯ ಪ್ರಾರಂಭಿಸಿದರು (ಕವಿತಾಕೃಷ್ಣ, ೨೦೦೩, ಪು.೨೫).

೧೯೪೨ ರಲ್ಲಿ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ದಲಿತ ಜನಾಂಗದವರು ಶಿಕ್ಷಣವನ್ನು ಪಡೆದು ಉನ್ನತ ಸ್ಥಾನಕ್ಕೇರಬೇಕೆಂಬ ಅಗಾಧ ಬಯಕೆ ಹೊಂದಿದ್ದವರು, ಹೆಚ್.ಎಂ ಗಂಗಾಧರಯ್ಯ. ಅನ್ನ, ಆಶ್ರಯ ಮತ್ತು ಅಕ್ಷರ ನೀಡಬೇಕೆಂಬ ಛಲದಿಂದ ವಿದ್ಯಾಸಂಸ್ಥೆ ಮತ್ತು ಹಾಸ್ಟೆಲ್ಲುಗಳನ್ನು ಕಟ್ಟಲು ತೀರ್ಮಾನಿಸಿದರು. ೧೯೪೨ ರಲ್ಲಿಯೇ ತುಮಕೂರಿನಲ್ಲಿ 'ಹರಿಜನ ವಿದ್ಯಾರ್ಥಿ ನಿಲಯ'ವನ್ನು ಆರಂಭಿಸಿದರು. ಪ್ರಾರಂಭದಲ್ಲಿ ಅನ್ಯರಿಂದ ದವಸ-ಧಾನ್ಯಗಳನ್ನು ಭಿಕ್ಷೆ ಬೇಡಿ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳನ್ನು ಸಾಕಿ-ಸಲುಹಿದರು. ಈ ಹಾಸ್ಟೆಲ್ಲು ಆರಂಭಗೊಂಡು ಗಟ್ಟಿನೆಲೆ ಪಡೆಯುತ್ತಿರುವುವಂತೆಯೇ ಅವರು ಸರ್ಕಾರದ ನೆರವಿನೊಂದಿಗೆ ತಿಪಟೂರು, ಮಧುಗಿರಿ ಮತ್ತು ಕುಣಿಗಲ್‌ಗಳಲ್ಲಿ 'ಹರಿಜನ ವಿದ್ಯಾರ್ಥಿ ನಿಲಯ' ಗಳನ್ನು ಸ್ಥಾಪಿಸಿದರು. ದಾವಣಗೆರೆಯಲ್ಲೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಇಂದಿಗೂ ವಿದ್ಯಾರ್ಥಿಗಳು ಈ ಹಾಸ್ಟಲ್‌ನಲ್ಲಿದ್ದು ಶಿಕ್ಷಣ ಪಡೆಯುತ್ತಿದ್ದಾರೆ (ಜಯಮಂಗಲಿ, ೨೦೦೨, ಪು. ೨೫೮).

ತುಮಕೂರಿನಲ್ಲಿ ಸಮಾಜ ಸೇವೆಯನ್ನು ಕೈಗೊಂಡವರಲ್ಲಿ ಅಮವಾಸ್ಯೆ ಮಲ್ಲಣ್ಣನವರು ಒಬ್ಬರು. 'ತುಮಕೂರು ನಗರ ವೀರಶೈವ ಸಮಾಜ' ಅವರು ನೀರೆರೆದು ಬೆಳೆಸಿದ ಸಂಸ್ಥೆ. ವಿದ್ಯಾಭ್ಯಾಸ, ಉದ್ಯೋಗ, ಬಡ ಮಕ್ಕಳಿಗೆ ಸಮವಸ್ತ್ರ ನೀಡುವುದು ಅಂದಿನಿಂದ ಇಂದಿನವರೆಗೂ ಮುಂದುವರೆದಿದೆ. ಮಲ್ಲಣ್ಣನವರ ಮನೆತನಕ್ಕೆ 'ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳ' ಕೈಂಕರ್ಯ ಕಾರ್ಯ ನೆರವೇರಿಸುವ ಅವಕಾಶ ದೊರೆತಿದ್ದು, ಇವರ ಶ್ರಮ ಮತ್ತು ಆಸಕ್ತಿಗಳ ದೆಸೆಯಿಂದಾಗಿ ತುಮಕೂರು ನಗರದಲ್ಲಿ 'ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿ ನಿಲಯ'ವು ಸ್ಥಾಪನೆಯಾದದ್ದು, ೧೯೫೨ ರ ಅವಧಿಯಲ್ಲಿ ಸ್ಥಾಪನೆಯಾದ ಜಯದೇವ ಹಾಸ್ಟೆಲ್ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನ ಮತ್ತು ಜ್ಞಾನವನ್ನು ನೀಡುತ್ತಾ ಬಂದಿದೆ (ಜಯಮಂಗಲಿ, ೨೦೦೨, ಪು.೨೬೦).

ತುಮಕೂರು ಜಿಲ್ಲೆಯಲ್ಲಿ ಅನೇಕ ಮಠಗಳು ಕೂಡ ಅನ್ನದಾಸೋಹ ಮತ್ತು ಅಕ್ಷರದಾಸೋಹದಲ್ಲಿ ತೊಡಗಿವೆ. ಅನ್ನ, ಅಕ್ಷರ, ಆಶ್ರಯ ನೀಡುವಲ್ಲಿ ಸಿದ್ಧಗಂಗಾ ಮಠ ಮುಂಚೂಣಿಯಲ್ಲಿದೆ. ಸುಮಾರು ೮,೦೦೦ ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಅನುಕೂಲವನ್ನು ಪಡೆಯುತ್ತಿದ್ದಾರೆ. ೧೯೧೭ ರಲ್ಲಿ ಉದ್ದಾನ ಶಿವಯೋಗಿಗಳಿಂದ ಪ್ರಾರಂಭವಾದ ಈ ಅನ್ನದಾಸೋಹ ಇಂದಿಗೂ ಮುಂದುವರೆದಿದೆ. ತಿಪಟೂರಿನಲ್ಲಿ ಜಯದೇವ ವಿದ್ಯಾರ್ಥಿ ನಿಲಯವಿದ್ದು ಅನೇಕ ಬಡ ಮಕ್ಕಳು ಆಶ್ರಯ ಪಡೆದಿದ್ದಾರೆ. ಗುರುಕುಲ ವಿದ್ಯಾರ್ಥಿನಿಲಯ ತಿಪಟೂರಿನಲ್ಲಿದ್ದು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದೆ.

ನೊಣವಿನಕೆರೆಯಲ್ಲಿ ಕಾಡಸಿದ್ಧೇಶ್ವರ ಕರಿವೃಷಭ ಶಿವಯೋಗೀಶ್ವರ ದೇಶೀಕೇಂದ್ರ ಸ್ವಾಮೀಜಿಗಳು ಅವರದ್ದೇ ಶಾಲೆ ನಡೆಸುತ್ತಿದ್ದು, ನಿರಾಶ್ರಿತ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದ್ದಾರೆ. ಇವರೇ ತುರುವೇಕೆರೆಯಲ್ಲಿಯೂ ಒಂದು ಮಠ ಸ್ಥಾಪಿಸಿ, ಶಾಲೆಗಳನ್ನು ತೆರೆದು, ಬಡ ಮಕ್ಕಳಿಗೆ ವಸತಿನಿಲಯವನ್ನು ಸ್ಥಾಪಿಸಿದ್ದಾರೆ. ಹೀಗೆ ತಮ್ಮಡಿಹಳ್ಳಿ ಸ್ವಾಮೀಜಿ, ಗೋಡೇಕೆರೆ ಸಿದ್ಧರಾಮದೇಶೀಕೇಂದ್ರ ಸ್ವಾಮೀಜಿ, ಗೋಡೇಕೆರೆ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ, ಶಿರಾದ ಪಟ್ಟನಾಯ್ಕನಹಳ್ಳಿ ಸ್ವಾಮೀಜಿ, ರಂಗಾಪುರದ ಗುರುಪರದೇಶೀಕೇಂದ್ರ ಸ್ವಾಮೀಜಿ, ಮಾಯಸಂದ್ರದ ಶಿವಕುಮಾರನಾಥ ಸ್ವಾಮೀಜಿ........ ಮೊದಲಾದ ಮಠಗಳು ಕೂಡ ಶಾಲೆಗಳನ್ನು ಮತ್ತು ವಸತಿನಿಲಯಗಳನ್ನು ಸ್ಥಾಪಿಸಿ ಬಡವಿದ್ಯಾರ್ಥಿಗಳಿಗೆ ಬೆಳಕಾಗಿವೆ.

ಆಧುನಿಕ ಜೀವನದ ಅಗತ್ಯಗಳಿಗನುಸಾರವಾಗಿ ಜೀವನದ ಮಟ್ಟವೂ ಹೆಚ್ಚಿದಂತೆ ಜನರ ಬೇಡಿಕೆಗಳ ಸಂಖ್ಯೆ ಮತ್ತು ವೈವಿಧ್ಯಗಳು ಬೆಳೆಯುತ್ತಾ ಹೋದವು. ವಿಶ್ವವಿದ್ಯಾಲಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣಗಳು ಇಂದಿನ ಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ಪ್ರವೃತ್ತಿಯನ್ನರಿತು, ಮಠ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಬಂದಿದೆ. ತುಮಕೂರಿನ ಶ್ರೀ ಸಿದ್ಧಗಂಗಾ ಮಠ ಇದಕ್ಕೆ ಒಂದು ಉತ್ತಮ ನಿದರ್ಶನ. ತುಮಕೂರಿನ ಶ್ರೀ ಸಿದ್ಧಗಂಗಾ ಮಠವು ಅನೇಕ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ ಕ್ಷೇತ್ರದಲ್ಲಿ ಇತರೆ ಎಲ್ಲಾ ಮಠಗಳಿಗಿಂತ ಮುಂಚೂಣಿಯಲ್ಲಿದೆ. ಸಿದ್ಧಗಂಗಾ ಮಠ ಸಿದ್ಧಗಂಗೆಯ ಪ್ರಸಿದ್ಧ ದಾಸೋಹಿ, ವಿದ್ಯಾಪ್ರಸಾರಕ ಡಾ. ಶ್ರೀ ಶಿವಕುಮಾರ ಸ್ವಾಮಿಗಳ ಕರ್ತೃತ್ವದ ಶಕ್ತಿಯಿಂದ ನಾಡು ನಾಡಿನಾಚೆಗೆ ತನ್ನ ಸಾಧನೆಯ ಬೆಳಕನ್ನು ಪಸರಿಸಿದೆ.

೩.೯ ಸಿದ್ಧಗಂಗಾ ಮಠ – ಒಂದು ಸ್ಥೂಲ ಪರಿಚಯ

ಶ್ರೀ ಸಿದ್ಧಗಂಗಾ ಕ್ಷೇತ್ರ ತುಮಕೂರು ಜಿಲ್ಲೆಯಲ್ಲಿದೆ. ತುಮಕೂರಿನಿಂದ ಪೂರ್ವಕ್ಕೆ ೩ಕಿ.ಮೀಗಳ ಅಂತರದಲ್ಲಿದೆ. ದಾಸೋಹಮೂರ್ತಿಯಾದ ಚಿಕ್ಕಣ್ಣಶೆಟ್ಟಿಯೆಂಬ ಶರಣನಿದ್ದ ಕೇತಸಮುದ್ರ (ಕ್ಯಾತ್ಸಂದ್ರ) ದಿಂದ ಉತ್ತರಕ್ಕೆ ೧ ಕಿಮೀ ದೂರದಲ್ಲಿದೆ. ಅನೇಕ ಗುಹೆಗಳಿಂದಲೂ ಶಿವಲಿಂಗಗಳಿಂದಲೂ ತುಂಬಿರುವ ರಾಮಗಿರಿ ಎಂಬ ಹೆಸರಿನ ಬೆಟ್ಟವೂ (ರಾಮದೇವರ ಬೆಟ್ಟ) ಮತ್ತು ಸಿದ್ಧಗಂಗಾ ಬೆಟ್ಟವೂ ಅವಳಿ ಬೆಟ್ಟಗಳಾಗಿವೆ. ಈ ಬೆಟ್ಟ ಸಿದ್ಧಲಿಂಗೇಶ್ವರ ಕ್ಷೇತ್ರದಿಂದ ಪೂರ್ವದಿಗ್ಭಾಗದಲ್ಲಿ ಅನತಿ ದೂರದಲ್ಲಿಯೇ ಇದೆ. ಸಿದ್ಧಗಂಗಾ ಮತ್ತು ರಾಮದೇವರ ಬೆಟ್ಟಗಳಿಂದ ಆಗ್ನೇಯಕ್ಕೆ ೪ ಕಿ.ಮೀ.ಗಳ ಅಂತರದಲ್ಲಿ ಸಿದ್ಧಗಿರಿ ಇದೆ. ಈ ಸಿದ್ಧಗಿರಿಗೆ ಸಿದ್ಧನಬೆಟ್ಟ ಅಥವಾ ನಿಜಗಲ್ಲು ಬೆಟ್ಟವೆಂದೂ ಕರೆಯಲಾಗುತ್ತಿದೆ. ಇದು ಅನೇಕ ಗುಹೆಗಳಿಂದಲೂ, ಆ ಗುಹೆಗಳಲ್ಲಿ ಶಿವಲಿಂಗಗಳಿಂದಲೂ ಒಳಗೊಂಡು ಇದು ಪ್ರಾಚೀನ ಶೈವೇತಿಹಾಸವನ್ನು ಸಾರುತ್ತಿದೆ. ಈ ಬೆಟ್ಟದಿಂದ ಆಗ್ನೇಯಕ್ಕೆ ೪ ಕಿ.ಮೀ. ದೂರದಲ್ಲಿಯೇ ದಕ್ಷಿಣ ಕಾಶಿ ಎಂದು ಹೆಸರಾಗಿರುವ ಶಿವಗಂಗಾ ಬೆಟ್ಟವಿದೆ. ಶಿವಗಂಗೆಯಿಂದ ವಾಯುವ್ಯಕ್ಕೆ ನೇರವಾಗಿ ೪ ರಿಂದ ೫ ಕಿ.ಮೀ.ಗಳ ಅಂತರದಲ್ಲಿ ಸಿದ್ಧಗಿರಿ, ರಾಮಗಿರಿ, ಸಿದ್ಧಗಂಗಾ ಗಿರಿ ಈ ಬೆಟ್ಟಗಳು ಪ್ರಾಚೀನ ಶೈವೇತಿಹಾಸದ ಅವಶೇಷಗಳಿಂದ ಕೂಡಿವೆ. ಈ ಬೆಟ್ಟಗಳಲ್ಲಿ ಅನೇಕ ಗುಹೆಗಳು, ಶಿವಲಿಂಗಗಳು, ಕೋಟೆ ಕೊತ್ತಲಗಳು, ತಪೋಯೋಗ್ಯ ಸ್ಥಾನಗಳು ತುಂಬಿದ್ದು ಇವು ನಾಡಿನ ಪ್ರಾಚೀನ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಕಲ್ಯಾಣದ ಕ್ರಾಂತಿಯಾನಂತರ ಅನೇಕ ಚರಪತಿಗಳಿಂದ ಕೂಡಿ ಚಿಕ್ಕಸಿದ್ಧೇಶ್ವರನೆಂಬುವನು ಶಿವಗಂಗೆಗೆ ಬಂದು ಅಲ್ಲಿ ಹೊನ್ನಾದೇವಿಯಿಂದ ಕಂಕಣ ಪಡೆದನೆಂದು ಹೇಳುವ ವಿರೂಪಾಕ್ಷ ಪಂಡಿತನ (ಕ್ರಿ.ಶ.

೧೫೮೫) ಚನ್ನಬಸವ ಪುರಾಣದ 'ಚಿಕ್ಕಸಿದ್ಧೇಶ್ವರಂ ಚರಪತಿಗಳಂ ಕೂಡಿಕೊಂಡಿರದೆ ಸಂಚರಿಸುತ್ತ ಶಿವಗಂಗೆಗೈತಂದು ಹೊನ್ನಾದೇವಿಯಂ ಕಂಕಣವ ಪಡೆದನು'. ಕಲ್ಯಾಣದ ಶಿವಶರಣರನೇಕ ಸಂತಾನ ಶಿವಗಂಗೆಯ ಸುತ್ತಮುತ್ತ ಹರಡಲು ಇದು ಮುಖ್ಯ ಕಾರಣವಾಯಿತು. ಈ ಚಿಕ್ಕಸಿದ್ಧೇಶ್ವರನ ಗವಿ ಸಿದ್ಧಗಂಗಾ ಬೆಟ್ಟದ ಪಕ್ಕದ ರಾಮಲಿಂಗನ ಬೆಟ್ಟದಲ್ಲಿ ಈಗಲೂ ಇದೆ. ಇವನ ಕಾರಣದಿಂದಲೇ ಈ ಗವಿಗೆ ಚಿಕ್ಕಸಿದ್ಧೇಶ್ವರನ ಗವಿಯೆಂದು ಹೆಸರು ಬಂದಿರಬಹುದು. ಈ ಗವಿಗೂ ಶ್ರೀ ಶಿವಗಂಗಾ ಕ್ಷೇತ್ರಕ್ಕೂ ಸುಮಾರು ೮ ಕಿ.ಮೀ.ಗಳಷ್ಟು ದೂರವಾಗಬಹುದು. ಸಾಕಷ್ಟು ವಿಶಾಲವಾದ ಈ ಗವಿಯಲ್ಲಿ ಶಿವಲಿಂಗವಿದೆ. ಈ ಗವಿಯ ಪಶ್ಚಿಮ ದಿಗ್ಭಾಗದ ಸಮೀಪದಲ್ಲಿಯೇ ಅತ್ಯಂತ ಮಹತ್ವದ ದೊಡ್ಡಸಿದ್ಧಪ್ಪನ ಗವಿಯಿದೆ. ಈ ಗವಿಗೆ ಈ ಹೆಸರು ಬರಲು ಕಾರಣ ತೋಂಟದ ಸಿದ್ಧಲಿಂಗೇಶ್ವರರ ಪ್ರಮುಖ ಶಿಷ್ಯರಲ್ಲೊಬ್ಬರಾಗಿದ್ದ ದೊಡ್ಡಸಿದ್ಧಪ್ಪನವರ ಹೆಸರು ಇದು ಎಂದು ಹೇಳಲಾಗಿದ್ದು, ಇದರೊಳಗಡೆ ಶಿವಲಿಂಗ ಮತ್ತು ನಂದಿಗಳಿವೆ (ಸಿದ್ಧಗಂಗಾಶ್ರೀ, ೧೯೮೧, ಪು.೬). ಹೀಗೆ ಪ್ರಾಚೀನ ಶಿವಯೋಗಿಗಳು, ಸಿದ್ಧಪುರುಷರು ನಿಸರ್ಗ ಸೊಬಗಿನ ಸೌಂದರ್ಯಕ್ಕೆ ಮಾರುಹೋಗಿ, ಪರಮಾತ್ಮನ ವ್ಯಕ್ತರೂಪವಾದ ಸೃಷ್ಟಿಯ ಅನಂತ ರೂಪರಾಶಿಯನ್ನು ಅವರು ಎಂದೂ ಕಡೆಗಣಿಸಿಲ್ಲ.

ಸಿದ್ಧಗಂಗಾ ಪರಿಸರದಲ್ಲಿ ಮಠಮಾನ್ಯಗಳು ಸಾಕಷ್ಟಿವೆ. ಇಲ್ಲಿ ಗುರುಮಠ ಮತ್ತು ವಿರಕ್ತ ಮಠಗಳೆರಡನ್ನೂ ಕಾಣಬಹುದಾಗಿದೆ. ಪೂರ್ವದಲ್ಲಿರುವ ಶಿವಗಂಗೆಯೊಂದರಲ್ಲೇ ೬೪ ಮಠಗಳಿವೆ ಎಂದು ತಿಳಿಸಿದೆ. ಈಗ ಮೂರು ಅಥವಾ ನಾಲ್ಕು ಮಠಗಳಷ್ಟೇ ಕಾಣಸಿಗುವುದು. ಶಿವಗಂಗೆಯ ಪೂರ್ವ ದಿಗ್ಭಾಗದಲ್ಲಿರುವ ಕಂಬಾಳು ಮರುಳಸಿದ್ಧರ ಮಠ, ಕಂಚುಗಲ್ ಬಂಡೆಮಠ, ಚಿಲುಮೆ ಮಠ, ಬಸವಾಪಟ್ಟಣ ಬೋಳುಬಸವೇಶ್ವರಸ್ವಾಮಿ ಕ್ಷೇತ್ರ, ಮಸ್ಕಲ್ ಮಠ, ಸೋಲೂರಿನಲ್ಲಿರುವ ಮೂರು ಅಥವಾ ನಾಲ್ಕು ಮಠಗಳು, ಮಹಂತೇಶ್ವರಸ್ವಾಮಿ ಗದ್ದುಗೆ ಮಠ, ತೋಪಿನ ಮಠ, ಕಗ್ಗೆರೆ ಮಠ, ಕುಪ್ಪೂರು ಗದ್ದುಗೆ ಮಠ, ನೊಣವಿನಕೆರೆ, ಗೋಡೇಕೆರೆ ಮೊದಲಾದ ಮಠಗಳನ್ನು ತುಮಕೂರು ಜಿಲ್ಲೆಯಲ್ಲಿ ಕಾಣಬಹುದಾಗಿದೆ (ಸಿದ್ಧಗಂಗಾಶ್ರೀ, ೧೯೮೧, ಪು.೧೨).

ಸಿದ್ಧಗಂಗಾ ಪರಿಸರ ೧೯ ಮತ್ತು ೨೦ನೇ ಶತಮಾನಗಳಲ್ಲೂ ದಾಸೋಹ ಸದ್ಭಾವಾಸಕ್ತರು ಆದ ಈರ್ವರು ಕಾರಣಪುರುಷರಿಗೆ ಜನ್ಮವಿತ್ತು ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಶಿವಗಂಗಾ ಕ್ಷೇತ್ರಕ್ಕೆ ಉತ್ತರ ದಿಗ್ಭಾಗದಲ್ಲಿ ಸುಮಾರು ೪ ಕಿ.ಮೀ.ಗಳ ದೂರದಲ್ಲಿರುವ 'ಲಕ್ಕೂರು' ಮತ್ತು ದಕ್ಷಿಣ ದಿಗ್ಭಾಗದಲ್ಲಿ

೪ ಕಿ.ಮೀ.ಗಳಷ್ಟು ಅಂತರದಲ್ಲಿರುವ 'ವೀರಾಪುರ' ಈರ್ವರು ಯತೀಶ್ವರರು ಜನಿಸಿದ ನಾಡಿದು (ಸಿದ್ಧಗಂಗಾಶ್ರೀ, ೧೯೮೧, ಪು.೧೩).

ಲಕ್ಕೂರಿನಲ್ಲಿ ಕ್ರಿ.ಶ. ಸುಮಾರು ೧೮೬೦ ರಲ್ಲಿ ಜನಿಸಿ ಅಲ್ಲಿ ಬಾಲ್ಯ ಜೀವನ ನಡೆಸಿ, ಸಿದ್ಧಗಂಗಾ ಕ್ಷೇತ್ರಾಧಿಪತಿಗಳಾಗಿ ಅಘಟಿತ ಘಟನಾ ಪರಂಪರೆಗಳನ್ನು ಮೆರೆದು ಸಿದ್ಧಗಂಗಾ ಪುಣ್ಯಭೂಮಿಯಲ್ಲಿ ಸರ್ವಲೋಕೋಪಕಾರಕ ಜ್ಞಾನ, ವಿಜ್ಞಾನ, ಧರ್ಮ, ಸಂಸ್ಕೃತಿಯ ಬೆಳವಣಿಗೆಗೆ ಕಾರಣ-ಪುರುಷರೆನಿಸಿ ಮಹಾದಾಸೋಹವನ್ನಾಚರಿಸಿ, ೧೯೪೧ ರಲ್ಲಿ ಲಿಂಗೈಕ್ಯರಾದ ಶ್ರೀ ಉದ್ದಾನ ಶಿವಯೋಗಿಗಳೊಬ್ಬರು. ವೀರಾಪುರದಲ್ಲಿ ಕ್ರಿ.ಶ. ಸುಮಾರು ೧೯೦೮ರಲ್ಲಿ ಜನ್ಮಧಾರಣೆ ಮಾಡಿ ೧೯೩೦ರಲ್ಲಿ ಉದ್ದಾನ ಶಿವಯೋಗಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರೆಂದು ನಾಮಕರಣಗೊಂಡು ಉದ್ದಾನ ಶಿವಯೋಗಿಯವರು ಲಿಂಗೈಕ್ಯರಾದ ನಂತರ ಶ್ರೀ ಕ್ಷೇತ್ರದ ಸರ್ವಲೋಕೋಪಕಾರ ಸೇವಾ ಮನೋಭಾವವನ್ನು ಮಾಡುತ್ತಿರುವ ಶಿವಕುಮಾರಸ್ವಾಮಿಗಳು ಮತ್ತೊಬ್ಬ ಮಹಾಕಾರಣಿಕ ಪುರುಷರು.

ಕ್ರಿ.ಶ. ೧೧೬೮ರ ಸುಮಾರಿನಲ್ಲಿ ಕಲ್ಯಾಣದ ಕಲಚೂರ್ಯ ಬಿಜ್ಜಳನ ಅವಸಾನದೊಡನೆ ಬಸವಣ್ಣನವರ ಮತ್ತು ಅವರ ಅನುಯಾಯಿಗಳ ವಿಶ್ವಮಾನ್ಯ ತತ್ವಪ್ರಸಾರ ಕಾರ್ಯ ಸ್ಥಗಿತಗೊಂಡಿತು. ಬ್ರಾಹ್ಮಣ ಮೊದಲುಗೊಂಡು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನ್ನೆಲ್ಲ ಒಂದುಗೂಡಿಸಿ ರಾಷ್ಟ್ರ ಶಕ್ತಿಗೊಂದು ಅಪೂರ್ವ ಚಾಲನೆ ಕೊಡಲು ಶರಣರು ಮಾಡಿದ ಕ್ರಾಂತಿಗೆ ಘೋರವಾದ ರಾಜಕೀಯ ವಿಪ್ಲವದ ಬಂಡೆಗಲ್ಲುರುಳಿ, ಅವರೆಲ್ಲ ಜರ್ಝರಿತರಾಗಿ ದಿಕ್ಕು ದಿಕ್ಕುಗಳಿಗೆ ಚದುರಿದರು. ಇದರಲ್ಲಿ ಒಂದು ತಂಡ ಶಿವಗಂಗೆಯ ಕಡೆಗೆ ಬಂತು. ಶಿವಗಂಗೆಯ ಕಡೆಗೆ ಬಂದವರಲ್ಲಿ ಚಿಕ್ಕಸಿದ್ಧೇಶನೆಂಬುವನು ಮುಖ್ಯನೆಂದು ಹೇಳಲಾಗುತ್ತದೆ. ಅನೇಕ ಚರಮೂರ್ತಿಗಳೊಡನೆ ಬಂದು ಶಿವಗಂಗೆ ಮತ್ತು ಅದರ ಸುತ್ತಮುತ್ತಲ ಪ್ರಾಂತ್ಯದಲ್ಲಿ ಹರಡಿದುದರಿಂದ, ಕಲ್ಯಾಣದ ಶರಣರ ನೇರ ಸಂತಾನ ಈ ಭಾಗದಲ್ಲಿ ಪ್ರಸಾರಗೊಳ್ಳಲು ಕಾರಣವಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೧೪). ಹೀಗೆ ಈ ಪರಿಸರವನ್ನು ಶಿವಶರಣ ವಾಸಯೋಗ್ಯ ಭೂಮಿಯನ್ನಾಗಿಸಿದುದೇ ಕಲ್ಯಾಣದ ಕಡೆಯಿಂದ ಶಿವಶರಣರ ತಂಡಗಳು ಬಂದು ನೆಲೆಗೊಳ್ಳುವುದಕ್ಕೆ ಕಾರಣವಾಗಿರಬಹುದು.

೧೨ನೇ ಶತಮಾನದ ಈ ಪರಿಸರದ ಮಹತ್ವದ ಅಂಶವೆಂದರೆ ಮುಖ್ಯವಾಗಿ ಬಸವಾದಿ ಪ್ರಮಥರ ದಿವ್ಯತತ್ವವನ್ನು ಪ್ರಚಾರ ಮಾಡಲು ಶ್ರಮಿಸಿದ ರೇವಣಸಿದ್ಧ, ಮರುಳಸಿದ್ಧ ಮತ್ತು ಸಿದ್ಧರಾಮರ ಅತ್ಯಂತ

ಕುತೂಹಲಕಾರಿಯಾದ ಕ್ರಾಂತಿಯ ವಿದಾರ ಸಿದ್ಧತ್ರಯರು ಸಿದ್ಧಗಂಗೆ, ಶಿವಗಂಗೆ ಮತ್ತು ಸುತ್ತಮುತ್ತಣ ಪ್ರದೇಶದಲ್ಲಿ ಮಾಡಿದ ಧರ್ಮ, ಸಂಸ್ಕೃತಿ, ಸಾಹಿತ್ಯ, ಪ್ರಚಾರಕಾರ್ಯ ಗಮನಾರ್ಹವಾದುದು. ಶಿವಗಂಗೆ, ಸಿದ್ಧಗಿರಿ, ರಾಮಗಿರಿ, ಶಿವಗಿರಿಗಳನ್ನು ಕ್ರಿ.ಶ. ೧೧೭೬ ರಿಂದ ಇತ್ತೀಚೆಗೆ ಸಿದ್ಧತ್ರಯರು ತಮ್ಮ ಪ್ರಚಾರ ಕೇಂದ್ರಗಳನ್ನಾಗಿಸಿಕೊಂಡು ತಮ್ಮ ಧಾರ್ಮಿಕ, ಸಾಮಾಜಿಕ, ನೈತಿಕ ವಿಚಾರಗಳ ಪ್ರಚಾರದಿಂದ ಸುತ್ತಮುತ್ತಣ ಪ್ರದೇಶದ ಜನತೆಯನ್ನು ಸುಸ್ಥಿತಿಗೆ ತರಲು ಬಹುವಾಗಿ ಶ್ರಮಿಸಿದರು. ಕ್ರಿ.ಶ.೧೨೫೦ ರ ವರೆಗೆ ಧರ್ಮಜಾಗೃತಿಗೊಳಿಸಿ ಜನಮನದಲ್ಲಿ ಭಕ್ತಿ ಜೀವನವನ್ನು ಬಿತ್ತಿದರು. (ಸಿದ್ಧಗಂಗಾಶ್ರೀ, ೧೯೮೧, ಪು.೧೬-೧೭).

ಕಲ್ಯಾಣದ ಕ್ರಾಂತಿಯ ನಂತರ ಅಸ್ತವ್ಯಸ್ತಗೊಂಡ ವೀರಶೈವಧರ್ಮದ ಪರಿಸ್ಥಿತಿಯನ್ನು ೧೨ನೇ ಶತಮಾನದ ಕೊನೆಯಲ್ಲಿ ಸಿದ್ಧಗಂಗಾ ಪರಿಸರದಲ್ಲಿ ಮಾಡಿದ ಸಿದ್ಧತ್ರಯರ ಕ್ರಾಂತಿಯು ಕ್ರಿ.ಶ. ಸುಮಾರು ೧೨೫೦ ರ ವರೆಗೆ ಜನತೆಯನ್ನು ಸುವ್ಯವಸ್ಥೆಗೆ ತರಲು ಪ್ರಯತ್ನಿಸಿತ್ತು. ಆದರೆ ಒಮ್ಮೆಲೆ ಬಿರುಗಾಳಿಯಂತೆ ೧೩ನೇ ಶತಮಾನದ ಕೊನೆಯಲ್ಲಿ ಅನೇಕ ಐತಿಹಾಸಕ ಕೆಟ್ಟ ಪರಂಪರೆಗಳು ಕರ್ನಾಟಕದಲ್ಲಿ ಬಂದೊದಗಿದವು. ಮೌರ್ಯರು, ಶಾತವಾಹನರು, ಗಂಗರು, ಹೊಯ್ಸಳರವರೆಗೆ ಸುಮಾರು ೧೨೦೦ ವರ್ಷಗಳ ಅವಧಿಯವರೆಗೆ ದಕ್ಷಿಣ ಭಾರತವು ಜ್ಞಾನ-ವಿಜ್ಞಾನಗಳ, ಶಿಲ್ಪವಿಜ್ಞಾನಗಳ ತವರುಮನೆಯೆನಿಸಿತ್ತು. ಆದರೆ ಕನ್ನಡ ಚಕ್ರಾಧಿಪತ್ಯದ ಈ ಆಧಾರಸ್ತಂಭಗಳು ಅವಸಾನ ಹೊಂದಿದ ನಂತರ ಮತ್ತೊಂದು ಚಕ್ರಾಧಿಪತ್ಯ ಗಟ್ಟಿಗೊಳ್ಳಲಿಲ್ಲ. ಉತ್ತರದ ಮಹಮ್ಮದೀಯರ ದಾಳಿಯ ಪಿಡುಗು ಪ್ರಾರಂಭವಾಯಿತು. ಸಮರ್ಥವಾಗಿ ಈ ದಾಳಿಯನ್ನು ಎದುರಿಸುವ ಮತ್ತೊಂದು ಸಾಮ್ರಾಜ್ಯ ಕಾಣಲಿಲ್ಲ. ಪ್ರಥಮತಃ ದೊಡ್ಡಪ್ರಮಾಣದ ಸೈನ್ಯದೊಂದಿಗೆ ದಿಲ್ಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯು ೧೨೯೪ ರಲ್ಲಿ ದಕ್ಷಿಣ ಭಾರತಕ್ಕೆ ಪಾದಾರ್ಪಣೆ ಮಾಡಿ ದೇವಗಿರಿಗೆ ಮುತ್ತಿಗೆ ಹಾಕಿ ಅಲ್ಲಿಯ ಅರಸನಾದ ರಾಮದೇವನನ್ನು ಸೋಲಿಸಿ, ಕಪ್ಪವನ್ನು ಪಡೆದು ಹೊರಟುಹೋದ ನಂತರ ಕನ್ನಡನಾಡಿನ ಜನರಿಗೆ ಉಸಿರು ಕಟ್ಟಿದಂತಾಗಿ ಅನೇಕ ಕಷ್ಟಗಳು ಪ್ರಾರಂಭವಾದವು. ಇಲ್ಲಿನ ಅಪಾರ ಐಶ್ವರ್ಯವನ್ನು ಕೊಳ್ಳೆಹೊಡೆಯಲು ಅಲ್ಲಾವುದ್ದೀನ್ ಖಿಲ್ಜಿಯ ಸರದಾರ ಮಲ್ಲಿಕಾಫರನು ಕ್ರಿ.ಶ. ೧೩೦೯ ರಿಂದ ೧೩೧೧ರ ವರೆಗೆ ದಾಳಿ ಮಾಡಿ ಕನ್ನಡನಾಡಿನ ಪ್ರಸಿದ್ಧ ದೊರೆಗಳಾದ ಯಾದವರನ್ನು, ಹೊಯ್ಸಳರನ್ನು ಸೋಲಿಸಿ ಸಂಪತ್ತೆಲ್ಲವನ್ನೂ ದೋಚಿದನು. ಈ ಸ್ಥಿತಿ ೧೩೩೬ ರವರೆಗೆ ಅವ್ಯಾಹತವಾಗಿ ನಡೆಯಿತು. ದೇವಾಲಯ, ಧರ್ಮಗ್ರಂಥಗಳ ಮೇಲೂ ದಾಳಿ ಪ್ರಾರಂಭವಾಯಿತು. ಮಹಮ್ಮದೀಯ ಧರ್ಮಕ್ಕೆ ಮತಾಂತರ ಗೊಳಿಸಿದುದಂತೂ ಕನ್ನಡಿಗರಿಗೆ ಭಯವನ್ನುಂಟುಮಾಡಿತು. ಶೈವ, ವೀರಶೈವ, ಅದ್ವೈತ, ವಿಶಿಷ್ಟಾದ್ವೈತ,

ಜೈನ ಈ ಎಲ್ಲಾ ಸಿದ್ಧಾಂತಾನುಯಾಯಿಗಳು ಒಂದುಗೂಡಿದರು. ಇದೇ ಸಮಯದಲ್ಲಿಯೇ ವೀರಶೈವ ಶೂನ್ಯ ಪೀಠಾಧಿಪತಿ ಹರದನಹಳ್ಳಿ (ಈಗಿನ ಚಾಮರಾಜನಗರ ತಾ.) ಜಗದ್ಗುರು ಗೋಸಲ ಸಿದ್ದೇಶ್ವರರು ಧಾರ್ಮಿಕ ಕೆಚ್ಚನ್ನು ಜನತೆಯಲ್ಲಿ ತುಂಬಲು ಸಂಚಾರ ಕೈಗೊಂಡರು (ಸಿದ್ಧಗಂಗಾಶ್ರೀ, ೧೯೮೧, ಪು.೨೧-೨೨).

ಗೋಸಲ ಸಿದ್ಧೇಶ್ವರರು (ಕ್ರಿ.ಶ., ಸು. ೧೩೦೦-೧೩೫೦) ಹರದನಹಳ್ಳಿ ನಿರಂಜನ ಜಗದ್ಗುರು ಪೀಠಾಚಾರ್ಯರಲ್ಲಿ ಹದಿನೈದನೆಯವರು. ಗೋಸಲ ಸಿದ್ದೇಶ್ವರರು ಮಠವನ್ನು ಬಿಟ್ಟು ತಮ್ಮ ಅನುಯಾಯಿಗಳಾದ ೧೦೧ ಜನ ವಿರಕ್ತ ಮೂರ್ತಿಗಳೊಡನೆ ಕೂಡಿಕೊಂಡು ಧರ್ಮಜಾಗೃತಿಗೊಳಿಸುತ್ತ ಪ್ರಥಮತಃ ಶಿವಗಂಗೆಗೆ ಬಂದರು. ಅನಂತರ ಶಿವಗಂಗೆಯಿಂದ ವಾಯುವ್ಯಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿದ್ದ ಕೇತಸಮುದ್ರದ (ಈಗಿನ ಕ್ಯಾತ್ಸಂದ್ರ) ಪಕ್ಕದಲ್ಲಿರುವ ಬೆಟ್ಟಕ್ಕೆ ಬಂದರು. ಈ ಬೆಟ್ಟದ ಪರಿಸರಕ್ಕೆ ಮಾರುಹೋದ ಗೋಸಲ ಸಿದ್ಧೇಶ್ವರರು, ತಮ್ಮೊಡನಿದ್ದ ನೂರೊಂದು ವಿರಕ್ತರಿಗೆ ನೂರೊಂದು ತಪೋನುಷ್ಠಾನಯೋಗ್ಯವಾದ ಗುಹೆಗಳನ್ನು ಕಲ್ಪಿಸಿದರು. ಅಲ್ಲಿ ಭಕ್ತಾದಿಗಳ ನೆರವಿನಿಂದ ಒಂದು ಮಠವನ್ನು ಸ್ಥಾಪಿಸಿದರು. ಸಿದ್ಧಗಂಗಾ ಕ್ಷೇತ್ರದಲ್ಲಿ ಇಂದು ಹಳೆಯ ಮಠವೆಂದು ಹೇಳುವ ಮಠವೇ ಗೋಸಲ ಸಿದ್ಧೇಶ್ವರರು ಸ್ಥಾಪಿಸಿದ ಮಠ (ಸಿದ್ಧಗಂಗಾಶ್ರೀ, ೧೯೮೧, ಪು.೨೨).

ಗೋಸಲ ಸಿದ್ಧೇಶ್ವರರು ಹೀಗೆ ಮಠದಲ್ಲಿ ಲಿಂಗಪೂಜೆ, ಜಂಗಮ ದಾಸೋಹಾದಿ ಕ್ರಿಯೆಗಳಲ್ಲಿ ತೊಡಗಿದ್ದು, ಧರ್ಮಜಾಗೃತಿಯನ್ನು ಮುಂದುವರೆಸಿಕೊಂಡು ಬರುತ್ತಿರುವಾಗ ಒಂದು ದಿನ ಈ ನೂರೊಂದು ವಿರಕ್ತರಲ್ಲಿ ಒಬ್ಬರಾಗಿದ್ದ ಶ್ರೀ ಗೋಸಲ ಸಿದ್ಧೇಶ್ವರರ ಶಿಷ್ಯರೆನಿಸಿದ್ದ ಮೂರ್ತಿಗಳಲ್ಲೊಬ್ಬರು ಮಧ್ಯರಾತ್ರಿಯಲ್ಲಿ ತೃಷೆಗೊಂಡರು. ರಾತ್ರಿಯ ಕಗ್ಗತ್ತಲು ಎಲ್ಲೆಲ್ಲೂ ಆವರಿಸಿದ್ದರಿಂದ ಹೊರಗೆ ಹೋಗಿ ನೀರನ್ನು ತರಲು ಅಸಾಧ್ಯವಾಗಿತ್ತು. ಇಂಥಹ ಸಮಯದಲ್ಲಿ ಆ ವಿರಕ್ತ ಮೂರ್ತಿಗಳು ತಮ್ಮ ಗುರುಗಳಾದ ಗೋಸಲ ಸಿದ್ಧೇಶ್ವರರನ್ನು ಧ್ಯಾನಿಸಿದಾಗ, ಗೋಸಲ ಸಿದ್ಧೇಶ್ವರರು ಇದನ್ನು ತಮ್ಮ ದಿವ್ಯಶಕ್ತಿಯಿಂದ ಅರಿತು, ಬೆಟ್ಟದ ಮಧ್ಯದ ಗುಹೆಗೆ ಬಂದರು. ಆ ಕ್ಷಣದಲ್ಲಿ ಮೊಳಕಾಲನ್ನು ಗುಹೆಯ ಕಲ್ಲುಬಂಡೆಗೆ ಬಲವಾಗಿ ಹೊಡೆದರು. ಅಲ್ಲಿ ಪಡುವು ಬಿದ್ದು, ಚಲ್ಲೆಂದು ಗಂಗಾ ಜಲವು ಉದ್ಭವವಾಯಿತು. ತೃಷೆಯಿಂದ ಸಂಕಟಗೊಂಡ ವಿರಕ್ತಮೂರ್ತಿಗಳಿಗೆ ಆ ಉದಕದಿಂದ ಸ್ನಾನ ಮಾಡಿಸಿ ಭಸ್ಮ ಧರಿಸಿ ಶಿವಮಂತ್ರದೊಡನೆ ಲಿಂಗಮುಖದಿಂದ ಉದಕ ಪಾನ ಮಾಡಿಸಿ, ಅದರಿಂದ ನೀರಡಿಕೆಯ ಬಾಧೆಯನ್ನು ಹೋಗಲಾಡಿಸಿದರು. ಗೋಸಲ ಸಿದ್ಧೇಶ್ವರ ಶಿವಯೋಗಿಯ ಪಾದಸ್ಪರ್ಶದಿಂದ ಹೊರಹೊರಟ ಈ ಗಂಗಾಜಲಕ್ಕೆ ಸಿದ್ಧಗಂಗಾ

ಜಲವೆಂದು ಕರೆಯಲಾಯಿತು. ಕ್ಷೇತ್ರಕ್ಕೂ ಅಂದಿನಿಂದ ಅದೇ ಹೆಸರು ಮುಂದುವರೆಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೩). ಅಂದಿನಿಂದ ಇಂದಿನವರೆಗೂ ಈ ಗಂಗಾಜಲದ ಪಾವಿತ್ರ್ಯತೆ ಹಾಗೆಯೇ ಮುಂದುವರಿದಿದೆ. ಬಡವ ಬಲ್ಲಿದನೆಂಬ ಪ್ರತಿಬಂಧಕಗಳಿಲ್ಲ. ಮಠ ಸಮಸ್ತ ಕೋಮಿನ ಜನರ ಹಿತವನ್ನು ಸಾಧಿಸಿಕೊಂಡು ಬರುವ ಹೊಣೆಯನ್ನು ಹೊತ್ತಿದೆ.

ಶ್ರೀ ಗೋಸಲ ಸಿದ್ಧೇಶ್ವರರ ಅನಂತರ ಶ್ರೀಮಠದ ಪರಂಪರೆಯಲ್ಲಿ ಅನೇಕ ಶಿವಯೋಗಿಗಳು ಕಂಡುಬರುತ್ತಾರೆ. ೧೮ ನೆಯ ಶತಮಾನದಿಂದೀಚೆಗೆ ಮುಖ್ಯರಾದವರು ಶ್ರೀ ನಂಜುಂಡಸ್ವಾಮಿಗಳು (೧೭೮೪-೧೮೨೦), ಶ್ರೀ ರುದ್ರಸ್ವಾಮಿಗಳು (೧೮೨೦-೧೮೫೩), ಶ್ರೀ ಸಿದ್ಧಲಿಂಗಸ್ವಾಮಿಗಳು (೧೮೫೩-೧೯೦೧), ಶ್ರೀ ಉದ್ದಾನಸ್ವಾಮಿಗಳು (೧೯೦೧-೧೯೪೧), ಶ್ರೀ ಮರುಳಾರಾಧ್ಯಸ್ವಾಮಿಗಳು (೧೯೨೪-೧೯೩೦) ಮತ್ತು ಡಾ. ಶ್ರೀ ಶಿವಕುಮಾರಸ್ವಾಮೀಜಿ (೧೯೦೪-). ಶ್ರೀ ಸಿದ್ಧಲಿಂಗಸ್ವಾಮಿಗಳವರ (೧೮೫೩-೧೯೦೧) ಅಧಿಕಾರ ಸಮಯದಲ್ಲಿ ಉತ್ತರ ಕರ್ನಾಟಕದಿಂದ ಆಗಮಿಸಿದ ಶ್ರೀ ಮುಪ್ಪಿನಸ್ವಾಮಿಗಳವರು ಹಾಗೂ ಶ್ರೀ ಅಟವಿಸ್ವಾಮಿಗಳವರು ಶ್ರೀ ಕ್ಷೇತ್ರದಲ್ಲಿ ಕೆಲವು ಕಾಲ ನಿಂತು ತಮ್ಮ ಶಿವಯೋಗಾನುಷ್ಠಾನವನ್ನು ನಡೆಸುತ್ತಾ ದಾಸೋಹಾದಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನೆಸಗಿ ಮಠವನ್ನು ಅಭಿವೃದ್ಧಿಗೊಳಿಸುತ್ತಾ ಬಂದರು (ಸಿದ್ಧಗಂಗಾ ಕ್ಷೇತ್ರ, ಪು.೩).

ಶ್ರೀ ಅಟವಿಸ್ವಾಮಿಗಳು ಹಾನಗಲ್ಲು ತಾಲ್ಲೋಕು 'ಕೂಡಲ' ಎಂಬ ಸಂಗಮ ಕ್ಷೇತ್ರದಲ್ಲಿದ್ದು, ಕಾಲಾನಂತರ ಸಿದ್ಧಗಂಗೆಗೆ ಬಂದರು. ಅಟವೀಶ್ವರರು ದಾಸೋಹ ಸದ್ಭಾವಿಗಳು, ತಮ್ಮ ಲೋಕೋಪಕಾರಕ ಸನ್ಮತಿಗೆ ಇಂಥಹ ಒಂದು ಸ್ಥಾನದ ಅವಶ್ಯಕತೆಯೂ ಇತ್ತು. ಸಿದ್ಧಗಂಗಾ ಗುಹೆಯಲ್ಲಿಯೇ ಕುಳಿತು, ಚಿಕ್ಕ ಒಂದು ಸಂಸ್ಕೃತ ಪಾಠಶಾಲೆ, ದಾಸೋಹ ಕ್ರಿಯೆ ಮೇಲ್ಭಾಗದ ಗುಹೆಯ ಪರಿಸರದಲ್ಲಿಯೇ ಪ್ರಾರಂಭವಾದವು. ಮೊದಲೇ ಇದ್ದ ಅಲ್ಪ ಪ್ರಮಾಣದ ಅನ್ನಸಂತರ್ಪಣೆಯ ಕಾರ್ಯ ವ್ಯವಸ್ಥಾಬದ್ಧವಾಗಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭವಾದವು. ಮಠಕೂರು (ಈಗಿನ ಮೈದಾಳ) ನಂಜುಂಡ ಶಿವಯೋಗಿಗಳವರು ಅಟವೀಶ್ವರರ ಪೂರ್ಣಾನುಗ್ರಹಕ್ಕೆ ಪಾತ್ರರಾದರು. ಅವರ ಸಹಾಯದಿಂದ ಸಿದ್ಧಗಂಗೆಯಲ್ಲಿ ಪಾಠಶಾಲೆ ತೆರೆಯಲು ಮುಂದಾದರು. ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಮಠಕೂರು ಶಿವಯೋಗಿಗಳ ವಿದ್ವತ್ತಿನ ಸೇವೆಯೊದಗಿದುದರ ಜೊತೆಗೆ ಮಾಗಡಿ ವೀರಪ್ಪಶಾಸ್ತ್ರಿಗಳ ಸೇವೆಯೂ ಲಭ್ಯವಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೩೭).

ಲಕ್ಕೂರಿನ (ನೆಲಮಂಗಲ ತಾ.) ರುದ್ರಪ್ಪ ಎಂಬುವವರು ಅಟವಿ ಸ್ವಾಮಿಗಳು ಶ್ರೀ ಕ್ಷೇತ್ರದಲ್ಲಿ ಪ್ರಾರಂಭಿಸಿದ ಸಮಸ್ತ ದಾಸೋಹ ಕಾರ್ಯವನ್ನು ನಿರ್ವಹಿಸಿಕೊಂಡು ಬಂದರು. ಲಕ್ಕೂರಿನ ರುದ್ರಪ್ಪನಿಗೆ ಅಟವಿಸ್ವಾಮಿಗಳು ಉದ್ದಾನ ಶಿವಯೋಗಿಗಳೆಂದು ನಾಮಕರಣ ಮಾಡಿದರು. ೧೯೦೧ ರಲ್ಲಿ ಅಟವಿ ಸ್ವಾಮಿಗಳು ಲಿಂಗೈಕ್ಯರಾದ ನಂತರ ಉದ್ದಾನ ಶಿವಯೋಗಿಗಳು ಮಠದ ಸಮಸ್ತ ಕಾರ್ಯಭಾರವನ್ನು ಹೊತ್ತರು (ಸಿದ್ಧಗಂಗಾಶ್ರೀ, ೧೯೮೧, ಪು.೬೧).

ಉದ್ದಾನ ಶಿವಯೋಗಿಗಳಿಗೆ ಎಲ್ಲರಿಗೂ ಶಿಕ್ಷಣವನ್ನು ನೀಡಬೇಕೆಂಬ ಹಂಬಲ ವ್ಯಾಪಕವಾಗಿತ್ತು. ಅಟವಿ ಸ್ವಾಮಿಗಳು ನಡೆಸಿಕೊಂಡು ಬಂದಿದ್ದ ದಾಸೋಹ ಕ್ರಿಯೆಯನ್ನು ಮುಂದುವರಿಸಿದರು. ೧೯೦೧-೦೨ನೆಯ ಇಸವಿಯ ಸುಮಾರಿನಲ್ಲಿ ಮಠದಲ್ಲಿ ಅಭಿವೃದ್ಧಿ ಕಾರ್ಯಗಳು ಭರದಿಂದ ನಡೆದವು. ಲೋಕಕ್ಕೆ ಕಾಯಕದ ಮಹತ್ವವನ್ನರುಹಿದರು. ಹಳೆಯ ಸಂಸ್ಕೃತ ಪಾಠಶಾಲೆ ೧೯೧೭ ರಲ್ಲಿ ಸರ್ಕಾರದ ಮನ್ನಣೆ ಪಡೆದು ಅಧಿಕೃತವಾಗಿ 'ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಪಾಠಶಾಲೆ' ಎಂಬ ಹೆಸರಿನಿಂದ ಎಲ್ಲಾ ಜಾತಿ ಮತದವರಿಗೆ ಓದಿಗಾಗಿ ತೆರೆಯಲ್ಪಟ್ಟಿತು. ಉಚಿತ ಆಸನ ವಸತಿ ನಿಲಯವನ್ನು ತೆರೆದು ಎಲ್ಲಾ ಕೋಮಿನವರಿಗೂ ಅನುಕೂಲತೆಯನ್ನು ಒದಗಿಸಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೬೭). ಇದರಿಂದಾಗಿ ಶ್ರೀ ಕ್ಷೇತ್ರದಲ್ಲಿ ದಾಸೋಹದ ಇನ್ನೊಂದು ಮುಖವಾದ ಜ್ಞಾನದಾಸೋಹ ಪ್ರಾರಂಭವಾಯಿತು. ಆ ಕಾಲದಲ್ಲಿಯೇ ಎಲ್ಲಾ ಜಾತಿಯವರಿಗೂ ಆಶ್ರಯ ನೀಡಿ ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನಾಗಿ ಪ್ರಾರಂಭಿಸಿದ್ದು, ಅವರ ವಿಶಾಲ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ಎಲ್ಲಾ ಜಾತಿ ಮತ ಪಂಥದವರು ಸಂಸ್ಕೃತವನ್ನು ಅಭ್ಯಾಸ ಮಾಡುವ ಅವಕಾಶ ದೊರೆಯಿತು. ಪ್ರತಿ ವರ್ಷವೂ ಶಿವರಾತ್ರಿಯ ಕಾಲದಲ್ಲಿ ಶ್ರೀಕ್ಷೇತ್ರದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರ ಜಾತ್ರೆಯು ಇವರ ಕಾಲದಲ್ಲಿಯೇ ಅಂದರೆ ಕ್ರಿ.ಶ. ೧೯೦೬ ರಲ್ಲಿ ಪ್ರಾರಂಭವಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೧೧೮). ಹೀಗೆ ಅವರ ಕಾಯಕ ನಿಷ್ಠೆಯಿಂದ ಕರ್ತೃತ್ವ ಶಕ್ತಿಯ ಜಲಧಾರೆಯನ್ನೆರೆದು ಪೋಷಿಸಿ ಬೆಳೆಸಿದ ಮಠದ ಅಭಿವೃದ್ಧಿ, ವಿದ್ಯಾಸಂಸ್ಥೆ, ವಿದ್ಯಾರ್ಥಿ ನಿಲಯಗಳು ಇಂದು ರಾಷ್ಟ್ರಮಟ್ಟದ ಬೃಹತ್ ಸಂಸ್ಥೆಗಳಾಗಿ ಬೆಳೆದಿವೆ.

ಉದ್ದಾನ ಶಿವಯೋಗಿಗಳು ಮುಂದೆ ಈ ಮಠದ ಉತ್ತರಾಧಿಕಾರಿಯನ್ನಾಗಿ ವೀರಾಪುರದ ಶಿವಣ್ಣ (ಶಿವಕುಮಾರಸ್ವಾಮೀಜಿ) ನನ್ನು ನೇಮಿಸಿದರು. ಶಿವಣ್ಣನಿಗೆ ಶ್ರೀ ಶಿವಕುಮಾರಸ್ವಾಮಿಗಳು ಎಂಬ ನೂತನಾಭಿಧಾನವಿಟ್ಟು ೧೯೩೦ ಮಾರ್ಚ್ ೩ ರಲ್ಲಿ ಉತ್ತರಾಧಿಕಾರಿಗಳನ್ನಾಗಿಸಿದರು (ಶ್ರೀ ಸಿದ್ಧಗಂಗಾ ಕ್ಷೇತ್ರ, ಪು.೪).

ಶ್ರೀ ಶಿವಕುಮಾರಸ್ವಾಮೀಜಿ (೧೯೦೪-) :

ಸಿದ್ಧಗಂಗಾ ಮಠದ ಅಧ್ಯಕ್ಷರಾಗಿರುವ ಶಿವಕುಮಾರಸ್ವಾಮಿಗಳು ಶ್ರೀ ಉದ್ದಾನಸ್ವಾಮಿಗಳಿಂದ ೧೯೩೦ ಮಾರ್ಚ್ ೩ ರಂದು ದೀಕ್ಷೆಯನ್ನು ಪಡೆದು, ಉದ್ದಾನ ಶಿವಯೋಗಿಗಳು ಲಿಂಗೈಕ್ಯರಾದ ನಂತರ ೧೯೪೧ ಜನವರಿ ೧೧ ರಂದು ಶ್ರೀಮಠದ ಸಮಸ್ತ ಅಧಿಕಾರವನ್ನು ವಹಿಸಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ಶತಾಧಿತವಾಗಿ ಬೆಳೆಸುತ್ತಾ ಬಂದಿದ್ದಾರೆ (ಸಿದ್ಧಗಂಗಾ ಕ್ಷೇತ್ರ, ಪು. ೪).

ಬೆಂಗಳೂರು ಜಿಲ್ಲೆ ಮಾಗಡಿ ತಾಲ್ಲೋಕಿನಲ್ಲಿರುವ ವೀರಾಪುರ ಪ್ರಸಿದ್ಧ ಶಿವಶರಣರ ಪುಣ್ಯಕ್ಷೇತ್ರಗಳಲ್ಲಿ ಒಂದು. ೧೯೦೮ ಏಪ್ರಿಲ್ ೧ ರಂದು ಶಿವಣ್ಣನ ಜನನವಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೯೩). ಶಿವಣ್ಣ ೧ ರಿಂದ ೪ನೇ ತರಗತಿಯವರೆಗೆ ವೀರಾಪುರದಲ್ಲಿ ಶಿಕ್ಷಣ ಪಡೆದು ನಂತರ ೫ ರಿಂದ ೭ನೇ ತರಗತಿಯವರೆಗೆ ನಾಗವಲ್ಲಿಯ ಗ್ರಾಮಾಂತರ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ನಲ್ಲಿ ಶಿಕ್ಷಣ ಪಡೆದು, ೧೯೨೨ ರಲ್ಲಿ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರವೇಶ ಪಡೆದರು. ಈ ಪ್ರೌಢಶಾಲೆಯಲ್ಲಿ ಕಾಳಪ್ಪ (ಕನಕಪುರದ ದೇಗುಲಮಠದ ಮಹಾಲಿಂಗಸ್ವಾಮಿಗಳು) ಎಂಬುವವರ ಸ್ನೇಹವಾಯಿತು. ಇವರು ಸಿದ್ಧಗಂಗಾ ಮಠದಿಂದ ಹೈಸ್ಕೂಲಿಗೆ ಬರುತ್ತಿದ್ದರು. ಇವರೊಂದಿಗೆ ಶಿವಣ್ಣನು ಸಿದ್ಧಗಂಗಾ ಮಠಕ್ಕೆ ಬರುತ್ತಿದ್ದರು. ಹೀಗೆ ಬರುತ್ತಿರುವಾಗ ಸಿದ್ಧಗಂಗಾ ಮಠದ ಪೂರ್ಣ ಪರಿಚಯವಾಯಿತು. ೧೯೨೬ ನೆಯ ಇಸವಿಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಹೈಸ್ಕೂಲ್ ಶಿಕ್ಷಣ ಮುಗಿಸಿ ಅಲ್ಲಿಯೇ ಎಂಟ್ರೆನ್ಸ್ ಪರೀಕ್ಷೆಗಾಗಿ ವಿದ್ಯಾಭ್ಯಾಸ ಮುಂದುವರಿಸಿದರು. ಆದರೆ ತುಮಕೂರಿನ ಕೊಠಡಿಯಲ್ಲಿದ್ದು ಊಟೋಪಚಾರ ಮಾಡಿ ವಿದ್ಯಾಭ್ಯಾಸ ಮಾಡಲು ಅನಾನುಕೂಲವಾಗಿತ್ತು. ಆದ್ದರಿಂದ ಉದ್ದಾನೇಶ್ವರರನ್ನು ಕಂಡು ಮಠದಲ್ಲುಳಿಯಲು ಪ್ರಯತ್ನಿಸಿದರು. ಆದರೆ ಇದು ಅಸಾಧ್ಯವಾಯಿತು. ಈ ವಿಷಯ ತಿಳಿದ ಉದ್ದಾನ ಶಿವಯೋಗಿಗಳು, ನಾಲ್ಕು ತಿಂಗಳವರೆಗೂ ಮಠದಲ್ಲಿದ್ದು ಓದಿಕೊಳ್ಳಬಹುದೆಂದು ಅನುವು ಮಾಡಿಕೊಟ್ಟರು (ಸಿದ್ಧಗಂಗಾಶ್ರೀ, ೧೯೮೧, ಪು.೧೦೨).

ಸಿದ್ಧಗಂಗಾ ಕ್ಷೇತ್ರದ ವಿದ್ಯಾರ್ಥಿಯಾಗಿ, ತುಮಕೂರಿನಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಹೊರಟರು. ೧೯೩೦ ರಲ್ಲಿ ಮರುಳಾರಾಧ್ಯರು ಲಿಂಗೈಕ್ಯರಾದ ನಂತರ ಶಿವಕುಮಾರಸ್ವಾಮಿಗಳು ಮಠದ ಜವಾಬ್ದಾರಿಯನ್ನು ಹೊತ್ತರು. ದಾಸೋಹ ಸದ್ಭಾವದಲ್ಲಿ ತಮ್ಮ ಜೀವಿತವನ್ನೇ ಧಾರೆಯೆರೆಯುವ ಮಹಾಸಂಕಲ್ಪದಿಂದ ಈ

ಗದ್ದುಗೆಯನ್ನೇರಿದರು. ಶಿವಕುಮಾರಸ್ವಾಮಿಗಳು ಶ್ರೀ ಉದ್ದಾನಸ್ವಾಮಿಗಳಿಂದ ೧೯೪೧ ಜನವರಿ ೧೧ ರಂದು ಸಿದ್ಧಗಂಗಾ ಮಠದ ಸಮಸ್ತ ಅಧಿಕಾರವನ್ನು ವಹಿಸಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಬಂದಿದ್ದಾರೆ (ಸಿದ್ಧಗಂಗಾಶ್ರೀ, ೧೯೮೧, ಪು.೧೧೫).

ಆಧುನಿಕ ಶಿಕ್ಷಣದ ಅವಶ್ಯಕತೆಯನ್ನರಿತು ಮಠವನ್ನು ಜ್ಞಾನವಿಜ್ಞಾನಗಳ ಮಹಾಕೇಂದ್ರವನ್ನಾಗಿ ರೂಪಿಸಿದರು. ಅನ್ನದಾನದ ಜೊತೆಗೆ ಜ್ಞಾನದಾಸೋಹವನ್ನು ನೀಡಿದರು. ೧೯೧೭ ರಲ್ಲಿ ಉದ್ದಾನ ಶಿವಯೋಗಿಗಳಿಂದ ಸ್ಥಾಪಿತವಾದ ಸಂಸ್ಕೃತ ಶಾಲೆ, ಶಿವಕುಮಾರಸ್ವಾಮಿಗಳಿಂದ ೧೯೩೭ ರಲ್ಲಿ ಸಂಸ್ಕೃತ ಕಾಲೇಜಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೧೨೧). ಉದ್ದಾನಸ್ವಾಮಿಗಳವರು ಸಾಂಪ್ರದಾಯಿಕ ಶಿಕ್ಷಣಕ್ಕೆ ಮಹತ್ವ ನೀಡಿದ್ದಾರೆ. ಕಾರಣ ಆಗಿನ ಕಾಲದಲ್ಲಿ ವೇದಾಧ್ಯಯನ ಒಂದು ಜಾತಿಯ ಸ್ವತ್ತಾಗಿತ್ತು. ಸಂಸ್ಕೃತ ಜ್ಞಾನ ಎಲ್ಲರಿಗೂ ದೊರಕಬೇಕೆಂಬ ಹಂಬಲ ಅವರಲ್ಲಿತ್ತು. ಶಿವಕುಮಾರಸ್ವಾಮೀಜಿಗೆ ಸಂಸ್ಕೃತದ ಅರಿವಷ್ಟೇ ಅಲ್ಲದೆ ಆಧುನಿಕ ಶಿಕ್ಷಣದ ಅವಶ್ಯಕತೆಯ ಅರಿವೂ ಇತ್ತು. ಆದ್ದರಿಂದಲೇ ಸಂಸ್ಕೃತದ ಜೊತೆಗೆ ಆಧುನಿಕ ಶಿಕ್ಷಣವನ್ನು ಜಾತಿಭೇದವಿಲ್ಲದೆ ನೀಡಲು ತೀರ್ಮಾನಿಸಿದರು. ಅಕ್ಷರ, ಆರೋಗ್ಯ ಮತ್ತು ಆಹಾರ ಭದ್ರತೆಗಳೇ ಪ್ರಮುಖವೆನ್ನಲಾಯಿತು. ಸಿದ್ಧಗಂಗಾ ಮಠದ ಅನ್ನ ಮತ್ತು ಅಕ್ಷರದ ಆಶ್ರಯ ದೊರೆಯದೆ ಇದ್ದಿದ್ದರೆ ಲಕ್ಷಾಂತರ ಬಡ ಗ್ರಾಮೀಣ ಮಕ್ಕಳು ಶಿಕ್ಷಣಾವಕಾಶದಿಂದ ವಂಚಿತರಾಗಬೇಕಿತ್ತು. ಗ್ರಾಮೀಣ ಪ್ರದೇಶದ ಬಡಜನರ ಮಕ್ಕಳಿಗೆ ಅಕ್ಷರ ದಕ್ಕುವುದೇ ಕಷ್ಟವಾಗಿದ್ದ ಕಾಲದಲ್ಲಿ ಉಳ್ಳವರು ಎಲ್ಲಿಗಾದರೂ ಕಳುಹಿಸಿ ಮಕ್ಕಳನ್ನು ಅಕ್ಷರರನ್ನಾಗಿಸುತ್ತಿದ್ದ ಪರಿಸ್ಥಿತಿಯಲ್ಲಿ ಸಿದ್ಧಗಂಗಾ ಕ್ಷೇತ್ರದಲ್ಲಿ ಒಂದೆಡೆ ಜ್ಞಾನದ ಸೆಲೆ ಬತ್ತದಂತೆ, ದಾಸೋಹದ ಒಲೆ ಆರದಂತೆ ನೋಡಿಕೊಂಡುದು ಮಾತ್ರವಲ್ಲ, ಸಾವಿರಾರು ಬಡಮಕ್ಕಳಿಗೆ ಆಸರೆಯಾಗಿ ನಿಂತು ಅನ್ನ, ಜ್ಞಾನ ಎರಡನ್ನೂ ನೀಡಿದ ಜ್ಞಾನನಿಧಿಯಾಯಿತು. ಸಿದ್ಧಗಂಗೆ ವರ್ಗಭೇದ, ವರ್ಣಭೇದ, ಲಿಂಗಭೇದವಿಲ್ಲದೆ ಸಮಾಜಸೇವಾ ದೀಕ್ಷಿತವಾಗಿದೆ. ಅನ್ನ, ಶಿಕ್ಷಣ, ಸೂರು, ಔಷಧ ಇತ್ಯಾದಿ ಜೀವನಾವಶ್ಯಕ ಕ್ಷೇತ್ರಗಳಿಗೆ ವಿಸ್ತರಿಸಿ ಸಮಾಜ ಸಮೃದ್ಧಿಗೂ ಕಾರಣವಾಗಿದೆ. ಲಿಂಗಾಯತ ಮಠಗಳು ಕೇವಲ ಧರ್ಮಮುಖಿಯಾಗದೆ ಹೆಚ್ಚಿನದಾಗಿ ಸಮಾಜಮುಖಿಯೂ ಆಗಿವೆ. ವರ್ಗ, ವರ್ಣ, ವಲಯ ಭಾಷೆಗಳ ಭೇದ ಇಲ್ಲಿಲ್ಲ. ಸಿದ್ಧಗಂಗಾ ಮಠದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳು, ಶಿಕ್ಷಕ ತರಬೇತಿ ಸಂಸ್ಥೆಗಳು, ಸಂಸ್ಕೃತ ಕಾಲೇಜುಗಳು, ಕನ್ನಡ ಪಂಡಿತ ವಿಭಾಗ, ವಾಣಿಜ್ಯ ವಿದ್ಯಾಸಂಸ್ಥೆ, ಅಂಧ ಮಕ್ಕಳ ಪಾಠಶಾಲೆ, ಸಮನ್ವಯ ಶಿಕ್ಷಣ ಸಂಸ್ಥೆ, ಸಂಗೀತ ಪಾಠಶಾಲೆ, ದೈಹಿಕ ಶಿಕ್ಷಣ ಸಂಸ್ಥೆ ನಡೆಯುತ್ತಿದ್ದು ಸಾವಿರಾರು ವಿದ್ಯಾರ್ಥಿಗಳು ಉಚಿತವಾಗಿ ಮಠದ ವಸತಿ ನಿಲಯದಲ್ಲಿ ಆಶ್ರಯ ಪಡೆದಿರುತ್ತಾರೆ. ಇದಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ ಸೇವಾ ಕಾರ್ಯದಲ್ಲಿ

ನಿರತವಾಗಿದೆ. ತುಮಕೂರಿನಲ್ಲಿ ೧೯೪೪ ರಲ್ಲಿಯೇ ಸಿದ್ಧಗಂಗಾ ಪ್ರೌಢಶಾಲೆಯನ್ನು ಸ್ಥಾಪಿಸಿದ್ದು ಒಂದು ದೊಡ್ಡ ಇತಿಹಾಸವೇ ಆಗಿದೆ. ಮಠ ಇಂದು ೧೨೨ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದ್ದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದೆ.

ಕೊನೆಯ ಮಾತು

ತುಮಕೂರು ಜಿಲ್ಲೆಯಲ್ಲಿ ವಸಾಹತು ಕಾಲದಲ್ಲಿಯೇ ಪ್ರೌಢಶಾಲೆಗಳನ್ನು ಸ್ಥಾಪಿಸುವ ಇಂಗಿತ ವ್ಯಕ್ತವಾಗಿದ್ದರೂ, ಅದು ಸಾಕ್ಷಾತ್ಕಾರಗೊಂಡದ್ದು ಮಠಗಳಿಂದ. ಸರ್ಕಾರದೊಂದಿಗೆ ಮಠ ಮಾನ್ಯಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದ್ದರಿಂದ ಬೃಹತ್ ಸಂಖ್ಯೆಯಲ್ಲಿ ಶಾಲಾ-ಕಾಲೇಜುಗಳನ್ನು ಕಾಣಬಹುದಾಗಿದೆ. ಇವುಗಳಿಗೆ ಅಂಟಿಕೊಂಡಂತೆ ಸರ್ಕಾರ ಮತ್ತು ಖಾಸಗಿಯವರು ಉಚಿತ ವಸತಿ ನಿಲಯಗಳನ್ನು ಸ್ಥಾಪಿಸಿ, ಎಲ್ಲರೂ ಶಿಕ್ಷಣ ಪಡೆಯುವಂತೆ ಮಾಡಿವೆ. ಸರ್ಕಾರ, ಖಾಸಗಿ ಮತ್ತು ಮಠಗಳೂ ಅಸಂಖ್ಯಾತ ಪ್ರೌಢಶಾಲೆಗಳನ್ನು ಸ್ಥಾಪಿಸಿ, ಹೆಣ್ಣು ಮಕ್ಕಳ ಶಿಕ್ಷಣಕ್ಕೂ ಅನುವು ಮಾಡಿಕೊಟ್ಟಿದೆ.

ಗ್ರಂಥಋಣ

೧. **ಅಮರ್ತ್ಯ ಸೇನ್/ ಜೀನ್‌ಡ್ರೀಜ್,** *ಕಾಂಪ್ರೈಸಿಂಗ್ ಪಾವರ್ಟಿ ಅಂಡ್ ಫ್ಯಾಮಿನ್ಸ್, ಹಂಗರ್ ಅಂಡ್ ಪಬ್ಲಿಕ್ ಆ್ಯಕ್ಷನ್ ಇಂಡಿಯಾ: ಎಕಾನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಷಿಯಲ್ ಆಪರ್ಚುನಿಟಿ,* ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೯.

೨. **ಡಾ. ಚಂದ್ರಶೇಖರ್ ಟಿ.ಆರ್.,** *ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು,* ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೩. **ಗ್ರೋವರ್ ಬಿ.ಎಲ್.,** *ಎ ನ್ಯೂ ಲುಕ್ ಆನ್ ಮಾಡ್ರನ್ ಇಂಡಿಯನ್ ಹಿಸ್ಟರಿ,* ಎಸ್. ಚಾಂದ್ ಅಂಡ್ ಕಂಪನಿ ಲಿಮಿಟೆಡ್, ನ್ಯೂಡೆಲ್ಲಿ, ೧೯೮೩.

೪. **ಹ್ಯಾನಿ ಲೇವೀಸ್ ಎಚ್,** *ಹಿಸ್ಟರಿ ಆಫ್ ಎಕಾನಾಮಿಕ್ ಥಾಟ್,* ಸುರ್‌ಜೀತ್ ಪಬ್ಲಿಕೇಷನ್ಸ್, ೧೯೭೯,

೫. **ಗೋವಿಂದ ಆರ್.** ಪ್ರೊವೈಡಿಂಗ್ ಎಜುಕೇಷನ್ ಫಾರ್ ಆಲ್ ಇನ್ ಇಂಡಿಯಾ ಇನ್ ಗೋವಿಂದ ಆರ್. (ಇಡಿ.), *ಇಂಡಿಯಾ ಎಜುಕೇಷನ್ ರಿಪೋರ್ಟ್,* ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ. ೨೦೦೨.

೬. **ಸೆನ್ಸಸ್ ಆಫ್.** ಇಂಡಿಯಾ, ೨೦೦೧, ಸಿರೀಸ್-೩೦, ಕರ್ನಾಟಕ ಪೇಪರ್ ೨ ಆಫ್ ೨೦೦೧, *ಪ್ರಾವಿಷನಲ್ ಪಾಪುಲೇಶನ್ ಟೋಟಲ್ಸ್, ರೂರಲ್-ಅರ್ಬನ್ ಡಿಸ್ಟ್ರಿಬುಷನ್ ಆಫ್ ಪಾಪುಲೇಶನ್.* ಡೈರೆಕ್ಟೊರೇಟ್ ಆಫ್ ಸೆನ್ಸ್‌ಸ್ ಆಪರೇಷನ್ಸ್, ಕರ್ನಾಟಕ.

೭. *ಮೈಸೂರು ಸ್ಟೇಟ್ ಗೆಜೆಟೀಯರ್ಸ್,* ತುಮಕೂರು ಡಿಸ್ಟ್ರಿಕ್ಟ್ (ಇಡಿ) ಅಭಿಶಂಕರ, ಪಬ್ಲಿಷ್ಡ ಬೈ ಗೌರ್‍ನಮೆಂಟ್ ಆಫ್ ಮೈಸೂರು, ೧೯೬೯.

೮. **ಸೂರ್ಯನಾಥ್ ಯು. ಕಾಮತ್,** *ಮೈಸೂರು ಸ್ಟೇಟ್ ಗೆಜೆಟೀಯರ್,* ಭಾಗ ಮೂರು, ವಿ.ಬಿ.ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು, ೧೯೮೬.

೯. *ಸಮಗ್ರ ಅಂಕಿ-ಅಂಶ,* ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಮಿಷನ್, ೨೦೦೭-೦೮, ಬೆಂಗಳೂರು.

೧೦. *ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ,* ೨೦೦೨-೦೩, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

೧೧. *ಜಿಲ್ಲಾ ಪಂಚಾಯತ್ ಆಡಳಿತ ವರದಿ,* ೨೦೦೩-೦೪, ಜಿಲ್ಲಾ ಪಂಚಾಯತ್, ತುಮಕೂರು.

೧೨. ತುಮಕೂರು *ಜಿಲ್ಲೆಯ ಅಂಕಿ-ಅಂಶಗಳ ಪಕ್ಷಿನೋಟ,* ೨೦೦೩-೦೪, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ತುಮಕೂರು.

೧೩. *ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ಪಕ್ಷಿನೋಟ.* ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ತುಮಕೂರು.

೧೪. *ಸಿದ್ಧಗಂಗಾಶ್ರೀ.* ಸಂ ಚನ್ನಪ್ಪ ಎರೆಸೀಮೆ ಮತ್ತು ಮಹಾದೇವಯ್ಯ ಟಿ.ಆರ್, ಹಳೆ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಕ್ಷೇತ್ರ, ೧೯೮೧, ತುಮಕೂರು.

೧೫. **ಅತ್ತಿ ರೇಣುಕಾನಂದ,** ಅಗಲಿದ ಸಮಾಜ ಸೇವಕರು, ಜಯಮಂಗಲಿ, ಸಂ.ಡಾ.ಯೋಗೀಶ್ ಡಿ.ಎನ್. ೬೯ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೨, ತುಮಕೂರು.

೧೬. **ಕವಿತಾಕೃಷ್ಣ,** ಬಾಣಸಂದ್ರದ ಬೆಳ್ಳಿಕಿರಣ, ಸಂ ಬಾ.ಹ.ರಮಾಕುಮಾರಿ, *ಬಾಣಸಂದ್ರದ ಹುಚ್ಚೇಗೌಡರ ಜನ್ಮ ಶತಮಾನೋತ್ಸವ ಸಮಿತಿ,* ೨೦೦೩, ಬಾಣಸಂದ್ರ, ತುರುವೇಕೆರೆ.

೧೭. **ಕೋಳಾಲ ಸಿದ್ಧಬಸಯ್ಯ,** ಸ್ಮರಣೀಯ ವ್ಯಕ್ತಿಗಳು, ಜಯಮಂಗಲಿ, ಸಂ.ಡಾ. ಯೋಗೀಶ್ ಡಿ.ಎನ್. *೬೯ ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ,* ೨೦೦೨, ತುಮಕೂರು.

೧೮. **ಲಲಿತ ಎಂ. ಸಿ.,** ಮುಂಚೂಣಿ ನಾಯಕರು, ಜಯಮಂಗಲಿ, ಸಂ. ಡಾ. ಯೋಗೀಶ್ ಡಿ.ಎನ್., *೬೯ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ,* ೨೦೦೨, ತುಮಕೂರು.

ಪಟ್ಟಿ :

೧. ತುಮಕೂರು ಜಿಲ್ಲೆಯ ಒಟ್ಟು ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಸಂಖ್ಯೆ

೨. ಸರ್ಕಾರಿ, ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಸಂಖ್ಯೆ

೩. ಗ್ರಾಮೀಣ ಮತ್ತು ನಗರ ಶಾಲೆಗಳು

೪. ಗ್ರಾಮೀಣ ಮತ್ತು ನಗರ ಶಾಲೆಗಳ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ವಿವರ.

೫. ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಮಕ್ಕಳ ದಾಖಲಾತಿ ಪ್ರಮಾಣ

೬. ಪ್ರಾಥಮಿಕ ಮತ್ತು ಪ್ರೌಢಶಾಲೆ ಬಾಲಕಿಯರ ದಾಖಲಾತಿ ಪ್ರಮಾಣ

೭. ೨೦೦೧ ರ ಜನಗಣತಿ ಪ್ರಕಾರ ೦-೭ ವಯೋಮಾನದ ಒಟ್ಟು ಜನಸಂಖ್ಯೆ, ಸಾಕ್ಷರತೆ ಮತ್ತು ಲಿಂಗ - ಅನುಪಾತ

೮. ೧ ರಿಂದ ೧೦ ನೇ ತರಗತಿಗಳಲ್ಲಿ ದಾಖಲಾದ ಮಕ್ಕಳ ಸಾಮಾಜಿಕ ಸ್ವರೂಪ

೯. ವಿದ್ಯಾರ್ಥಿಗಳ - ಶಿಕ್ಷಕರ ಅನುಪಾತ

೧೦. ಸಾಕ್ಷರತೆ ಪ್ರಮಾಣ

೧೧. ಸಾಕ್ಷರತೆ : ೨೦೦೧ ರ ಜನಗಣತಿ ಪ್ರಕಾರ

೧೨. ಗ್ರಾಮೀಣ - ನಗರ ಸಾಕ್ಷರತೆ : ೨೦೦೧ ರ ಜನಗಣತಿ ಪ್ರಕಾರ

೧೩. ವಿದ್ಯಾರ್ಥಿ ನಿಲಯಗಳು ಮತ್ತು ಸಾಮಾಜಿಕ ಆಯಾಮಗಳು

೧೪. ವಿದ್ಯಾರ್ಥಿ ನಿಲಯಗಳಲ್ಲಿ ಸರ್ಕಾರ ಕೈಗೊಂಡ ಜಾತಿವಾರು ವೆಚ್ಚ : ೨೦೦೩-೦೪

ಅಧ್ಯಾಯ – ೪

ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು

ಅಧ್ಯಾಯ – ೪

ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು

ನಮ್ಮ ನಾಡು, ನಮ್ಮ ದೇಶದಲ್ಲಿ ಸಂಪರ್ಕ ಸಾಧನಗಳು ಹೆಚ್ಚಿದಂತೆ ಹೊಸ ಹೊಸ ಆವಿಷ್ಕಾರಗಳು ಕಂಡು ಬರುವುದರ ಜೊತೆಯಲ್ಲಿ ವ್ಯಾಪಾರ ಉದ್ದಿಮೆಗಾಗಿ ಬೇರೆ ಬೇರೆ ದೇಶಗಳ ಜನರ ಆಗಮನವೂ ಪ್ರಾರಂಭವಾಯಿತು. ಅಂತೆಯೇ ಬ್ರಿಟೀಷರ ಆಗಮನವಾಗಿ ಅವರ ಶಿಕ್ಷಣ ನೀತಿ, ಇಂಗ್ಲೀಷ್ ಭಾಷೆ, ಅವರ ಸಂಸ್ಕೃತಿಯ ಪ್ರಭಾವದಿಂದಾಗಿ ಸಮಾಜದಲ್ಲಿ ನೂತನ ಪರಿವರ್ತನೆ ಕಂಡು ಬಂದಿತು. ಅವರು ತಮ್ಮ ಶಿಕ್ಷಣ ನೀತಿಯನುಸಾರವಾಗಿ ಹೊಸ–ಹೊಸ ಶಾಲೆಗಳನ್ನು ತೆರೆಯುವುದಕ್ಕೆ ನಾಂದಿ ಹಾಡಿದರು. ಮನೆ–ಮನೆಗಳ ಪಾಠಶಾಲೆಗಳು, ಮಠದಯ್ಯನವರ ಶಾಲೆಗಳ ಬದಲಾಗಿ ಸರ್ಕಾರಿ ಶಾಲೆಗಳು ಬಂದು ಮಠದ ಶಾಲೆಗಳ ಮಹತ್ವ ಕುಂದುತ್ತ ಬಂದಿತು. ಈ ಹಿನ್ನೆಲೆಯಲ್ಲಿ ಮಠಾಧೀಶರು ಹೊಸ ಒಂದು ಯೋಜನೆಯನ್ನು ತಯಾರಿಸಿದರು. ನಾಡಿನ ಸಿರಿವಂತ ಭಕ್ತರಿಂದ ದೇಣಿಗೆ ಪಡೆದು, ಶಿಕ್ಷಣ ಶಾಲೆಗಳನ್ನು ತೆರೆದರು. ತಮ್ಮ ಮಠಗಳಿಂದ ಸಂಘ ಸಂಸ್ಥೆಗಳನ್ನು ಕಟ್ಟಿ ಸಮಿತಿಯನ್ನು ರಚಿಸಿ ಅದರಿಂದ ಆಧುನಿಕ ರೀತಿಯ ಶಾಲೆಗಳನ್ನು ಸ್ಥಾಪಿಸಿದರು. ಉನ್ನತ ಪದವಿ ಪಡೆದ ಶಿಕ್ಷಕರನ್ನು ಅಧ್ಯಾಪನ ಕಾರ್ಯಕ್ಕೆ ನೇಮಿಸಿದರು. ಅಲ್ಲದೆ ವೀರಶೈವ ವಿದ್ಯಾರ್ಥಿಗಳು ಮತ್ತು ಇನ್ನಿತರ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿ ಕೊಡಲು ಉಚಿತ ಪ್ರಸಾದ ನಿಲಯಗಳನ್ನು ತೆರೆದರು. ಇದರಿಂದಾಗಿ ಬಡ ವಿದ್ಯಾರ್ಥಿಗಳಿಗೆ ಉತ್ತಮ ಪ್ರಯೋಜನ ದೊರೆಯಿತು. ಹೀಗಾಗಿ ಕರ್ನಾಟಕದಲ್ಲಿ ಹಲವಾರು ಸಂಘ–ಸಂಸ್ಥೆಗಳು, ಶಾಲಾ–ಕಾಲೇಜುಗಳು ಇಂದು ನಮ್ಮ ಕಣ್ಣ ಮುಂದಿವೆ. ಸರ್ಕಾರ ಮಾಡುವುದಕ್ಕಿಂತಲೂ ಹೆಚ್ಚು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದವರು ಮಾಠಾಧೀಶರು ಮತ್ತು ಮಠಗಳು.

ಚಾರಿತ್ರಿಕ ದೃಷ್ಟಿಯಿಂದ ೧೨ ನೇ ಶತಮಾನದಿಂದ ವೀರಶೈವ ಮಠಗಳ ಪ್ರಾಧಾನ್ಯತೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ವೀರಶೈವ ಮಠಗಳ ಚರಿತ್ರೆಯನ್ನು ಅವಲೋಕಿಸಿದರೆ, ವಿದ್ಯಾಪ್ರಸಾರಕ್ಕೂ, ಮಠಗಳಿಗೂ ಇರುವ ಸಂಬಂಧವು ಸ್ಫುಟವಾಗಿ ಕಾಣುತ್ತದೆ. ವ್ಯಕ್ತಿತ್ವವು ರೂಪುಗೊಳ್ಳುವಲ್ಲಿ ವಿದ್ಯಾಸಂಸ್ಥೆಯ ಹಿರಿಯ ಪಾತ್ರವನ್ನು ೧೨ ನೇ ಶತಮಾನದಲ್ಲಿ ಬಸವಣ್ಣನು ಗುರುತಿಸಿದನು. ವಿದ್ಯಾಕ್ಷೇತ್ರದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳು ಕಂಡುಬಂದವು. ವೃತ್ತಿ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳು ಬಲಗೊಳ್ಳಲು 'ಶಿಕ್ಷಣ' ಸಮಾಜದ ಸ್ವಾಸ್ಥ್ಯಕ್ಕೆ ಪೂರಕ ಎನ್ನಲಾಯಿತು. ಲಿಂಗಾಯತರು ೨೦ ನೇ ಶತಕದ ಅವಶ್ಯಕತೆಗನುಗುಣವಾಗಿ ತಮ್ಮ ವಿಚಾರಧಾರೆಯನ್ನು ಬದಲಿಸಿ ಜಾತ್ಯತೀತವಾಗಿ ಶಿಕ್ಷಣ ಪ್ರಸಾರ ಕೈಗೊಳ್ಳುವ ಧ್ಯೇಯವನ್ನಿಟ್ಟು ಕೊಂಡರು. ಧರ್ಮಗುರುಗಳು ವಿದ್ಯಾ ಪ್ರಸಾರಕ್ಕೆ ತೊಡಗಲು ಶಿಕ್ಷಣ ಸಂಸ್ಥೆಗಳ ಸ್ಥಾನಮಾನ ಹೆಚ್ಚಲು ಉದಾರ ದೇಣಿಗೆಗಳನ್ನು ಸಲ್ಲಿಸಲು ಜನತೆ ಮುಂದಾಯಿತು. ವಿದ್ಯಾಸಂಸ್ಥೆಗಳು ಸ್ಥಿರವಾಗಿ ನಿಂತು ಕಾರ್ಯ ನಿರ್ವಹಿಸುವಂತಾಯಿತು. ಸಮಾಜದ ಬಡ, ಹಿಂದುಳಿದ ಮತ್ತು ಗ್ರಾಮೀಣ ಪ್ರದೇಶದವರಿಗೆ ಶಿಕ್ಷಣ ನೀಡುವ ಕಾರ್ಯಕ್ಕೆ ಆದ್ಯಗಮನ ಕೊಡುತ್ತಿರುವುದು ಕಂಡು ಬರುತ್ತದೆ. ಆದ್ದರಿಂದ ಮಠಗಳು ಅಂದು ಪೂಜ-ಮಂದಿರಗಳನ್ನು ಸ್ಥಾಪಿಸುವುದರಿಂದ ಪ್ರಯೋಜನವಿಲ್ಲವೆಂದರಿತು, ಶಿಕ್ಷಣ-ಮಂದಿರಗಳಾಗುವ ನಿಟ್ಟಿನಲ್ಲಿ ಸಾಗಿದವು. ಅರ್ಥಿಕಾಂಶಗಳನ್ನು ತನ್ನ ಅಭಿವೃದ್ಧಿ ಪರ ಎಂಬುದನ್ನು ವಿವರಿಸಲು ಶಿಕ್ಷಣ ಒಂದು ಸಾಧನವೆಂದು ಸೇನ್ ಕೂಡ ವಿವರಿಸಿದ್ದಾನೆ. ಪ್ರಾರಂಭದ ದಿನಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲಿಲ್ಲವಾದ್ದರಿಂದ ಸಮಾಜ ಸಾಮಾಜಿಕ ಅಭದ್ರತೆಯನ್ನು ಎದುರಿಸುವಂತಾಯಿತು ಎಂದಿದ್ದಾರೆ ಅಮರ್ತ್ಯ ಸೇನ್ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯,ಪು.೧೩). ಇಂತಹ ಸಾಮಾಜಿಕ ಅಭದ್ರತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸರ್ಕಾರ, ಖಾಸಗಿಯವರು ಮತ್ತು ಮಠಾಧಿಪತಿಗಳ ಪ್ರಯತ್ನ ಸಾಗಿದ್ದರಿಂದಲೇ, ಕರ್ನಾಟಕದಲ್ಲಿ ಅನೇಕ ಲಿಂಗಾಯತ ಮಠಗಳು, ನಿರ್ದಿಷ್ಟವಾಗಿ ಶ್ರೀ ಸಿದ್ಧಗಂಗಾ ಮಠ, ಶಿಕ್ಷಣ ನೀಡುವ ಕಾರ್ಯಸಾಧನೆಯತ್ತ ಹೆಜ್ಜೆ ಹಾಕಿತು.

ಶ್ರೀ ಸಿದ್ಧಗಂಗಾ ಮಠ ೧೯೧೭ ರಿಂದಲೂ ಶೈಕ್ಷಣಿಕ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿದೆ. ಧಾರ್ಮಿಕ ಭಾವನೆ ಮತ್ತು ಧಾರ್ಮಿಕ ನಡವಳಿಕೆಯ ಹೊಣೆಯು ಮಠದ ಮೊದಲ ಕರ್ತವ್ಯವಾದರೂ, ಸಮಾಜ ಸುಧಾರಣೆಯು ಅದರ ಪ್ರಮುಖ ಹೊಣೆಯಾಗಿದೆ. ಸಿದ್ಧಗಂಗಾ ಮಠ ಧಾರ್ಮಿಕ ಆಸಕ್ತಿಯೊಂದಿಗೆ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಲೇ ಬಂದಿದೆ. ಇದರರ್ಥ ಮಠ ಸಮಾಜ, ಶಿಕ್ಷಣ ಮತ್ತು ಧಾರ್ಮಿಕ ಸಂಸ್ಥೆಗಳ ನಡುವೆ ಇರುವ ಅಂತರ್-ಸಂಬಂಧಗಳನ್ನು ವಿಶ್ಲೇಷಿಸುತ್ತದೆ. ಸಿದ್ಧಗಂಗಾ ಮಠ ಸಮಾಜ ಮತ್ತು ಶಿಕ್ಷಣ ಎಂದೊಡನೆ, ಸಮಾಜ

ಅಭಿವೃದ್ಧಿಯಾಗಬೇಕಾದರೆ ಸಾಕ್ಷರತೆಯಿಂದ ಮಾತ್ರ ಸಾಧ್ಯ ಎಂದರಿತಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಶಾಲೆಗಳನ್ನು ಸ್ಥಾಪಿಸಿ, ಗ್ರಾಮೋದ್ಧಾರದ ಪರಿಕಲ್ಪನೆಯನ್ನು ಹೊಂದಿದೆ. ಜ್ಞಾನಕ್ಕೆ ಸಮಾನವಾದದ್ದು ಬೇರೊಂದಿಲ್ಲವೆಂಬುದನ್ನು ಮನಗಂಡು, ಸಿದ್ಧಗಂಗಾ ಮಠದ ಪರಂಪರೆಯಲ್ಲಿ ಬಂದ ಸ್ವಾಮಿಗಳು ಶಿಕ್ಷಣ ಕೇಂದ್ರವನ್ನಾಗಿ ರೂಪಿಸಲು ಶ್ರಮಿಸಿದ್ದಾರೆ. ಅದರಲ್ಲಿಯೂ ದೀನದಲಿತರ, ಅನಾಥರ ರಾಷ್ಟ್ರದ ಎಲ್ಲಾ ಭಾಗದ ಎಲ್ಲಾ ಕೋಮಿನ ವಿದ್ಯಾರ್ಥಿಗಳ ವೈವಿಧ್ಯಮಯ ಶಿಕ್ಷಣಕ್ಕೆ ಸಮಾನಾವಕಾಶಗಳನ್ನು ಕಲ್ಪಿಸಿ, ಸಮಾಜೋದ್ಧಾರವನ್ನು ಶಿಕ್ಷಣದ ಮೂಲಕ ಸಾಕ್ಷರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ. ವರ್ಗ, ವರ್ಣ, ಜಾತಿ, ವಲಯ, ಭಾಷೆಗಳ ಭೇದವಿಲ್ಲದೆ ಅಕ್ಷರ ಮತ್ತು ಆಶ್ರಯ ನಿಲಯಗಳಿಗೆ ಅವಕಾಶ ಕಲ್ಪಿಸಿದ್ದು, ಅನ್ನ, ಅರಿವು ಮತ್ತು ಆಶ್ರಯಕ್ಕೆ ಮಹತ್ವ ನೀಡಿದೆ.


ಶಿಕ್ಷಣ ಶ್ರೀಮಂತರ ಕಲಿಕಾ ಕೇಂದ್ರಗಳಾಗಬಾರದು. ಅದು ಸಾಮಾನ್ಯರ ಕಲಿಕಾ ಕೇಂದ್ರಗಳಾಗಬೇಕಿದೆ ಎಂದಿದೆ. ಸೌಲಭ್ಯವಂಚಿತ ಹಳ್ಳಿಗಾಡು ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಅಕ್ಷರ–ಸಂಸ್ಕೃತಿಯ ವಿಸ್ತರಣೆಗೆ ಅಪಾರ ಕೊಡುಗೆ ನೀಡುತ್ತಿದೆ. ಜ್ಞಾನ–ವಿಜ್ಞಾನಗಳ, ಸಾಮಾಜಿಕ–ಧಾರ್ಮಿಕ ಕ್ರಾಂತಿಯನ್ನುಂಟು ಮಾಡುತ್ತಿರುವ ಕ್ಷೇತ್ರವಾಗಿದೆ. ಶಿವಕುಮಾರ ಸ್ವಾಮೀಜಿ ಕಳೆದ ೭೭ ವರ್ಷಗಳಿಂದ ಸವೆಸಿದ ಪ್ರತಿಫಲವೇ ಇಂದು ಒಟ್ಟು ೧೨೨ ಶಾಲಾ–ಕಾಲೇಜುಗಳ ಹುಟ್ಟಿಗೆ ಕಾರಣವಾಗಿವೆ.

ಅಟವಿಸ್ವಾಮಿಗಳು, ಉದ್ದಾನಶಿವಯೋಗಿಗಳು ಮತ್ತು ಮತಕೂರಿನ ನಂಜುಂಡ ಶಿವಯೋಗಿಗಳು ಅನಾಥರಿಗೆ ಅನ್ನವಿಟ್ಟು ಅನ್ನದಾಸೋಹದೊಂದಿಗೆ, ಜ್ಞಾನದಾಸೋಹವನ್ನು ಪೂರೈಸಲು ಕಾರಣಕರ್ತರಾದರು. ಇದು ತುಮಕೂರು ಜಿಲ್ಲೆಯಲ್ಲಿ ಶಿಕ್ಷಣದ ಜೊತೆಗೆ ಸಾಕ್ಷರತೆ ಪ್ರಮಾಣವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಸಂಸ್ಕೃತ ಪಾಠಶಾಲೆಯೊಂದಿಗೆ ಪ್ರಾರಂಭಿಸಿದ ಶಿಕ್ಷಣಯಜ್ಞ ಇಂದು ಪ್ರಾಥಮಿಕ, ಪ್ರೌಢಶಾಲೆಗಳು, ಪದವಿ–ಪೂರ್ವ ಕಾಲೇಜುಗಳು, ತಾಂತ್ರಿಕ ಶಿಕ್ಷಣ ಕಾಲೇಜುಗಳನ್ನು ಸ್ಥಾಪಿಸಿ, ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ. ಪ್ರಾಥಮಿಕ ಶಾಲೆಯಿಂದ ಹೊರಟ ಶಿಕ್ಷಣ ಪ್ರಭೆ ತಾಂತ್ರಿಕ ಕಾಲೇಜುಗಳವರೆಗೆ ವಿಸ್ತರಿಸಿಕೊಂಡಿದೆ. ಶಿವಕುಮಾರಸ್ವಾಮೀಜಿ ಮಠದ ಅಧ್ಯಕ್ಷರಾದ ಮೇಲೆ ಶಾಲೆಗಳ ಸಂಖ್ಯೆಯೂ ಅಧಿಕವಾಗಿರುವುದು ಈ ಕೆಳಗಿನ ಕೋಷ್ಟಕದಿಂದ ಕಂಡುಬರುತ್ತದೆ.

ಪಟ್ಟಿ ೧ : ಸಿದ್ಧಗಂಗಾ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ಒಟ್ಟು ಶಾಲಾ – ಕಾಲೇಜುಗಳು

ಕ್ರ.ಸಂ.	ಶಾಲಾ–ಕಾಲೇಜುಗಳು	೧೯೭೦	ಶೇಕಡಾವಾರು	೨೦೦೬	ಶೇಕಡಾವಾರು
೧	ತಾಂತ್ರಿಕ ಕಾಲೇಜುಗಳು	೦೧	೨.೫%	೦೩	೨.೪೫
೨	ಫಾರ್ಮಸಿ ಕಾಲೇಜುಗಳು	–	–	೦೧	೦.೮೧
೩	ನರ್ಸಿಂಗ್ ಸ್ಕೂಲ್	–	–	೦೧	೦.೮೧
೪	ಪ್ರಥಮ ದರ್ಜೆ ಕಾಲೇಜುಗಳು	೦೨	೫%	೦೪	೩.೨೭
೫	ಬಿ.ಎಡ್.ಕಾಲೇಜುಗಳು	–	–	೦೨	೧.೬೩
೬	ಶಿಕ್ಷಕ ತರಬೇತಿ ಸಂಸ್ಥೆಗಳು	೦೧	೨.೫%	೦೩	೨.೪೫
೭	ಕೈಗಾರಿಕೆ ತರಬೇತಿ ಸಂಸ್ಥೆಗಳು	೦೧	೨.೫%	೦೩	೨.೪೫
೮	ಪದವಿ–ಪೂರ್ವ ಕಾಲೇಜುಗಳು	೦೧	೨.೫%	೧೨	೯.೮೩
೯	ಪ್ರೌಢಶಾಲೆಗಳು	೨೯	೭೨.೫%	೫೪	೪೪.೨೬
೧೦	ನರ್ಸರಿ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು	೦೩	೭.೫%	೧೫	೧೨.೨೯
೧೧	ಅಂಗವಿಕಲ ಶಾಲೆಗಳು	–	–	೦೩	೨.೪೫
೧೨	ಸಂಸ್ಕೃತ ಶಾಲೆಗಳು	೨೦	೫%	೨೦	೧೬.೩೯
೧೩	ಜನಕ್ಷಣ ಸಂಸ್ಥೆಗಳು	–	–	೦೧	೦.೮೧
	ಒಟ್ಟು	೪೦	೧೦೦%	೧೨೨	೧೦೦%

ಆಧಾರ : ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫–೨೦೦೬, ಪು.೨೧–೩೪.



ಅಂಕಿ-ಅಂಶಗಳನ್ನು ಗಮನಿಸಿದಲ್ಲಿ ೧೯೭೦ ರ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಂತಹ ಸಾಧನೆಯನ್ನೇನು ಸಾಧಿಸಿಲ್ಲದಿರುವುದು ಕಂಡುಬರುತ್ತದೆ. ೧೯೭೦ ಮತ್ತು ೨೦೦೬ ರ ನಡುವಿನ ಅವಧಿಯಲ್ಲಿ ಗರಿಷ್ಠ ಮಟ್ಟದಲ್ಲಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ೧೯೭೦ ರ ಅವಧಿಯಲ್ಲಿ ಒಟ್ಟು ೪೦ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದ್ದರೆ, ೨೦೦೬-೦೭ ರ ಅವಧಿಯಲ್ಲಿ ಒಟ್ಟು ೧೨೨ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದೆ. ೧೯೭೦ ಮತ್ತು ೨೦೦೬ ರ ನಡುವಿನ ಅವಧಿಯಲ್ಲಿ ೮೨ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ, ಸಮಾಜದ ಎಲ್ಲಾ ವರ್ಗದ, ಎಲ್ಲಾ ಜಾತಿಯ ಜನರಿಗೆ ಶಿಕ್ಷಣ ದೊರಕಿಸಿಕೊಡಲು ಶ್ರಮಿಸಿದೆ. ತಾಂತ್ರಿಕ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸಿದ್ದಲ್ಲದೆ, ಸಂಸ್ಕೃತ ಶಾಲೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಆಧುನಿಕ ಶಿಕ್ಷಣಕ್ಕೆ ಆದ್ಯತೆ ನೀಡಿರುವುದಲ್ಲದೆ, ಸಾಂಪ್ರದಾಯಿಕ ಶಿಕ್ಷಣಕ್ಕೂ ಆದ್ಯತೆ ನೀಡಿದೆ. ತಾಂತ್ರಿಕ ಕಾಲೇಜುಗಳನ್ನು ಶೇ.೨.೫ ರಿಂದ ಶೇ.೨.೪೫ ಕ್ಕೆ ಹೆಚ್ಚಿಸಿದ್ದರೆ, ಸಂಸ್ಕೃತ ಶಾಲೆಗಳನ್ನು ಶೇ.೫ ರಿಂದ ಶೇ.೧೬.೩೯ ಕ್ಕೆ ಹೆಚ್ಚಿಸಿದೆ. ಪ್ರೌಢಶಾಲೆಗಳು ೧೯೭೦ ರ ಅವಧಿಯಲ್ಲಿ ೨೯ ಇದ್ದು, ೨೦೦೬ ರ ಅವಧಿಯಲ್ಲಿ ೫೫ ಕ್ಕೇರಿದೆ.

ಮಠ ಜಾಗತೀಕರಣದ ಸಮಯದಲ್ಲಿಯೂ ಸಂಸ್ಕೃತ ಭಾಷೆಯನ್ನು ಪ್ರೋತ್ಸಾಹಿಸುತ್ತಾ, ತನ್ನ ಹಾಗೂ ಸಮಾಜದ ಉನ್ನತೀಕರಣಕ್ಕೆ ಆದ್ಯತೆ ನೀಡಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಶಾಲೆಗಳನ್ನು ಸ್ಥಾಪಿಸಿದೆ. ೨೦೦೬-೨೦೦೭ ರ ಅವಧಿಯಲ್ಲಿ ಒಟ್ಟು ೧೨೨ ಶಾಲಾ-ಕಾಲೇಜುಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಾಪಿಸಿದೆ. ೩ ತಾಂತ್ರಿಕ ಕಾಲೇಜುಗಳು, ೧ ಫಾರ್ಮಸಿ ಕಾಲೇಜು, ೧ ನರ್ಸಿಂಗ್ ಕಾಲೇಜು, ೦೪ ಪ್ರಥಮ ದರ್ಜೆ ಕಾಲೇಜುಗಳು, ೨ ಶಿಕ್ಷಣ ಕಾಲೇಜುಗಳು, ೧ ಜನ ಶಿಕ್ಷಣ ಸಂಸ್ಥೆಗಳು, ೦೩ ಕೈಗಾರಿಕಾ ತರಬೇತಿ ಸಂಸ್ಥೆಗಳು, ೧೨ ಪದವಿ-ಪೂರ್ವ ಕಾಲೇಜುಗಳು, ೫೪ ಪ್ರೌಢಶಾಲೆಗಳು, ೧೫ ನರ್ಸರಿ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು, ೦೩ ಅಂಗವಿಕಲ ಸಂಸ್ಥೆಗಳು ಮತ್ತು ೨೦ ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳಿವೆ. ಇದರಲ್ಲಿ ೦೬ ಅನುದಾನಿತ ಶಾಲಾ-ಕಾಲೇಜುಗಳಿದ್ದು, ೩೬ ಅನುದಾನರಹಿತ ಶಾಲಾ-ಕಾಲೇಜುಗಳಿವೆ. ಇದರಲ್ಲಿ ೭೨ ಶಾಲಾ ಕಾಲೇಜುಗಳನ್ನು ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲಾಗಿದ್ದು, ಕೇವಲ ೫೦ ಶಾಲಾ-ಕಾಲೇಜುಗಳನ್ನು ಹೊರ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ೧೨೨ ಶಾಲಾ-ಕಾಲೇಜುಗಳಲ್ಲಿ ೪೭ ಕಾಲೇಜುಗಳು ನಗರ ಪ್ರದೇಶದಲ್ಲಿದ್ದು, ೭೫ ಶಾಲಾ-ಕಾಲೇಜುಗಳು ಗ್ರಾಮೀಣ ಪ್ರದೇಶದಲ್ಲಿದೆ. ೭೨ ತುಮಕೂರು ಶಾಲಾ-ಕಾಲೇಜುಗಳಲ್ಲಿ ೩೮ ಶಾಲಾ-ಕಾಲೇಜುಗಳು ನಗರ ಪ್ರದೇಶದಲ್ಲಿದ್ದು, ೩೪ ಶಾಲಾ-ಕಾಲೇಜುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿದೆ. ೧೨೨ ಶಾಲಾ-ಕಾಲೇಜುಗಳಲ್ಲಿ, ೧೧ ಶಾಲಾ-ಕಾಲೇಜುಗಳನ್ನು ಸಿದ್ಧಗಂಗಾ ಮಠದಲ್ಲಿಯೇ ಸ್ಥಾಪಿಸಲಾಗಿದೆ (ಶ್ರೀ ಸಿದ್ಧಗಂಗಾ ಮಠದ ಮಾಹಿತಿಯಿಂದ, ೨೦೦೬-೦೭).

ಶ್ರೀ ಸಿದ್ಧಗಂಗಾ ಮಠದ ಶಿಕ್ಷಣ ಪ್ರಭೆ ಪ್ರಾರಂಭವಾದದ್ದು ಸಂಸ್ಕೃತ ಶಾಲೆಗಳನ್ನು ಪ್ರಾರಂಭಿಸಿದುದರಿಂದ ಅಂದರೆ ೧೯೧೭ ರಿಂದ 'ಶಿಕ್ಷಣ ದಾಸೋಹ' ನಡೆಯುತ್ತಿದೆ. ಹೊಂದಿಕೊಂಡಂತೆ ಉಚಿತ ಹಾಸ್ಟೆಲ್ ವ್ಯವಸ್ಥೆಯು ಇದೆ. ೧೯೪೪ ರಲ್ಲಿ ತುಮಕೂರು ನಗರದಲ್ಲಿ ಖಾಸಗಿ ಪ್ರೌಢಶಾಲೆಗಳಲ್ಲಿ ಪ್ರಥಮ ಮತ್ತು ಜಿಲ್ಲೆಗೆ ಎರಡನೇ ಪ್ರೌಢಶಾಲೆಯನ್ನು ಮಠ ಸ್ಥಾಪಿಸಿದ್ದು ಚರಿತ್ರಾರ್ಹವಾದದ್ದು. ೧೯೬೩ ರಲ್ಲಿ ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯವನ್ನು ತುಮಕೂರಿನಲ್ಲಿಯೇ ಪ್ರಾರಂಭಿಸಿತು.

ಅ. ಸಂಸ್ಕೃತ ಕಾಲೇಜು ಮತ್ತು ಮಹಾ ಪಾಠಶಾಲೆಗಳು

ಅಟವೀ ಸ್ವಾಮಿಗಳು ಸಿದ್ಧಗಂಗಾ ಮಠದ ಮೇಲಣಗವಿಯಲ್ಲಿ ಮೈದಾಳದ (ಮಠಕೂರು) ನಂಜುಂಡಸ್ವಾಮಿಗಳಿಂದ ಸಂಸ್ಕೃತಾಭ್ಯಾಸವನ್ನು ೧೯ ನೇ ಶತಮಾನದ ಉತ್ತರಾರ್ಧದಲ್ಲಿಯೇ ಮೊಟ್ಟ ಮೊದಲು ಪ್ರಾರಂಭಿಸಿದ್ದು. ಆನಂತರ ಉದ್ದಾನಶಿವಯೋಗಿಗಳು ಅಧಿಕೃತವಾಗಿ ೧೯೧೭ ರಲ್ಲಿ ಸಂಸ್ಕೃತ

ಶಾಲೆಯನ್ನು ಪ್ರಾರಂಭಿಸಿದಾಗ ೨೦ ಮಂದಿ ವಿದ್ಯಾರ್ಥಿಗಳಿದ್ದರು. ಒಬ್ಬ ಉಪಾಧ್ಯಾಯರಿದ್ದರು. ಈ ಶಾಲೆಯು ೧೯೩೭ ರಲ್ಲಿ ಸಂಸ್ಕೃತ ಕಾಲೇಜಾಗಿ ಪರಿವರ್ತನೆಯಾಯಿತು. ಒಟ್ಟು ೨೦ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳನ್ನು ಸ್ಥಾಪಿಸಲಾಗಿದೆ. ೧೦ ಸಂಸ್ಕೃತ ಪಾಠಶಾಲೆಗಳು ತುಮಕೂರು ಜಿಲ್ಲೆಯಲ್ಲಿದ್ದು, ಉಳಿದ ೧೦ ಸಂಸ್ಕೃತ ಪಾಠಶಾಲೆಗಳು ಇತರೆ ಜಿಲ್ಲೆಗಳಲ್ಲಿ ಹರಡಿವೆ. ತುಮಕೂರು ಜಿಲ್ಲೆಯ ೧೦ ಸಂಸ್ಕೃತ ಪಾಠಶಾಲೆಗಳಲ್ಲಿ ಸಿದ್ಧಗಂಗಾ ಮಠದಲ್ಲಿಯೇ ಎರಡು ಶಾಲೆಗಳಿದ್ದು, ಒಂದು ತುಮಕೂರು ನಗರದಲ್ಲಿರುವ ಪ್ರೌಢಶಾಲೆಯಲ್ಲಿ ಸ್ಥಾಪಿಸಲಾಗಿದೆ. ಹಾಗಾಗಿ ೩ ಸಂಸ್ಕೃತ ಶಾಲೆಗಳು ತುಮಕೂರಿನಲ್ಲಿದ್ದು, ೭ ಸಂಸ್ಕೃತ ಶಾಲೆಗಳು ತುಮಕೂರು ಜಿಲ್ಲೆಯ ಇತರೆ ತಾಲ್ಲೋಕುಗಳಲ್ಲಿ ಸ್ಥಾಪಿಸಲಾಗಿದೆ. ತುಮಕೂರು ಜಿಲ್ಲೆಯಾದ್ಯಂತ ಇರುವ ೧೦ ಶಾಲೆಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೭೭೭೮. ಈ ಒಟ್ಟು ಸಂಖ್ಯೆಯಲ್ಲಿ ೬೧೦೫ ವಿದ್ಯಾರ್ಥಿಗಳು ಸಿದ್ಧಗಂಗಾ ಮಠದಲ್ಲಿಯೇ ಇದ್ದಾರೆ. ಒಟ್ಟು ೬೮ ಬೋಧಕರಿದ್ದು, ೦೬ ಜನ ಬೋಧಕೇತರಿದ್ದಾರೆ (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬ ಪು.೬೯-೭೧).

ಆ. ಸಿದ್ಧಗಂಗಾ ಪ್ರೌಢಶಾಲೆ, ತುಮಕೂರು

ಸಿದ್ಧಗಂಗಾ ಮಠ ಸಂಸ್ಕೃತ ಕಾಲೇಜಿನ ನಂತರ, ತನ್ನ ಶಿಕ್ಷಣ ದಾಸೋಹವನ್ನು, ಪ್ರೌಢಶಾಲೆಗಳ ಕಡೆ ಹರಿಸಿತು. ಜಿಲ್ಲಾ ಕೇಂದ್ರವಾದ ತುಮಕೂರಿನಲ್ಲಿ ಒಂದೇ ಒಂದು ಸರ್ಕಾರಿ ಪ್ರೌಢಶಾಲೆ (**ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆ**) ೧೯೪೩ ರಲ್ಲಿತ್ತು. ಮಕ್ಕಳ ಸಂಖ್ಯೆ ಅಧಿಕವಾಗಿ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಅನಾನುಕೂಲವಿದ್ದ ಸಂದರ್ಭವದು. ೧೯೪೪ ರಲ್ಲಿ ಶಿವಕುಮಾರ ಸ್ವಾಮೀಜಿ ಸಮಸ್ಯೆಯನ್ನು ಮನಗಂಡು ಮೊದಲು ಬಾಡಿಗೆ ಕಟ್ಟಡದಲ್ಲಿ ಪ್ರೌಢಶಾಲೆಯೊಂದನ್ನು ಪ್ರಾರಂಭಿಸಿದರು. ಕೇವಲ ಎರಡು ವರ್ಷಗಳಲ್ಲೇ ಸ್ವಂತ ಕಟ್ಟಡ ನಿರ್ಮಾಣವಾಗಿ, ನೂತನ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿತು. ಅದೇ ಶಾಲೆಯೇ ಈಗ "ಶ್ರೀ ಸಿದ್ಧಗಂಗಾ ಪ್ರೌಢಶಾಲೆ' ಎಂದು ನಾಮಾಂಕಿತ ಹೊಂದಿದೆ. ಇಂದು ಇದೇ ಕಟ್ಟಡದಲ್ಲಿ ಸಿದ್ಧಗಂಗಾ ಪದವಿ-ಪೂರ್ವ ಕಾಲೇಜು ನಡೆಯುತ್ತಿದೆ (ಸಿದ್ಧಗಂಗಾಶ್ರೀ, ೧೯೮೧, ಪು.೨೭೮). ತದನಂತರ ೧೯೫೫ ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆಯನ್ನು ಶ್ರೀ ಸಿದ್ಧಗಂಗಾ ಮಠದಲ್ಲಿಯೇ ಸ್ಥಾಪಿಸಲಾಯಿತು. ಕೇವಲ ನಗರ ಪ್ರದೇಶಗಳಲ್ಲಿಯೇ ಪ್ರೌಢಶಾಲೆಯನ್ನು ತೆರೆಯದೆ, ೧೯೬೨ ರಲ್ಲಿ ತುಮಕೂರು ಜಿಲ್ಲೆಯ, ಗುಬ್ಬಿ ತಾಲ್ಲೋಕಿನ ನಿಟ್ಟೂರು ಹೋಬಳಿಯಲ್ಲಿ ಶ್ರೀ ವಿನಾಯಕ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಮಠ ಇಂದು ಒಟ್ಟು ೫೪ ಪ್ರೌಢಶಾಲೆಗಳನ್ನು ರಾಜ್ಯಾದ್ಯಂತ ಸ್ಥಾಪಿಸಿದೆ.

ಇ. ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ ತುಮಕೂರು

೧೯೬೦ ರ ಹಿಂದಿನ ವರ್ಷಗಳಲ್ಲಿ ಇಂಜಿನೀಯರಿಂಗ್ ವಿದ್ಯಾಭ್ಯಾಸ ಕೇವಲ ಹೆಚ್ಚು ಅಂಕಗಳನ್ನು ಗಳಿಸಿದ ಕೆಲವೇ ವಿದ್ಯಾರ್ಥಿಗಳ ಪಾಲಿಗೆ ಹಾಗೂ ಶ್ರೀಮಂತರಿಗೆ ಮೀಸಲಾಗಿತ್ತು. ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಿದ್ದರು. ಗ್ರಾಮೀಣ ವಿದ್ಯಾರ್ಥಿಗಳು ನಗರ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಿ ತಾಂತ್ರಿಕ ಶಿಕ್ಷಣ ಪಡೆಯುವುದು ಸುಲಭ-ಸಾಧ್ಯವಾಗಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ಮನಗಂಡು ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ ಶಿವಕುಮಾರ ಸ್ವಾಮೀಜಿ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸಿದರು. ಇದಕ್ಕಾಗಿ ತುಮಕೂರಿನ ಪ್ರಮುಖ ವಾಣಿಜ್ಯೋದ್ಯಮಿಗಳು, ಪ್ರತಿಷ್ಠಿತ ನಾಗರೀಕರು ಸುತ್ತಮುತ್ತಣ ಗ್ರಾಮಾಂತರ ಪ್ರದೇಶದ ದಾನಿಗಳು ತಮ್ಮ ಸಹಕಾರ-ಸಹಾಯಗಳನ್ನು ಅನೇಕ ಬಗೆಯಲ್ಲಿ ಉದಾರವಾಗಿ ಕೊಡಲು ಮುಂದೆ ಬಂದರು. ಇದರ ಪರಿಣಾಮವಾಗಿ ೧೯೬೩ ಜೂನ್ ೧೯ ರಂದು "ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ತುಮಕೂರು ನಗರದಲ್ಲಿ ಅಸ್ತಿತ್ವಕ್ಕೆ ಬಂದಿತು. ಜಿ.ಎಂ. ಸಿದ್ದರಾಮಣ್ಣ, ಟಿ.ಎನ್ ಕೆಂಪಹೊನ್ನಯ್ಯ, ಎಂ.ವಿ. ಶಿವಪ್ಪ, ಕೆ. ಪಾರ್ಶ್ವನಾಥ್, ಜಿ.ಟಿ. ಮಲ್ಲಿಕಾರ್ಜುನಯ್ಯ, ಸಿದ್ಧಬಸವಯ್ಯ, ರೇವಣಾರಾಧ್ಯ, ಟಿ.ಸಿ. ನಂಜುಂಡಯ್ಯ, ಟಿ.ಅನಂತರಾಮಶೆಟ್ಟಿ, ಮರಿಸ್ವಾಮಪ್ಪ......ಇವರುಗಳ ಉದಾರವಾದ ಕೊಡುಗೆಯಿಂದಾಗಿ ಇಂದು ತಾಂತ್ರಿಕ ಕಾಲೇಜು ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲು ಕಾರಣವಾಗಿದೆ. ಈ ಸಂಸ್ಥೆಗೆ ಸುಮಾರು ೪೫ ಎಕರೆಗಳಷ್ಟು ಭೂಮಿಯನ್ನು ಎಂ.ವಿ. ಶಿವಪ್ಪನವರು ದಾನ ಮಾಡಿದ್ದಾರೆ (ಸಿದ್ಧಗಂಗಾಶ್ರೀ, ೧೯೮೧, ಪು.೩೦೧-೩೦೨). ಇಂದು ೩,೪೬,೦೮೬ ಚದರ ಅಡಿ ಭೂಮಿಯಿದ್ದು, ೮ ಎಕರೆಗಳಷ್ಟು ಆಟದ ಮೈದಾನವಿದ್ದು, ೪,೫೧,೧೪೫ ಚದರ ಅಡಿಯಷ್ಟು ಕಟ್ಟಡವಿದ್ದು, ಒಟ್ಟು ಮೌಲ್ಯ ೫೦,೯೮೬,೯೯ ರೂ.ಗಳಷ್ಟಿದೆ. (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೪೩).

೧೯೪೪ ರಲ್ಲಿ ಪ್ರಾರಂಭವಾದ ಶ್ರಿ ಸಿದ್ಧಗಂಗಾ ಪ್ರೌಢಶಾಲೆಯಲ್ಲಿ ತಾಂತ್ರಿಕ ಕಾಲೇಜನ್ನು ಸ್ಥಾಪಿಸಲಾಯಿತು. ೧೨೩ ಜನ ವಿದ್ಯಾರ್ಥಿಗಳು ಮತ್ತು ೬ ಜನ ಉಪಾಧ್ಯಾಯ ವರ್ಗದಿಂದ ಪ್ರಾರಂಭವಾದ ತಾಂತ್ರಿಕ ಕಾಲೇಜು ಇಂದು ಕಾಲೇಜಿಗೆ ಬೇಕಾದ ಸಕಲ-ಸಲಕರಣೆಗಳೊಂದಿಗೆ ಭವ್ಯವಾಗಿ ಪ್ರಗತಿ ಹೊಂದುತ್ತಾ ಸಾಗಿದೆ. ಈ ತಾಂತ್ರಿಕ ಸಂಸ್ಥೆಯು ಪ್ರಾರಂಭದಲ್ಲಿ ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೆಕಾನಿಕಲ್ ವಿಭಾಗಗಳಿಂದ ಪ್ರಾರಂಭವಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೩೦೩). ಆದರೆ ಇಂದು

೧೧ ವಿಭಾಗಗಳಲ್ಲಿ ಪದವಿ ಕೋರ್ಸ್‌ಗಳನ್ನು ಹೊಂದಿದ್ದು, ೪ ವಿಭಾಗಗಳನ್ನು ಸ್ನಾತಕೋತ್ತರ ವಿಭಾಗದಲ್ಲಿ ಹೊಂದಿದೆ (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೩೬).

ಈ. ಶ್ರೀ ಸಿದ್ಧಗಂಗಾ ವಿಜ್ಞಾನ ಕಲಾ ಮತ್ತು ವಾಣಿಜ್ಯ ಕಾಲೇಜು

ಶ್ರೀ ಸಿದ್ಧಗಂಗಾ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು ೧೯೬೬ ರಲ್ಲಿ ಹೆಣ್ಣು ಮಕ್ಕಳಿಗಾಗಿ ತುಮಕೂರು ನಗರದಲ್ಲಿ ಪ್ರಾರಂಭಿಸಲಾಯಿತು. ಆದರೆ ಅನಿವಾರ್ಯ ಮತ್ತು ಅಗತ್ಯ ಕಾರಣಗಳಿಂದಾಗಿ ಬಾಲಕರನ್ನು ಸೇರಿಸಿಕೊಳ್ಳಬೇಕಾಗಿ ಬಂದಿತು. ಸಹ ಶಿಕ್ಷಣದ ಕಾಲೇಜಾಗಿಯೇ ಪ್ರಾರಂಭವಾಯಿತು. ಈ ಕಾಲೇಜು ಪ್ರಾರಂಭದಲ್ಲಿ ಪದವಿ-ಪೂರ್ವ ಕಾಲೇಜಾಗಿದ್ದು, ಡಾ.ಟಿ.ತಿಪ್ಪೇಸ್ವಾಮಿಯವರನ್ನು ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಿಸಿದ ನಂತರ, ಇವರ ಪರಿಶ್ರಮದಿಂದ ಪದವಿ-ಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜಾಯಿತು. ೧೯೬೭ ರಲ್ಲಿ ಬಿ.ಎಸ್.ಸಿ. ಪದವಿ ತರಗತಿಗಳನ್ನು ಪ್ರಾರಂಭಿಸಲಾಯಿತು. ೧೯೬೮ ರಲ್ಲಿ ಬಿ.ಎ. ಪದವಿ ತರಗತಿಗಳನ್ನು, ೧೯೭೦ ರಲ್ಲಿ ಬಿ.ಕಾಂ. ಪದವಿ ತರಗತಿಗಳನ್ನು ಪ್ರಾರಂಭಿಸಲಾಯಿತು. ಜಿ.ಯು.ಸಿದ್ಧರಾಮಣ್ಣ, ಕೆಂಪಹೊನ್ನಯ್ಯ, ಸಾಮಿಲ್ ಶಿವಣ್ಣ, ಎ.ಕೆ. ಪಾರ್ಶ್ವನಾಥ್, ಚಿಕ್ಕಣ್ಣಯ್ಯಪ್ಪ, ಎಸ್.ಶಿವಪ್ಪ, ಕರಕರೆಡ್ಡಿ ಪ್ರಮುಖವಾಗಿ ಈ ಕಾಲೇಜಿನ ಅಭ್ಯುದಯಕ್ಕೆ ಶ್ರಮಿಸಿದ್ದಾರೆ. (ಸಿದ್ಧಗಂಗಾಶ್ರೀ, ೧೯೮೧, ಪು.೨೯೮-೯೯), ೧೯೮೨ ರಲ್ಲಿ ಕಾಲೇಜನ್ನು ವಿಭಜಿಸಿ ಬಾಲಕರಿಗೆ ಪ್ರತ್ಯೇಕ ಮತ್ತು ಮಹಿಳೆಯರಿಗೆ ಪ್ರತ್ಯೇಕವೆಂದು ವಿಭಜಿಸಲಾಯಿತು (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೬೧).

ಮಠ ಕಣ್ಣಿದ್ದವರಿಗಷ್ಟೇ ತನ್ನ ಶಿಕ್ಷಣ ಕ್ಷೇತ್ರವನ್ನು ವಿಸ್ತರಿಸದೆ, ಅಂಧರಿಗೂ ಶಿಕ್ಷಣ ನೀಡಲು ಮುಂದೆ ಬಂದಿತು. ದೃಷ್ಟಿಹೀನರಿಗೆ ಶಿಕ್ಷಣವನ್ನು ಕಲ್ಪಿಸಲು ಶಿವಕುಮಾರಸ್ವಾಮೀಜಿ ಕರ್ನಾಟಕ ಅಂಧರ ಕಲ್ಯಾಣ ಸಂಘದ ತಜ್ಞರೊಡನೆ ಸಮಾಲೋಚಿಸಿದರು. ಅವರ ಸಲಹೆಯಂತೆ ದಿನಾಂಕ ೧-೦೮-೧೯೭೮ ರಂದು ಶ್ರೀ ಕ್ಷೇತ್ರದಲ್ಲಿಯೇ ಅಂಧಮಕ್ಕಳ ಶಾಲೆಯನ್ನು ಪ್ರಾರಂಭಿಸಲಾಯಿತು. ೨೦೦೬ ರ ಪ್ರಕಾರ ಮೂರು ಶಾಲೆಗಳು ಅಂಧಮಕ್ಕಳ ಶಾಲೆಗಳಾಗಿದ್ದು, ಈ ಮೂರು ಶಾಲೆಗಳು ತುಮಕೂರು ಜಿಲ್ಲೆಯಲ್ಲಿದೆ. ಪ್ರಾರಂಭದಲ್ಲಿ ಒಬ್ಬರು ಉಪಾಧ್ಯಾಯರು ಮತ್ತು ಇಬ್ಬರು ವಿದ್ಯಾರ್ಥಿಗಳಿಂದ ಆರಂಭವಾದ, ಈ ಶಾಲೆಯಲ್ಲಿಂದು ೨೦೯ ವಿದ್ಯಾರ್ಥಿಗಳು, ೧೭ ಉಪಾಧ್ಯಾಯರು ಮತ್ತು ೦೯ ಅಧ್ಯಾಪಕೇತರರು ಕಾರ್ಯನಿರ್ವಹಿಸುತ್ತಿದ್ದಾರೆ (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೬-೦೭. ಪು. ೬೯).

ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಡಿಯಲ್ಲಿ ೧೯೯೩-೯೪ ರಲ್ಲಿ ಜನಶಿಕ್ಷಣ ಸಂಸ್ಥೆಯನ್ನು ಜಿಲ್ಲಾಧಿಕಾರಿಯವರ ನೇತೃತ್ವದಡಿಯಲ್ಲಿ ಸ್ಥಾಪಿಸಲಾಯಿತು. ಆದರೆ ಜನವರಿ ೧೭, ೨೦೦೩ ರಲ್ಲಿ ಸಿದ್ಧಗಂಗಾ ಮಠ ತನ್ನ ಆಡಳಿತಕ್ಕೆ ಪಡೆಯಿತು. ಇದರ ಮುಖ್ಯ ಉದ್ದೇಶ ಮಕ್ಕಳಿಗೆ ತಾಂತ್ರಿಕ ಜ್ಞಾನ ಮತ್ತು ಪರಿಣಿತಿಯನ್ನು ನೀಡುವುದಲ್ಲದೆ, ತರಬೇತುದಾರರಿಗೂ ತರಬೇತಿಯನ್ನು ನೀಡುವುದಾಗಿದೆ. ೨೦೦೩-೦೪ ರಲ್ಲಿ ಒಟ್ಟು ೧೬೭ ಗುಂಪುಗಳಿಂದ, ಒಟ್ಟು ೩೩೭೮ ಜನರಿಗೆ ತರಬೇತಿಯನ್ನು ನೀಡಿದ್ದು ಸದ್ಯಕ್ಕೆ ಸರ್ಕಾರಿ ಕಟ್ಟಡದಲ್ಲಿ ನಡೆಸಲಾಗುತ್ತಿದೆ (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೪-೦೫, ಪು.೬೨).


೪.೧ ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ

ಸಿದ್ಧಗಂಗಾಮಠದ ಶಾಲೆಗಳ ಸಂಖ್ಯೆಯೂ ಹೆಚ್ಚಾದಂತೆ, ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ೨೦೦೧-೦೨ರ ಅವಧಿಯಲ್ಲಿ ಒಟ್ಟು ೧೨೧ ಶಾಲಾ-ಕಾಲೇಜುಗಳಿದ್ದು, ಒಟ್ಟು ೪೪೩೭೩ ವಿದ್ಯಾರ್ಥಿಗಳಿರುವರು. ಮಠ ತಾಂತ್ರಿಕ ಕಾಲೇಜು, ಶಿಕ್ಷಣ ತರಬೇತಿ ಸಂಸ್ಥೆಗಳು, ಪದವಿ-ಪೂರ್ವ ಕಾಲೇಜುಗಳು..........ಇತ್ಯಾದಿ ಕಾಲೇಜುಗಳನ್ನು ಸ್ಥಾಪಿಸಿದ್ದರೂ, ಪ್ರೌಢಶಾಲೆಗಳ ಸ್ಥಾಪನೆಗೆ ಹೆಚ್ಚು ಆದ್ಯತೆ ನೀಡಿದೆ. ಒಟ್ಟು ೫೪ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಈ ಅವಧಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೮೯೨೧, ಅಂದರೆ ಶೇ. ೪೨.೬೪ ರಷ್ಟು. ಹೀಗೆ ಸಿದ್ಧಗಂಗಾ ಮಠ ತಾಂತ್ರಿಕ ಕಾಲೇಜುಗಳನ್ನೂ ಸ್ಥಾಪಿಸಿತು, ಸಾಂಪ್ರದಾಯಿಕ ಶಿಕ್ಷಣವನ್ನೂ ಪ್ರೋತ್ಸಾಹಿಸಿತು. ಒಟ್ಟು ೨೨ ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳನ್ನು ಸ್ಥಾಪಿಸಿದ್ದು, ಒಟ್ಟು ೭೪೭೪ ವಿದ್ಯಾರ್ಥಿಗಳಿದ್ದು, ಶೇ.೧೬.೮೪ ರಷ್ಟಿದ್ದಾರೆ. ೨೦೦೫-೦೬ ರ ಅವಧಿಯಲ್ಲಿ ಒಟ್ಟು ಶಾಲೆಗಳನ್ನು ಪರಿಗಣಿಸಿದರೆ ಒಂದು ಶಾಲೆ ಮಾತ್ರ ಅಧಿಕವಾಗಿದ್ದು, ಒಟ್ಟು ೧೨೨ ಶಾಲಾ-ಕಾಲೇಜುಗಳಿವೆ. ಪ್ರೌಢಶಾಲೆಗಳತ್ತ ಗಮನ ಹರಿಸಿದರೆ, ೨೦೦೧-೦೨ ರಿಂದ ೨೦೦೫-೦೬ ಕ್ಕೆ ಹೋಲಿಸಿದರೆ ಪ್ರೌಢಶಾಲೆಗಳ ಸಂಖ್ಯೆಯು ೫೫ ರಿಂದ ೫೪ ಕ್ಕೆ ಇಳಿದಿದ್ದು ವಿದ್ಯಾರ್ಥಿಗಳ ಸಂಖ್ಯೆಯೂ ೧೮೯೨೧ ರಿಂದ ೧೭೫೬೮ ಕ್ಕೆ ಇಳಿದಿದ್ದು,ಅಂದರೆ ಶೇ.೪೨.೬೪ ರಿಂದ ಶೇ.೩೮.೪೦ ಕ್ಕೆ ಇಳಿಯಿತು. ಸುಮಾರು ಶೇ.೪ ರಷ್ಟು ಕಡಿಮೆಯಾಗಿದೆ. ಆದರೆ ಸಂಸ್ಕೃತ ಕಾಲೇಜುಗಳ ಮತ್ತು ಪಾಠಶಾಲೆಗಳ ಸಂಖ್ಯೆ ೨೨ ರಿಂದ ೨೦ ಕ್ಕೆ ಇಳಿದಿದ್ದರೂ, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಶೇ.೧೬.೮೪ ರಿಂದ ಶೇ.೧೭.೦೦ ಕ್ಕೆ ಅಧಿಕವಾಗಿದೆ. ಆದರೆ ಮಠ ಕೇವಲ ಶಾಲೆಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳನ್ನು ಮಾತ್ರ ಹೆಚ್ಚಿಸದೆ, ಉದ್ಯೋಗಗಳನ್ನು ಸೃಷ್ಟಿಸಿದೆ. ಈ ಕೆಳಕಂಡ ಪಟ್ಟಿಯಲ್ಲಿ ಅಂಕಿ-ಅಂಶಗಳ ಮೂಲಕ ಶಾಲೆಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳನ್ನು ತೋರಿಸಲಾಗಿದೆ.

ಪಟ್ಟಿ ೨ : ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ

ಕ್ರ.ಸಂ.	ಒಟ್ಟು ಶಾಲೆಗಳು	೨೦೦೧-೦೨		೨೦೦೫-೦೬	
		ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ.	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ.
೧.	ಶ್ರೀ ಸಿದ್ಧಗಂಗಾ ತಾಂತ್ರಿಕ ಕಾಲೇಜುಗಳು	೦೩	೩೬೬೯ ೮.೨೬%	೦೩	೪೧೨೨ ೯.೦೧%
೨.	ಶ್ರೀ ಸಿದ್ಧಗಂಗಾ ಫಾರ್ಮಸಿ ಕಾಲೇಜು	೦೧	೩೧೫ ೦.೭೦%	೦೧	೩೨೫ ೦.೭೭%
೩.	ಶ್ರೀ ಸಿದ್ಧಗಂಗಾ ನರ್ಸಿಂಗ್ ಕಾಲೇಜು	೦೧	೧೨೩ ೦.೨೭%	೦೧	೩೫೮ ೦.೭೮%
೪.	ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜುಗಳು	೦೪	೩೦೬೭ ೬.೯೧%	೦೪	೩೬೯೩ ೮.೦೭%
೫.	ಶಿಕ್ಷಣ ಕಾಲೇಜುಗಳು	೦೧	೯೭ ೦.೨೧%	೦೨	೧೫೦ ೦.೩೨%
೬.	ಜನಶಿಕ್ಷಣ ಸಂಸ್ಥೆಗಳು	–	–	೦೧	–
೭.	ಶಿಕ್ಷಣ ತರಬೇತಿ ಸಂಸ್ಥೆಗಳು	೦೨	೩೫೯ ೦.೮೦%	೦೩	೬೪೬ ೧.೪೧%
೮.	ಕೈಗಾರಿಕಾ ತರಬೇತಿ ಸಂಸ್ಥೆಗಳು	೦೩	೨೭೯ ೦.೬೨%	೦೩	೩೪೨ ೦.೭೪%
೯.	ಪದವಿ-ಪೂರ್ವ ಕಾಲೇಜುಗಳು	೧೧	೪೪೭೪ ೧೦.೦೮%	೧೨	೪೬೧೭ ೧೦.೦೯%
೧೦.	ಪ್ರೌಢಶಾಲೆಗಳು	೫೫	೧೮೯೨೧ ೪೨.೬೪%	೫೪	೧೭೫೬೮ ೩೮.೪೦%
೧೧.	ನರ್ಸರಿ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು	೧೪	೫೪೪೬ ೧೨.೨೭	೧೫	೫೯೦೩ ೧೨.೯೦%
೧೨.	ಅಂಧಮಕ್ಕಳ ಶಾಲೆಗಳು	೦೩	೧೪೯ ೦.೩೩%	೦೩	೨೦೯ ೦.೪೫%
೧೩.	ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳು	೨೨	೭೪೭೪ ೧೬.೮೪%	೨೦	೭೭೭೮ ೧೭.೦%
೧೪.	ಶ್ರೀ ಸಿದ್ಧಲಿಂಗೇಶ್ವರ ವಾಣಿಜ್ಯ ಸಂಸ್ಥೆ	೧	–	–	–
	ಒಟ್ಟು	೧೨೧	೪೪೩೭೩ ೧೦೦%	೧೨೨	೪೫೭೩೯ ೧೦೦%

ಆಧಾರ : ಅ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೧-೦೨, ಪು.೩೮-೮೮.
ಆ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೪೪-೪೭.



೪.೨ ಸಿದ್ಧಗಂಗಾ ಮಠದ ಒಟ್ಟು ಶಾಲೆಗಳ ಉದ್ಯೋಗ ಸೃಷ್ಟಿ


೨೦೦೧-೦೨ ರ ಅವಧಿಯಲ್ಲಿ ಒಟ್ಟು ೨೨೩೦ ಜನ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯಲ್ಲಿ ನಿಯುಕ್ತಿಗೊಂಡಿದ್ದಾರೆ. ಇದರಲ್ಲಿ ೧೪೪೨ ಮತ್ತು ೭೮೮ ಜನ ಬೋಧಕ ಮತ್ತು ಬೋಧಕೇತರರಾಗಿ ಉದ್ಯೋಗಸ್ಥರಾಗಿದ್ದಾರೆ. ೨೦೦೫-೦೬ ರಲ್ಲಿ ಒಟ್ಟು ೨೩೫೩ ಜನ ಉದ್ಯೋಗ ಪಡೆದಿದ್ದು, ೧೫೭೩ ಬೋಧಕರು ಮತ್ತು ೭೮೦ ರಷ್ಟು ಬೋಧಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿದ್ಧಗಂಗಾ ಮಠ, ೩ ಸಿದ್ಧಗಂಗಾ ತಾಂತ್ರಿಕ ಕಾಲೇಜುಗಳು ಮತ್ತು ೫೪ ಪ್ರೌಢಶಾಲೆಗಳಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದೆ. ೨೦೦೧-೦೨ ರ ಅವಧಿಯಲ್ಲಿ ಪ್ರೌಢಶಾಲೆಗಳಲ್ಲಿ ಉದ್ಯೋಗ ಸೃಷ್ಟಿ ಶೇ.೩೫.೮೨ ರಷ್ಟಿದ್ದು, ಶೇ.೪೦.೨೯ ರಷ್ಟು ಬೋಧಕರು ಮತ್ತು ಶೇ.೨೭.೬೬ ರಷ್ಟು ಬೋಧಕೇತರಿದ್ದಾರೆ ೨೦೦೬-೦೭ ರ ಅವಧಿಯಲ್ಲಿ ಪ್ರೌಢಶಾಲೆಗಳಲ್ಲಿ ಉದ್ಯೋಗ ಪ್ರಮಾಣ ಕಡಿಮೆಯಾಗಿದೆ. ಶೇ.೩೦.೫೫ ರಷ್ಟು ಒಟ್ಟು ಉದ್ಯೋಗ ಸೃಷ್ಟಿಯಾಗಿದ್ದು, ಶೇ.೩೩.೫೬ ರಷ್ಟು ಬೋಧಕರು ಮತ್ತು ಶೇ.೨೪.೪೮ ರಷ್ಟು ಬೋಧಕೇತರರಿದ್ದಾರೆ. ಈ ಕೆಳಕಂಡ ಪಟ್ಟಿಯಲ್ಲಿ ಬೋಧಕ ಮತ್ತು ಬೋಧಕೇತರ ಉದ್ಯೋಗ ಪ್ರಮಾಣವನ್ನು ನಮೂದಿಸಲಾಗಿದೆ.



ಪಟ್ಟಿ ೩ : ಸಿದ್ಧಗಂಗಾ ಮಠ ಶಾಲೆಗಳ ಉದ್ಯೋಗ ಸೃಷ್ಟಿ : ೨೦೦೧-೦೨ ಮತ್ತು ೨೦೦೫-೦೬

ಕ್ರ ಸಂ	ಶಾಲಾ-ಕಾಲೇಜುಗಳ ಹೆಸರು	೨೦೦೧-೦೨			೨೦೦೫-೦೬		
		ಭೋಧಕ	ಬೋಧ ಕೇತರರು	ಒಟ್ಟು	ಬೋಧಕ	ಬೋಧ ಕೇತರರು	ಒಟ್ಟು
೧.	ಶ್ರೀ ಸಿದ್ಧಗಂಗಾ ತಾಂತ್ರಿಕ ಕಾಲೇಜುಗಳು	೨೨೯ ೧೫.೮೮%	೨೫೦ ೨೧.೪೭%	೪೭೯ ೨೧.೪೭%	೨೮೫ ೧೮.೧೧%	೨೭೨ ೩೪.೮೭%	೫೫೭ ೨೩.೬೭%
೨.	ಸಿದ್ಧಗಂಗಾಫಾರ್ಮಸಿ ಕಾಲೇಜು	೨೦ ೧.೩೮%	೩೦ ೩.೮೦%	೫೦ ೨.೨೪%	೧೯ ೧.೨೦%	೩೩ ೪.೨೩%	೫೨ ೨.೨೦%
೩.	ಶ್ರಿಸಿದ್ಧಗಂಗಾ ನರ್ಸಿಂಗ್ ಕಾಲೇಜು.	೦೫ ೦.೩೪%	೧೦ ೧.೨೬%	೧೫ ೦.೬೭%	೧೨ ೦.೭೬%	೧೦ ೧.೨೮%	೨೨ ೦.೯೩%
೪.	ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆಕಾಲೇಜುಗಳು	೧೬೮ ೧೧.೬೫	೯೨ ೧೧.೬೭%	೨೬೦ ೧೧.೬೫%	೧೪೭ ೯.೩೪%	೮೭ ೧೧.೧೫%	೨೩೪ ೯.೯೪%
೫.	ಶಿಕ್ಷಣ ಕಾಲೇಜುಗಳು	೧೩ ೦.೯೦%	೧೨ ೧.೫೨%	೨೫ ೧.೧೨%	೧೭ ೧.೦೮%	೧೩ ೧.೬೬%	೩೦ ೧.೨೭%
೬.	ಆನಶಿಕ್ಷಣ ಸಂಸ್ಥೆಗಳು	-	-	-	೧೦ ೦.೬೩%	-	೧೦ ೦.೪೨%
೭.	ಶಿಕ್ಷಣ ತರಬೇತಿ ಸಂಸ್ಥೆಗಳು	೩೧ ೨.೧೪%	೦೮ ೧.೦೧%	೩೯ ೧.೭೪%	೪೮ ೩.೦೫%	೦೮ ೧.೦೨%	೫೩ ೨.೨೫%
೮.	ಕೈಗಾರಿಕಾ ತರಬೇತಿ ಸಂಸ್ಥೆಗಳು	೨೬ ೧.೮೦%	೦೭ ೦.೮೮%	೩೩ ೧.೪೭%	೨೭ ೦.೪೪%	೧೩ ೧.೬೬%	೪೦ ೧.೬೯%
೯.	ಪದವಿ - ಪೂರ್ವ ಕಾಲೇಜುಗಳು	೧೮೨ ೧೨.೬೨%	೭೭ ೯.೭೭%	೨೫೯ ೧೧.೬೧%	೨೧೪ ೧೩.೬೦%	೮೨ ೧೦.೫೧%	೨೯೬ ೧೨.೫೭%
೧೦.	ಪ್ರೌಢಶಾಲೆಗಳು	೫೮೧ ೪೦.೨೯%	೨೧೮ ೨೭.೬೬%	೭೯೯ ೩೫.೮೨%	೫೨೮ ೩೩.೫೬%	೧೯೧ ೨೪.೪೮%	೭೧೯ ೩೦.೫೫%
೧೧.	ನರ್ಸರಿ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು	೧೧೦ ೭.೬೨%	೨೩ ೨.೯೧%	೧೩೩ ೫.೯೬%	೧೮೧ ೧೧.೫೦%	೫೬ ೭.೧೭%	೨೩೭ ೧೦.೦೭%
೧೨.	ಅಂಧಮಕ್ಕಳ ಶಾಲೆಗಳು	೧೭ ೧.೧೭%	೦೭ ೦.೮೮%	೨೪ ೧.೦೭%	೧೭ ೧.೦೮%	೦೯ ೧.೧೫%	೨೬ ೧.೧೦%
೧೩.	ಸಂಸ್ಕೃತ ಕಾಲೇಜುಗಳು	೬೦ ೪.೧೬%	೫೪ ೬.೮೫%	೧೧೪ ೫.೧೧%	೬೮ ೪.೩೨%	೦೬ ೦.೭೬%	೭೪ ೩.೧೪%
೧೪.	ಶ್ರೀ ಸಿದ್ಧಲಿಂಗೇಶ್ವರ ವಾಣಿಜ್ಯ ಸಂಸ್ಥೆ	-	-	-	-	-	-
	ಒಟ್ಟು	೧೪೪೨ ೧೦೦%	೮೮೮ ೧೦೦%	೨೨೩೦ ೧೦೦%	೧೫೭೩ ೧೦೦%	೭೮೦ ೧೦೦%	೨೩೫೩ ೧೦೦%

ಆಧಾರ : ಅ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೧-೦೨ ಪು.೩೮-೮೮.
ಆ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು. ೪೪-೭೧.



ಸಿದ್ಧಗಂಗಾ ತಾಂತ್ರಿಕ ಕಾಲೇಜುಗಳಲ್ಲಿಯೂ ಉದ್ಯೋಗ ಸೃಷ್ಟಿ ಬೃಹತ್ ಪ್ರಮಾಣದಲ್ಲಿ ಕಂಡು ಬರುತ್ತದೆ. ೨೦೦೧-೦೨ ರಲ್ಲಿ ಶೇ. ೨೧.೪೭ ರಷ್ಟು ಉದ್ಯೋಗ ಸೃಷ್ಟಿಯಾಗಿದ್ದರೆ, ೨೦೦೬-೦೭ ರಲ್ಲಿ ಶೇ. ೨೩.೬೭ ರಷ್ಟು ಉದ್ಯೋಗ ಸೃಷ್ಟಿಯಾಗಿದೆ. ೨೦೦೧-೨೦೦೨ ರಲ್ಲಿ ಶೇ.೧೫.೮೮ ರಷ್ಟು ಬೋಧಕರು ಮತ್ತು ಶೇ.೩೧.೭ ರಷ್ಟು ಬೋಧಕೇತರಿದ್ದರೆ, ೨೦೦೬-೦೭ ರಲ್ಲಿ ಕ್ರಮವಾಗಿ ಶೇ.೧೮.೧೧ ಮತ್ತು ಶೇ.೩೪.೮೭ ರಷ್ಟಿದ್ದಾರೆ. ಮೇಲ್ಕಂಡ ಅಂಕಿ-ಅಂಶಗಳನ್ನು ಗಮನಿಸಿದಾಗ ಮಠ ೫೪ ಪ್ರೌಢಶಾಲೆಗಳಿಗೆ ಕೊಡುವ ಪ್ರಾಧಾನ್ಯತೆಯನ್ನೇ ೩ ತಾಂತ್ರಿಕ ಕಾಲೇಜುಗಳಿಗೆ ನೀಡಿದೆ. ಪ್ರೌಢಶಾಲೆಗಳಲ್ಲಿ ಉದ್ಯೋಗ ಸೃಷ್ಟಿ ಪ್ರಾರಂಭದಲ್ಲಿ ಹೆಚ್ಚಾಗಿದ್ದರು ಕ್ರಮೇಣ ಕಡಿಮೆಯಾಗಿದೆ. ಅಂದರೆ ಮಠ ಜಾಗತೀಕರಣದ ಪ್ರಭಾವದಿಂದಾಗಿ, ತನ್ನ ಲಾಭದ ಕೋರ್ಸ್‌ಗಳತ್ತ ಹೆಚ್ಚು ಗಮನ ಹರಿಸುತ್ತಿದೆಯೇ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೂ ಮಠ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಪ್ರೌಢಶಾಲೆಗೆ ಮಹತ್ವ ನೀಡಿದೆ. ಮಠ ತನ್ನ ೫೪ ಪ್ರೌಢಶಾಲೆಗಳಲ್ಲಿ ೩೧ ಪ್ರೌಢಶಾಲೆಗಳನ್ನು ತುಮಕೂರು ಜಿಲ್ಲೆಯಲ್ಲಿಯೇ ಸ್ಥಾಪಿಸಿದ್ದು, ೩೧ ಪ್ರೌಢಶಾಲೆಗಳಲ್ಲಿ ೨೬ ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಕೇಂದ್ರಿತವಾಗಿದ್ದು, ೦೫ ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿವೆ. ಮಠ ಪ್ರೌಢಶಾಲೆಗಳನ್ನು ಸ್ಥಾಪಿಸುವುದರಲ್ಲಿ ಹೆಚ್ಚು ಆದ್ಯತೆ ನೀಡಿದ್ದು ಅದರಲ್ಲೂ



ಗ್ರಾಮೀಣ ಪ್ರದೇಶಗಳಲ್ಲಿಯೇ ಅಧಿಕ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಮಠದ ಪ್ರಮುಖ ಉದ್ದೇಶ, ಮಠ ಸಮಾಜಮುಖಿಯಾಗಿರಬೇಕೆಂಬುದು. ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಶಾಲೆಗಳನ್ನು ಸ್ಥಾಪಿಸಲು ಕಾರಣಗಳು.........

ಅ. ಬಡತನವೆಂಬ ವಿಷವೃತ್ತವನ್ನು ಭೇದಿಸಲು ಶಿಕ್ಷಣ ಒಂದು ಪ್ರಮುಖ ಮಾರ್ಗವೆಂಬ ಅರಿವು.

ಆ. ನಗರ ಪ್ರದೇಶಗಳಿಗೆ ಗ್ರಾಮೀಣ ಪ್ರದೇಶದವರು ಆಗಮಿಸಿ ಶಿಕ್ಷಣ ಪಡೆಯುವುದು ದುಸ್ತರವಾದದ್ದು.

ಇ. ಗ್ರಾಮೀಣ ಪ್ರದೇಶದ ಮಕ್ಕಳು ನಗರ ಪ್ರದೇಶದ ಮಕ್ಕಳಿಗೆ ಶಿಕ್ಷಣ-ಉದ್ಯೋಗ ಕ್ಷೇತ್ರಗಳಲ್ಲಿ ಪೈಪೋಟಿಯನ್ನೊಡ್ಡಲೆಂದು.

ಈ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಜನಸಂಖ್ಯೆ ಅಧಿಕವಾಗಿರುವುದು. ಹೆಚ್ಚುತ್ತಿರುವ ಜನಸಂಖ್ಯೆಗೆ ತಕ್ಕಂತೆ ಸರ್ಕಾರ ಶಿಕ್ಷಣ ಸೌಲಭ್ಯವನ್ನೊದಗಿಸಲು ಸಾಧ್ಯವಾಗಿರಲಿಲ್ಲ. ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಸಾಕ್ಷರ ಸಮಾಜ ನಿರ್ಮಾಣ ಮಾಡಲೋಸುಗ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಶಾಲೆಗಳನ್ನು ತೆರೆಯಲಾಯಿತು.

ಉ. ಗ್ರಾಮೀಣ ಪ್ರದೇಶದ ಸಾಕ್ಷರತೆಯನ್ನು ಹೆಚ್ಚಿಸುವ ಗುರಿಯನ್ನು ಮಠ ಹೊಂದಿದೆ. ಸಾಕ್ಷರತೆಯಲ್ಲಿಯೂ ಪುರುಷ ಸಾಕ್ಷರತೆಗಿಂತ ಮಹಿಳಾ ಸಾಕ್ಷರತೆ ಕಡಿಮೆಯಿದೆ. ಕರ್ನಾಟಕದಲ್ಲಿ ೧೯೮೧ ರ ಸಾಕ್ಷರತೆ ಪ್ರಕಾರ ಮಹಿಳಾ ಸಾಕ್ಷರತೆ ಶೇ. ೨೮ ರಷ್ಟಿದ್ದು (ಕರ್ನಾಟಕ ಅಂಕಿ-ಅಂಶಗಳ ನೋಟ, ೧೯೯೧-೯೨, ಪು.೬೧), ೨೦೦೧ ರ ಅವಧಿಯಲ್ಲಿ ಮಹಿಳಾ ಸಾಕ್ಷರತೆ ಶೇ.೫೭.೪೫ ರಷ್ಟಿದೆ (ಕರ್ನಾಟಕ ಅಂಕಿ-ಅಂಶಗಳ ನೋಟ, ೨೦೦೪-೦೫, ಪು.೪೦-೪೪). ಮಹಿಳಾ ಸಾಕ್ಷರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿಯು ಮಠದ ಪ್ರಯತ್ನ ಸಾಗುತ್ತಿದೆ.

ಈ ಮೇಲ್ಕಂಡ ಎಲ್ಲಾ ಕಾರಣಗಳಿಗಿಂತ ಪ್ರಮುಖವಾದದ್ದು ಗ್ರಾಮೀಣ ಪ್ರದೇಶದ ಮಕ್ಕಳು ಬಡತನದಿಂದಾಗಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂಬುದು ಶಿವಕುಮಾರಸ್ವಾಮೀಜಿಯ ಕೊರಗಾಗಿತ್ತು. ಇದಲ್ಲದೆ, ಮಠದ ಭಕ್ತರೂ ಕೂಡ, ಸ್ವಾಮೀಜಿಯವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸಲು ಮನವಿ ಮಾಡಿಕೊಳ್ಳುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದಿಂದ ವಂಚಿತರಾಗುತ್ತಿದ್ದ, ಬಡ ರೈತರು, ಕೂಲಿ-ಕಾರ್ಮಿಕರು, ದೀನದಲಿತರು, ಶಿಷ್ಟ-ಪರಿಶಿಷ್ಟರು.......ಮೊದಲಾದ ಮಕ್ಕಳಿಗೆ ಶಿಕ್ಷಣ ನೀಡುವ ಕೈಂಕರ್ಯ ಕೈಗೊಂಡರು. ಧಾರ್ಮಿಕ ಸಂಸ್ಥೆಗಳು ಕೂಡ ಶಿಕ್ಷಣ ಸೌಲಭ್ಯವನ್ನು ಒದಗಿಸುವುದರ ಮೂಲಕ

ಸಮಾಜಮುಖಿಯಾಗಲು ಸಾಧ್ಯವೆಂಬುದನ್ನು ಶ್ರೀ ಸಿದ್ಧಗಂಗಾ ಮಠ ತೋರಿಸಿಕೊಟ್ಟಿದೆ. ಆದ್ದರಿಂದಲೇ ಮಠ ಹೆಚ್ಚು ಪ್ರೌಢಶಾಲೆಗಳನ್ನು ಗ್ರಾಮೀಣ ನಗರಗಳಲ್ಲಿ ಸ್ಥಾಪಿಸಿರುವುದು.

೪.೩ ಸಿದ್ಧಗಂಗಾ ಮಠದ ಒಟ್ಟು ಪ್ರೌಢಶಾಲೆಗಳು

ಗ್ರಾಮೀಣ ಪ್ರದೇಶಗಳಲ್ಲಿ ಭಕ್ತರೆ ಸ್ವಾಮೀಜಿಯವರನ್ನು ಖುದ್ದಾಗಿ ಕಂಡು, ಮಕ್ಕಳು ನಗರಕ್ಕೆ ಬಂದು ಶಿಕ್ಷಣ ಪಡೆಯುವುದು ದುರ್ಲಭವಾಗಿದೆ ಎಂದು ಮನವಿಯನ್ನರ್ಪಿಸುತ್ತಿದ್ದರು. ಇದನ್ನರಿತ ಸ್ವಾಮೀಜಿ ಹೆಚ್ಚು ಹೆಚ್ಚು ಪ್ರೌಢಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಲು ಇಚ್ಛಿಸಿದರು. ೧೯೧೪ ರಲ್ಲಿ ಶಿವಕುಮಾರಸ್ವಾಮೀಜಿ ಸಿದ್ಧಗಂಗಾ ಮಠದ ಪೂರ್ಣ ಜವಾಬ್ದಾರಿಯನ್ನು ಹೊತ್ತ ನಂತರ ಪ್ರಾರಂಭದಲ್ಲಿ ಮಂದಗತಿಯಿಂದ ಸಾಗಿದ್ದರೂ ಕೂಡ ೧೯೭೦ ರ ನಂತರ ಪ್ರೌಢಶಾಲೆಗಳ ಸಂಖ್ಯೆ ಅಧಿಕವಾಗಿದೆ. ಒಟ್ಟು ೫೪ ಪ್ರೌಢಶಾಲೆಗಳಲ್ಲಿ ೩೧ ಪ್ರೌಢಶಾಲೆಗಳು ತುಮಕೂರು ಜಿಲ್ಲೆಯಲ್ಲಿಯೇ ಕೇಂದ್ರಿತವಾಗಿವೆ. ತುಮಕೂರು ಜಿಲ್ಲೆಯಲ್ಲಿ ಒಂದೇ ಒಂದು ಸರ್ಕಾರಿ ಪ್ರೌಢಶಾಲೆಯಿದ್ದ ಕಾಲದಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿದ ಕೀರ್ತಿ ಮಠಕ್ಕೆ ಸಲ್ಲುತ್ತದೆ.

೧೯೪೩ ರ ಅವಧಿಯಲ್ಲಿ ತುಮಕೂರು ನಗರದಲ್ಲಿ ಏಕೈಕ ಸರ್ಕಾರಿ ಪ್ರೌಢಶಾಲೆ (ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆ) ಇತ್ತು. ಆದರೆ ಈ ಪ್ರೌಢಶಾಲೆಯಲ್ಲಿ ಎಲ್ಲರೂ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಆ ಸಮಯದಲ್ಲಿ ಸರ್ಕಾರದಿಂದ ಅನುದಾನ ಮತ್ತು ಸೂಕ್ತ ಪ್ರೋತ್ಸಾಹ ದೊರೆಯುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಿವಕುಮಾರಸ್ವಾಮೀಜಿ ೧೯೪೪ ರಲ್ಲಿ ತುಮಕೂರಿನಲ್ಲಿ ಪ್ರಥಮ ಖಾಸಗಿ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಸ್ವಂತ ಕಟ್ಟಡವಿಲ್ಲದೆ, ಬಾಡಿಗೆ ಕಟ್ಟಡದಲ್ಲಿಯೇ ಪ್ರಾರಂಭಿಸಿದರು. ಮೊದಲನೇ ವರ್ಷದಲ್ಲಿಯೇ ೧೫೫ ವಿದ್ಯಾರ್ಥಿಗಳು ದಾಖಲಾತಿ ಪಡೆದರು. ಶಾಲೆಯನ್ನು ಪ್ರಾರಂಭಿಸುತ್ತಿದ್ದಂತೆಯೇ ಮೂರು ಲಕ್ಷ ರೂಪಾಯಿ ಅಂದಾಜಿನ ಕಟ್ಟಡವನ್ನು ಪ್ರಾರಂಭಿಸಲಾಯಿತು. ೧೯೪೮ ರಲ್ಲಿ ಶಾಲೆಯ ಕಟ್ಟಡ ಪೂರ್ಣಗೊಂಡು ಆಗಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರಿಂದ ಶಾಲೆಯ ಕಟ್ಟಡವನ್ನು ಉದ್ಘಾಟಿಸಲಾಯಿತು, (ಸಿದ್ಧಗಂಗಾಶ್ರೀ, ೧೯೮೧, ಪು.೨೯೬).

ಶ್ರೀ ಸಿದ್ಧಗಂಗಾ ಹೈಸ್ಕೂಲ್ ಕಟ್ಟಡ ವಿಶಾಲವಾಗಿದ್ದರಿಂದ ೧೯೫೬ ರಲ್ಲಿ ಅಲ್ಲಿಯೇ ಶಿಕ್ಷಕ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದರು. ಇದರಿಂದಾಗಿ ಸಿದ್ಧಗಂಗಾ ಪ್ರಾಕ್ಟೀಸಿಂಗ್ ಪ್ರೈಮರಿ ಶಾಲೆಯನ್ನು ಸಹ ಇದೇ

ಆವರಣದಲ್ಲಿ ತೆರೆಯಲಾಯಿತು. ನಂತರ ಈ ಕಟ್ಟಡದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭವಾಗಿ, ಆನಂತರ ಸರ್ಕಾರದ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಇದೇ ಶಾಲೆಯಲ್ಲಿಯೇ ಪ್ರಾರಂಭಿಸಿ. ಕಾಲಾನಂತರ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯವು ಇದೇ ಕಟ್ಟಡದಲ್ಲಿ ಪ್ರಾರಂಭಿಸಲಾಗಿ, ನಂತರ ನೂತನ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಹೀಗೆ ಸಿದ್ಧಗಂಗಾ ಮಠದ ಅನೇಕ ಕಾಲೇಜುಗಳು ಸಿದ್ಧಗಂಗಾ ಪ್ರೌಢಶಾಲೆಯ ಕಟ್ಟಡದಲ್ಲಿಯೇ ಪ್ರಾರಂಭವಾದದ್ದೆಂಬುದು ಶಾಲೆಯ ಚರಿತ್ರಾರ್ಹ ಘಟನಾವಳಿಗಳು (ಸಿದ್ಧಗಂಗಾಶ್ರೀ, ೧೯೮೧, ಪು.೨೯೭).

ಈ ಅವಧಿಯಲ್ಲಿ ಸಿದ್ಧಗಂಗಾ ಮಠದ ವಿದ್ಯಾರ್ಥಿನಿಲಯದಲ್ಲಿ ಅನೇಕ ಮಂದಿ ಆಶ್ರಯ ಪಡೆದಿದ್ದರು. ಪ್ರೌಢಶಾಲಾ ಶಿಕ್ಷಣವನ್ನು ಪಡೆಯಲು ಅನೇಕ ವಿದ್ಯಾರ್ಥಿಗಳು ಇಚ್ಛಿಸಿದ್ದರು. ಆದರೆ ಇವರೆಲ್ಲರಿಗೂ ತುಮಕೂರಿಗೆ ಹೋಗಿ ಬರುವುದು ಕಠಿಣವಾಗಿತ್ತು. ಆದ್ದರಿಂದ ಮಠದಿಂದ ಹೋಗಿಬರುವ ವಿದ್ಯಾರ್ಥಿಗಳಿಗೆಂದೇ ೧೯೫೫ ರಲ್ಲಿ ಸಿದ್ಧಗಂಗಾ ಮಠದಲ್ಲಿಯೇ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಇದನ್ನು 'ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆ' ಎಂದು ಕರೆಯಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೭೮).

ಗ್ರಾಮೀಣ ವಿದ್ಯಾರ್ಥಿಗಳು ಬಡತನದಿಂದಾಗಿ ನಗರ ಪ್ರದೇಶಗಳಿಗೆ ಬಂದು ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಾಹನ ಸೌಕರ್ಯವಿರಲಿಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂಬುದನ್ನು ಮನಗಂಡ ಶಿವಕುಮಾರಸ್ವಾಮೀಜಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಬೇಕೆಂಬ ನಿಟ್ಟಿನಲ್ಲಿ ಯೋಚಿಸಿದರು. ಹಾಗಾಗಿ ೧೯೬೨ ರಲ್ಲಿ ಶ್ರೀ ಸಿದ್ಧಗಂಗಾ ವಿನಾಯಕ ರೂರಲ್ ಹೈಸ್ಕೂಲನ್ನು ಗುಬ್ಬಿ ತಾಲ್ಲೋಕು ನಿಟ್ಟೂರಿನಲ್ಲಿ ಸ್ಥಾಪಿಸಿದರು. ಮತ್ತೊಂದು ಪ್ರೌಢಶಾಲೆಯನ್ನು ಶಿರಾ ತಾಲ್ಲೋಕು, ತರೂರಿನಲ್ಲಿ ಸ್ಥಾಪಿಸಿದರು. ತುಮಕೂರು ಜಿಲ್ಲೆಯಲ್ಲಿ 'ಗೂಳೂರು ಗಣೇಶ' ಪ್ರಸಿದ್ಧಿ ಪಡೆದಿದ್ದು, ಈ ಗಣೇಶನ ನಾಮಾಂಕಿತದಲ್ಲಿಯೇ ೧೯೬೫ ರಲ್ಲಿ ಶ್ರೀ ಗಣೇಶ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೭೮-೨೮೧).

ಮಾರುತಿ ಗ್ರಾಮಾಂತರ ಪ್ರೌಢಶಾಲೆಯನ್ನು, ಪಾವಗಡ ತಾಲ್ಲೋಕಿನ ಹೊಸಹಳ್ಳಿ ಸ್ಥಳೀಯ ಗ್ರಾಮಸ್ಥರಿಂದ ೧೯೬೦ ನೆಯ ಸಾಲಿನಲ್ಲಿ ಸ್ಥಾಪಿಸಲಾಗಿತ್ತು. ಆದರೆ ದಿನೇ ದಿನೇ ಶಾಲೆಯ ಆಡಳಿತ ವೆಚ್ಚಗಳು ಅಧಿಕಗೊಂಡಿದ್ದರಿಂದ ಗ್ರಾಮಸ್ಥರು ೧೯೬೫ ರಲ್ಲಿ ಶ್ರೀಸಿದ್ಧಗಂಗಾ ಎಜುಕೇಷನ್ ಟ್ರಸ್ಟ್‌ಗೆ ಈ ಶಾಲೆಯನ್ನು ಒಪ್ಪಿಸಿದರು. ೧೯೬೦ ನೆಯ ಸಾಲಿನಲ್ಲಿ ೫೫ ವಿದ್ಯಾರ್ಥಿಗಳು ೪ ಮಂದಿ ಅಧ್ಯಾಪಕ ವರ್ಗದವರಿದ್ದರು. ಹೊಸಹಳ್ಳಿ ಗ್ರಾಮಸ್ಥರು ಸಿದ್ಧಗಂಗಾ ಎಜುಕೇಷನ್ ಟ್ರಸ್ಟ್‌ಗೆ ೧೬ ಎಕರೆ ಭೂಮಿಯನ್ನು ದಾನ ನೀಡಿದ್ದಾರೆ. ಈ ಶಾಲೆಯು ಸ್ವಂತ ಕಟ್ಟಡವನ್ನು ಹೊಂದಿದೆ. ಶ್ರೀ ಸಚ್ಚಿದಾನಂದ ಗುರುಕುಲವೆಂಬ ಉಚಿತ ವಿದ್ಯಾರ್ಥಿ ನಿಲಯವನ್ನು ಹೊಂದಿ ಬಡಮಕ್ಕಳಿಗೆ ಆಶ್ರಯ ನೀಡಿದೆ (ಸಿದ್ಧಗಂಗಾಶ್ರೀ, ೧೯೮೧, ಪು..೨೮೧).

೧೯೬೮ ರಲ್ಲಿ ಸಿದ್ಧಗಂಗಾ ಮಠದಲ್ಲಿಯೇ ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಈ ಪ್ರೌಢಶಾಲೆಯು ಪ್ರಾರಂಭದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆಯುತ್ತಿತ್ತು. ಸಿದ್ಧಗಂಗಾ ಮಠದಲ್ಲಿಯೇ ಇದ್ದ ಉನ್ನತ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕಗೊಂಡ ಕಾರಣ ೧೯೬೮ ರಲ್ಲಿ ಸಿದ್ಧಗಂಗಾ ಮಠದಲ್ಲಿಯೇ ಈ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯು ಸ್ಥಾಪನೆಗೊಂಡ ವರ್ಷದಲ್ಲಿಯೇ ೧೦೮೫ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿದೆ (ಸಿದ್ಧಗಂಗಾಶ್ರೀ, ೧೯೮೧, ಪು.೨೮೨).

೧೯೬೮ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆಯನ್ನು ಗುಬ್ಬಿ ತಾಲ್ಲೋಕಿನ ಕಲ್ಲೂರಿನಲ್ಲಿ ಸ್ಥಾಪಿಸಲಾಯಿತು. ಆರಂಭದ ವರ್ಷಗಳಲ್ಲಿ ೪೮ ವಿದ್ಯಾರ್ಥಿಗಳಿದ್ದರು. ೩ ಮಂದಿ ಅಧ್ಯಾಪಕ ವರ್ಗದವರು ಸೇವೆ ಸಲ್ಲಿಸುತ್ತಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೩).

೧೯೬೯ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಚಿಕ್ಕನಾಯ್ಕನಹಳ್ಳಿ ತಾಲ್ಲೋಕು ಕಂದೀಕೆರೆಯಲ್ಲಿ ಸ್ಥಾಪಿಸಲಾಯಿತು. ಆ ವರ್ಷದಲ್ಲಿ ೫೭ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ೩ ಮಂದಿ ಶಿಕ್ಷಕರನ್ನು ಹೊಂದಿತ್ತು (ಸಿದ್ಧಗಂಗಾಶ್ರೀ, ೧೯೮೧, ಪು.೨೮೩).

೧೯೭೦ ರ ಅವಧಿಯಲ್ಲಿ ಹಾಲ್ಕೂರಿನಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಸ್ಥಾಪಿತ ಅವಧಿಯಲ್ಲಿ ೪೦ ಮಂದಿ ವಿದ್ಯಾರ್ಥಿಗಳಿದ್ದು, ೩ ಮಂದಿ ಶಿಕ್ಷಕರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೪).

೧೯೭೦ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಅರೆಯೂರಿನಲ್ಲಿ ಸ್ಥಾಪಿಸಲಾಯಿತು. ಆರಂಭದ ವರ್ಷದಲ್ಲಿ ೪೧ ಮಂದಿ ವಿದ್ಯಾರ್ಥಿಗಳಿದ್ದು, ೩ ಮಂದಿ ಅಧ್ಯಾಪಕ ವರ್ಗದವರಿದ್ದು, ಒಬ್ಬ ಶಾಲಾ-ಸೇವಕನನ್ನು ಹೊಂದಿತ್ತು (ಸಿದ್ಧಗಂಗಾಶ್ರೀ ೧೯೮೧, ಪು.೨೮೪).

೧೯೭೦ ರ ಅವಧಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಹಿರೇಹಳ್ಳಿಯಲ್ಲಿ ಸ್ಥಾಪಿಸಲಾಯಿತು. ಆ ವರ್ಷದಲ್ಲಿ ೨೯ ವಿದ್ಯಾರ್ಥಿಗಳು ದಾಖಲಾತಿಯನ್ನು ಪಡೆದಿದ್ದರು. ೪ ಮಂದಿ ಶಿಕ್ಷಕಿಯರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೪).

೧೯೭೦ ರ ಅವಧಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಗುಬ್ಬಿ ತಾಲ್ಲೋಕಿನ ಅದಲಗೆರೆಯಲ್ಲಿ ಸ್ಥಾಪಿಸಲಾಯಿತು. ೩೧ ಮಂದಿ ವಿದ್ಯಾರ್ಥಿಗಳಿದ್ದು, ೩ ಮಂದಿ ಉಪಾಧ್ಯಾಯರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೪).

೧೯೭೦ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮಾಂತರ ಶಾಲಿವಾಹನ ಪ್ರೌಢಶಾಲೆಯನ್ನು ತುರುವೇಕೆರೆ ತಾಲ್ಲೋಕು, ತಂಡಗದಲ್ಲಿ ಪ್ರಾರಂಭಿಸಲಾಯಿತು. ಆರಂಭದ ವರ್ಷದಲ್ಲಿ ೪೯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಇಬ್ಬರು ಶಿಕ್ಷಕರು ಮತ್ತು ಒಬ್ಬ ಸೇವಕ ಇದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೩).

೧೯೭೦ ರಲ್ಲಿ ಶ್ರೀ ಗಂಗಾಧರೇಶ್ವರ ಗ್ರಾಮೀಣ ಪ್ರೌಢಶಾಲೆಯನ್ನು ತುರುವೇಕೆರೆ ತಾಲ್ಲೋಕು, ಆನೇಕೆರೆಯಲ್ಲಿ ಸ್ಥಾಪಿಸಲಾಯಿತು. ಆರಂಭದ ವರ್ಷದಲ್ಲಿ ೪೦ ಮಂದಿ ವಿದ್ಯಾರ್ಥಿಗಳು ದಾಖಲಾತಿಯನ್ನು ಪಡೆದರು. ೩ ಮಂದಿ ಶಿಕ್ಷಕರು ಕರ್ತವ್ಯವನ್ನು ಆರಂಭಿಸಿದರು. ಈ ಶಾಲೆಯ ಅಭಿವೃದ್ಧಿಗೆ ಆನೇಕೆರೆ ಗ್ರಾಮದ ಅಗಿನ ಛೇರ್‌ಮನ್ ಆಗಿದ್ದ ಶಿವನಂಜಪ್ಪ, ಟಿ.ಎನ್.ಕೃಷ್ಣಮೂರ್ತಿ ಮತ್ತು ಡಾ.ಸಿದ್ಧಯ್ಯ ಪುರಾಣಿಕ್‌ರವರು ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆಯ ಅಧ್ಯಕ್ಷರಾದ

ಎನ್.ಎಲ್.ಹಮೀರ್ ವಾಸಿಯಾರವರು ಎರಡು ಶಾಲಾ ಕೊಠಡಿಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಗ್ರಾಮಸ್ಥರೂ ಕೂಡ ಅನೇಕ ರೀತಿಯ ಸಹಕಾರಗಳನ್ನಿತ್ತು ಪ್ರೋತ್ಸಾಹಿಸಿದ್ದಾರೆ (ಸಿದ್ಧಗಂಗಾಶ್ರೀ, ೧೯೮೧, ಪು.೨೮೩).

ಗುಬ್ಬಿ ತಾಲ್ಲೋಕಿನ ದೊಡ್ಡಗುಣಿಯಲ್ಲಿ ಗ್ರಾಮಸ್ಥರಿಂದ ೧೯೬೬ ರಲ್ಲಿ ಶ್ರೀ ಮಲ್ಲಿಕಾರ್ಜುನ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಆಗ ೨೦ ಮಂದಿ ವಿದ್ಯಾರ್ಥಿಗಳು ದಾಖಲಾತಿಯನ್ನು ಪಡೆದರು. ಇಬ್ಬರು ಶಿಕ್ಷಕರು ಮತ್ತು ಒಬ್ಬ ಸೇವಕರು ಸೇವೆ ಸಲ್ಲಿಸುತ್ತಿದ್ದರು. ೧೯೭೦ ರಲ್ಲಿ ಈ ಸಂಸ್ಥೆಯನ್ನು ಸಿದ್ಧಗಂಗಾ ಟ್ರಸ್ಟ್‌ಗೆ ವರ್ಗಾಯಿಸಲಾಯಿತು. ಈ ಶಾಲೆಯ ಪುರೋಭಿವೃದ್ದಿಗೆ ಸೇವೆ ಸಲ್ಲಿಸಿದ ದೊಡ್ಡಗುಣಿ ಗ್ರಾಮದ ವೀರಪ್ಪಶೆಟ್ಟ್ರು, ಪುಟ್ಟರೇವಪ್ಪ, ಬಸವರಾಜಪ್ಪ, ಸಿದ್ದಮ್ಮ ಸ್ಮರಣೀಯರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೩).

ಸ್ಥಳೀಯ ಗ್ರಾಮಸ್ಥರಿಂದ ೧೯೬೪ ರಲ್ಲಿ ಬೆಳಧರ ಗ್ರಾಮೀಣ ಪ್ರೌಢಶಾಲೆಯನ್ನು ಬೆಳಧರದಲ್ಲಿ ಸ್ಥಾಪಿಸಲಾಯಿತು. ಆರಂಭದ ವರ್ಷದಲ್ಲಿ ೪೦ ಮಂದಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ೪ ಮಂದಿ ಶಿಕ್ಷಕರಿದ್ದರು. ಹಣಕಾಸಿನ ತೊಂದರೆಯಿಂದಾಗಿ ೧೯೭೨ ರಲ್ಲಿ ಈ ಪ್ರೌಢಶಾಲೆಯನ್ನು ಸಿದ್ಧಗಂಗಾ ಮಠದ ಟ್ರಸ್ಟ್‌ಗೆ ವರ್ಗಾಯಿಸಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೮೪).

೧೯೬೧ ರಲ್ಲಿ ಸ್ಥಳೀಯ ಗ್ರಾಮಸ್ಥರಿಂದ ಶ್ರೀ ಶಾರದ ಪ್ರೌಢಶಾಲೆಯನ್ನು, ಗುಬ್ಬಿ ತಾಲ್ಲೋಕಿನ, ಮೂಗನಾಯ್ಕನಕೋಟೆಯಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭದ ವರ್ಷದಲ್ಲಿ ೪೫ ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ೮ ಮಂದಿ ಸಿಬ್ಬಂದಿ ವರ್ಗದವರಿದ್ದರು. ೧೯೭೩ ರಲ್ಲಿ ಸಿದ್ಧಗಂಗಾ ಟ್ರಸ್ಟ್‌ಗೆ ಈ ಪ್ರೌಢಶಾಲೆಯನ್ನು ವರ್ಗಾಯಿಸಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೮೪).

೧೯೭೬ ರ ಅವಧಿಯಲ್ಲಿ ತುರುವೇಕೆರೆ ತಾಲ್ಲೋಕಿನ ಮಾಚೇನಹಳ್ಳಿಯಲ್ಲಿ ಬಾಪೂಜಿ ಕೇಂದ್ರೀಯ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಪ್ರಾರಂಭದ ವರ್ಷದಲ್ಲಿ ೪೪ ಮಂದಿ ವಿದ್ಯಾರ್ಥಿಗಳು ದಾಖಲಾತಿಯನ್ನು ಪಡೆದರು. ನಾಲ್ಕುಮಂದಿ ಶಿಕ್ಷಕರಿದ್ದು, ಇಬ್ಬರು ಸೇವಕ ಸಿಬ್ಬಂದಿಯವರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೫).

೧೯೭೮ ರಲ್ಲಿ ಶ್ರೀ ಮಹಾಲಿಂಗೇಶ್ವರ ಗ್ರಾಮೀಣ ಪ್ರೌಢಶಾಲೆಯನ್ನು ಕೋರಾದಲ್ಲಿ ಸ್ಥಾಪಿಸಲಾಯಿತು. ೧೯೮೦ ರಲ್ಲಿ ಶ್ರಿ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಮಧುಗಿರಿ ತಾಲ್ಲೋಕಿನ ಗಂಜಲಕುಂಟೆಯಲ್ಲಿ ಸ್ಥಾಪಿಸಲಾಯಿತು. ೧೯೮೦ ರಲ್ಲಿ ಶ್ರೀ ವೀರಭದ್ರಸ್ವಾಮಿ ಗ್ರಾಮೀಣ ಪ್ರೌಢಶಾಲೆಯನ್ನು ಹರಳೂರಿನಲ್ಲಿ ಸ್ಥಾಪಿಸಲಾಯಿತು (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೬).

೧೯೬೦ ರಲ್ಲಿ ನಿವೇದಿತಾ ಪ್ರೌಢಶಾಲೆಯನ್ನು ಕ್ಯಾತ್ಸಂದ್ರದಲ್ಲಿ ಸ್ಥಾಪಿಸಲಾಯಿತು. ಸ್ಥಳೀಯರೇ ಪ್ರಾರಂಭಿಸಿದ ಈ ಶಾಲೆಯಲ್ಲಿ ಆರಂಭದ ವರ್ಷದಲ್ಲಿ ೩೨ ವಿದ್ಯಾರ್ಥಿಗಳು ಪ್ರವೇಶಿಸಿದ್ದು, ೫ ಮಂದಿ ಶಿಕ್ಷಕರಿದ್ದರು. ಹಣಕಾಸಿನ ತೊಂದರೆಯಿಂದಾಗಿ ೧೯೮೦ ರ ಅವಧಿಯಲ್ಲಿ ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು (ಸಿದ್ಧಗಂಗಾಶ್ರೀ, ೧೯೮೧, ಪು.೨೮೫).

೧೯೮೧ ರಲ್ಲಿ ಶ್ರೀ ಬಸವೇಶ್ವರ ಗ್ರಾಮೀಣ ಪ್ರೌಢಶಾಲೆಯನ್ನು ಕೊರಟಗೆರೆ ತಾಲ್ಲೋಕಿನ ದೊಡ್ಡಸಾಗ್ಗೆರೆಯಲ್ಲಿ ಪ್ರಾರಂಭಿಸಲಾಯಿತು. ೧೯೬೧ ರಲ್ಲಿ ಜಯಮಂಗಲಿ ಗ್ರಾಮೀಣ ಪ್ರೌಢಶಾಲೆಯನ್ನು ಮಧುಗಿರಿ ತಾಲ್ಲೋಕಿನ ನಿಟ್ರಹಳ್ಳಿಯಲ್ಲಿ ಸ್ಥಾಪಿಸಲಾಯಿತು. ಈ ಪ್ರೌಢಶಾಲೆಯನ್ನು ೧೯೮೨ ರಲ್ಲಿ ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು. ೧೯೬೮ ರಲ್ಲಿ ಗ್ರಾಮಸ್ಥರು ಕೂಡಿ ಮಧುಗಿರಿ ತಾಲ್ಲೋಕಿನ ನೇರಲೇಕೆರೆಯಲ್ಲಿ ಶ್ರೀ ರಂಗನಾಥ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಿದರು. ೧೯೮೨ ರಲ್ಲಿ ಈ ಪ್ರೌಢಶಾಲೆಯನ್ನು ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು. ೧೯೮೫ ರಲ್ಲಿ ಶ್ರಿ ಸುವರ್ಣಮುಖಿ ಪ್ರೌಢಶಾಲೆಯನ್ನು ಸ್ಥಳೀಯರೆ ಕೊರಟಗೆರೆ ತಾಲ್ಲೋಕಿನ ಮಲ್ಲೇಕಾವುನಲ್ಲಿ ಪ್ರಾರಂಭಿಸಿದರು. ೧೯೮೭ ರಲ್ಲಿ ಈ ಪ್ರೌಢಶಾಲೆಯನ್ನು ಸಿದ್ಧಗಂಗಾ ಟ್ರಸ್ಟ್‌ಗೆ ವರ್ಗಾಯಿಸಲಾಯಿತು. ೧೯೮೮ ರಲ್ಲಿ ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ಬಾಲಕಿಯರ ಪ್ರೌಢಶಾಲೆಯನ್ನು ತುಮಕೂರಿನಲ್ಲಿ ಸ್ಥಾಪಿಸಲಾಯಿತು. ೧೯೯೭ ರಲ್ಲಿ ಸಿಲ್ವರ್ ಜ್ಯುಬಿಲಿ ಮೊಮೋರಿಯಲ್ ಡೆಮೋನ್‌ಸ್ಟ್ರೇಶನ್ ಪ್ರೌಢಶಾಲೆಯನ್ನು ತುಮಕೂರಿನಲ್ಲಿ ಸ್ಥಾಪಿಸಲಾಯಿತು. ಚಿಕ್ಕನಾಯ್ಕನಹಳ್ಳಿ ತಾಲ್ಲೋಕು, ಕುಪ್ಪೂರು ಹೋಬಳಿಯಲ್ಲಿ ೧೯೮೧ ರಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಆದರೆ ಇದನ್ನು ೧೯೯೭ ರಲ್ಲಿ ಶ್ರೀ ಸಿದ್ಧಗಂಗಾ ಟ್ರಸ್ಟ್‌ಗೆ ವರ್ಗಾಯಿಸಲಾಯಿತು. ತುರುವೇಕೆರೆ ತಾಲ್ಲೋಕು ಮಾದಿಹಳ್ಳಿಯಲ್ಲಿಯೂ ಸ್ಥಳೀಯರೆ ೧೯೮೨ ರಲ್ಲಿ ಶ್ರೀ ಹುತ್ತಸಿದ್ದೇಶ್ವರ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಿದ್ದರು. ೧೯೯೭ ರಲ್ಲಿ ಈ ಪ್ರೌಢಶಾಲೆಯನ್ನು

ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಿದರು (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೫-೨೭).

ಮಠ ತನ್ನ ಪ್ರೌಢಶಾಲೆಗಳನ್ನು ಕೇವಲ ತುಮಕೂರು ಜಿಲ್ಲೆಯಲ್ಲಿ ಮಾತ್ರ ಸ್ಥಾಪಿಸದೆ ಇತರೆ ಜಿಲ್ಲೆಗಳಲ್ಲೂ ಸ್ಥಾಪಿಸಿದೆ. ೧೯೬೩ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಮಾಗಡಿ ತಾಲ್ಲೋಕಿನ ಕಂಚುಗಲ್ ಬಂಡೇಮಠದಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ ೫೦ ಮಂದಿ ವಿದ್ಯಾರ್ಥಿಗಳಿದ್ದರು. ಮೂರು ಮಂದಿ ಅಧ್ಯಾಪಕರು, ಒಬ್ಬ ನೌಕರಿ ಸಿಬ್ಬಂದಿಯವರು ನೇಮಕಗೊಂಡಿದ್ದರು. ಸಾರ್ವಜನಿಕ ಉಚಿತ ವಿದ್ಯಾರ್ಥಿ ನಿಲಯವು ಇಲ್ಲಿನ ಮಹಾಮಠದಿಂದ ನಡೆಯುತ್ತಿದ್ದು, ಬಡ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲವನ್ನೊದಗಿಸಿದೆ. ಸಂಸ್ಕೃತ ಪಾಠಶಾಲೆಯು ಈ ಮಠದಲ್ಲಿ ನಡೆಯುತ್ತಿದೆ. ಕಂಚುಗಲ್ ಬಂಡೇಮಠದ ಶಿವರುದ್ರಸ್ವಾಮಿಗಳವರ ಮಾರ್ಗದರ್ಶನದ ಫಲವಾಗಿ ಸಮರ್ಪಕ ರೀತಿಯಲ್ಲಿ ಈ ಸಂಸ್ಥೆಯು ತನ್ನ ಸೇವೆಯನ್ನು ಸಲ್ಲಿಸುತ್ತಿದೆ (ಸಿದ್ಧಗಂಗಾಶ್ರೀ, ೧೯೮೧, ಪು.೨೮೦).

ಮಾಗಡಿ ತಾಲ್ಲೋಕಿನ ಸೋಲೂರಿನಲ್ಲಿ ಶ್ರೀ ಬಸವೇಶ್ವರ ಪ್ರೌಢಶಾಲೆಯು ೧೯೬೩ ರಲ್ಲಿ ಆರಂಭವಾಯಿತು. ಆರಂಭದ ವರ್ಷದಲ್ಲಿ ೭೭ ಮಂದಿ ವಿದ್ಯಾರ್ಥಿಗಳಿದ್ದರು, ಇಬ್ಬರು ಶಿಕ್ಷಕರಿದ್ದರು ಇಬ್ಬರು ಆಫೀಸಿನ ಸಹಾಯಕ ಸಿಬ್ಬಂದಿಯವರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೦).

೧೯೬೩ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆಯನ್ನು ದೇವನಹಳ್ಳಿ ತಾಲ್ಲೋಕಿನ ಬೂದಿಗೆರೆಯಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ ೭೯ ಮಂದಿ ವಿದ್ಯಾರ್ಥಿಗಳು ಅಭ್ಯಾಸವನ್ನು ಆರಂಭಿಸಿದರು. ಶಿಕ್ಷಕರು ೩ ಮಂದಿ ಇದ್ದರು. ಇದೇ ಗ್ರಾಮದ ಮುದ್ದಪ್ಪನವರು ಈ ಪ್ರೌಢಶಾಲೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಕಂಟ್ರಾಕ್ಟರ್ ಎಂ. ಮರಿಸ್ವಾಮಪ್ಪ ಎಂಬುವರು ೧೯೬೪ ರಲ್ಲಿ ೬೦,೦೦೦ ರೂ. ಬೆಲೆ ಬಾಳುವ ಪ್ರೌಢಶಾಲಾ ಕಟ್ಟಡವನ್ನು ವ್ಯವಸ್ಥಿತ ರೀತಿಯಲ್ಲಿ ಕಟ್ಟಿಸಿಕೊಟ್ಟರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೦).

ದೊಡ್ಡಬಳ್ಳಾಪುರ ತಾಲ್ಲೋಕಿನ, ಪುರುಷನಹಳ್ಳಿಯಲ್ಲಿ, ಶ್ರೀಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ೧೯೬೫ ರಲ್ಲಿ ಸ್ಥಾಪಿಸಲಾಯಿತು. ಆರಂಭದ ವರ್ಷದಲ್ಲಿ ೫೪ ವಿದ್ಯಾರ್ಥಿಗಳು

ವ್ಯಾಸಂಗ ಮಾಡುತ್ತಿದ್ದರು. ೩ ಜನ ಶಿಕ್ಷಕರು ಮತ್ತು ಒಬ್ಬರು ಸಿಬ್ಬಂದಿ ವರ್ಗದವರಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೧).

೧೯೬೫ ರಲ್ಲಿ ಮಾಗಡಿ ತಾಲ್ಲೋಕಿನ ಗುಡೇಮಾರನಹಳ್ಳಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಆರಂಭದ ವರ್ಷದಲ್ಲಿ ೧೩೫ ಮಂದಿ ವಿದ್ಯಾರ್ಥಿಗಳಿದ್ದರು. ನಾಲ್ಕು ಮಂದಿ ಶಿಕ್ಷಕ ಸಿಬ್ಬಂದಿಯಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೨೮೧).

೧೯೭೧ ರಲ್ಲಿ ಮಾಗಡಿ ತಾಲ್ಲೋಕಿನ ನಾರಸಂದ್ರದಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ೧೯೮೦ ರಲ್ಲಿ ಹೊಸಕೋಟೆಯ ಹೆಡಕನಹಳ್ಳಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ೧೯೮೨ ರಲ್ಲಿ ಕನಕಪುರ ರೋಡ್, ರಘುವನಹಳ್ಳಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಗಟ್ಟಿಪುರದಲ್ಲಿ ೧೯೮೨ ರಲ್ಲಿ ಶ್ರೀ ಉದ್ದಾನ ಶಿವಯೋಗೀಶ್ವರ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ೧೯೬೪ ರಲ್ಲಿ ನೆಲಮಂಗಲದಲ್ಲಿ ಗ್ರಾಮಸ್ಥರು ಶ್ರೀ ಮಂಜುನಾಥ ಬಾಲಕಿಯರ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಆದರೆ ೧೯೮೩ ರಲ್ಲಿ ಈ ಪ್ರೌಢಶಾಲೆಯನ್ನು ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು. ೧೯೮೪ ರಲ್ಲಿ ಮಾಗಡಿ ತಾಲ್ಲೋಕಿನ, ಬ್ಯಾಲಾಕೆರೆಯಲ್ಲಿ ಶ್ರೀ ಶಿವಕುಮಾರಸ್ವಾಮಿ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಶಿವನಹಳ್ಳಿ ಜಂಗಮ ಮಠದಲ್ಲಿ ೧೯೮೪ ರಲ್ಲಿ ಶ್ರೀ ಸಿದ್ಧಗಂಗಾ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ೧೯೮೬ ರಲ್ಲಿ ದೊಸಣಾಪುರ ಹೋಬಳಿ, ತೋಟಗೆರೆಯಲ್ಲಿ ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ೧೯೮೨ ರಲ್ಲಿ ಮಾಗಡಿ ತಾಲ್ಲೋಕಿನ ಎಣ್ಣೇಗೆರೆಯಲ್ಲಿ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಗಿತ್ತು. ಇದನ್ನು ಗ್ರಾಮಸ್ಥರೇ ಸ್ಥಾಪಿಸಿದ್ದರು. ಆದರೆ ೧೯೮೬ ರಲ್ಲಿ ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು. ೧೯೮೫ ರಲ್ಲಿ ಕುದೂರು ಗ್ರಾಮದವರು ಶ್ರೀ ಮಹಂತೇಶ್ವರ ಬಾಲಕಿಯರ ಪ್ರೌಢಶಾಲೆಯನ್ನು ತೆರೆದರು. ಆದರೆ ೧೯೮೮ ರಲ್ಲಿ ಮಠದ ಸೊಸೈಟಿಗೆ ಜವಾಬ್ದಾರಿಯನ್ನು ವಹಿಸಿದರು. ೧೯೯೦ ರಲ್ಲಿ ರಾಮನಗರಂನ ದೊಡ್ಡಗಂಗಾವಾಡಿಯಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. ಮಾಗಡಿ ತಾಲ್ಲೋಕಿನ ಹುಲಿಕಲ್‌ನಲ್ಲಿ ಜನತೆ ಶ್ರೀ ಬಸವೇಶ್ವರ ಪ್ರೌಢಶಾಲೆಯನ್ನು ಸ್ಥಾಪಿಸಿದರು. ೧೯೬೩ ರಲ್ಲಿ ಸ್ಥಾಪಿಸಿದ ಈ ಪ್ರೌಢಶಾಲೆಯನ್ನು ೧೯೯೧ ರಲ್ಲಿ ಸಿದ್ಧಗಂಗಾ ಸೊಸೈಟಿಗೆ ವರ್ಗಾಯಿಸಲಾಯಿತು. ೧೯೯೨ ರಲ್ಲಿ ಶ್ರೀ ಅಂಬಿಕಾ ಕನ್ನಡ ಪ್ರೌಢಶಾಲೆಯನ್ನು ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿ ಸ್ಥಾಪಿಸಲಾಗಿದೆ.

೧೯೯೪ ರಲ್ಲಿ ಬೆಂಗಳೂರಿನ ಅಗ್ರಹಾರ ದಾಸರಹಳ್ಳಿಯಲ್ಲಿ ವೀರಭದ್ರಸ್ವಾಮಿ ಕನ್ನಡ ಪ್ರೌಢಶಾಲೆ ಸ್ಥಾಪಿಸಿದರು. ಬೆಂಗಳೂರಿನ ಚಂದ್ರ ಲೇಔಟ್‌ನಲ್ಲಿ ಶ್ರೀಸಿದ್ಧಗಂಗಾ ಪ್ರೌಢಶಾಲೆಯನ್ನು ೨೦೦೦ ದ ಅವಧಿಯಲ್ಲಿ ಸ್ಥಾಪಿಸಲಾಯಿತು (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೯-೩೧).

ನೆಹರು ಗ್ರಾಮಾಂತರ ಪ್ರೌಢಶಾಲೆಯು ೧೯೬೪ ರಲ್ಲಿ ಶ್ರೀ ಯರಗುಂಟೇಶ್ವರ ವಿದ್ಯಾಸಂಸ್ಥೆಯವರ ಆಶ್ರಯದಲ್ಲಿ ಆದಿವಾಲ ಮತ್ತು ಸುತ್ತಮುತ್ತಣ ಗ್ರಾಮಸ್ಥರ ಪರಿಶ್ರಮದಿಂದ ಆರಂಭಗೊಂಡಿತು. ಆ ವರ್ಷದಲ್ಲಿ ೨೪ ವಿದ್ಯಾರ್ಥಿಗಳು, ಇಬ್ಬರು ಅಧ್ಯಾಪಕ ಸಿಬ್ಬಂದಿಯವರಿದ್ದರು. ಶ್ರೀ ಯರಗುಂಟೇಶ್ವರ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ೧೧ ವರ್ಷದ ಸೇವೆ ಸಲ್ಲಿಸಿದ ಈ ಸಂಸ್ಥೆಯನ್ನು ಹೆಚ್ಚಿನ ಅಭಿವೃದ್ಧಿಯನ್ನು ಬಯಸಿ ೧೯೭೫ ರ ಡಿಸೆಂಬರ್‌ನಿಂದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆಡಳಿತಾಧಿಕಾರಕ್ಕೆ ವಹಿಸಿಕೊಡಲಾಯಿತು. ಈ ಸಂಸ್ಥೆಯ ಬೆಳವಣಿಗೆಗೆ ಆದಿವಾಲ ಗ್ರಾಮದ ದಾನಿಗಳಾದ ಜಿ.ಎಸ್. ತಿಪ್ಪೇಸ್ವಾಮಿ, ಎಂ.ಕೆ. ಶಂಕರಪ್ಪ ಹೆಚ್ಚು ಸೇವೆ ಸಲ್ಲಿಸಿದ್ದಾರೆ (ಸಿದ್ಧಗಂಗಾಶ್ರೀ, ೧೯೮೧, ಪು.೨೮೫).


೧೯೮೦ ರಲ್ಲಿ ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆಯನ್ನು ಸಕಲೇಶಪುರ ತಾಲ್ಲೋಕಿನ ಶುಕ್ರವಾರಸಂತೆಯಲ್ಲಿ ಸ್ಥಾಪಿಸಲಾಯಿತು. ೧೯೯೦ ರಲ್ಲಿ ಟಿ. ನರಸೀಪುರ ತಾಲ್ಲೋಕಿನ ಪರಿಣಾಮಿಪುರದಲ್ಲಿ ಶ್ರೀ ಶಿವಕುಮಾರಸ್ವಾಮಿ ಗ್ರಾಮಾಂತರ ಪ್ರೌಢಶಾಲೆಯನ್ನು ಸ್ಥಾಪಿಸಲಾಯಿತು. (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೮-೨೯).

ಸಿದ್ಧಗಂಗಾ ಮಠದ ಇತಿಹಾಸದಿಂದ ತಿಳಿದುಬರುವುದೇನೆಂದರೆ, ಮಠ ಪ್ರೌಢಶಾಲೆಗಳ ಸ್ಥಾಪನೆಗೆ ಅಯಾ ಪ್ರದೇಶದ ಗ್ರಾಮೀಣ ಜನರೆ ಸಹಾಯಹಸ್ತವನ್ನು ನೀಡಿದ್ದಾರೆ. ಮಠ ಪ್ರಾರಂಭದಲ್ಲಿ ಬೌದ್ಧಿಕ ಶಕ್ತಿಯನ್ನು ನೀಡಿದರೆ, ಗ್ರಾಮೀಣ ಜನರು ಭೌತಿಕ ಶಕ್ತಿಯನ್ನೊದಗಿಸಿದರು. ಈ ಎರಡೂ ಶಕ್ತಿಗಳ ಸಮ್ಮಿಲನದಿಂದಾಗಿ ಸಿದ್ಧಗಂಗಾ ಮಠ ೧೯೪೪ ರಿಂದ ಇಲ್ಲಿಯವರೆಗೆ ಒಟ್ಟು ೫೪ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ೫೪ ಪ್ರೌಢಶಾಲೆಗಳಲ್ಲಿ ೪೫ ಪ್ರೌಢಶಾಲೆಗಳನ್ನು ಗ್ರಾಮೀಣ ಪ್ರದೇಶದಲ್ಲಿಯೂ, ೦೯ ಪ್ರೌಢಶಾಲೆಗಳನ್ನು ನಗರ ಪ್ರದೇಶಗಳಲ್ಲಿಯೂ ಸ್ಥಾಪಿಸಿದೆ. ೪೫ ಗ್ರಾಮೀಣ ಪ್ರೌಢಶಾಲೆಗಳಲ್ಲಿ ೪೩ ಅನುದಾನಿತ ಪ್ರೌಢಶಾಲೆಗಳಾಗಿದ್ದು, ೦೨ ಅನುದಾನರಹಿತ ಪ್ರೌಢಶಾಲೆಗಳಾಗಿವೆ.

೦೯ ನಗರಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ೦೪ ಪ್ರೌಢಶಾಲೆಗಳು ಅನುದಾನಿತ ಪ್ರೌಢಶಾಲೆಗಳಾಗಿದ್ದು ೦೫ ಅನುದಾನರಹಿತ ಪ್ರೌಢಶಾಲೆಗಳಾಗಿವೆ.

೫೪ ಪ್ರೌಢಶಾಲೆಗಳಲ್ಲಿ ೪೭ ಅನುದಾನಿತ ಪ್ರೌಢಶಾಲೆಗಳಾಗಿದ್ದು, ಇದರಲ್ಲಿ ೪೩ ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿದ್ದು ೦೪ ನಗರ ಪ್ರದೇಶಗಳಲ್ಲಿವೆ. ಒಟ್ಟು ೦೭ ಅನುದಾನರಹಿತ ಪ್ರೌಢಶಾಲೆಗಳಲ್ಲಿ ೦೨ ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳು ಅನುದಾನರಹಿತ ಶಾಲೆಗಳಾಗಿದ್ದು, ೦೫ ನಗರ ಪ್ರದೇಶದ ಪ್ರೌಢಶಾಲೆಗಳು ಅನುದಾನರಹಿತ ಪ್ರೌಢಶಾಲೆಗಳಾಗಿವೆ.


ಒಟ್ಟು ೫೪ ಪ್ರೌಢಶಾಲೆಗಳು



ಪಟ್ಟಿ ೪ : ಒಟ್ಟು ೫೪ ಪ್ರೌಢಶಾಲೆಗಳು : ಅನುದಾನಿತ ಮತ್ತು ಅನುದಾನರಹಿತ : ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳು : ೨೦೦೫-೦೬


ಕ್ರ ಸಂ.	ವಿಧಗಳು	ಒಟ್ಟು ೫೪ ಪ್ರೌಢಶಾಲೆಗಳು			ತುಮಕೂರು ಜಿಲ್ಲೆ ೩೧ ಪ್ರೌಢಶಾಲೆಗಳು			ಇತರೆ ಜಿಲ್ಲೆ ೨೩ ಪ್ರೌಢಶಾಲೆಗಳು		
		ಅನು ದಾನಿತ	ಅನು ದಾನರಹಿತ	ಒಟ್ಟು	ಅನು ದಾನಿತ	ಅನು ದಾನರಹಿತ	ಒಟ್ಟು	ಅನು ದಾನಿತ	ಅನು ದಾನರಹಿತ	ಒಟ್ಟು
೧.	ಗ್ರಾಮೀಣ	೪೩ ೯೧.೪೮%	೦೨ ೨೮.೫೭%	೪೫ ೮೩.೩೩%	೨೫ ೬.೨೦%	೦೦ ೦೦%	೨೫ ೮೦.೬೪%	೧೮ ೧೦೦%	೦೨ ೪೦%	೨೦ ೮೬.೯೫%
೨.	ನಗರ	೦೪ ೮.೫೧%	೦೫ ೭೧.೪೨%	೦೯ ೧೬.೬೬%	೦೪ ೧೩.೭೯%	೦೨ ೧೦೦%	೦೬ ೧೯.೩೫%	೦೦ ೧೦೦%	೦೩ ೬೦%	೦೩ ೧೩.೦೪%
೩.	ಒಟ್ಟು	೪೭ ೧೦೦%	೦೭ ೧೦೦%	೫೪ ೧೦೦%	೨೯ .೧೦೦%	೦೨ ೧೦೦%	೩೧ ೧೦೦%	೧೮ ೧೦೦%	೦೫ ೧೦೦%	೨೩ ೧೦೦%

ಆಧಾರ : ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೪-೨೯



ಶ್ರೀ ಸಿದ್ಧಗಂಗಾ ಮಠ ೨೦೦೧ ರ ಅವಧಿಯಲ್ಲಿ ಒಟ್ಟು ೫೫ ಪ್ರೌಢಶಾಲೆಗಳನ್ನು ಸ್ಥಾಪಿಸಿತ್ತು. ಆದರೆ ೨೦೦೫-೦೬ ರ ಅವಧಿಯಲ್ಲಿ ೫೪ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ವಾಣಿ ವಿದ್ಯಾ ಸಮಿತಿ ಪ್ರೌಢಶಾಲೆ, ಕೊರಟಗೆರೆ ತಾಲ್ಲೋಕಿನ ತೀತಾ ಬಳಿ ಇದ್ದ ಪ್ರೌಢಶಾಲೆಯನ್ನು, ಮಕ್ಕಳ ದಾಖಲಾತಿ ಕೊರತೆಯಿಂದ ಕೈಬಿಡಲಾಯಿತು. ಆದ್ದರಿಂದ ೨೦೦೫-೦೬ ರ ಅವಧಿಯಲ್ಲಿ ೫೪ ಪ್ರೌಢಶಾಲೆಗಳಿವೆ. ಇದೊಂದು ಗ್ರಾಮೀಣ ಪ್ರೌಢಶಾಲೆ ಹೊರತುಪಡಿಸಿ, ಉಳಿದ ಎಲ್ಲಾ ಪ್ರೌಢಶಾಲೆಗಳು ೨೦೦೫-೦೬ ರ ಅವಧಿಯಲ್ಲಿಯೂ ಕಂಡುಬರುತ್ತವೆ. ಆದ್ದರಿಂದಲೇ ತುಮಕೂರು ಜಿಲ್ಲೆಯಲ್ಲಿ ೩೨ ಪ್ರೌಢಶಾಲೆಗಳಿಂದ ೩೧ ಪ್ರೌಢಾಶಾಲೆಗಳಿಗೆ ಸಂಖ್ಯಾಬಲ ಇಳಿದಿದೆ.

ಶ್ರೀ ಸಿದ್ಧಗಂಗಾ ಮಠ ಪ್ರೌಢಶಾಲೆಗಳನ್ನು ಸ್ಥಾಪಿಸುವಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಆದ್ಯತೆಯನ್ನು ನೀಡಿದೆ. ಒಟ್ಟು ೫೪ ಪ್ರೌಢಶಾಲೆಗಳಲ್ಲಿ ಶೇ.೮೩.೩೩ ರಷ್ಟು ಪ್ರೌಢಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿಯೂ ಶೇ. ೧೬.೬೬ ರಷ್ಟು ಪ್ರೌಢಶಾಲೆಗಳನ್ನು ನಗರ ಪ್ರದೇಶಗಳಲ್ಲಿಯೂ ಸ್ಥಾಪಿಸಿದೆ. ಗ್ರಾಮೀಣ ಜನರ ಬಡತನ, ಶಾಲೆಯಿಂದ ಹೊರಗುಳಿದವರ ಪ್ರಮಾಣ-ಇತ್ಯಾದಿಗಳನ್ನು ಕಡಿಮೆ ಮಾಡಲು ಮತ್ತು ಸಾಕ್ಷರತೆಯನ್ನು ಹೆಚ್ಚಿಸಲು ಮಠ ಗ್ರಾಮೀಣ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ ಎಂಬುದು ಪ್ರಮುಖವಾದ ಚಿಂತನೆಯಾಗಿದೆ. ಒಟ್ಟು ಪ್ರೌಢಶಾಲೆಗಳಲ್ಲಿ ಶೇ.೯೧.೪೮ ರಷ್ಟು ಗ್ರಾಮೀಣ ಅನುದಾನಿತ ಪ್ರೌಢಶಾಲೆಗಳಾಗಿದ್ದು, ಶೇ.೮.೫೧ ರಷ್ಟು ನಗರ ಪ್ರದೇಶಗಳ ಅನುದಾನಿತ ಪ್ರೌಢಶಾಲೆಗಳಾಗಿವೆ ಶೇ.೨೮.೫೭ ರಷ್ಟು ಗ್ರಾಮೀಣ ಪ್ರದೇಶಗಳ ಅನುದಾನರಹಿತ ಶಾಲೆಗಳಾಗಿದ್ದು, ಶೇ.೭೧.೪೨ ರಷ್ಟು ನಗರ ಪ್ರದೇಶಗಳ ಅನುದಾನರಹಿತ ಶಾಲೆಗಳಾಗಿವೆ.



ಸಿದ್ಧಗಂಗಾ ಮಠದ ಕೇಂದ್ರ ಸ್ಥಾನ ತುಮಕೂರಾಗಿರುವುದರಿಂದ ಹೆಚ್ಚು ಪ್ರೌಢಶಾಲೆಗಳನ್ನು ಸ್ಥಾಪಿಸಲಾಗಿದೆ. ತುಮಕೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಎಲ್ಲಾ ಪೌಢಶಾಲೆಗಳು ಅನುದಾನಿತ ಶಾಲೆಗಳಾಗಿವೆ. ತುಮಕೂರು ಜಿಲ್ಲೆಯಲ್ಲಿಯೇ ಹೆಚ್ಚು ಪೌಢಶಾಲೆಗಳನ್ನು ಸ್ಥಾಪಿಸಿದ್ದು, ಒಟ್ಟು ೫೪ ಪೌಢಶಾಲೆಗಳಲ್ಲಿ ೩೧ ಪ್ರೌಢಶಾಲೆಗಳು ತುಮಕೂರು ಜಿಲ್ಲೆಯಲ್ಲಿದ್ದು, ಗ್ರಾಮೀಣ ಪ್ರದೇಶಗಳಲ್ಲಿಯೇ ಒಟ್ಟು ೨೫ ಪ್ರೌಢಶಾಲೆಗಳನ್ನು ಸ್ಥಾಪಿಸಿದ್ದು, ಕೇವಲ ಆರು ಪ್ರೌಢಶಾಲೆಗಳನ್ನು ಮಾತ್ರ ನಗರ ಪ್ರದೇಶದಲ್ಲಿ ಸ್ಥಾಪಿಸಿದೆ. ಇದರಲ್ಲಿ ಶೇ. ೮೬.೨೦ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಅನುದಾನಿತ ಪ್ರೌಢಶಾಲೆಗಳಾಗಿವೆ. ಶೇ. ೧೩.೭೯ ರಷ್ಟು ಪ್ರೌಢಶಾಲೆಗಳು ನಗರ ಪ್ರದೇಶಗಳಲ್ಲಿ ಕೇಂದ್ರಿತವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿಯೇ ಗರಿಷ್ಠ ಶಾಲೆಗಳನ್ನು ಸ್ಥಾಪಿಸಲಾಗಿದೆ. ಕೇವಲ ಎರಡು ಪ್ರೌಢಶಾಲೆಗಳು ತುಮಕೂರು ಜಿಲ್ಲೆಯಲ್ಲಿ ಅನುದಾನರಹಿತ ಪ್ರೌಢಶಾಲೆಗಳಾಗಿವೆ. ಒಟ್ಟು ಶೇ.೮೦.೬೪ ರಷ್ಟು ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿಯೇ ಸ್ಥಾಪಿಸಿರುವುದರಿಂದ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಪ್ರೌಢಶಾಲೆಗಳ ಅಧ್ಯಯನ ಮಹತ್ವವಾದದ್ದು.

ತುಮಕೂರು ಜಿಲ್ಲೆಯನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿಯೂ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಇತರೆ ಜಿಲ್ಲೆಗಳಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಶೇ.೧೦೦ ರಷ್ಟು ಅನುದಾನಿತ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿದೆ. ಶೇ.೪೦ ರಷ್ಟು ಗ್ರಾಮೀಣ ಪ್ರದೇಶದ ಅನುದಾನಿತ ಪ್ರೌಢಶಾಲೆಯಾಗಿದ್ದು, ಶೇ.೬೦ ರಷ್ಟು ನಗರ ಪ್ರದೇಶದ ಅನುದಾನರಹಿತ ಪ್ರೌಢಶಾಲೆಗಳಾಗಿವೆ. ಶೇ.೮೬.೯೫ ರಷ್ಟು ಗ್ರಾಮೀಣ ಪ್ರದೇಶಗಳಲ್ಲಿಯೂ, ಶೇ.೧೩.೦೪ ರಷ್ಟು ನಗರ ಪ್ರದೇಶಗಳಲ್ಲಿಯೂ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ಗ್ರಾಮೀಣ ಜನರ ಬಡತನ, ನಿರಕ್ಷರತೆಯನ್ನು ಹೋಗಲಾಡಿಸುವ ಧ್ಯೇಯದಿಂದ ಮಠ ಗ್ರಾಮೀಣ ಪ್ರದೇಶಗಳಿಗೆ ಆದ್ಯ ಗಮನಹರಿಸಿದೆ.

೪.೪ ೩೧ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು

ಅಧ್ಯಯನವು ಸಿದ್ಧಗಂಗಾ ಮಠದ ಪ್ರಸ್ತುತ ಅಭಿವೃದ್ಧಿಯ ಪ್ರಮುಖ ಅಂಶವಾಗಿದೆ. ಗಂಡು-ಹೆಣ್ಣು ಮಕ್ಕಳ ಶಾಲಾ-ದಾಖಲಾತಿ, ಜಾತಿ-ಆಧಾರಿತ ಶಾಲಾ ದಾಖಲಾತಿ, ಗ್ರಾಮೀಣ-ನಗರ ಶಾಲೆಗಳಲ್ಲಿ ಜಾತಿವಾರು, ಲಿಂಗಾವಾರು ದಾಖಲಾತಿಗಳನ್ನು ವಿವರಿಸುವುದೇ ಈ ಅಧ್ಯಯನದ ಸಾಮಾಜಿಕ ಸ್ವರೂಪ. ಅಮರ್ತ್ಯ ಸೇನ್‌ರವರು ವಿವಿಧ ಸಾಮಾಜಿಕ ಗುಂಪುಗಳಲ್ಲಿರುವ ಶೈಕ್ಷಣಿಕ ತಾರತಮ್ಯವನ್ನು ವಿವರಿಸುತ್ತಾ, ಪುರುಷ-ಮಹಿಳೆಯರ ತಾರತಮ್ಯ, ಗ್ರಾಮೀಣ-ನಗರ ತಾರತಮ್ಯ.........ಹೀಗೆ ಅನೇಕ ಸಾಮಾಜಿಕ

ಗುಂಪುಗಳ ನಡುವೆಯಿರುವ ತಾರತಮ್ಯವು ಅಭಿವೃದ್ಧಿ ಪ್ರಕ್ರಿಯೆಗೆ ತೊಡಕಾಗುತ್ತದೆ. ಪರಿಶಿಷ್ಟ ಜಾತಿಯವರಿಗಿಂತ ಪರಿಶಿಷ್ಟ ಪಂಗಡದ ಶಾಲಾ ದಾಖಲಾತಿ ಕಡಿಮೆಯಿರುವುದು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಶಾಲಾ ದಾಖಲಾತಿ ಇತರೆ ಜಾತಿಯವರಿಗಿಂತ ಕಡಿಮೆಯಿರುವುದು, ಪುರುಷರಿಗಿಂತ ಸ್ತ್ರೀಯರ ಶಾಲಾ ದಾಖಲಾತಿ ಕಡಿಮೆಯಿರುವುದು, ಇವೆಲ್ಲವೂ ಒಂದು ರಾಷ್ಟ್ರದ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುವ ಪ್ರಮುಖ ಅಂಶಗಳು. ಆದ್ದರಿಂದಲೇ ಸಾಕ್ಷರತಾ ದರ ಕೂಡಾ ಕಡಿಮೆಯಿರುತ್ತದೆ ಎಂದಿದ್ದಾರೆ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯,ಪು.೧೧೪).


ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಮತ್ತು ದುಡಿಯುವ ಶಕ್ತಿಯನ್ನು ದೊರಕಿಸಿಕೊಡುವ ಏಕೈಕ ಮಾರ್ಗವೆಂದರೆ ಶಿಕ್ಷಣ ಮತ್ತು ಸಾಕ್ಷರತೆ. ಲಿಂಗತಾರತಮ್ಯವೆಂದ ತಕ್ಷಣವೇ ಇಲ್ಲಿ ಪ್ರಮುಖವಾಗಿ ಯೋಚಿಸಬೇಕಾದದ್ದು ಸ್ತ್ರೀ-ಶಿಕ್ಷಣದ ಬಗ್ಗೆ. ಅಭಿವೃದ್ಧಿ ಮಂತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಲಿಂಗ-ಸಮಾನತೆಯೇ ಪ್ರಮುಖವಾದದ್ದು. ಸ್ತ್ರೀ-ಪುರುಷರ ಅನುಪಾತ, ಜನಸಂಖ್ಯೆಯಲ್ಲೂ, ಶಾಲಾ ದಾಖಲಾತಿಯಲ್ಲಿಯೂ, ಸಾಕ್ಷರತೆಯಲ್ಲಿಯೂ ಕಡಿಮೆಯಿರುವುದು ಕಟು ವಾಸ್ತವವಾದದ್ದು.

ಸಿದ್ಧಗಂಗಾ ಮಠ ಕೂಡ ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಪ್ರೌಢಶಾಲೆಗಳನ್ನು ಸ್ಥಾಪಿಸಿದ್ದರೂ ಕೂಡ, ಹೆಣ್ಣು ಮಕ್ಕಳ ದಾಖಲಾತಿಯಲ್ಲಿ ಉತ್ತಮವಾದ ಕೊಡುಗೆಯನ್ನೇನೂ ನೀಡಿಲ್ಲ. ಎಲ್ಲಾ ಜಾತಿಯವರಲ್ಲಿಯೂ ಹೆಣ್ಣು ಮಕ್ಕಳ ದಾಖಲಾತಿ, ಗಂಡು ಮಕ್ಕಳ ದಾಖಲಾತಿಯ ಅರ್ಧದಷ್ಟು ಕಾಣಬಹುದಾಗಿದೆ. ೩೧ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಲಾಗಿದೆ.

ಪಟ್ಟಿ : ೫ ಸಿದ್ಧಗಂಗಾ ಮಠದ ತುಮಕೂರು ಜಿಲ್ಲೆಯ ೩೧ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು

	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಅಲ್ಪಸಂಖ್ಯಾತರು			ಇತರೆ			ಒಟ್ಟು			
ಕ್ರ ಸಂ	ವರ್ಷ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧.	೨೦೦೪-೦೫	೬೬೦ ೬.೧೮ %	೪೫೬ ೪.೨೯ %	೧,೧೧೬ ೧೧.೪೫%	೫೧೪ ೪.೮೩ %	೩೭೪ ೩.೫೦%	೬೮೭ ೬.೯೩%	೩೫೦ ೩.೪೪%	೩೦೭ ೧.೯೪%	೪೬೬ ೪.೩೮%	೬೧೧೭ ೫೭.೪೭%	೩೧೦೪ ೧೯.೬೬%	೮೨೩೧ ೬೬.೩೫ %	೬೬೫೦ ೬೧.೮೮%	೩೯೯೩ ೩೮.೧೧%	೧೦೬೮೩ ೧೦೦%
೨.	೨೦೦೫-೦೬	೬೫೦ ೬.೮೫%	೪೬೪ ೪.೯೬%	೧೧೮೪ ೧೦.೮೩%	೫೦೯ ೪.೬೫%	೩೬೩ ೩.೧೩%	೬೪೧ ೬.೬೬%	೩೩ ೩.೪೮%	೨೦೩ ೧.೮೪%	೪೬೪ ೪.೬೬%	೬೪೩೪ ೫೮.೬೫%	೩೧೧೦ ೧೯.೫೯%	೮೫೬೪ ೬೮.೦೫%	೬೯೫೫ ೬೩.೯೬%	೩೯೬೮ ೩೬.೩೪%	೧೦೯೬೬ ೧೦೦%
೩.	೨೦೦೬-೦೭	೬೬೮ ೬.೦೮%	೪೫೧ ೪.೦೬%	೧,೧೦೯ ೧೧.೧೫%	೪೮೮ ೪.೫೦%	೩೫ ೩.೧೧%	೬೧೭ ೬.೬೧%	೩೫೧ ೩.೬೧%	೩೧೯ ೩.೦೧%	೪೬೦ ೪.೬೬%	೬೬೬೭ ೫೮.೪೪%	೩೧೧೦ ೧೯.೪೫%	೮೪೪೭ ೬೬.೬೦%	೬೮೪೪ ೬೩.೬೬%	೩೯೯೯ ೩೬.೬೫%	೧೦೮೪೬ ೧೦೦%
೪.	ಒಟ್ಟು	೩೩೯೮ ೬.೦೩ %	೧೬೬೩ ೪.೧೦%	೬೬೧೦ ೧೧.೧೬%	೧೫೫೧೦ ೪.೬೫%	೬೮೫ ೩.೧೧%	೩೧೯೫ ೬.೬೬%	೬೮೬ ೩.೫೧%	೬೫೫ ೧.೯೬%	೧೪೧೧ ೪.೬೫%	೧೮೮೬೮ ೧೯.೫೦%	೬೬೫೫ ೫೮.೩೬%	೫೫೫೦೩ ೬೬.೬೮%	೩೫೪೮೬ ೬೩.೬೬	೮೯೬೯ ೩೬.೬೬%	೩೫೧೮ ೧೦೦%

ಆಧಾರ : ೩೧ ಸಿದ್ಧಗಂಗಾ ಮಠದ ಪ್ರೌಢಶಾಲೆಗಳಿಂದ ಪಡೆದ ಮಾಹಿತಿ, ೨೦೦೭.



ಪರಿಶಿಷ್ಟ ಜಾತಿ ಗಂಡು
ಪರಿಶಿಷ್ಟ ಜಾತಿ ಹೆಣ್ಣು
ಪರಿಶಿಷ್ಟ ಪಂಗಡ ಗಂಡು
ಪರಿಶಿಷ್ಟ ಪಂಗಡ ಹೆಣ್ಣು
ಅಲ್ಪಸಂಖ್ಯಾತರು ಗಂಡು
ಅಲ್ಪಸಂಖ್ಯಾತರು ಹೆಣ್ಣು
ಇತರೆ ಗಂಡು
ಇತರೆ ಹೆಣ್ಣು
ಒಟ್ಟು ಗಂಡು
ಒಟ್ಟು ಹೆಣ್ಣು
೨೦೦೪-೦೫
೨೦೦೫-೦೬
೨೦೦೬-೦೭

೨೦೦೪-೦೫, ೨೦೦೫-೦೬ ಮತ್ತು ೨೦೦೬-೦೭ ರ ಅವಧಿಯಲ್ಲಿ, ಸಿದ್ಧಗಂಗಾಮಠ ನಡೆಸುತ್ತಿರುವ ತುಮಕೂರು ಜಿಲ್ಲೆಯ ಒಟ್ಟು ೩೧ ಪ್ರೌಢಶಾಲೆಗಳಿಂದ ಒಟ್ಟು ೩೨.೪೧೮ ವಿದ್ಯಾರ್ಥಿಗಳು ಪ್ರೌಢಶಾಲೆಗಳಲ್ಲಿ ಅಧ್ಯಯನ ಮಾಡಿದ್ದಾರೆ. ೨೦೦೪-೦೫, ೨೦೦೫-೦೬ ಮತ್ತು ೨೦೦೬-೨೦೦೭ ರ ಅವಧಿಯಲ್ಲಿ ೮, ೯ ಮತ್ತು ೧೦ ನೇ ತರಗತಿಗಳಲ್ಲಿ ಅಧ್ಯಯನ ಮಾಡಿರುವ ಒಟ್ಟು ವಿದ್ಯಾರ್ಥಿಗಳನ್ನು ಪರಿಗಣಿಸಲಾಗಿದೆ. ೨೦೦೪-೦೫ ರ ಅವಧಿಯಲ್ಲಿ ೧೦೬೪೨ ವಿದ್ಯಾರ್ಥಿಗಳು, ೨೦೦೫-೦೬ ರ ಅವಧಿಯಲ್ಲಿ ೧೯೩೩ ವಿದ್ಯಾರ್ಥಿಗಳು, ೨೦೦೬-೦೭ ರ ಅವಧಿಯಲ್ಲಿ ೧೦೮೪೩ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣವನ್ನು ಪಡೆದಿದ್ದಾರೆ.

೨೦೦೪-೦೫ ರ ಅವಧಿಯಲ್ಲಿ ಒಟ್ಟು ೧೦೬೪೨ ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ. ಇದರಲ್ಲಿ ೧೨೧೭ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಯವರಿದ್ದು, ಶೇ.೧೧.೪೩ ರಷ್ಟಿದ್ದಾರೆ. ಶೇ.೭.೧೪ ರಷ್ಟು ಪರಿಶಿಷ್ಟ ಜಾತಿಯ ಗಂಡು ಮಕ್ಕಳು ಪ್ರೌಢಶಾಲಾ ಹಂತವನ್ನು ಮುಗಿಸಿದ್ದರೆ. ಶೇ.೪.೨೯ ರಷ್ಟು ಹೆಣ್ಣು ಮಕ್ಕಳು ಶಿಕ್ಷಣ ಪಡೆದಿದ್ದಾರೆ. ಹೆಣ್ಣು ಮಕ್ಕಳು ಬಾಲಕರಿಗಿಂತ ಅರ್ಧಕ್ಕಿಂತ ಸ್ವಲ್ಪ ಪ್ರಮಾಣದಲ್ಲಿ ಅಥವಾ ಕಡಿಮೆ ಅಂತರದಲ್ಲಿ ಶಿಕ್ಷಣದಿಂದ ವಂಚಿತರಾಗಿರುವುದು ಗೋಚರಿಸುತ್ತದೆ. ಪರಿಶಿಷ್ಟ ಪಂಗಡದವರಲ್ಲಿ, ಒಟ್ಟು ೭೩೭ ವಿದ್ಯಾರ್ಥಿಗಳಿದ್ದು, ಶೇ.೪.೮೨ ರಷ್ಟು ಬಾಲಕರು ಪರಿಶಿಷ್ಟ ಪಂಗಡದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದಿದ್ದರೆ, ಶೇ.೨.೧೦ ರಷ್ಟು ಬಾಲಕಿಯರು ಶಿಕ್ಷಣ ಪಡೆದಿದ್ದಾರೆ. ಈ ಅವಧಿಯಲ್ಲಿ ಪರಿಶಿಷ್ಟ ಪಂಗಡದವರಲ್ಲಿ ಬಾಲಕರು ಬಾಲಕಿಯರಿಗಿಂತ ಎರಡು ಪಟ್ಟು ಅಧಿಕವಾಗಿರುವುದನ್ನು ಕಾಣಬಹುದಾಗಿದೆ. ಅಲ್ಪಸಂಖ್ಯಾತರಲ್ಲಿಯೂ ಶಿಕ್ಷಣ ಪಡೆಯುವಲ್ಲಿ ಬಾಲಕರೇ ಮೇಲುಗೈ ಸಾಧಿಸಿದ್ದಾರೆ. ಒಟ್ಟು ಶೇ.೪.೩೮ ರಷ್ಟು ವಿದ್ಯಾರ್ಥಿಗಳಲ್ಲಿ, ಶೇ.೨.೪೪ ಬಾಲಕರು ಮತ್ತು ಶೇ.೧.೯೪ ರಷ್ಟು ಬಾಲಕಿಯರಿದ್ದಾರೆ. ಇತರೆ ಎಲ್ಲಾ ಜಾತಿಯವರಲ್ಲಿ ಒಟ್ಟು ೮೨೨೧ ವಿದ್ಯಾರ್ಥಿಗಳಲ್ಲಿ ೬೧೧೭ ರಷ್ಟು ಬಾಲಕರು ಮತ್ತು ೨೧೦೪ ರಷ್ಟು ಬಾಲಕಿಯರು ಪ್ರೌಢಶಿಕ್ಷಣ ಪಡೆದಿದ್ದಾರೆ. ಅಂದರೆ ಶೇ.೭೭.೨೫ ರಷ್ಟು ಶಿಕ್ಷಣ ಪಡೆದವರಲ್ಲಿ ಶೇ.೫೭.೪೭ ರಷ್ಟು ಬಾಲಕರು ಮತ್ತು ೧೯.೭೭ ರಷ್ಟು ಬಾಲಕಿಯರು ಶಿಕ್ಷಣ ಪಡೆದಿದ್ದಾರೆ. ಒಟ್ಟು ಪ್ರೌಢಶಾಲಾ ಶಿಕ್ಷಣದಲ್ಲಿ ಶೇ.೭೧.೮೮ ರಷ್ಟು ಬಾಲಕರು ಕಂಡುಬಂದರೆ, ಶೇ.೨೮.೧೧ ರಷ್ಟು ಬಾಲಕಿಯರು ಶಿಕ್ಷಣ ಪಡೆದಿದ್ದಾರೆ. ಆದ್ದರಿಂದ ೪೬೫೮ ಬಾಲಕಿಯರು ಬಾಲಕರಿಗಿಂತ ಕಡಿಮೆಯಿದ್ದು, ಶೇ.೪೩.೭೬ ರಷ್ಟು ಬಾಲಕಿಯರು ಬಾಲಕರಿಗಿಂತ ಕಡಿಮೆಯಿದ್ದಾರೆ.

೨೦೦೫-೦೬ ರ ಅವಧಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೯೯೩೩. ವಿಭಿನ್ನ ಜಾತಿಯ ನೆಲೆಯಲ್ಲಿ ಸಾಮಾಜಿಕ ಆಯಾಮಗಳನ್ನು ಅಧ್ಯಯನ ಮಾಡಿದರೆ, ಪರಿಶಿಷ್ಟ ಜಾತಿಯಲ್ಲಿ ಶೇ.೧೦.೮೨ ರಷ್ಟು ವಿದ್ಯಾರ್ಥಿಗಳಿದ್ದು, ಇದರಲ್ಲಿ ಶೇ.೬.೮೫ ರಷ್ಟು ಬಾಲಕರಿದ್ದರೆ, ಶೇ.೩.೯೬ ರಷ್ಟು ಬಾಲಕಿಯರಿದ್ದಾರೆ, ಪರಿಶಿಷ್ಟ ಜಾತಿಯಲ್ಲಿಯೂ ಈ ಅವಧಿಯಲ್ಲಿ ಬಾಲಕರು ಬಾಲಕಿಯರಿಗಿಂತ ಎರಡು ಪಟ್ಟು ಅಧಿಕವಾಗಿದ್ದಾರೆ.

ಪರಿಶಿಷ್ಟ ಪಂಗಡದಲ್ಲಿ ಶೇ.೬.೭೭ ರಷ್ಟು ವಿದ್ಯಾರ್ಥಿಗಳಿದ್ದು, ಶೇ.೪.೬೫ ರಷ್ಟು ಬಾಲಕರು ಮತ್ತು ಶೇ.೨.೧೨ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿಯೂ ಬಾಲಕಿಯರಿಗಿಂತ ಬಾಲಕರು ಎರಡು ಪಟ್ಟು ಅಧಿಕವಾಗಿದ್ದರೆ, ಅಲ್ಪಸಂಖ್ಯಾತರಲ್ಲಿಯೂ ಒಟ್ಟು ಶೇ.೪.೩೩ ರಷ್ಟು ವಿದ್ಯಾರ್ಥಿಗಳಿದ್ದು, ಶೇ.೨.೪೮ ರಷ್ಟು ಬಾಲಕರು ಮತ್ತು ಶೇ.೧.೮೪ ರಷ್ಟು ವಿದ್ಯಾರ್ಥಿನಿಯರಿದ್ದಾರೆ. ೨೮೨ ವಿದ್ಯಾರ್ಥಿಗಳು ಬಾಲಕರಿದ್ದರೆ, ೨೦೨ ರಷ್ಟು ಬಾಲಕಿಯರಿದ್ದಾರೆ. ಪ್ರೌಢಶಾಲಾ ಶಿಕ್ಷಣ ಪಡೆಯುವಲ್ಲಿ ಇತರೆ ಜಾತಿಯವರು ಅಧಿಕವಾಗಿರುವುದು ಕಂಡುಬರುತ್ತದೆ. ಒಟ್ಟು ೮೫೩೪ ವಿದ್ಯಾರ್ಥಿಗಳಲ್ಲಿ ೬೪೨೪ ವಿದ್ಯಾರ್ಥಿಗಳಿದ್ದು, ೨೧೧೦ ರಷ್ಟು ಬಾಲಕಿಯರಿದ್ದರೆ. ಶೇಕಡವಾರು ೭೮.೦೫ ರಷ್ಟು ಬಾಲಕರು ಮತ್ತು ಶೇ.೧೯.೨೯ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯ ಅಂಕಿ-ಅಂಶಗಳನ್ನು ಗಮನಿಸಿದರೆ ಬಾಲಕಿಯರಿಗಿಂತ ಮೂರು ಪಟ್ಟು ಬಾಲಕರೇ ಅಧಿಕವಾಗಿದ್ದಾರೆ. ಒಟ್ಟು ೧೯೯೩೩ ವಿದ್ಯಾರ್ಥಿಗಳಲ್ಲಿ ಶೇ.೭೨.೭೬ ರಷ್ಟು ಅಂದರೆ ೭೯೫೫ ಬಾಲಕರು ಮತ್ತು ಶೇ.೨೭.೨೩ ರಷ್ಟು ಅಂದರೆ ೨೯೭೮ ಬಾಲಕಿಯರಿದ್ದಾರೆ. ಬಾಲಕರಿಗೆ ಹೋಲಿಸಿದಲ್ಲಿ ಶೇ. ೪೫.೫೨ ರಷ್ಟು ವಿದ್ಯಾರ್ಥಿನಿಯರು ಪ್ರೌಢಶಾಲಾ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಅವಧಿಯಲ್ಲಿಯೂ ೨೦೦೬-೦೭ ರ ಅವಧಿಯಲ್ಲಿ ಒಟ್ಟು ೧೦,೮೪೩ ವಿದ್ಯಾರ್ಥಿಗಳಿದ್ದರು. ಪರಿಶಿಷ್ಟ ಜಾತಿಯಲ್ಲಿ ಒಟ್ಟು ಶೇ.೧೧.೧೫ ರಷ್ಟು ವಿದ್ಯಾರ್ಥಿಗಳಲ್ಲಿ, ಶೇ.೭.೦೮ ರಷ್ಟು ಬಾಲಕರು ಮತ್ತು ಶೇ.೪.೦೬ ರಷ್ಟು ಬಾಲಕಿಯರಿದ್ದಾರೆ. ಶಿಕ್ಷಣ ಪಡೆಯುವಲ್ಲಿ ಬಾಲಕರೇ ಮೇಲುಗೈ ಸಾಧಿಸಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೬.೬೧ ರಷ್ಟು ಒಟ್ಟು ವಿದ್ಯಾರ್ಥಿಗಳಿದ್ದು, ಶೇ.೪.೫೦ ರಷ್ಟು ಬಾಲಕರಿದ್ದು, ಶೇ.೨.೧೧ ರಷ್ಟು ಬಾಲಕಿಯರಿದ್ದಾರೆ. ಬಾಲಕರು ಈ ಅವಧಿಯಲ್ಲಿಯೂ ಬಾಲಕಿಯರಿಗಿಂತ ಎರಡು ಪಟ್ಟು ಅಧಿಕವಾಗಿದ್ದಾರೆ.

ಅಲ್ಪಸಂಖ್ಯಾತರಲ್ಲಿ ಶೇ.೪.೩೩ ರಷ್ಟು ಒಟ್ಟು ವಿದ್ಯಾರ್ಥಿಗಳಿದ್ದು, ಶೇ.೨.೩೧ ರಷ್ಟು ಬಾಲಕರು ಮತ್ತು ಶೇ.೨.೦೧ ರಷ್ಟು ಬಾಲಕಿಯರಿದ್ದು, ಶಿಕ್ಷಣವನ್ನು ಪಡೆಯುವಲ್ಲಿ ಬಾಲಕರು ಮತ್ತು ಬಾಲಕಿಯರು

ಸರಿಸುಮಾರು ಸಮನಾಗಿದ್ದಾರೆ. ಇತರೆ ಜಾತಿಯವರಲ್ಲಿ ಒಟ್ಟು ೮೪೪೭ ವಿದ್ಯಾರ್ಥಿಗಳಿದ್ದು, ೬೩೩೭ ರಷ್ಟು ಬಾಲಕರು ಮತ್ತು ೨೧೧೦ ರಷ್ಟು ಬಾಲಕಿಯರಿದ್ದಾರೆ. ಅಂದರೆ ಶೇ.೫೮.೪೪ ರಷ್ಟು ಬಾಲಕರು ಮತ್ತು ಶೇ.೧೯.೪೫ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿಯೂ ಬಾಲಕರು ಬಾಲಕಿಯರಿಗಿಂತ ಹೆಚ್ಚು ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರೆ ಜಾತಿಯವರೆಲ್ಲರನ್ನೂ ಕೂಡಿಸಿದರೆ, ಒಟ್ಟು ೭೮೪೪ ಬಾಲಕರು ಮತ್ತು ೨೯೯೯ ರಷ್ಟು ಬಾಲಕಿಯರಿದ್ದಾರೆ. ಅಂದರೆ ಶೇ.೭೨.೪೩ ರಷ್ಟು ಬಾಲಕರು ಮತ್ತು ಶೇ.೨೭.೬೫ ರಷ್ಟು ಬಾಲಕಿಯರು ಕಂಡುಬರುತ್ತಾರೆ. ಈ ಅವಧಿಯಲ್ಲಿಯೂ ಬಾಲಕರು ಬಾಲಕಿಯರಿಗಿಂತ ಮೂರು ಪಟ್ಟು ಅಧಿಕವಾಗಿದ್ದಾರೆ.

೨೦೦೪-೦೫, ೨೦೦೫-೦೬ ಮತ್ತು ೨೦೦೬-೦೭, ಈ ಮೂರು ವರ್ಷಗಳ ಅವಧಿಯಲ್ಲಿ ಒಟ್ಟು ೩೨೪೧೮ ವಿದ್ಯಾರ್ಥಿಗಳು ೩೧ ಪ್ರೌಢಶಾಲೆಗಳಿಂದ ಶಿಕ್ಷಣ ಪಡೆದವರಾಗಿದ್ದಾರೆ. ಇದರಲ್ಲಿ ೨೩೪೪೯ ಬಾಲಕರು ಮತ್ತು ೮೯೬೯ ಬಾಲಕಿಯರಿದ್ದಾರೆ. ಅಂದರೆ ಶೇ.೭೨.೩೩ ರಷ್ಟು ಬಾಲಕರು ಮತ್ತು ಶೇ.೨೭.೬೬ ರಷ್ಟು ಬಾಲಕಿಯರಿದ್ದಾರೆ. ಬಾಲಕರಿಗಿಂತ ಅರ್ಧದಷ್ಟು ಬಾಲಕಿಯರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಶೇ.೧೧.೧೩ ರಷ್ಟು ಒಟ್ಟು ವಿದ್ಯಾರ್ಥಿಗಳಿದ್ದು, ಶೇ.೭.೦೨ ರಷ್ಟು ಬಾಲಕರು ಮತ್ತು ಶೇ.೪.೧೦ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೪.೬೫ ರಷ್ಟು ಬಾಲಕರು ಮತ್ತು ಶೇ.೨.೧೧ ರಷ್ಟು ಬಾಲಕಿಯರು ಕಂಡುಬರುತ್ತಾರೆ. ಒಟ್ಟಾರೆ ಶೇ.೬.೭೭ ರಷ್ಟು ಪರಿಶಿಷ್ಟ ಪಂಗಡದರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಶೇ.೪.೩೫ ರಷ್ಟಿದ್ದು, ಶೇ.೨.೪೧ ರಷ್ಟು ಬಾಲಕರು ಮತ್ತು ಶೇ.೧.೯೩ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಶೇ.೫೮.೨೩ ರಷ್ಟು ಬಾಲಕರಿದ್ದು, ಶೇ.೧೯.೫೦ ರಷ್ಟು ಬಾಲಕರಿದ್ದಾರೆ.

ಮೇಲ್ಕಂಡ ಅಂಕಿ-ಅಂಶಗಳನ್ನು ಗಮನಿಸಿದಾಗ ಬಾಲಕರಿಗಿಂತ ಬಾಲಕಿಯರ ಸಂಖ್ಯೆ ಕಡಿಮೆಯಿದೆ. ಎಲ್ಲಾ ಮೂರು ವರ್ಷಗಳಲ್ಲಿಯೂ ಇದು ಪ್ರಮುಖವಾಗಿ ಗೋಚರಿಸುವ ಅಂಶವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಪ್ರೌಢಶಾಲೆಗಳಿದ್ದರೂ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದು ಇನ್ನೂ ಪ್ರಶ್ನಾತೀತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮನೆಯ ಕೆಲಸದ ಜವಾಬ್ದಾರಿಯು ಹೆಣ್ಣು ಮಕ್ಕಳಿಗೆ ಅಧಿಕವಾಗಿರುವುದೊಂದು ಕಾರಣವಾದರೆ, ಶಾಲೆಗಳಲ್ಲಿ ಶಿಕ್ಷಕಿಯರು ಇಲ್ಲದಿರುವುದು ಪೋಷಕರು ಶಾಲೆಗೆ ಕಳುಹಿಸದಿರಲು ಮತ್ತೊಂದು ಕಾರಣವಾಗಿರಬಹುದು. ಒಟ್ಟು ೩೨೪೧೮ ವಿದ್ಯಾರ್ಥಿಗಳಲ್ಲಿ ೨೩೪೪೯ ಬಾಲಕರಿದ್ದು, ೮೯೬೯ ಬಾಲಕಿಯರಿದ್ದಾರೆ. ಅಂದರೆ ಶೇ.೭೨.೩೩ ರಷ್ಟು ಬಾಲಕರು ಮತ್ತು ಶೇ.೨೭.೬೬

ಬಾಲಕಿಯರಿದ್ದಾರೆ. ಆದ್ದರಿಂದ ಶೇ.೪೪.೬೬ ರಷ್ಟು ಬಾಲಕಿಯರು ಈ ಮೂರು ವರ್ಷದ ಅವಧಿಯಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದಾರೆ.


೪.೫ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳು

ಸಿದ್ಧಗಂಗಾ ಮಠ ತುಮಕೂರು ಜಿಲ್ಲೆಯಲ್ಲಿ ನಡೆಸುತ್ತಿರುವ ಪ್ರೌಢಶಾಲೆಗಳಲ್ಲಿ ೩೧ ಪ್ರೌಢಶಾಲೆಗಳಿದ್ದು, ಇದರಲ್ಲಿ ೨೫ ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹರಡಿಕೊಂಡಿದ್ದು, ೦೬ ನಗರ ಪ್ರದೇಶಗಳಲ್ಲಿ ಹರಡಿಕೊಂಡಿವೆ. ೦೬ ನಗರ ಪ್ರದೇಶಗಳಲ್ಲಿರುವ ಪ್ರೌಢಶಾಲೆಗಳಲ್ಲಿ ಎಲ್ಲವೂ ತುಮಕೂರಿನಲ್ಲಿಯೇ ಕೇಂದ್ರಿತವಾಗಿವೆ. ಶ್ರೀ ಸಿದ್ಧಗಂಗಾ ಮಠದಲ್ಲಿಯೇ ೦೨ ಪ್ರೌಢಶಾಲೆಗಳಿವೆ. ಶ್ರೀ ಸಿದ್ಧಗಂಗಾ ಮಠದ ಆನತಿ ದೂರದಲ್ಲಿರುವ ಕ್ಯಾತ್ಸಂದ್ರದಲ್ಲಿ ಮತ್ತೊಂದು ಪ್ರೌಢಶಾಲೆಯಿದೆ. ಉಳಿದ ಮೂರು ಪ್ರೌಢಶಾಲೆಗಳು ತುಮಕೂರು ನಗರದಲ್ಲಿಯೇ ಇದೆ. ಈ ಮೂರು ಶಾಲೆಗಳಲ್ಲಿ ಒಂದು ಬಾಲಕರ ಪ್ರೌಢಶಾಲೆ. ಮತ್ತೊಂದು ಬಾಲಕಿಯರ ಪ್ರೌಢಶಾಲೆ, ಮೊಗದೊಂದು ಪ್ರೌಢಶಾಲೆಯು ಸಂಯುಕ್ತ ಶಾಲೆಯಾಗಿದೆ. ತುಮಕೂರಿನಲ್ಲಿಯೇ ಈ ಆರು ಪ್ರೌಢಶಾಲೆಗಳು ಕೇಂದ್ರೀಕೃತವಾಗಿರುವುದು ಗಮನಾರ್ಹವಾದುದು. ಉಳಿದ ೨೫ ಪ್ರೌಢಶಾಲೆಗಳು ತುಮಕೂರು ಜಿಲ್ಲೆಯ ಒಂಭತ್ತು ತಾಲ್ಲೋಕುಗಳಲ್ಲಿಯೂ ಹರಡಿಕೊಂಡಿವೆ. ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳನ್ನು ಕೆಳಗಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಪಟ್ಟಿ : ೬ ಸಿದ್ಧಗಂಗಾ ಮಠದ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು
೨೦೦೪-೦೫, ೨೦೦೫-೦೬, ೨೦೦೬-೦೭

ಪ್ರೌಢಶಾಲೆಗಳು			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಅಲ್ಪಸಂಖ್ಯಾತರು			ಇತರೆ			ಒಟ್ಟು		
ಕ್ರ. ಸಂ.	ಗ್ರಾಮೀಣ: ನಗರ	ವರ್ಷ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗ್ರಾಮೀಣ ೨೫ ಪ್ರೌಢಶಾಲೆಗಳು	೨೦೦೪-೦೫	೪೨೪ ೮.೧೧%	೪೦೫ ೭.೭೫%	೮೨೯ ೧೫.೮೭%	೨೪೦ ೪.೫೯%	೧೯೪ ೩.೭೧%	೪೩೪ ೮.೩೧%	೧೪೮ ೨.೮೩%	೧೮೯ ೩.೬೧%	೩೩೭ ೬.೪೫%	೧೯೦೪ ೩೬.೪೬%	೧೭೧೮ ೩೨.೮೯%	೩೬೨೨ ೬೯.೩೬%	೨೭೧೬ ೫೨.೦೧%	೨೫೦೬ ೪೭.೯೮%	೫೨೨೨ ೧೦೦%
		೨೦೦೫-೦೬	೪೧೧ ೭.೯೨%	೩೭೯ ೭.೩೦%	೭೯೦ ೧೫.೨೨%	೨೨೦ ೪.೨೩%	೧೯೭ ೩.೭೯%	೪೧೭ ೮.೦೩%	೧೬೦ ೩.೦೮%	೧೮೩ ೩.೫೨%	೩೪೩ ೬.೬೧%	೧೮೭೫ ೩೬.೧೩	೧೭೬೫ ೩೪.೦೧	೩೬೪೦ ೭೦.೧೪%	೨೬೬೫ ೫೧.೩೫%	೨೫೨೪ ೪೮.೬೪%	೫೧೮೯ ೧೦೦%
		೨೦೦೬-೦೭	೪೦೫ ೭.೭೬%	೩೮೮ ೭.೪೩%	೭೯೩ ೧೫.೨೦%	೨೨೭ ೪.೩೫%	೧೯೨ ೩.೬೮%	೪೨೩ ೮.೧೦%	೧೬೩ ೩.೧೨%	೧೮೮ ೩.೬೦%	೩೬೧ ೬.೯೧%	೧೮೯೩ ೩೬.೨೮%	೧೭೫೧ ೩೩.೫೬%	೩೬೪೪ ೬೯.೮೪%	೨೬೮೮ ೫೧.೫೨%	೨೫೨೯ ೪೮.೪೭%	೫೨೧೭ ೧೦೦%
		ಒಟ್ಟು	೧೨೪೦ ೭.೯೩%	೧೧೭೨ ೭.೪೯%	೨೪೧೨ ೧೫.೪೩%	೬೮೭ ೪.೩೯%	೫೮೩ ೩.೭೩%	೧೨೭೪ ೮.೧೫%	೪೭೧ ೩.೦೧%	೫೬೦ ೩.೫೮%	೧೦೪೧ ೬.೬೬%	೫೬೭೨ ೩೬.೨೯%	೫೨೩೪ ೩೩.೪೯%	೧೦೯೦೬ ೬೯.೭೮%	೮೦೬೯ ೫೧.೬೩%	೭೫೫೯ ೪೮.೩೭%	೧೫೬೨೮ ೧೦೦%
೨	ನಗರ ೦೬ ಪ್ರೌಢಶಾಲೆಗಳು	೨೦೦೪-೦೫	೩೩೬ ೬.೧೯%	೫೨ ೦.೯೫%	೩೮೮ ೭.೧೫%	೨೭೩ ೫.೦೩%	೩೦ ೦.೫೫%	೩೦೩ ೫.೫೯%	೧೧೨ ೨.೦೬%	೧೮ ೦.೩೩%	೧೩೦ ೨.೩೯%	೪೨೧೩ ೭೭.೭೩%	೩೮೬ ೭.೧೨%	೪೫೯೯ ೮೪.೮೫%	೪೯೩೪ ೯೧.೦೩%	೪೮೬ ೮.೯೬%	೫೪೨೦ ೧೦೦%
		೨೦೦೫-೦೬	೩೩೯ ೫.೯೦%	೫೫ ೦.೯೫%	೩೯೪ ೬.೮೫%	೨೮೯ ೫.೦೩%	೩೫ ೦.೬೦%	೩೨೪ ೫.೬೪%	೧೧೨ ೧.೯೪%	೧೯ ೦.೩೩%	೧೩೧ ೨.೨೮%	೪೫೪೯ ೭೯.೧೯%	೩೪೫ ೬.೦೦%	೪೮೯೪ ೮೫.೨೦೫	೫೨೯೦ ೯೨.೦೯%	೪೫೪ ೭.೯೦%	೫೭೪೪ ೧೦೦%
		೨೦೦೬-೦೭	೩೬೩ ೬.೪೫%	೫೩ ೦.೯೪%	೪೧೬ ೭.೩೯%	೨೬೧ ೪.೬೪%	೩೭ ೦.೬೫%	೨೯೮ ೫.೨೯%	೭೮ ೧.೩೮%	೩೧ ೦.೫೫%	೧೦೯ ೧.೯೩%	೪೪೪೪ ೭೮.೯೯%	೩೫೯ ೬.೩೮%	೪೮೦೩ ೮೫.೩೨%	೫೧೫೬ ೯೧.೬೪%	೪೭೦ ೮.೩೫%	೫೬೨೬ ೧೦೦%
		ಒಟ್ಟು	೧೦೩೮ ೬.೧೮%	೧೬೦ ೦.೯೫%	೧೧೯೮ ೭.೧೩%	೮೨೩ ೪.೯೦%	೧೦೨ ೦.೬೦%	೯೨೫ ೦.೦೫%	೩೦೨ ೧.೭೯%	೬೮ ೦.೪೦%	೩೭೦ ೨.೨೦%	೧೩೨೦೬ ೭೮.೬೫%	೧೦೯೦ ೬.೪೯%	೧೪೨೯೬ ೮೫.೧೪%	೧೫೩೮೦ ೯೧.೬೦%	೧೪೧೦ ೮.೩೯%	೧೬೭೯೦ ೧೦೦%

ಆಧಾರ : ೩೧ ಪ್ರೌಢಶಾಲೆಗಳಿಂದ ಪಡೆದ ಅಂಕಿ-ಅಂಶಗಳು, ೨೦೦೭


೫೦೦೦
೪೫೦೦
೪೦೦೦
೩೫೦೦
೩೦೦೦
೨೫೦೦
೨೦೦೦
೧೫೦೦
೧೦೦೦
೫೦೦
೦
೨೦೦೪-೦೫
೨೦೦೫-೦೬
೨೦೦೬-೦೭
೨೦೦೪-೦೫
೨೦೦೫-೦೬
೨೦೦೬-೦೭
ಗ್ರಾಮೀಣ
ನಗರ
ಪರಿಶಿಷ್ಟ ಜಾತಿ ಗಂಡು
ಪರಿಶಿಷ್ಟ ಜಾತಿ ಹೆಣ್ಣು
ಪರಿಶಿಷ್ಟ ಪಂಗಡ ಗಂಡು
ಪರಿಶಿಷ್ಟ ಪಂಗಡ ಹೆಣ್ಣು
ಅಲ್ಪಸಂಖ್ಯಾತರು ಗಂಡು
ಅಲ್ಪಸಂಖ್ಯಾತರು ಹೆಣ್ಣು
ಇತರೆ ಗಂಡು
ಇತರೆ ಹೆಣ್ಣು

೨೦೦೪-೦೫ ರಲ್ಲಿ ಒಟ್ಟು ೫೨೨೨ ವಿದ್ಯಾರ್ಥಿಗಳಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರೆ ಜಾತಿಯ ವಿದ್ಯಾರ್ಥಿಗಳಿದ್ದಾರೆ. ಪರಿಶಿಷ್ಟ ಜಾತಿಯವರಲ್ಲಿ ಶೇ.೧೫.೮೭ ರಲ್ಲಿ ಶೇ.೮.೧೧ ರಷ್ಟು ಬಾಲಕರು ಮತ್ತು ಶೇ.೭.೭೫ ರಷ್ಟು ಬಾಲಕಿಯರಿದ್ದಾರೆ. ಬಾಲಕರ ದಾಖಲಾತಿ ಪ್ರಮಾಣ ಶೇ.೪.೫೯ ರಷ್ಟು ಮತ್ತು ಶೇ.೩.೭೧ ರಷ್ಟು ಬಾಲಕಿಯರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಶೇ.೮.೩೧ ರಷ್ಟು ವಿದ್ಯಾರ್ಥಿಗಳಿದ್ದಾರೆ. ಒಟ್ಟು ಶೇ.೬.೪೫ ರಷ್ಟು ವಿದ್ಯಾರ್ಥಿಗಳಿದ್ದರೆ, ಶೇ.೨.೮೩ ರಷ್ಟು ಬಾಲಕರಿದ್ದು, ಶೇ.೩.೬೧ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಶೇ.೬೯.೩೬ ರಷ್ಟು ಒಟ್ಟು ವಿದ್ಯಾರ್ಥಿಗಳಿದ್ದು, ಇದರಲ್ಲಿ ಶೇ.೩೬.೪೬ ರಷ್ಟು ಬಾಲಕರು ಮತ್ತು ಶೇ.೩೨.೮೯ ರಷ್ಟು ಬಾಲಕಿಯರಿದ್ದಾರೆ. ಈ ಅವಧಿಯಲ್ಲಿ ಒಟ್ಟು ಅಂಕಿ-ಅಂಶಗಳನ್ನು ಪರಿಗಣಿಸಿದರೆ, ಶೇ.೫೨.೦೧ ರಷ್ಟು ಬಾಲಕರು ಮತ್ತು ಶೇ.೪೭.೯೮ ರಷ್ಟು ಬಾಲಕಿಯರು ದಾಖಲಾಗಿರುವುದು ಸ್ಪಷ್ಟವಾಗುತ್ತದೆ.

೨೦೦೫-೦೬ ರ ಅವಧಿಯಲ್ಲಿ ಒಟ್ಟು ೫೧೮೯ ರಷ್ಟು ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ಶೇ.೧೫.೨೨ ರಷ್ಟು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿದ್ದು, ಶೇ.೭.೯೨ ರಷ್ಟು ಬಾಲಕರು ಮತ್ತು ಶೇ.೭.೩೦ ರಷ್ಟು ವಿದ್ಯಾರ್ಥಿನಿಯರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಒಟ್ಟು ಶೇ.೬.೬೧ ರಷ್ಟು ವಿದ್ಯಾರ್ಥಿಗಳಿದ್ದು, ಶೇ.೩.೦೮ ರಷ್ಟು ಬಾಲಕರು ಮತ್ತು ಶೇ. ೩.೫೨ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಒಟ್ಟು ಶೇ. ೭೦.೧೪ ರಷ್ಟಿದ್ದು, ಶೇ. ೩೬.೧೩ ರಷ್ಟು ಬಾಲಕರಿದ್ದು, ಶೇ.೩೪.೦೧ ರಷ್ಟು ಬಾಲಕಿಯರಿದ್ದಾರೆ. ಒಟ್ಟು ೫೧೮೯ ವಿದ್ಯಾರ್ಥಿಗಳಲ್ಲಿ ಶೇ.೫೧.೩೫ ರಷ್ಟು ಬಾಲಕರು ಮತ್ತು ಶೇ.೪೮.೬೪ ರಷ್ಟು ಬಾಲಕಿಯರಿದ್ದಾರೆ.

೨೦೦೬-೦೭ ರಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೫೨೧೭ ರಷ್ಟಿದೆ. ಶೇ.೪೮.೬೪ ರಷ್ಟು ಬಾಲಕಿಯರಿದ್ದಾರೆ. ಇದರಲ್ಲಿ ಶೇ.೧೫.೨೦ ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಶೇ.೭.೭೬ ರಷ್ಟು ಬಾಲಕರಿದ್ದು, ಶೇ.೭.೪೩ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಒಟ್ಟು ಶೇ.೮.೧೦ ರಷ್ಟಿದ್ದು, ಶೇ.೪.೩೫ ರಷ್ಟು ಬಾಲಕರು ಮತ್ತು ಶೇ.೩.೬೮ ರಷ್ಟು ಬಾಲಕಿಯರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಒಟ್ಟು ಶೇ.೬.೯೧ ರಷ್ಟು ವಿದ್ಯಾರ್ಥಿಗಳಿದ್ದು, ಇದರಲ್ಲಿ ೩.೧೨ ರಷ್ಟು ಬಾಲಕರಿದ್ದು, ಶೇ.೩.೬೦ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಶೇ.೬೯.೮೪ ರಷ್ಟಿದ್ದರೆ, ಇದರಲ್ಲಿ ಶೇ.೩೬.೨೮ ರಷ್ಟು ಬಾಲಕರು ಮತ್ತು ಶೇ.೩೩.೫೬ ರಷ್ಟು ಬಾಲಕಿಯರಿದ್ದಾರೆ. ಒಟ್ಟು ೫೨೧೭ ವಿದ್ಯಾರ್ಥಿಗಳಲ್ಲಿ ಶೇ.೫೧.೫೨ ರಷ್ಟು ಬಾಲಕರು ಮತ್ತು ಶೇ.೪೮.೪೭ ರಷ್ಟು ಬಾಲಕಿಯರಿದ್ದಾರೆ.

೨೦೦೪-೦೫, ೨೦೦೫-೦೬ ಮತ್ತು ೨೦೦೬-೦೭ ರ ಈ ಮೂರು ವರ್ಷಗಳ ಅವಧಿಯಲ್ಲಿ ಒಟ್ಟು ೧೫೬೨೮ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ಒಟ್ಟು ಶೇ.೧೫.೪೩ ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಇದರಲ್ಲಿ ಶೇ.೭.೯೩ ರಷ್ಟು ಬಾಲಕರು ಮತ್ತು ಶೇ.೭.೪೯ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಒಟ್ಟು ಶೇ.೮.೧೫ ರಷ್ಟಿದ್ದು, ಶೇ.೪.೩೯ ರಷ್ಟು ಬಾಲಕರು ಮತ್ತು ಶೇ.೩.೭೩ ರಷ್ಟು ಬಾಲಕಿಯರು ಕಂಡುಬರುತ್ತಾರೆ. ಶೇ.೬.೬೬ ರಷ್ಟು ಒಟ್ಟು ಅಲ್ಪಸಂಖ್ಯಾತರಿದ್ದು, ಶೇ.೩.೦೧ ರಷ್ಟು ಬಾಲಕರು ಮತ್ತು ಶೇ.೩.೫೮ ರಷ್ಟು ಬಾಲಕಿಯರಿದ್ದಾರೆ. ೧೫೬೨೮ ಒಟ್ಟು ವಿದ್ಯಾರ್ಥಿಗಳಲ್ಲಿ, ಶೇ.೫೧.೬೩ ರಷ್ಟು ಬಾಲಕರು ಮತ್ತು ಶೇ.೪೮.೩೬ ರಷ್ಟು ಬಾಲಕಿಯರಿದ್ದಾರೆ. ಜಾತಿವಾರು ಅಧ್ಯಯನ ಮಾಡಿದಾಗ, ಶಾಲೆಗೆ ದಾಖಲಾಗಿರುವ ಬಾಲಕ ಮತ್ತು ಬಾಲಕಿಯರ ಪ್ರಮಾಣದಲ್ಲಿ ಅಂತಹ ಅಗಾಧವಾದ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಶೇ.೫೧.೬೩ ರಷ್ಟು ಬಾಲಕರಿದ್ದರೆ, ಶೇ.೪೮.೩೬ ರಷ್ಟು ಬಾಲಕಿಯರಿರುವುದು, ಗ್ರಾಮೀಣ ಪ್ರದೇಶದಲ್ಲಿ ಬಾಲಕರು, ಬಾಲಕಿಯರು ಶಿಕ್ಷಣ ಪಡೆಯುವಲ್ಲಿ ಸಮತೋಲನ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ನಗರ ಪ್ರದೇಶದಲ್ಲಿ ಒಟ್ಟು ೦೬ ಪ್ರೌಢಶಾಲೆಗಳನ್ನು ಸ್ಥಾಪಿಸಲಾಗಿದ್ದು, ೨೦೦೪-೦೫ ರಲ್ಲಿ ೫೪೨೦ ವಿದ್ಯಾರ್ಥಿಗಳು, ೨೦೦೫-೦೬ ರಲ್ಲಿ ೫೭೪೪ ವಿದ್ಯಾರ್ಥಿಗಳು ಮತ್ತು ೨೦೦೬-೦೭ ರಲ್ಲಿ ಒಟ್ಟು ೫೬೨೬ ವಿದ್ಯಾರ್ಥಿಗಳಿದ್ದು, ಈ ಮೂರು ವರ್ಷಗಳ ಅವಧಿಯಲ್ಲಿ ೧೬೭೯೦ ವಿದ್ಯಾರ್ಥಿಗಳಿದ್ದಾರೆ.

೨೦೦೪-೦೫ ರಲ್ಲಿ ಒಟ್ಟು ೫೪೨೦ ವಿದ್ಯಾರ್ಥಿಗಳಿದ್ದಾರೆ. ಪರಿಶಿಷ್ಟ ಜಾತಿಯವರಲ್ಲಿ ಒಟ್ಟು ಶೇ.೭.೧೫ ರಷ್ಟು ವಿದ್ಯಾರ್ಥಿಗಳಿದ್ದು, ಶೇ.೬.೧೯ ರಷ್ಟು ಬಾಲಕರು ಮತ್ತು ಶೇ.೦.೯೫ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದವರಲ್ಲಿ ಶೇ.೦.೫೫ ರಷ್ಟು ಬಾಲಕಿಯರಿದ್ದು, ಶೇ.೫.೦೩ ರಷ್ಟು ಬಾಲಕರಿದ್ದಾರೆ. ಒಟ್ಟು ಶೇ. ೫.೫೯ ರಷ್ಟು ಪರಿಶಿಷ್ಟ ಪಂಗಡದವರಿದ್ದಾರೆ. ಒಟ್ಟು ಶೇ.೨.೩೯ ರಷ್ಟು ಅಲ್ಪಸಂಖ್ಯಾತರಿದ್ದು, ಇದರಲ್ಲಿ ಶೇ.೨.೦೬ ರಷ್ಟು ಬಾಲಕರಿದ್ದು, ಶೇ.೦.೩೩ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಒಟ್ಟು ಶೇ.೮೪.೮೫ ರಷ್ಟಿದ್ದು, ಶೇ.೭೭.೭೩ ರಷ್ಟು ಬಾಲಕರಿದ್ದು, ಶೇ.೭.೧೨ ರಷ್ಟು ಬಾಲಕಿಯರಿದ್ದಾರೆ. ಒಟ್ಟು ೫೪೨೦ ವಿದ್ಯಾರ್ಥಿಗಳಲ್ಲಿ, ಶೇ.೯೧.೦೩ ರಷ್ಟು ಬಾಲಕರು ಮತ್ತು ಶೇ.೮.೯೬ ರಷ್ಟು ಬಾಲಕಿಯರಿದ್ದಾರೆ.

೨೦೦೫-೦೬ ರ ಅವಧಿಯಲ್ಲಿ ಒಟ್ಟು ೫೭೪೪ ವಿದ್ಯಾರ್ಥಿಗಳಿದ್ದು, ಪರಿಶಿಷ್ಟ ಜಾತಿಯವರು ಶೇ.೬.೮೫ ರಷ್ಟು, ಪರಿಶಿಷ್ಟ ಪಂಗಡದವರು ಶೇ.೫.೬೪ ರಷ್ಟು, ಅಲ್ಪಸಂಖ್ಯಾತರು ಶೇ.೨.೨೮ ರಷ್ಟು ಮತ್ತು ಇತರೆ ಜಾತಿಯವರು ಶೇ.೮೫.೨೦ ರಷ್ಟಿದ್ದಾರೆ. ಒಟ್ಟು ಶೇ.೬.೮೫ ರಷ್ಟು ಪರಿಶಿಷ್ಟ ಜಾತಿಯವರಲ್ಲಿ, ಶೇ.೫.೯೦ ರಷ್ಟು ಬಾಲಕರು ಮತ್ತು ಶೇ. ೦.೯೫ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದವರಲ್ಲಿ ಒಟ್ಟು ಶೇ.೫.೬೪ ರಷ್ಟಿದ್ದು, ಇದರಲ್ಲಿ ಶೇ.೫.೦೩ ರಷ್ಟು ಬಾಲಕರಿದ್ದು, ಶೇ.೦.೬೦ ರಷ್ಟು ಬಾಲಕಿಯರಿದ್ದಾರೆ. ಒಟ್ಟು ಶೇ.೨.೨೮ ರಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿದ್ದು, ಶೇ.೧.೯೪ ರಷ್ಟು ಬಾಲಕರು ಮತ್ತು ಶೇ.೦.೩೩ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಶೇ.೭೯.೧೯ ರಷ್ಟು ಬಾಲಕರು ಮತ್ತು ಶೇ.೬ ರಷ್ಟು ಬಾಲಕಿಯರಿದ್ದಾರೆ. ೫೭೪೪ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.೯೨.೯ ರಷ್ಟು ಬಾಲಕರು ಮತ್ತು ಶೇ.೭.೯೦ ರಷ್ಟು ಬಾಲಕಿಯರಿದ್ದಾರೆ.

೨೦೦೬-೦೭ ರ ಅವಧಿಯಲ್ಲಿ ಒಟ್ಟು ೫೬೨೬ ವಿದ್ಯಾರ್ಥಿಗಳಲ್ಲಿ ಶೇ.೭.೩೯ ರಷ್ಟು ಪರಿಶಿಷ್ಟ ಜಾತಿಯವರು, ಶೇ.೫.೨೨ ರಷ್ಟು ಪರಿಶಿಷ್ಟ ಪಂಗಡದವರು, ಶೇ.೧.೯೩ ರಷ್ಟು ಅಲ್ಪಸಂಖ್ಯಾತರು, ಶೇ.೮೫.೩೭ ರಷ್ಟು ಇತರೆ ಜಾತಿಯ ವಿದ್ಯಾರ್ಥಿಗಳಿದ್ದಾರೆ. ಶೇ.೭.೩೯ ರಷ್ಟು ಪರಿಶಿಷ್ಟ ಜಾತಿಯವರಲ್ಲಿ ಶೇ.೬.೪೫ ರಷ್ಟು ಬಾಲಕರನ್ನು ಮತ್ತು ಶೇ.೦.೯೪ ರಷ್ಟು ಬಾಲಕಿಯರನ್ನು ಕಾಣಬಹುದಾಗಿದೆ. ಶೇ.೦.೯೪ ರಷ್ಟು ಪರಿಶಿಷ್ಟ ಪಂಗಡದವರಲ್ಲಿ, ಶೇ.೪.೬೩ ರಷ್ಟು ಬಾಲಕರು, ಶೇ.೦.೬೫ ರಷ್ಟು ಬಾಲಕಿಯರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಒಟ್ಟು ಶೇ.೧.೯೩ ರಷ್ಟಿದ್ದು, ಬಾಲಕರು ಶೇ.೧.೫೬ ರಷ್ಟಿದ್ದು, ಬಾಲಕಿಯರು ಶೇ.೦.೫೫ ರಷ್ಟಿದ್ದಾರೆ. ಇತರೆ ಜಾತಿಯವರಲ್ಲಿ ಒಟ್ಟು ಶೇ.೮೫.೩೭ ರಷ್ಟಿದ್ದು, ಶೇ.೭೮.೯೯ ರಷ್ಟು ಬಾಲಕರಿದ್ದು, ಶೇ. ೬.೩೮ ರಷ್ಟು ಬಾಲಕಿಯರಿದ್ದಾರೆ. ಈ ಎಲ್ಲಾ ಜಾತಿಯವರಿಂದ ೫೬೨೬ ವಿದ್ಯಾರ್ಥಿಗಳಿದ್ದು, ೯೧.೬೪ ರಷ್ಟು ಬಾಲಕರಿದ್ದು, ಶೇ.೮.೩೫ ರಷ್ಟು ಬಾಲಕಿಯರಿದ್ದಾರೆ.

೨೦೦೪-೦೫, ೨೦೦೫-೦೬ ಮತ್ತು ೨೦೦೬-೦೭ ರ ಅವಧಿಯಲ್ಲಿ ಒಟ್ಟು ೧೬೭೯೦ ವಿದ್ಯಾರ್ಥಿಗಳಿದ್ದಾರೆ. ಪರಿಶಿಷ್ಟ ಜಾತಿಯವರಲ್ಲಿ ಒಟ್ಟು ಶೇ.೭.೧೩ ರಷ್ಟು ವಿದ್ಯಾರ್ಥಿಗಳಿದ್ದು, ಶೇ.೬.೧೮ ರಷ್ಟು ಬಾಲಕರು ಮತ್ತು ಶೇ.೦.೯೫ ರಷ್ಟು ಬಾಲಕಿಯರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಶೇ.೦.೦೫ ರಷ್ಟಿದ್ದು, ಶೇ.೪.೯೦ ರಷ್ಟು ಬಾಲಕರು ಮತ್ತು ಶೇ.೦.೬೦ ರಷ್ಟು ಬಾಲಕಿಯರಿದ್ದಾರೆ. ಅಲ್ಪಸಂಖ್ಯಾತರಲ್ಲಿ ಒಟ್ಟು ಶೇ.೨.೨೦ ರಷ್ಟಿದ್ದು, ಶೇ.೧.೮೫ ರಷ್ಟು ಬಾಲಕರು ಮತ್ತು ಶೇ.೦.೪೦ ರಷ್ಟು ಬಾಲಕಿಯರಿದ್ದಾರೆ. ಇತರೆ ಜಾತಿಯವರಲ್ಲಿ ಒಟ್ಟು ಶೇ.೮೫.೧೪ ರಷ್ಟಿದ್ದು, ಶೇ.೭೮.೬೫ ರಷ್ಟು ಬಾಲಕರು ಮತ್ತು ಶೇ.೬.೪೯ ರಷ್ಟು

ಬಾಲಕಿಯರಿದ್ದಾರೆ. ಒಟ್ಟು ೧೬೭೯೦ ವಿದ್ಯಾರ್ಥಿಗಳಿದ್ದು, ಒಟ್ಟು ೧೫೩೮೦ ಬಾಲಕರು ಮತ್ತು ೧೪೧೦ ಬಾಲಕಿಯರಿದ್ದಾರೆ, ಅಂದರೆ ಶೇ.೯೧.೬೦ ರಷ್ಟು ಬಾಲಕರು ಮತ್ತು ಶೇ.೮.೪೯ ರಷ್ಟು ಬಾಲಕಿಯರಿದ್ದಾರೆ.

೪.೬ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳ ತುಲನಾತ್ಮಕ ಅಧ್ಯಯನ


ಗ್ರಾಮೀಣ ಪ್ರದೇಶಗಳಲ್ಲಿ ಸಿದ್ಧಗಂಗಾ ಮಠ ೨೫ ಪ್ರೌಢಶಾಲೆಗಳನ್ನು ಸ್ಥಾಪಿಸಿದೆ. ೦೬ ನಗರ ಪ್ರದೇಶಗಳಲ್ಲಿ ಸ್ಥಾಪಿಸಿದೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿ ಶಾಲಾ ದಾಖಲಾತಿಯನ್ನು ಪರಿವೀಕ್ಷಿಸಿದರೆ, ಬಾಲಕರು ಮತ್ತು ಬಾಲಕಿಯರು ಸರಿಸಮಾರು ಸಮಾನಾಂತರವಾಗಿಯೇ ದಾಖಲಾಗಿರುವುದು ಗೋಚರಿಸುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಇತರೆ ಜಾತಿ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಶೇಕಡಾವಾರು ಕಡಿಮೆಯಿರುವುದು ಕಂಡುಬಂದರೂ, ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ಶಿಕ್ಷಣ ಪಡೆಯಲಿಚ್ಛಿಸಿರುವುದು ಕಂಡುಬರುತ್ತದೆ. ಆದರೆ ನಗರ ಪ್ರದೇಶಗಳ ಈ ಆರೂ ಪ್ರೌಢಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ದಾಖಲಾತಿ ಗ್ರಾಮೀಣ ಪ್ರದೇಶಗಳಿಗಿಂತ ಕಡಿಮೆಯಿದೆ. ಬಾಲಕರ ಶೇಕಡಾವಾರು ದಾಖಲಾತಿ ಹೆಚ್ಚು ಕಡಿಮೆ ಗ್ರಾಮೀಣ ಪ್ರದೇಶಗಳಲ್ಲಿದ್ದಂತೆ, ನಗರ ಪ್ರದೇಶದಲ್ಲೂ ಕಂಡುಬಂದರೂ, ಬಾಲಕಿಯರ ಶೇಕಡಾವಾರು ದಾಖಲಾತಿಯಲ್ಲಿ ಬಹಳಷ್ಟು ಅಂತರವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಮೂರು ಜಾತಿಯ ದಾಖಲಾತಿ ಶೇ.೨ ರಿಂದ ೮ ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಶೇ.೨ ರಿಂದ ೬ ರಷ್ಟಿದೆ. ಇತರೆ ಜಾತಿ ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಿದರೆ, ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇತರೆ ಜಾತಿಯವರು ಗ್ರಾಮೀಣ ಪ್ರದೇಶಗಳಲ್ಲಿ ಸರಾಸರಿ ಶೇ.೭೦ ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಸರಾಸರಿ ಶೇ.೮೫ ರಷ್ಟಿದ್ದಾರೆ.

೨೫ ಗ್ರಾಮೀಣ ಪ್ರೌಢಶಾಲೆಗಳಿಂದ ೨೦೦೪-೦೫ ರಲ್ಲಿ ೫೨೨೨ ವಿದ್ಯಾರ್ಥಿಗಳು, ೨೦೦೫-೦೬ ರಲ್ಲಿ ೫೧೮೯ ಮತ್ತು ೨೦೦೬-೦೭ ರಲ್ಲಿ ೫೨೧೭ ವಿದ್ಯಾರ್ಥಿಗಳು ದಾಖಲಾಗಿದ್ದು, ಒಟ್ಟು ೧೫೬೨೮ ವಿದ್ಯಾರ್ಥಿಗಳಿದ್ದಾರೆ. ಇದೇ ಅವಧಿಯಲ್ಲಿ ನಗರ ಪ್ರದೇಶಗಳಲ್ಲಿ ೦೬ ಪ್ರೌಢಶಾಲೆಗಳಲ್ಲಿ ಕ್ರಮವಾಗಿ ೫೪೨೦, ೫೭೪೪ ಮತ್ತು ೫೬೨೬ ವಿದ್ಯಾರ್ಥಿಗಳು ದಾಖಲಾಗಿದ್ದು, ಒಟ್ಟು ೧೬೭೯೦ ವಿದ್ಯಾರ್ಥಿಗಳಿದ್ದಾರೆ.

ಪಟ್ಟಿ ೭ : ೩೧ ಪ್ರೌಢಶಾಲೆಗಳ ಒಟ್ಟು ವಿದ್ಯಾರ್ಥಿಗಳ ಪ್ರಮಾಣ:೨೦೦೪-೦೫ ರಿಂದ ೨೦೦೬-೦೭ ರವರೆಗೆ

ಕ್ರ ಸಂ.	ವಿಧಗಳು	ಗಂಡು	ಹೆಣ್ಣು	ಒಟ್ಟು
೧.	ಗ್ರಾಮೀಣ ಪ್ರೌಢಶಾಲೆಗಳು = ೨೫	೮೦೬೯ ೩೪.೪೧%	೭೫೫೯ ೮೪.೨೭%	೧೫೬೨೮ ೪೮.೨೦%
೨.	ನಗರ ಪ್ರೌಢಶಾಲೆಗಳು = ೦೬	೧೫೩೮೦ ೬೫.೫೮%	೧೪೧೦ ೧೫.೭೨%	೧೬೭೯೦ ೫೧.೭೯%
	ಒಟ್ಟು = ೩೧	೨೩೪೪೯ ೧೦೦%	೮೯೬೯ ೧೦೦%	೩೨೪೧೮ ೧೦೦%

ಆಧಾರ : ೩೧ ಪ್ರೌಢಶಾಲೆಗಳಿಂದ ಪಡೆದ ದಾಖಲಾತಿ ಮೂಲಗಳಿಂದ, ೨೦೦೭.



ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು ೨೫ ಪ್ರೌಢಶಾಲೆಗಳಿಂದ ಶೇ.೪೮.೨೦ ರಷ್ಟು ವಿದ್ಯಾರ್ಥಿಗಳ ದಾಖಲಾತಿ ಇದ್ದರೆ, ಕೇವಲ ೬ ನಗರ ಶಾಲೆಗಳಿಂದ ಶೇ.೫೧.೭೯ ರಷ್ಟು ವಿದ್ಯಾರ್ಥಿಗಳ ದಾಖಲಾತಿ ಕಂಡುಬರುತ್ತದೆ. ೨೫ ಗ್ರಾಮೀಣ ಪ್ರೌಢಶಾಲೆಗಳಿಂದ ಒಟ್ಟು ಬಾಲಕರ ದಾಖಲಾತಿ ಶೇ.೩೪.೪೧ ರಷ್ಟಿದೆ. ೦೬ ನಗರ ಪ್ರೌಢಶಾಲೆಗಳಲ್ಲಿ ಬಾಲಕರ ದಾಖಲಾತಿ ಶೇ.೬೫.೫೮ ರಷ್ಟಿದೆ. ಆದರೆ ಬಾಲಕಿಯರ



ಶೇಕಡಾವಾರು ಹಾಜರಾತಿ ನಗರ ಪ್ರದೇಶದಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ಬಹಳ ಕಡಿಮೆಯಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಾಲಕಿಯರ ದಾಖಲಾತಿ ಶೇ.೮೪.೨೬ ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಶೇ.೧೫.೭೨ ರಷ್ಟಿದೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿ ಒಟ್ಟು ದಾಖಲಾತಿ ಶೇ.೪೮.೨೦ ರಷ್ಟು, ನಗರ ಪ್ರೌಢಶಾಲೆಗಳಲ್ಲಿ ಒಟ್ಟು ದಾಖಲಾತಿ ಶೇ.೫೧.೭೯ ರಷ್ಟು.

ಈ ಮೇಲ್ಕಂಡ ಅಧ್ಯಯನದಿಂದ ಪ್ರಮುಖವಾಗಿ ಕಂಡುಕೊಂಡ ಅಂಶಗಳೇನೆಂದರೆ.

ಅ. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಸರಿಸಮಾರು ಗಂಡುಮಕ್ಕಳಷ್ಟೇ ಇದೆ. ಇದನ್ನು ಎಲ್ಲಾ ಜಾತಿಯ ಮಕ್ಕಳ ದಾಖಲಾತಿಯಲ್ಲೂ ಕಾಣಬಹುದಾಗಿದೆ. ಒಟ್ಟು ಶೇ.೫೧.೬೩ ರಷ್ಟು ಬಾಲಕರು ದಾಖಲಾತಿ ಪಡೆದಿದ್ದರೆ, ಶೇ.೪೮.೩೬ ರಷ್ಟು ಹೆಣ್ಣು ಮಕ್ಕಳು ದಾಖಲಾತಿಯನ್ನು ಪಡೆದಿದ್ದಾರೆ.

ಆ. ನಗರ ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಮತ್ತು ಗಂಡುಮಕ್ಕಳ ದಾಖಲಾತಿಗಳಲ್ಲಿ ಅಗಾಧ ವ್ಯತ್ಯಾಸವನ್ನು ಎಲ್ಲಾ ಜಾತಿಗಳಲ್ಲೂ ಕಾಣಬಹುದಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರೆ ಜಾತಿಯವರಲ್ಲಿಯೂ ಹೆಣ್ಣುಮಕ್ಕಳ ದಾಖಲಾತಿ ಕಡಿಮೆಯಿದೆ.. ಗ್ರಾಮೀಣ ಪ್ರೌಢಶಾಲೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ದಾಖಲಾತಿ ಅನುಪಾತ ೧.೦೬:೧ ಇದ್ದರೆ, ನಗರ ಪ್ರದೇಶಗಳಲ್ಲಿ ೧೦.೯೦:೧. ಒಟ್ಟಾರೆ ೨.೬೧:೧ ರಷ್ಟಿದೆ. ೨.೬೧ ಗಂಡು ಮಕ್ಕಳಿಗೆ ಒಂದು ಹೆಣ್ಣು ಮಗು ಸಮವಿದೆ.

ಇ. ನಗರ ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಕಡಿಮೆಯಿರಲು ಕಾರಣ, ತುಮಕೂರು ನಗರದಲ್ಲಿ ಹೆಣ್ಣು ಮಕ್ಕಳಿಗೆಂದೇ ಕೆಲವು ಶಾಲೆಗಳುಂಟು. ಪೋಷಕರು ಹೆಣ್ಣು ಮಕ್ಕಳ ಶಾಲೆಯಲ್ಲಿಯೇ ಹೆಣ್ಣು ಮಕ್ಕಳನ್ನು ಓದಿಸಲು ಇಚ್ಛಿಸುವುದರಿಂದ, ಸಿದ್ಧಗಂಗಾ ಮಠದ ನಗರ ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಕಡಿಮೆಯಿದೆ.

ಈ. ನಗರ ಪ್ರೌಢಶಾಲೆಗಳಲ್ಲಿ ಗಂಡು ಮಕ್ಕಳ ದಾಖಲಾತಿ ಹೆಣ್ಣು ಮಕ್ಕಳ ದಾಖಲಾತಿಗಿಂತ ಅಧಿಕವಾಗಿದೆ. ಶೇ.೯೧.೬೦ ರಷ್ಟು ಗಂಡುಮಕ್ಕಳು ದಾಖಲಾಗಿದ್ದಾರೆ. ಪ್ರಮುಖ ಕಾರಣವೆಂದರೆ ಎರಡು ಪ್ರೌಢಶಾಲೆಗಳು ಸಿದ್ಧಗಂಗಾ ಮಠದಲ್ಲಿಯೇ ಇದ್ದು, ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಮಕ್ಕಳು ದಾಖಲಾಗುತ್ತಾರಲ್ಲದೆ, ಬಡ ಮಕ್ಕಳು ಮಠದಲ್ಲಿ ಅನ್ನ ಸಿಗುತ್ತದೆಂಬ ಕಾರಣದಿಂದಲೂ ಮಠ ಶಾಲೆಗೆ ಸೇರಿಕೊಳ್ಳುತ್ತಾರೆ.

೪.೭ ೩೧ ಪ್ರೌಢಶಾಲೆಗಳ ನೌಕರ ವರ್ಗದ ಲಿಂಗ ಸ್ವರೂಪ

ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕ ಬದಲಾವಣೆಯ ಹರಿಕಾರರೆಂದರೆ ಶಿಕ್ಷಕರು. ಶಿಕ್ಷಕರೇ ಪ್ರಾಥಮಿಕ ಸಂಪನ್ಮೂಲ. ಶಿಕ್ಷಣದ ಗುಣಮಟ್ಟ ಅಧಿಕವಾಗಲು ಶಿಕ್ಷಕರೇ ಕಾರಣರಾಗಿರುತ್ತಾರೆ. ಶಿಕ್ಷಕರು ತಮ್ಮ ಜ್ಞಾನವನ್ನಷ್ಟೇ ವಿದ್ಯಾರ್ಥಿಗಳಿಗೆ ಹರಿಯಬಿಡುವುದಲ್ಲದೆ, ಸಾಮಾಜಿಕ ಬದಲಾವಣೆಯನ್ನುಂಟು ಮಾಡುತ್ತಾರೆ. ವಿದ್ಯಾರ್ಥಿಗಳನ್ನು ಶಿಸ್ತುಬದ್ಧವಾಗಿ ಬೆಳೆಸುವುದು ಇವರ ಆದ್ಯ ಕರ್ತವ್ಯವಾಗಿರುತ್ತದೆ. ಮಕ್ಕಳ ಜ್ಞಾನ, ಸಾಮರ್ಥ್ಯ, ದಕ್ಷತೆ, ಮೌಲ್ಯ ಮೊದಲಾದವುಗಳಲ್ಲಿ ಬದಲಾವಣೆಗಳನ್ನು ತರುವ ಜವಾಬ್ದಾರಿಯೂ ಶಿಕ್ಷಕನದ್ದಾಗಿರುತ್ತದೆ. ಶಿಕ್ಷಕರೇ ವಿದ್ಯಾರ್ಥಿಗಳಲ್ಲಿ ಬದಲಾವಣೆಯನ್ನು ತರುವ ಆಧಾರಸ್ತಂಭಗಳಾಗಿರುತ್ತಾರೆ. ಶಿಕ್ಷಕರು, ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣ ಯಾವಾಗಲೂ 'ವಿದ್ಯಾರ್ಥಿ ಕೇಂದ್ರಿತ' (Child-Centred) ವಾಗಿರಬೇಕು. ಆಗಷ್ಟೇ ಮಕ್ಕಳಲ್ಲಿ ಸ್ಪರ್ಧಾಮನೋಭಾವ ಬೆಳೆಯಲು ಸಾಧ್ಯ. ಹ್ಯಾರಿಸ್ ಎಂಬ ಶಿಕ್ಷಣ ತಜ್ಞನ ಪ್ರಕಾರ "ತರಗತಿಗಳಲ್ಲಿ ಕಲಿಯುವ ಎಲ್ಲಾ ವಿಷಯಗಳಲ್ಲೂ ಮಾನವ ಸಂಬಂಧಗಳು ಬೆಸೆದುಕೊಂಡಿರುತ್ತವೆ' (ಧನಂಜಯ ಪಾಂಡಿ, ೧೯೯೭,ಪು.೦೬).

ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯೇ ಶಿಕ್ಷಕರ ಪ್ರಮುಖ ಉದ್ದೇಶ. ಕಾಪರ್ ಹೇಳುವಂತೆ, "Teacher Competencies are Various attitudes, understandings, skills and behaviours that facilitate intellectual social and physical growth in children." (ಧನಂಜಯ ಪಾಂಡಿ, ೧೯೯೭, ಪು.೯). ಹೀಗೆ ಮಕ್ಕಳ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆಗೆ ಸಿದ್ಧಗಂಗಾ ಮಠ ತನ್ನ ೩೧ ಪ್ರೌಢಶಾಲೆಗಳಲ್ಲಿ ನೇಮಿಸಿಕೊಂಡಿರುವ ನೌಕರ ವರ್ಗದ ಲಿಂಗ-ಸಂಬಂಧಿ ಆಯಾಮಗಳನ್ನು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಮಹಿಳೆಯರ ಮತ್ತು ಪುರುಷರ ಲಿಂಗ-ಸಾಪೇಕ್ಷ ಅಧ್ಯಯನ ಮಹತ್ವವಾದದ್ದು. ಈ ಅಧ್ಯಯನದಿಂದ ಕಂಡುಬರುವ ಪ್ರಮುಖ ಅಂಶವೇನೆಂದರೆ, ಸಿದ್ಧಗಂಗಾ ಮಠ ನೌಕರ ವರ್ಗದಲ್ಲಿಯೂ ಪುರುಷ-ಕೇಂದ್ರಿತ ಉದ್ಯೋಗ ಸೃಷ್ಟಿಯಾಗಿದೆ. ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳಲ್ಲಂತು ಮಹಿಳೆಯರು ಪ್ರಧಾನವಾಗಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಸಿದ್ಧಗಂಗಾ ಮಠದ ಪ್ರೌಢಶಾಲೆಗಳ ಉದ್ಯೋಗ ಸೃಷ್ಟಿಯನ್ನು ಕೇವಲ ಲಿಂಗಾವಾರು ಅಧ್ಯಯನ ಮಾಡದೆ, ಜಾತೀವಾರು ಕೂಡಾ ಅಧ್ಯಯನ ಮಾಡಲಾಗಿದೆ.


೩೧ ಪ್ರೌಢಶಾಲೆಗಳಿಂದ ಒಟ್ಟು ೪೦೧ ನೌಕರರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ೨೦೦೫-೦೬ ರಿಂದ ೨೦೦೬-೦೭ ರ ಅವಧಿಯನ್ನು ಪರಿಗಣಿಸಲಾಗಿದೆ. ಮಹಿಳೆಯರು ೪೫ ಮಂದಿ

ಇದ್ದರೆ, ಪುರುಷರು ೩೫೬ ಮಂದಿ ಇರುವರು, ಅಂದರೆ ಶೇಕಡಾವಾರು ಪರಿಗಣಿಸಿದರೆ, ಶೇ.೧೧.೨೨ ರಷ್ಟು ಮಹಿಳೆಯರು ಮತ್ತು ಶೇ.೮೮.೭೭ ರಷ್ಟು ಪುರುಷರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಉದ್ಯೋಗಸ್ಥರಾಗಿರುವ ನೌಕರರ ಪ್ರಮಾಣ ಈ ಕೆಳಕಂಡಂತಿದೆ.

ಪಟ್ಟಿ ೮ : ಗ್ರಾಮೀಣ ಮತ್ತು ಪ್ರೌಢಶಾಲೆಗಳ ಉದ್ಯೋಗ ಪ್ರಮಾಣ

ಕ್ರ ಸಂ.	ನೌಕರ ವರ್ಗ	ಗ್ರಾಮೀಣ ಪ್ರೌಢಶಾಲೆಗಳು : ೨೫	ನಗರ ಪ್ರೌಢಶಾಲೆಗಳು : ೦೬	ಒಟ್ಟು ಪ್ರೌಢಶಾಲೆಗಳು: ೩೧
೧.	ಮಹಿಳೆಯರು	೨೪ ೫೩.೩೩%	೨೧ ೪೬.೬೬%	೪೫ ೧೦೦%
೨.	ಪುರುಷರು	೨೨೭ ೬೩.೭೬%	೧೨೯ ೩೬.೨೩	೩೫೬ ೧೦೦%
೩.	ಒಟ್ಟು	೨೫೧ ೬೨.೫೯%	೧೫೦ ೩೭.೪೦%	೪೦೧ ೧೦೦%

ಆಧಾರ : ೩೧ ಪ್ರೌಢಶಾಲೆಗಳಿಂದ ಪಡೆದ ಮಾಹಿತಿಯಿಂದ, ೨೦೦೭.



೩೧ ಪ್ರೌಢಶಾಲೆಗಳಿಂದ ಒಟ್ಟು ೪೦೧ ಉದ್ಯೋಗಸ್ಥರನ್ನು ಕಾಣಬಹುದಾಗಿದೆ. ೨೫ ಗ್ರಾಮೀಣ ಪ್ರೌಢಶಾಲೆಗಳಿಂದ ಶೇ.೫೩.೩೩ ರಷ್ಟು ಮಹಿಳೆಯರು ಗ್ರಾಮೀಣ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಶೇ.೪೬.೬೬ ರಷ್ಟು ಮಹಿಳೆಯರು, ೦೬ ನಗರ ಪ್ರೌಢಶಾಲೆಗಳಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಹೀಗೆ ಒಟ್ಟು ೪೫ ಮಹಿಳೆಯರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.




೨೫ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಶೇ.೬೩.೭೬ ರಷ್ಟು ಉದ್ಯೋಗಸ್ಥರಿದ್ದರೆ, ೦೬ ನಗರ ಪ್ರೌಢಶಾಲೆಗಳಲ್ಲಿ ಶೇ.೩೬.೨೩ ರಷ್ಟು ಉದ್ಯೋಗಸ್ಥರಿದ್ದಾರೆ. ಹೀಗೆ ೪೦೧ ಒಟ್ಟು ಉದ್ಯೋಗಸ್ಥರಲ್ಲಿ ೨೫೧ ಸ್ತ್ರೀಯರು ಮತ್ತು ಪುರುಷರು ೨೫ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ೦೬ ನಗರ ಪ್ರೌಢಶಾಲೆಗಳಿಂದ ಒಟ್ಟು ೧೫೦ ಸ್ತ್ರೀಯರು ಮತ್ತು ಪುರುಷರು ಕಾರ್ಯನಿರ್ವಹಿಸುತ್ತಿದ್ದಾರೆ. ಶೇಕಡಾವಾರು ಪರಿಗಣಿಸಿದಲ್ಲಿ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಶೇ.೬೨.೫೯ ರಷ್ಟು ಮತ್ತು ನಗರ ಪ್ರೌಢಶಾಲೆಗಳಲ್ಲಿ ಶೇ.೩೭.೪೦ ರಷ್ಟು ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಪಟ್ಟಿ ೯ : ಪ್ರೌಢಶಾಲೆಗಳ ಬೋಧಕ ಮತ್ತು ಬೋಧಕೇತರ ವರ್ಗ

ಕ್ರಸಂ.	ವಿಧ	ಬೋಧಕರು	ಬೋಧಕೇತರರು	ಒಟ್ಟು
೧.	ಪುರುಷರು	೨೫೨ ೭೦.೭೮%	೧೦೪ ೨೯.೨೧	೩೫೬ ೧೦೦%
೨.	ಮಹಿಳೆಯರು	೩೫ ೭೭.೭೭%	೧೦ ೨೨.೨೨	೪೫ ೧೦೦%
೩.	ಒಟ್ಟು	೨೮೭ ೭೧.೫೭%	೧೧೪ ೨೮.೪೨%	೪೦೧ ೧೦೦%

ಆಧಾರ : ಸಿದ್ಧಗಂಗಾ ಮಠದ ೩೧ ಪ್ರೌಢಶಾಲೆಗಳಿಂದ ಪಡೆದ ಮಾಹಿತಿಯಿಂದ, ೨೦೦೭.



ಸಿದ್ಧಗಂಗಾ ಮಠ ೩೧ ಪ್ರೌಢಶಾಲೆಗಳಿಂದ ೪೦೧ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ೨೮೭ ನೌಕರರು ಬೋಧಕ ವರ್ಗದವರಾಗಿದ್ದು, ೧೧೪ ನೌಕರರು ಬೋಧಕೇತರ ವರ್ಗದವರಾಗಿದ್ದು, ೩೫೬ ನೌಕರರು ಪುರುಷರಾಗಿದ್ದು, ೪೫ ನೌಕರರು ಮಹಿಳೆಯರಾಗಿದ್ದಾರೆ. ೩೫೬ ಪುರುಷ ನೌಕರರಲ್ಲಿ




ಶೇ. ೭೦.೭೮ ರಷ್ಟು ಬೋಧಕ ವರ್ಗದವರಾಗಿದ್ದು, ಶೇ.೨೯.೨೧ ರಷ್ಟು ಬೋಧಕೇತರ ವರ್ಗದವರಾಗಿದ್ದಾರೆ. ಒಟ್ಟು ೪೫ ಮಹಿಳಾ ನೌಕರರಲ್ಲಿ, ಶೇ. ೭೭.೭೭ ರಷ್ಟು ಬೋಧಕ ವರ್ಗದವರಿದ್ದು, ಶೇ. ೨೨.೨೨ ರಷ್ಟು ಬೋಧಕೇತರ ನೌಕರರಾಗಿದ್ದಾರೆ. ಒಟ್ಟು ಶೇ. ೭೧.೫೭ ರಷ್ಟು ಬೋಧಕ ವರ್ಗದವರಿದ್ದು, ಶೇ. ೨೮.೪೨ ರಷ್ಟು ಬೋಧಕೇತರ ವರ್ಗದವರಿದ್ದಾರೆ. ಶೇಕಾಡಾವಾರು ಅಧ್ಯಯನ ಮಾಡಿದರೆ ಬೋಧಕ ವರ್ಗದಲ್ಲಿ ಮಹಿಳಾ ನೌಕರರ ಪಾತ್ರ ಹಿರಿದಾಗಿದ್ದು, ಬೋಧಕೇತರ ವರ್ಗದಲ್ಲಿ ಪುರುಷರಿಗಿಂತ ಕಡಿಮೆಯಿದೆ. ಆದರೆ ಅಂಕಿಗಳಲ್ಲಿ ಹೇಳುವುದಾದರೆ, ಪುರುಷ ನೌಕರರೇ ಅಧಿಕವಾಗಿದ್ದಾರೆ. ಒಟ್ಟು ಪುರುಷರು ಮತ್ತು ಮಹಿಳೆಯರ ಒಟ್ಟು ನೌಕರ ವರ್ಗದಲ್ಲಿ ಶೇ.೮೮.೭೭ ರಷ್ಟು ಪುರುಷರಿದ್ದು, ಶೇ. ೧೧.೨೨ ರಷ್ಟು ಮಹಿಳೆಯರಿದ್ದಾರೆ. ಅಂದರೆ ಮಹಿಳೆಯರಿಗೆ ೮:೧ ರ ಅನುಪಾತದಲ್ಲಿ ನೌಕರಿ ದೊರೆತಿದೆ. ಅಂದರೆ ಒಬ್ಬ ಮಹಿಳಾ ಉದ್ಯೋಗಿ ೮ ಜನ ಪುರುಷ ಉದ್ಯೋಗಿಗೆ ಸಮ. ಈ ಅನುಪಾತವನ್ನು ಹೆಚ್ಚಿಸುವ ಅಗತ್ಯವಿದೆ.

ಪಟ್ಟಿ ೧೦ : ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತ

ಕ್ರ.ಸಂ.	ವರ್ಷ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ	ಶಿಕ್ಷಕರ ಸಂಖ್ಯೆ	ವಿದ್ಯಾರ್ಥಿಗಳ – ಶಿಕ್ಷಕರ ಅನುಪಾತ
೧.	೨೦೦೪–೦೫	೧೦೬೪೨	೨೮೭	೩೭.೦೮ : ೧
೨.	೨೦೦೫–೦೬	೧೦೯೩೩	೨೮೭	೩೮.೦೯ : ೧
೩.	೨೦೦೬–೦೭	೧೦೮೪೩	೨೮೭	೩೭.೭೮ : ೧

ಆಧಾರ : ೩೧ ಪ್ರೌಢಶಾಲೆಗಳಿಂದ ಸಂಗ್ರಹಿಸಿದ ಮಾಹಿತಿಯಿಂದ, ೨೦೦೭.





೨೦೦೪ ರಿಂದ ೨೦೦೭ ರ ವರೆಗೆ ವಿದ್ಯಾರ್ಥಿಗಳ ಶಿಕ್ಷಕರ ಅನುಪಾತವನ್ನು ಅಳೆಯಲಾಗಿದೆ. ಈ ಮೂರು ಅವಧಿಗಳಲ್ಲಿ ಸರಾಸರಿ ೩೮ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಿಸಲಾಗಿದೆ. ೨೦೦೪-೦೫ ರಲ್ಲಿ ಈ ಅನುಪಾತವು ೩೭.೦೮ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರಿದ್ದರೆ, ೨೦೦೫-೦೬ ರ ಅವಧಿಯಲ್ಲಿ ೩೮.೦೯ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರಿದ್ದಾರೆ. ೨೦೦೬-೦೭ ರಲ್ಲಿ ೩೭.೭೮ ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರಿದ್ದಾರೆ. ೨೦೦೫-೦೬ರ ಅವಧಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಸರ್ಕಾರ ಸ್ಥಾಪಿಸಿರುವ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ-ಶಿಕ್ಷಕರ ಅನುಪಾತ ೩೦.೧೪:೧. ಅಂದರೆ ೩೦.೧೪ ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರಿದ್ದಾರೆ. ಆದ್ದರಿಂದ ಮಠ ವಿದ್ಯಾರ್ಥಿಗಳ ಶಿಕ್ಷಕರ ಅನುಪಾತ ಸರ್ಕಾರಿ ಶಾಲೆಗಳಿಗಿಂತ ಅಧಿಕವಾಗಿದೆ. ಆದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆ, ಸಿದ್ಧಗಂಗಾ ಮಠದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆಗಿಂತಲೂ ಅಧಿಕವಾಗಿದೆ.

ನಗರ ಪ್ರದೇಶಗಳ ಶಾಲೆಗಳಾದ ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಪ್ರೌಢಶಾಲೆ ಮತ್ತು ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆಗಳಲ್ಲಿ ಅತೀ ಹೆಚ್ಚು ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಎರಡೂ ಪ್ರೌಢಶಾಲೆಗಳನ್ನು ಸಿದ್ಧಗಂಗಾ ಮಠದಲ್ಲಿಯೇ ಸ್ಥಾಪಿಸಲಾಗಿದೆ. ಕ್ರಮವಾಗಿ ೪೯ ಮತ್ತು ೪೩ ಮಂದಿ ನೌಕರರಿದ್ದಾರೆ. ಶೇ.೧೨.೨೧ ಮತ್ತು ಶೇ.೧೦.೭೨ ರಷ್ಟಿದ್ದಾರೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿ ಬೆಳಧರ ಗ್ರಾಮೀಣ ಪ್ರೌಢಶಾಲೆ ಮತ್ತು ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಹಿರೇಹಳ್ಳಿಯಲ್ಲಿ ಕ್ರಮವಾಗಿ ೧೫ ಮತ್ತು ೧೪ ಮಂದಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶೇಕಡಾವಾರು ಪರಿಗಣಿಸಿದರೆ, ಶೇ.೩.೭೪ ಮತ್ತು ಶೇ.೩.೪೯ ರಷ್ಟಿದ್ದಾರೆ.

೪.೮ ೩೧ ಪ್ರೌಢಶಾಲೆಗಳ ನೌಕರ ವರ್ಗದ ಸಾಮಾಜಿಕ ಆಯಾಮಗಳು


ಸಿದ್ಧಗಂಗಾ ಮಠ ತುಮಕೂರು ಜಿಲ್ಲೆಯಲ್ಲಿ ನಡೆಸುತ್ತಿರುವ ೩೧ ಪ್ರೌಢಶಾಲೆಗಳಲ್ಲಿ ೨೦೦೪-೦೫ ರಿಂದ ೨೦೦೬-೦೭ ರ ಅವಧಿಯಲ್ಲಿ ಒಟ್ಟು ೪೦೧ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದೆ. ಇದರಲ್ಲಿ ೪೫ ಜನ ಮಹಿಳಾ ನೌಕರರು ಮತ್ತು ೩೫೬ ಪುರುಷ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಕ್ರಮವಾಗಿ ಶೇ.೧೧.೨೨ ರಷ್ಟು ಮತ್ತು ಶೇ.೮೮.೭೭ ರಷ್ಟಿದ್ದಾರೆ. ೪೦೧ ಒಟ್ಟು ನೌಕರರ ಸಾಮಾಜಿಕ ಆಯಾಮಗಳು ಮುಖ್ಯವಾಗಿದ್ದು, ಸಾಮಾಜಿಕ ಆಯಾಮಗಳಲ್ಲಿ ಜಾತಿ ಸ್ವರೂಪವನ್ನು ಪ್ರಮುಖವಾಗಿ ಅಧ್ಯಯನ ಮಾಡಲಾಗಿದೆ, ಜಾತಿಸಂಬಂಧಿ ನೆಲೆಯಲ್ಲಿ ಅಧ್ಯಯನ ಮಾಡಿದರೆ ಪ್ರಮುಖ ಜಾತಿಗಳಾದ

ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳನ್ನು ಪರಿಗಣಿಸಲಾಗಿದೆ. ಒಟ್ಟು ೪೦೧ ನೌಕರರಲ್ಲಿ ಲಿಂಗಾಯತರ ಸಂಖ್ಯೆ ಅಧಿಕವಾಗಿದೆ. ಆನಂತರ ಒಕ್ಕಲಿಗರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ನೌಕರಿ ಪಡೆದಿದ್ದಾರೆ. ಪರಿಶಿಷ್ಟ ಪಂಗಡಕ್ಕಿಂತ ಪರಿಶಿಷ್ಟ ಜಾತಿಯವರು ಹೆಚ್ಚು ಉದ್ಯೋಗವನ್ನು ಪಡೆದಿದ್ದಾರೆ. ಕೆಳಗಿನ ಕೋಷ್ಟಕದಲ್ಲಿ ೩೧ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರ ವರ್ಗದ ಜಾತಿ ಸ್ವರೂಪವನ್ನು ವಿವರಿಸಲಾಗಿದೆ.

ಪಟ್ಟಿ ೧೧ : ಸಿದ್ಧಗಂಗಾ ಮಠ ನಡೆಸುತ್ತಿರುವ ೩೧ ಪ್ರೌಢಶಾಲೆಗಳ ನೌಕರ ವರ್ಗದ ಸಾಮಾಜಿಕ ಆಯಾಮಗಳು : ೨೦೦೪-೦೫ ರಿಂದ ೨೦೦೬-೦೭

ಕ್ರಸಂ	ಜಾತಿ ಸ್ವರೂಪ	ಗ್ರಾಮೀಣ	ನಗರ	ಒಟ್ಟು
೧.	ಲಿಂಗಾಯತರು	೧೩೫ ೫೭.೪೪%	೧೧೬ ೬೯.೮೭%	೨೫೧ ೬೨.೫೯%
೨	ಒಕ್ಕಲಿಗರು	೩೩ ೧೪.೦೪%	೦೮ ೧೪.೮೧%	೪೧ ೧೦.೨೨%
೩.	ಬ್ರಾಹ್ಮಣರು	೦೨ ೦.೮೫%	೦೪ ೨.೪೦%	೦೬ ೧.೪೯%
೪.	ಪರಿಶಿಷ್ಟ ಜಾತಿ	೩೦ ೧೨.೭೬%	೦೬ ೩.೬೧%	೩೬ ೮.೯೭%
೫.	ಪರಿಶಿಷ್ಟ ಪಂಗಡ	೧೩ ೫.೫೩%	೦೨ ೧.೨೦%	೧೫ ೩.೭೪%
೬.	ಇತರರು	೨೨ ೯.೩೬%	೩೦ ೧೮.೦೭%	೫೨ ೧೨.೯೬%
	ಒಟ್ಟು	೨೩೫ ೧೦೦%	೧೬೬ ೧೦೦%	೪೦೧ ೧೦೦%

ಆಧಾರ : ೩೧ ಪ್ರೌಢಶಾಲೆಗಳಿಂದ ಪಡೆದ ಮಾಹಿತಿಗಳಿಂದ, ೨೦೦೭.



ಒಟ್ಟು ೨೫೧ ಲಿಂಗಾಯತರು ಉದ್ಯೋಗವನ್ನು ಪಡೆದಿದ್ದು, ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳಲ್ಲಿ ೧೩೫ ಉದ್ಯೋಗಸ್ಥರಾಗಿದ್ದು, ನಗರ ಪ್ರದೇಶದ ಪ್ರೌಢಶಾಲೆಗಳಲ್ಲಿ ೧೧೬ ಉದ್ಯೋಗಸ್ಥರಿದ್ದಾರೆ. ಶೇ.೫೭.೪೪ ರಷ್ಟು ಮತ್ತು ಶೇ.೬೯.೮೭ ರಷ್ಟು ಲಿಂಗಾಯತರು ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳೆರಡರಿಂದಲೂ ಶೇ.೬೨.೫೯ ರಷ್ಟು ಉದ್ಯೋಗ ಲಿಂಗಾಯತರಿಗೆ ಲಭ್ಯವಾಗಿದೆ. ಒಕ್ಕಲಿಗರಲ್ಲಿ ೪೧ ಜನ ನೌಕರಿಯನ್ನು ಪಡೆದಿದ್ದು, ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳಲ್ಲಿ ೩೩ ಮತ್ತು ೦೮ ಜನ ನೌಕರಿಯನ್ನು ಪಡೆದಿದ್ದು, ಶೇಕಡಾವಾರು ೧೪.೦೪ ಮತ್ತು ೪.೮೧ ರಷ್ಟು ಉದ್ಯೋಗವನ್ನು ಪಡೆದು, ಒಟ್ಟು ಶೇ.೧೦.೨೨ ರಷ್ಟು ಉದ್ಯೋಗಸ್ಥರಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಟ್ಟು ೩೬ ಜನ ಉದ್ಯೋಗವನ್ನು ಪಡೆದಿದ್ದು, ಶೇಕಡಾವಾರು ೮.೯೭ ರಷ್ಟಿದ್ದಾರೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿ ೩೦ ನೌಕರರು ಮತ್ತು ನಗರ ಪ್ರೌಢಶಾಲೆಗಳಲ್ಲಿ ೦೬ ನೌಕರರು ಪರಿಶಿಷ್ಟ ಜಾತಿಯವರಲ್ಲಿ ಉದ್ಯೋಗಸ್ಥರಿದ್ದಾರೆ. ಕ್ರಮವಾಗಿ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಶೇ.೧೨.೭೬ ರಷ್ಟು ಮತ್ತು ನಗರ ಪ್ರೌಢಶಾಲೆಗಳಲ್ಲಿ ಶೇ.೩.೬೧ ರಷ್ಟು ಉದ್ಯೋಗಸ್ಥರಿದ್ದಾರೆ.

ಪರಿಶಿಷ್ಟ ಪಂಗಡದಲ್ಲಿ ಒಟ್ಟು ೧೫ ನೌಕರರಿದ್ದು, ಶೇ.೩.೭೪ ರಷ್ಟಿದ್ದಾರೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿ ೧೩ ನೌಕರರು ಮತ್ತು ನಗರ ಪ್ರೌಢಶಾಲೆಗಳಲ್ಲಿ ಇಬ್ಬರಿದ್ದಾರೆ, ಅಂದರೆ ಶೇ.೫.೫೩ ರಷ್ಟು ಗ್ರಾಮೀಣ ಪ್ರೌಢಶಾಲೆಗಳಲ್ಲಿ ಮತ್ತು ಶೇ.೧.೨೦ ರಷ್ಟು ನಗರ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅತೀ ಕಡಿಮೆ ನೌಕರರನ್ನು ಹೊಂದಿರುವ ಜಾತಿ ಎಂದರೆ ಬ್ರಾಹ್ಮಣ ಜಾತಿಯವರು, ಆರು ಜನರಿಗೆ ಮಾತ್ರ ಉದ್ಯೋಗಾವಕಾಶ ದೊರೆತಿದೆ. ಇದರಲ್ಲಿ ಇಬ್ಬರು ಗ್ರಾಮೀಣ ಪ್ರೌಢಶಾಲೆಗಳಲ್ಲಿಯೂ ಮತ್ತು ನಾಲ್ವರು ನಗರ ಪ್ರೌಢಶಾಲೆಗಳಲ್ಲಿಯೂ ಇದ್ದಾರೆ. ಅಂದರೆ ಶೇ.೧.೪೯ ರಷ್ಟು ಒಟ್ಟು ನೌಕರಿ ಬ್ರಾಹ್ಮಣರಿಗೆ ದೊರೆತಿದ್ದು, ಶೇ.೦.೮೫ ರಷ್ಟು ಗ್ರಾಮೀಣ ಪ್ರೌಢಶಾಲೆಗಳಲ್ಲಿಯೂ, ಶೇ.೨.೪೦ ರಷ್ಟು ನಗರ ಪ್ರೌಢಶಾಲೆಗಳಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕುರುಬ, ಚಮ್ಮಾರ, ಮುಸ್ಲಿಂರು.......... ಇತ್ಯಾದಿ ಜಾತಿಯವರು ಒಟ್ಟು ೫೨ ಜನ ನೌಕರಿ ಪಡೆದಿದ್ದಾರೆ, ಇದರಲ್ಲಿ ೨೨ ನೌಕರರು ಗ್ರಾಮೀಣ ಪ್ರೌಢಶಾಲೆಗಳಲ್ಲಿಯೂ, ೩೦ ನೌಕರರು ನಗರ ಪ್ರೌಢಶಾಲೆಗಳಲ್ಲಿಯೂ ಕಂಡುಬರುತ್ತಾರೆ. ಒಟ್ಟು ೫೨ ಉದ್ಯೋಗಸ್ಥರಲ್ಲಿ ಶೇ.೯.೩೬ ರಷ್ಟು ಗ್ರಾಮೀಣ ಪ್ರೌಢಶಾಲೆಗಳಲ್ಲಿಯೂ, ಶೇ.೧೮.೦೭ ರಷ್ಟು ನಗರ ಪ್ರೌಢಶಾಲೆಗಳಲ್ಲಿಯೂ ಇದ್ದಾರೆ.

ಒಟ್ಟು ೪೦೧ ಉದ್ಯೋಗಸ್ಥರಲ್ಲಿ, ೨೩೫ ನೌಕರರು ಗ್ರಾಮೀಣ ಪ್ರೌಢಶಾಲೆಗಳಲ್ಲಿಯೂ, ೧೬೬ ಉದ್ಯೋಗಸ್ಥರು ನಗರ ಪ್ರೌಢಶಾಲೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಕ್ರಮವಾಗಿ ಶೇ.೫೮.೬೦ ರಷ್ಟು ಮತ್ತು ಶೇ.೪೧.೩೯ ರಷ್ಟು ನೌಕರರು ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.


ಸಿದ್ಧಗಂಗಾ ಮಠ ಲಿಂಗಾಯತ ಮಠವಾದ್ದರಿಂದ ಲಿಂಗಾಯತರಿಗೆ ಉದ್ಯೋಗಾವಕಾಶಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಿದೆ. ಆದರೂ ಸಾಮಾಜಿಕ ನ್ಯಾಯವನ್ನು ಸಲ್ಲಿಸುವಲ್ಲಿ ಹಿಂದೆ ಬೀಳದೆ ಜಿಲ್ಲೆಯಲ್ಲಿ ಲಿಂಗಾಯತರಷ್ಟೇ ಪ್ರಮುಖ ಜಾತಿಯಾದ ಒಕ್ಕಲಿಗರಿಗೂ ಕೂಡ ಉದ್ಯೋಗಾವಕಾಶಗಳನ್ನು ನೀಡಿದೆ. ಆದರೆ ಈ ಎರಡೂ ಜಾತಿಗಳ ಅನುಪಾತದಲ್ಲಿ ಅಗಾಧ ವ್ಯತ್ಯಾಸವಿದೆ. ೬.೧೨ : ೧ ರ ಅನುಪಾತ ಅಂದರೆ ೬.೧೨ ಲಿಂಗಾಯತ ನೌಕರ, ಒಬ್ಬ ಒಕ್ಕಲಿಗ ನೌಕರನಿಗೆ ಸಮ. ಜಾತಿವ್ಯವಸ್ಥೆಯಲ್ಲಿ ಇದು ಅನಿವಾರ್ಯವೂ ಹೌದು ಮತ್ತು ಅವಕಾಶವೂ ಹೌದು. ಹಿಂದುಳಿದ ಜಾತಿಗಳಲ್ಲಿ ಪರಿಶಿಷ್ಟ ಜಾತಿಗೆ ಹೆಚ್ಚಿನ

ಉದ್ಯೋಗಾವಕಾಶಗಳು ದೊರೆತಿದೆ. ಅದರೆ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ದೊರೆತಿಲ್ಲ. ಉದ್ಯೋಗಸೃಷ್ಟಿಯ ಪ್ರಮಾಣವೇ ಕಡಿಮೆ ಇರುವುದರಿಂದ ಪರಿಶಿಷ್ಟ ಪಂಗಡದವರಿಗೆ ಪ್ರಾಶಸ್ತ್ಯವೇ ಇಲ್ಲದಂತಾಗಿದೆ.

ಪಟ್ಟಿ ೧೨ : ಪ್ರೌಢಶಾಲೆಗಳ ಬೋಧಕ ಮತ್ತು ಬೋಧಕೇತರ ವರ್ಗದ ಸಾಮಾಜಿಕ ಆಯಾಮಗಳು

ಕ್ರಸಂ	ಜಾತಿ ವಿಧಗಳು	ಬೋಧಕರು	ಬೋಧಕೇತರರು	ಒಟ್ಟು
೧.	ಲಿಂಗಾಯತರು	೧೯೪ ೬೯.೨೮%	೫೭ ೪೭.೧೦%	೨೫೧ ೬೨.೫೯%
೨	ಒಕ್ಕಲಿಗರು	೨೯ ೧೦.೩೫%	೧೨ ೯.೯೧%	೪೧ ೧೦.೨೨%
೩.	ಬ್ರಾಹ್ಮಣರು	೦೫ ೧.೭೮%	೦೧ ೦.೮೨%	೦೬ ೧.೪೯%
೪.	ಪರಿಶಿಷ್ಟ ಜಾತಿ	೨೦ ೭.೧೪%	೧೬ ೧೩.೨೨%	೩೬ ೮.೯೭%
೫.	ಪರಿಶಿಷ್ಟ ಪಂಗಡ	೦೩ ೧.೦೭%	೧೨ ೯.೯೧%	೧೫ ೩.೭೪%
೬.	ಇತರರು	೨೯ ೧೦.೩೫	೨೩ ೧೯.೦೦%	೫೨ ೧೨.೯೬%
	ಒಟ್ಟು	೨೮೦ ೧೦೦%	೧೨೧ ೧೦೦%	೪೦೧ ೧೦೦%

ಆಧಾರ : ೩೧ ಪ್ರೌಢಶಾಲೆಗಳಿಂದ ಪಡೆದ ಮಾಹಿತಿಗಳಿಂದ, ೨೦೦೭.



ಸಿದ್ಧಗಂಗಾ ಮಠದಲ್ಲಿ ಒಟ್ಟು ೩೧ ಪ್ರೌಢಶಾಲೆಗಳಿಂದ ಲಿಂಗಾಯತರು ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಪಡೆದಿದ್ದಾರೆ. ಬೋಧಕ ಮತ್ತು ಬೋಧಕೇತರ ವರ್ಗಗಳಲ್ಲಿಯೂ ಉದ್ಯೋಗ ಪಡೆಯುವಲ್ಲಿ ಏಕಸ್ವಾಮ್ಯ ಸಾಧಿಸಿದ್ದಾರೆ. ಶೇ.೬೯.೨೮ ಮತ್ತು ಶೇ.೪೭.೧೦ ರಷ್ಟು ಬೋಧಕ ಮತ್ತು ಬೋಧಕೇತರ ವರ್ಗಗಳೆರಡರಲ್ಲೂ ಕಂಡುಬರುತ್ತಾರೆ. ಅತೀ ಕಡಿಮೆ ಉದ್ಯೋಗಾವಕಾಶಗಳನ್ನು ಪಡೆದಿರುವವರು ಬ್ರಾಹ್ಮಣರು. ಒಟ್ಟು ಶೇ.೧.೪೯ ರಲ್ಲಿ, ಶೇ.೧.೭೮ ರಷ್ಟು ಬೋಧಕ ಮತ್ತು ಶೇ.೦.೮೨ ರಷ್ಟು ಬೋಧಕೇತರಿದ್ದಾರೆ. ಪರಿಶಿಷ್ಟ ಪಂಗಡದವರು ಉದ್ಯೋಗವನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಶೇ.೧.೦೭ ಮತ್ತು ಶೇ.೯.೯೧ ರಷ್ಟು ಬೋಧಕ ಮತ್ತು ಬೋಧಕೇತರ ವರ್ಗದವರಲ್ಲಿ ಪರಿಶಿಷ್ಟ ಪಂಗಡದವರು ಉದ್ಯೋಗವನ್ನು ಪಡೆದಿದ್ದಾರೆ. ಒಟ್ಟು ಉದ್ಯೊಗ ಸೃಷ್ಟಿಯಲ್ಲಿ ಲಿಂಗಾಯತರದ್ದೆ ಗರಿಷ್ಟ ಪಾಲಾಗಿದೆ. ಮೇಲ್ಕಂಡ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳೆಂದರೆ.

ಅ. ಮಹಿಳೆಯರ ನೇಮಕಾತಿ ಪುರುಷರ ನೇಮಕಾತಿಗಿಂತ ಬಹಳ ಕಡಿಮೆಯಿದೆ.

ಅ. ೮:೧ ರ ಅನುಪಾತದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಒಬ್ಬರು ಮಹಿಳಾ ಉದ್ಯೋಗಿ ಎಂಟು ಪುರುಷ ಉದ್ಯೋಗಿಗಳಿಗೆ ಸಮ. ಆದ್ದರಿಂದ ಮಹಿಳೆಯರ ನೇಮಕಾತಿ ಪುರುಷರ ನೇಮಕಾತಿಗಿಂತ ಬಹಳ ಕಡಿಮೆಯಿರುವುದರಿಂದ ಸಿದ್ಧಗಂಗಾ ಮಠ ಪ್ರೌಢಶಾಲೆಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ.

ಇ. ಒಟ್ಟಾರೆ ಸಿದ್ಧಗಂಗಾ ಮಠ ನಗರ ಶಾಲೆಗಳಲ್ಲಿ ಹೆಣ್ಣು ಮಕ್ಕಳನ್ನು ಆಕರ್ಷಿಸುವಲ್ಲಿ ವಿಫಲವಾಗಿದ್ದು, ಉದ್ಯೋಗದಲ್ಲಿಯೂ ಪ್ರಾಶಸ್ತ್ಯವನ್ನೇನೂ ನೀಡಿಲ್ಲ.

ಈ. ಸಿದ್ಧಗಂಗಾ ಮಠ ಲಿಂಗಾಯತ ಮಠವಾದ್ದರಿಂದ, ಲಿಂಗಾಯತರಿಗೆ ಉದ್ಯೋಗಾವಕಾಶಗಳಲ್ಲಿ ಗರಿಷ್ಠ ಅವಕಾಶಗಳನ್ನು ದೊರಕಿಸಿದೆ. ಇತರೆ ಜಾತಿಯವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಮಠ ವಿಫಲವಾಗಿದೆ. ಇದಕ್ಕೆ ಹಲವಾರು ಕಾರಣಗಳುಂಟು. ಆರಂಭದಿಂದಲೂ ಮಠ ಬಡವರ, ದೀನದಲಿತರ ಆಶ್ರಯ ತಾಣವಾಗಿದೆ. ಅವರಿಗೆ ಅನ್ನ, ಆಹಾರ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಿದೆ. ಸಹಜವಾಗಿ ಬಡತನದಿಂದ ಬಸವಳಿದ ನಿರುದ್ಯೋಗ ವಿದ್ಯಾರ್ಥಿಗಳು ಮಠದ ಕೈಂಕರ್ಯದಲ್ಲಿ ತೊಡಗಿಕೊಂಡು, ಸ್ವಾಮೀಜಿಯ ಆಶ್ರಯದಲ್ಲಿ ಬೆಳೆದವರನ್ನು ಗುರುತಿಸಿ, ಉದ್ಯೋಗವನ್ನು ನೀಡುತ್ತಾರೆ. ಹೀಗೆ ಗುರುತಿಸಿಕೊಂಡವರಲ್ಲಿ ಹೆಚ್ಚಾಗಿ ಲಿಂಗಾಯತರೇ ಆಗಿರುವುದರಿಂದ, ಜೊತೆಗೆ ಸ್ವಾಮೀಜಿಯ ಭಕ್ತರು ಅಧಿಕ ಪ್ರಮಾಣದಲ್ಲಿ ಲಿಂಗಾಯತರೇ ಇರುವುದರಿಂದ, ಮಠದಲ್ಲಿ ವಾಸ್ತವ್ಯ ಹೂಡಿ, ಮಠದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡ ಬಡವರನ್ನೇ ಸ್ವಾಮೀಜಿ ಗುರುತಿಸಿ, ಅವರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದ್ದಾರೆ.

ಕೊನೆಯ ಮಾತು

ಶ್ರೀ ಸಿದ್ಧಗಂಗಾ ಮಠ ವಸಾಹತು ಪೂರ್ವದಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಸ್ವಾತಂತ್ರ್ಯಪೂರ್ವದಿಂದಲೂ, ಸ್ವಾತಂತ್ರ್ಯಾನಂತರದಲ್ಲಿಯೂ ಸಿದ್ಧಗಂಗಾ ಮಠ ವ್ಯಾಪಕವಾಗಿ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿದೆ. ಸಿದ್ಧಗಂಗಾ ಮಠ ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆದು ಶಿಕ್ಷಣ ಪುನಃಶ್ಚೇತನಕ್ಕೆ ಕಾರಣವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ಶಿಕ್ಷಣವನ್ನು ಪಡೆಯುವಂತಾದರು. ಅಭಿವೃದ್ಧಿ ನೆಲೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಕಂಡುಕೊಳ್ಳುವಂತಾಗಿದೆ.

ಗ್ರಂಥಋಣ

೧. ಡಾ. ಧನಂಜಯ ಪಾಂಡಿ, *ರಿಲೇಷನ್‌ಶಿಪ್ ಬಿಟ್ವೀನ್ ಟೀಚಿಂಗ್ ಕಾಂಪಿಟೆನ್ಸಿ ಅಂಡ್ ಸ್ಟುಡೆಂಟ್ಸ್ ಅಚೀವ್‌ಮೆಂಟ್*, ಕ್ಲಾಸಿಕಲ್ ಪಬ್ಲಿಷಿಂಗ್ ಕಂಪನಿ, ನ್ಯೂ ಡೆಲ್ಲಿ, ೧೯೯೭.

೨. *ಸಿದ್ಧಗಂಗಾಶ್ರೀ*, ಸಂ. ಚನ್ನಪ್ಪ ಎರೇಸೀಮೆ ಮತ್ತು ಟಿ.ಆರ್. ಮಹಾದೇವಯ್ಯ ಹಳೆ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು, ೧೯೮೧.

೩. ಆನ್ಯುಯಲ್ *ರಿಪೋರ್ಟ್ ಅಂಡ್ ಅಕೌಂಟ್ಸ್*, ೨೦೦೫–೦೬, ಸಿದ್ಧಗಂಗಾ ಮಠ, ತುಮಕೂರು.

೪. *ತುಮಕೂರು ಜಿಲ್ಲೆಯ ೩೧ ಪ್ರೌಢಶಾಲೆಗಳಿಂದ ಪಡೆದ ಮಾಹಿತಿಗಳು*, ೨೦೦೭, ತುಮಕೂರು.

ಪಟ್ಟಿ :

೧. ಸಿದ್ಧಗಂಗಾ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ಒಟ್ಟು ಶಾಲಾ – ಕಾಲೇಜುಗಳು

೨. ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ

೩. ಸಿದ್ಧಗಂಗಾ ಮಠ ಶಾಲೆಗಳ ಉದ್ಯೋಗ ಸೃಷ್ಟಿ : ೨೦೦೧–೦೨ ಮತ್ತು ೨೦೦೫–೦೬

೪. ಒಟ್ಟು ೫೪ ಪ್ರೌಢಶಾಲೆಗಳು : ಅನುದಾನಿತ ಮತ್ತು ಅನುದಾನರಹಿತ : ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳು : ೨೦೦೫–೦೫

೫. ಸಿದ್ಧಗಂಗಾ ಮಠದ ತುಮಕೂರು ಜಿಲ್ಲೆಯ ೩೧ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು

೬. ಸಿದ್ಧಗಂಗಾ ಮಠದ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು ೨೦೦೪–೦೫, ೨೦೦೫–೦೬, ೨೦೦೬–೦೭

೭. ೩೧ ಪ್ರೌಢಶಾಲೆಗಳ ಒಟ್ಟು ವಿದ್ಯಾರ್ಥಿಗಳ ಪ್ರಮಾಣ : ೨೦೦೪–೦೫ ರಿಂದ ೨೦೦೬–೦೭

೮. ಗ್ರಾಮೀಣ ಮತ್ತು ಪ್ರೌಢಶಾಲೆಗಳ ಉದ್ಯೋಗ ಪ್ರಮಾಣ

೯. ಪ್ರೌಢಶಾಲೆಗಳ ಬೋಧಕ ಮತ್ತು ಬೋಧಕೇತರ ವರ್ಗ

೧೦. ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತ

೧೧. ಸಿದ್ಧಗಂಗಾ ಮಠ ನಡೆಸುತ್ತಿರುವ ೩೧ ಪ್ರೌಢಶಾಲೆಗಳ ನೌಕರ ವರ್ಗದ ಸಾಮಾಜಿಕ ಆಯಾಮಗಳು : ೨೦೦೪–೦೫ ರಿಂದ ೨೦೦೬–೦೭

೧೨. ಪ್ರೌಢಶಾಲೆಗಳ ಬೋಧಕ ಮತ್ತು ಬೋಧಕೇತರ ವರ್ಗದ ಸಾಮಾಜಿಕ ಆಯಾಮಗಳು

ಅಧ್ಯಾಯ – ೫

ಸಿದ್ಧಗಂಗಾ ಸಂಸ್ಥೆಯ ಆಡಳಿತ ಮತ್ತು ಬೆಳವಣಿಗೆ

ಅಧ್ಯಾಯ – ೫

ಸಿದ್ಧಗಂಗಾ ಸಂಸ್ಥೆಯ ಆಡಳಿತ ಮತ್ತು ಬೆಳವಣಿಗೆ

ಆರ್ಥಿಕಾಭಿವೃದ್ಧಿ ಕುರಿತ ವಿಶ್ಲೇಷಣೆಯಲ್ಲಿ ಮಾನವ ಸಂಪನ್ಮೂಲಗಳಿಗೆ ವಿಶಿಷ್ಠ ಸ್ಥಾನವಿದ್ದು, ಅವಶ್ಯಕವಾದಂತಹ ಕುಶಲತೆ, ಶಿಕ್ಷಣ ಮತ್ತು ಅನುಭವವನ್ನು ಹೊಂದಿರುವ ಜನರ ಸಂಖ್ಯೆಯನ್ನು ಹೆಚ್ಚಿಸುವ ಪ್ರಕ್ರಿಯೆಯು ಮಾನವ ಬಂಡವಾಳ ಸಂಚಯನ. ಮಾನವ ಬಂಡವಾಳದ ಮೇಲೆ ಕೈಗೊಳ್ಳುವ ಹೂಟೆಯು ಉತ್ಪಾದಕ ಸಂಪನ್ಮೂಲವಾಗಿ ಅಭಿವೃದ್ಧಿಪಡಿಸಲು ಮಾಡಲಾಗುವ ಹೂಟೆಯಾಗಿರುತ್ತದೆ. ಶಿಕ್ಷಣ, ಆರೋಗ್ಯ, ತರಬೇತಿ ಮೊದಲಾದ ಚಟುವಟಿಕೆಗಳ ಮೇಲೆ ಕೈಗೊಳ್ಳಲಾಗುವ ಹೂಡಿಕೆಯೇ ಮಾನವ ಬಂಡವಾಳ ಸಂಚಯನ. ಆದ್ದರಿಂದ ಶಿಕ್ಷಣ, ಆರೋಗ್ಯ, ಸಾಕ್ಷರತೆ ತರಬೇತಿಯಂತಹ ಚಟುವಟಿಕೆಗಳ ಮೇಲೆ ಕೈಗೊಳ್ಳುವ ಹೂಟೆಯು ಅಪಾರ ಪ್ರಾಶಸ್ತ್ಯವನ್ನು ಪಡೆದಿದೆ. ೧೯೮೦ ರ ಮಧ್ಯಮಾವಧಿಯಲ್ಲಂತು 'ಮಾನವ ಸಂಪನ್ಮೂಲ ಅಭಿವೃದ್ಧಿ' ಎನ್ನುವುದು ಘೋಷಣೆಯಾಯಿತು. 'ಶಿಕ್ಷಣ' ಒಂದು ಪ್ರಮುಖ ಶಕ್ತಿಯಾಯಿತು (ಬಿ.ಜಿ.ತಿಲಕ್, ೨೦೦೨,ಪು.೨೬೮). ಯಾವುದೇ ಒಂದು ರಾಷ್ಟ್ರದ ಉತ್ತಮ ಜೀವನ ಮಟ್ಟವನ್ನು ನಡೆಸಲು ಶಿಕ್ಷಣ, ಆರೋಗ್ಯ, ಸಾಕ್ಷರತೆ–ಮೊದಲಾದ ಅಭಿವೃದ್ಧಿ ಸಾಧನಗಳಿಂದ ಮಾತ್ರ ಸಾಧ್ಯ. ಶಿಕ್ಷಣ, ಆರೋಗ್ಯ, ಸಾಕ್ಷರತೆ ಮೊದಲಾದ ಸಾಮಾಜಿಕ–ಆರ್ಥಿಕ ಚಲಕಗಳು ಅಭಿವೃದ್ಧಿ ಹೊಂದಿದರೆ ಮಾತ್ರ ಉತ್ಪಾದನೆ ತನಗೆ ತಾನೇ ಸಾಧ್ಯವಾಗುತ್ತದೆ ಮತ್ತು ಅಧಿಕವಾಗುತ್ತದೆ (ಅಮರ್ತ್ಯ ಸೇನ್/ಜೀನ್ ಡ್ರೇಜ್, ೧೯೯೯, ಪು.೪೩). ಶಿಕ್ಷಣ ಕ್ಷೇತ್ರದ ಮೇಲಿನ ಬಂಡವಾಳ ಹೂಡುವಿಕೆಯಿಂದಾಗಿ, ಶಿಕ್ಷಣದ ಹರಿವುಂಟಾಗಿ ಜಾತಿಭೇದ, ವರ್ಣಭೇದ, ವರ್ಗಭೇದ, ಲಿಂಗಭೇದ....... ಇತ್ಯಾದಿಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. (ಅಮರ್ತ್ಯ ಸೇನ್/ ಜೀನ್ ಡ್ರೇಜ್, ೧೯೯೯, ಪು.೧೦೯) ಅಮರ್ತ್ಯ ಸೇನ್ ಪ್ರಕಾರ "ಭಾರತದಂತಹ ಬಡ ರಾಷ್ಟ್ರದಲ್ಲೂ, ಸಾಕ್ಷರತೆಯ ಸಾರ್ವತ್ರೀಕರಣಕ್ಕೆ ಮತ್ತು ಮೂಲಭೂತ ಸಾಧನೆಗಳಿಗೆ ಹಣಕಾಸನ್ನು ಒದಗಿಸಬಹುದೆಂಬುದರಲ್ಲಿ ಸಂದೇಹವೇ ಇಲ್ಲ.

ಅದರಲ್ಲೂ ಚಿಕ್ಕಮಕ್ಕಳ ಶಿಕ್ಷಣಕ್ಕಾಗಿ" ಎಂದಿದ್ದಾರೆ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯, ಪು. ೧೩೯).

ತಿಲಕ್ ಪ್ರಕಾರ, ಪ್ರಾಥಮಿಕ ಶಿಕ್ಷಣ ಶುದ್ಧ ಸಾರ್ವಜನಿಕ ಸರಕು ಇದ್ದಂತೆ ಏಕೆಂದರೆ ಪ್ರಾಥಮಿಕ ಶಿಕ್ಷಣದಿಂದ ವ್ಯಕ್ತಿಯಷ್ಟೇ ಲಾಭವನ್ನು ಹೊಂದುವುದಿಲ್ಲ, ಇಡೀ ಸಮಾಜವೇ ಲಾಭವನ್ನು ಹೊಂದುತ್ತದೆ. ಆದ್ದರಿಂದ ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ಶಿಕ್ಷಣ ಕ್ಷೇತ್ರ ಅಧಿಕ ಮೊತ್ತದ ಬಂಡವಾಳ ಹೂಡಲೇಬೇಕು. ಹೀಗೆ ಶಿಕ್ಷಣ ಕ್ಷೇತ್ರದ ಮೇಲೆ ಹೂಡುವ ಬಂಡವಾಳವನ್ನು ಆರ್ಥಿಕ ತಜ್ಞ ಶ್ಲಟ್ಜ್ 'Human Investment Revolution' ಎಂದಿದ್ದಾನೆ. (ಬಿ.ಜಿ.ತಿಲಕ್, ೨೦೦೨, ಪು.೨೬೭). ಶ್ಲಟ್ಜ್ ಹೇಳುವಂತೆ ಆರ್ಥಿಕಾಭಿವೃದ್ಧಿಯಲ್ಲಿ ಶಿಕ್ಷಣ, ಆರೋಗ್ಯ ಬಲ, ಜನರ ಜೀವನ ನಿರೀಕ್ಷೆ ಪ್ರಮುಖವಾದವುಗಳು. ಆದ್ದರಿಂದ ಜನರಿಗೆ ಉತ್ತಮ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಮೂಲಕ ಹಾಗೂ ಉತ್ತಮ ಆರೋಗ್ಯ ಮತ್ತು ಪರಿಸರವನ್ನು ಕಾಪಾಡುವುದರ ಮೂಲಕ ಮಾನವ ಸಂಪನ್ಮೂಲವನ್ನು ಹೆಚ್ಚು ಉಪಯುಕ್ತವಾಗುವಂತೆ ಮಾಡಬಹುದೆಂದಿದ್ದಾನೆ (ಎಂ.ಎಲ್.ಜಿಂಗಾನ್, ೧೯೭೫, ಪು.೩೧೫).

ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳವನ್ನು ಹೂಡುವುದರಿಂದ ಕೇವಲ ಆರ್ಥಿಕ ಬದಲಾವಣೆಗಳಷ್ಟೇ ಉಂಟಾಗುವುದಿಲ್ಲ. ಸಾಮಾಜಿಕ ಬದಲಾವಣೆಯೂ ಕಂಡುಬರುತ್ತದೆ-ಬಡತನ ಪ್ರಮಾಣ ಕಡಿಮೆಯಾಗುವುದು, ಆದಾಯ ಹಂಚಿಕೆಯಲ್ಲಿ ಸಮತೋಲನ, ಜನನ ಪ್ರಮಾಣ ಕಡಿಮೆಯಾಗುವುದು, ಕುಟುಂಬ ಯೋಜನಾ ಪದ್ಧತಿಯನ್ನು ಅಳವಡಿಸಿಕೊಳ್ಳುವುದು, ಜನರ ಜೀವನಮಟ್ಟ ಸುಧಾರಿಸುವುದು........ ಇತ್ಯಾದಿ (ಬಿ.ಜಿ.ತಿಲಕ್, ೨೦೦೨, ಪು.೨೬೭). ಆದ್ದರಿಂದಲೇ ೧೯೮೦ ರ ಮಧ್ಯಮಾವಧಿಯಲ್ಲಿ 'ಮಾನವ ಸಂಪನ್ಮೂಲ ಅಭಿವೃದ್ಧಿ' ಎನ್ನುವುದು ಪ್ರಮುಖ ಘೋಷಣೆಯಾಯಿತು. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ 'ಶಿಕ್ಷಣ' ಒಂದು ಪ್ರಮುಖ ಶಕ್ತಿಯಾಯಿತು. (ಬಿ.ಜಿ.ತಿಲಕ್,೨೦೦೨, ಪು.೨೬೮).

ಬ್ರಿಟೀಷ್ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಅನುದಾನ ನೀಡುತ್ತೇನೆಂದು ಘೋಷಿಸಿದ ನಂತರ, ಖಾಸಗಿ ಶಿಕ್ಷಣ ಸಂಸ್ಥೆಗಳು ವ್ಯಾಪಕವಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಮಠಗಳೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದವು. ಸ್ವಾತಂತ್ರ್ಯ ಪೂರ್ವದಲ್ಲಿಯಂತು ಮಠಗಳು ಬಡವರಿಗೆ ಮತ್ತು ಶೋಷಿತರಿಗೆ ಶಿಕ್ಷಣ ನೀಡಲು ಮುಂದಾದವು. ಶಿಕ್ಷಣ ನೀಡಲು ಉಚಿತ ವಸತಿ ನಿಲಯಗಳನ್ನು ಸ್ಥಾಪಿಸಿದವು. ಅನಕ್ಷರಸ್ಥರ ಸಮಾಜದಲ್ಲಿ ಶಾಲೆಗಳನ್ನು ತೆರೆಯುವುದೆಂದರೆ 'ಕ್ರಾಂತಿಕಾರಿ ಸ್ಥಿತ್ಯಂತರ'ವೇ ಆಗಿದ್ದು, ಹೊಸ

ಮದ್ಯವನ್ನು ಹಳೆಯ ಸೀಸೆಯಲ್ಲಿ ಹಾಕುವ ಬದಲು, ಹೊಸ ಮದ್ಯವನ್ನು ಹೊಸ ಸೀಸೆಯಲ್ಲಿ ಹಾಕುವಂತೆ, ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ಜೋತು ಬೀಳದೆ, ಹೊಸ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡವು. ಆದರೂ ಸಾಂಪ್ರದಾಯಿಕ ಶಿಕ್ಷಣವನ್ನು ಇಂದಿಗೂ ಮುಂದುವರಿಸಿವೆ. ಇಂದಿಗೂ ಸಂಸ್ಕೃತ ಪಾಠಶಾಲೆಗಳು ನಡೆದೇ ಇವೆ.

ಬ್ರಿಟೀಷ್ ಆಳ್ವಿಕೆಯ ಪರಿಣಾಮ ಮತ್ತು ಅವರ ಸಂಪರ್ಕದಿಂದಾಗಿ ಪಾಶ್ಚಿಮಾತ್ಯ ಶಿಕ್ಷಣದ ಪರಿಚಯ ಭಾರತೀಯರಿಗೆ ಆಯಿತು. ವೈಜ್ಞಾನಿಕ ವಿಚಾರಗಳನ್ನು ಅರಿಯಲು ಅವಕಾಶವಾಯಿತು. ಬ್ರಿಟೀಷರ ಆಗಮನ ಪೂರ್ವದಲ್ಲಿ ಸಂಸ್ಕೃತ ಭಾಷೆಯಲ್ಲಿ ಉನ್ನತ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಈ ಸಮಯದಲ್ಲಿ ಧಾರ್ಮಿಕ ವಿಚಾರಗಳಿಗೆ ಹೆಚ್ಚು ಮಹತ್ವವಿತ್ತು. ಆದರೆ ವಿದ್ಯೆ ಸಾರ್ವತ್ರಿಕವಾಗಿರದೆ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿತ್ತು. ಮೆಕಾಲೆ ಶಿಕ್ಷಣ ನೀತಿಯು ಆಂಗ್ಲಮಾದ್ಯಮಕ್ಕೆ ಅವಕಾಶ ಕಲ್ಪಿಸಿದ್ದರಿಂದ, ಮಠಗಳೂ ಕೂಡ ಬದಲಾದ ಸನ್ನಿವೇಶಗಳಿಗನುಗುಣವಾಗಿ ಶಿಕ್ಷಣ ನೀಡಲು ಮುಂದಾದವು. ಸಿದ್ಧಗಂಗಾ ಮಠ ಶಾಲಾ ಕಾಲೇಜುಗಳನ್ನು ಸುಗಮವಾಗಿ ನಡೆಸಲು ೧೯೬೨ ರಲ್ಲಿ 'ಶ್ರೀ ಸಿದ್ಧಗಂಗಾ ಎಜುಕೇಷನ್ ಸೊಸೈಟಿ' ಯನ್ನು ಸ್ಥಾಪಿಸಬೇಕೆಂದುಕೊಂಡರು (ಸಿದ್ಧಗಂಗಾಶ್ರೀ, ೧೯೮೧, ಪು.೧೨೩). ಆದರೆ ಅಧಿಕೃತವಾಗಿ ಸ್ಥಾಪನೆಯಾದದ್ದು ೧೭ ಜುಲೈ ೧೯೬೩ ರಂದು ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ನಂ. ೧೭, ೧೯೬೦ ರ ಪ್ರಕಾರ ರಿಜಿಸ್ಟರ್ಡ್ ಆಯಿತು (ಆನ್ಯುಯಲ್ ರಿಪೋರ್ಟ್ ಮತ್ತು ಅಕೌಂಟ್ಸ್, ೨೦೦೫-೦೬,ಪು.೧೯). ಇದುವರೆವಿಗೂ ೩೪ ಸಭೆಗಳು ನಡೆದಿದ್ದು, ಶಿವಕುಮಾರಸ್ವಾಮೀಜಿ ಇದರ ಅಧ್ಯಕ್ಷರಾಗಿದ್ದು, ಸ್ವಾತಂತ್ರ್ಯ ಹೋರಾಟಗಾರ ಕೆಂಪಹೊನ್ನಯ್ಯನವರ ಪುತ್ರ ಟಿ.ಕೆ. ನಂಜುಂಡಪ್ಪ ಕಾರ್ಯದರ್ಶಿಗಳಾಗಿದ್ದಾರೆ. ಮಠದ ಕಿರಿಯ ಸ್ವಾಮೀಜಿಗಳಾದ ಸಿದ್ಧಲಿಂಗಸ್ವಾಮಿಗಳು ಉಪಾಧ್ಯಕ್ಷರಾಗಿದ್ದಾರೆ. ಹೀಗೆ ಒಟ್ಟು ೧೫ ಜನರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆ. ಆಜೀವ ಸದಸ್ಯರಾಗಿ ೭೦ ಜನರನ್ನು ನೇಮಿಸಿಕೊಳ್ಳಲಾಗಿದೆ (ಆನ್ಯುಯಲ್ ರಿಪೋರ್ಟ್ ಮತ್ತು ಅಕೌಂಟ್ಸ್, ೨೦೦೫-೦೬, ಪು.೧)

ಮಠ ತಮ್ಮ ಶಾಲಾ-ಕಾಲೇಜುಗಳು ಸುಗಮವಾಗಿ ನಡೆಯಲೆಂದು, ಕಾರ್ಯ ನಿರ್ವಹಿಸಲೆಂದು ತಮ್ಮದೇ ಆದ ಆಡಳಿತ ಮಂಡಳಿಯನ್ನು ನೇಮಿಸಿಕೊಂಡಿರುವುದು. ಆಡಳಿತ ಮಂಡಳಿಯ, ಸಂಸ್ಥೆಯು ಹೇಗೆ ಕಾರ್ಯನಿರ್ವಹಿಸಬೇಕೆಂದು ನೀತಿ-ನಿಯಮಗಳನ್ನು ರೂಪಿಸುತ್ತವೆ. ಈ ಕಾರ್ಯಕಾರಿ ಮಂಡಳಿಯು ನೇಮಕಾತಿ, ಕೊಠಡಿಗಳು, ವಿದ್ಯಾರ್ಥಿಗಳ ಸಂಖ್ಯೆ, ಸಭೆ-ಸಮಾರಂಭ ಇತ್ಯಾದಿಗಳ ಬಗ್ಗೆ ಸ್ಪಷ್ಟ ನಿಲುವುಗಳನ್ನು ಕೈಗೊಂಡಿರುತ್ತದೆ. ಆ ನಿಲುವುಗಳ ಪ್ರಕಾರ ಎಲ್ಲಾ ನೌಕರರು ಕಾರ್ಯವನ್ನು ನಿರ್ವಹಿಸಬೇಕು.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ತಮ್ಮ ಸಂಬಂಧಿಕರನ್ನೇ ಸದಸ್ಯರನ್ನಾಗಿ ನೇಮಿಸಿಕೊಂಡಿರುತ್ತಾರೆ. ಇಲ್ಲವೇ ತಮ್ಮದೇ ಆದ ಜಾತಿಗೆ ಸೇರಿದವರನ್ನೇ ನೇಮಿಸಿಕೊಂಡಿರುತ್ತಾರೆ. ಸಂಸ್ಥೆಯು ತನ್ನ ಅಭ್ಯುದಯಕ್ಕಾಗಿ ಕ್ರಿಯಾಶೀಲ ವ್ಯಕ್ತಿಯನ್ನೇ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಂಡಿರುತ್ತದೆ.

ಸಾಮಾನ್ಯವಾಗಿ ಖಾಸಗಿ ಸಂಸ್ಥೆಗಳಲ್ಲಿ ಅಧ್ಯಕ್ಷರಿಗಿಂತ ಕಾರ್ಯದರ್ಶಿಗಳಿಗೇ ಹೆಚ್ಚು ಅಧಿಕಾರ ಇರುತ್ತದೆ. ಆದರೆ ಮಠಗಳು ನಡೆಸುತ್ತಿರುವ ಶಾಲಾ-ಕಾಲೇಜುಗಳಲ್ಲಿ ಆ ಮಠದ ಧಾರ್ಮಿಕ ಗುರುಗಳಿಂದಲೇ ನಿಯಂತ್ರಿಸಲ್ಪಟ್ಟಿರುತ್ತದೆ. ಮಠಗಳಿಂದ ಸ್ಥಾಪಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಮಠದ ಸ್ವಾಮೀಜಿಗಳೇ ಆಡಳಿತ ಮಂಡಳಿಯನ್ನು ನೋಡಿಕೊಳ್ಳುತ್ತಾರೆ. ಮಠಗಳಿಂದ ಸ್ಥಾಪಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಮಠದ ಸ್ವಾಮೀಜಿಗಳೇ ಅಧ್ಯಕ್ಷರೂ ಆಗಿರುತ್ತಾರೆ.

ಸಿದ್ಧಗಂಗಾ ಮಠ ಆಡಳಿತ ಮಂಡಳಿಯ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯನ್ನು ಅಧ್ಯಯನ ಮಾಡಿದರೆ, ಕೃಷಿಕರು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಕಂಡುಬರುತ್ತಾರೆ. ಕೆಲವು ಸದಸ್ಯರು ರಾಜಕೀಯದ ನಂಟನ್ನೂ ಹೊಂದಿದವರಾಗಿದ್ದಾರೆ. ಸಾಮಾಜಿಕವಾಗಿ ಒಬ್ಬ ಸದಸ್ಯರನ್ನು ಬಿಟ್ಟು ಉಳಿದವರೆಲ್ಲರೂ ಒಂದೇ ಜಾತಿಗೆ ಸೇರಿದವರಾಗಿದ್ದಾರೆ. ಹಾಗೆಯೇ ಆಡಳಿತ ಮಂಡಳಿಯಲ್ಲಿ ತುಮಕೂರು ಜಿಲ್ಲೆಯ ಸದಸ್ಯರಲ್ಲದೆ, ಇತರ ಪ್ರದೇಶದವರೂ ಸದಸ್ಯರಾಗಿದ್ದಾರೆ. ಒಂದೇ ಜಾತಿಗೆ ಸೇರಿದವರನ್ನೇ ಸದಸ್ಯರುಗಳನ್ನಾಗಿ ಮಾಡಿಕೊಳ್ಳಲು ಕಾರಣ, ಬದಲಾಗುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅವಕಾಶಗಳನ್ನು ಬಳಸಿಕೊಳ್ಳುವುದಾಗಿರುತ್ತದೆ. ಇದಕ್ಕೂ ಮೀರಿ ಪ್ರಮುಖವಾದುದೆಂದರೆ ಹಣಕಾಸು ಮತ್ತು ಸಾಮಾಜಿಕ ಅಧಿಪತ್ಯವನ್ನು ಸ್ಥಾಪಿಸುವುದೂ ಆಗಿರುತ್ತದೆ (ಮದನ್ ಟಿ.ಎನ್./ ಬಿ.ಜೆ. ಹಾಲ್ಬರ್, ೧೯೭೨, ಪು.೧೩೩).

ಮಠದ ಆಡಳಿತ ಮಂಡಳಿಯಲ್ಲಿರುವ ೧೫ ಜನ ಸದಸ್ಯರಲ್ಲಿ ಒಂಭತ್ತು ಜನ ಸದಸ್ಯರು ತುಮಕೂರು ಜಿಲ್ಲೆಗೇ ಸೇರಿದವರಾಗಿದ್ದು, ಐದು ಜನ ಸದಸ್ಯರು ಬೆಂಗಳೂರಿನವರಾಗಿದ್ದು, ಒಬ್ಬರು ಸದಸ್ಯರು ಮಾತ್ರ ಸಕಲೇಶಪುರದವರಾಗಿದ್ದಾರೆ (ಹಾಸನ ಜಿಲ್ಲೆ). ಈ ಸದಸ್ಯರುಗಳಲ್ಲಿ ಕೆಲವರು ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿರುವವರಾಗಿದ್ದಾರೆ. ಎನ್.ಆರ್. ಜಗದೀಶ್ ಮತ್ತು ವಿ.ಎಲ್ ಶಿವಪ್ಪನವರು ಕಾಂಗ್ರೆಸ್(ಐ) ಧುರೀಣರು. ವಿ.ಎಲ್ ಶಿವಪ್ಪ ತಿಪಟೂರು ಕ್ಷೇತ್ರದಿಂದ ಶಾಸಕರಾಗಿದ್ದವರು.

ಎನ್.ಆರ್. ಜಗದೀಶ್, ಕಾಂಗ್ರೇಸ್ (ಐ) ನಿಂದ ತುಮಕೂರು ಜಿಲ್ಲೆ ಲೋಕಸಭೆಗೆ ಸ್ಪರ್ಧಿಸಲು ಪ್ರಯತ್ನಿಸಿ, ವಿಫಲರಾದವರು.

ಮಠ ಆಡಳಿತ ಮಂಡಳಿಯ ೧೫ ಜನ ಸದಸ್ಯರಲ್ಲಿ ೧೪ ಜನ ಸದಸ್ಯರು ಲಿಂಗಾಯತ ಜಾತಿಗೆ ಸೇರಿದವರಾಗಿದ್ದು, ಒಬ್ಬರು ಮಾತ್ರ ಬ್ರಾಹ್ಮಣ ಜಾತಿಗೆ ಸೇರಿದವರಾಗಿದ್ದಾರೆ. ಈ ಸಮಿತಿಯ ಸದಸ್ಯರೆಲ್ಲರೂ ಶ್ರಿಮಂತರೇ ಆಗಿದ್ದು, ಉತ್ತಮ ಶಿಕ್ಷಣವನ್ನು ಪಡೆದವರೂ ಆಗಿದ್ದಾರೆ.

ಇಬ್ಬರು ಬಿ.ಎ. ಪದವಿ ಪಡೆದಿದ್ದಾರೆ, ಮೂರು ಜನ ಸದಸ್ಯರು ಬಿ.ಇ. ಪಡೆದಿದ್ದಾರೆ. ಇಬ್ಬರು ಎಲ್.ಎಲ್.ಬಿ. ಪಡೆದಿದ್ದಾರೆ. ಒಬ್ಬರು ಪಿಎಚ್.ಡಿ., ಒಬ್ಬರು ಎಂ.ಬಿ.ಬಿ.ಎಸ್. ಮತ್ತು ಒಬ್ಬರು ಎಂ.ಎ. ಪದವಿ ಪಡೆದಿದ್ದಾರೆ. ತುಮಕೂರು ಜಿಲ್ಲೆಯ ಕೈಗಾರಿಕೋದ್ಯಮಿ, ಬೃಹತ್ ಕೈಗಾರಿಕೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದು, ಗ್ರೈನ್ ಮರ್ಚೆಂಟ್ಸ್ ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷರಾದ ಎನ್.ಆರ್. ಜಗದೀಶ್‌ರವರ ಶಿಕ್ಷಣ ಮೆಟ್ರಿಕ್ಯುಲೇಷನ್.

ಮಠದ ಆಡಳಿತ ಮಂಡಳಿಯನ್ನು ಅಧ್ಯಯನ ಮಾಡಿದರೆ, ಶೇ. ೯೯ ರಷ್ಟು ಆಡಳಿತ ಮಂಡಳಿಯ ಸದಸ್ಯರು ಲಿಂಗಾಯತರೇ ಆಗಿದ್ದಾರೆ, ಭೂಮಾಲೀಕರು, ಕೈಗಾರಿಕೋದ್ಯಮಿಗಳು, ಕಂಟ್ರಾಕ್ಟರ್‌ಗಳು, ರಾಜಕೀಯ ವ್ಯಕ್ತಿಗಳು–ಇವರೆಲ್ಲರೂ ಶ್ರೀಮಂತ ಕುಟುಂಬದವರಾಗಿದ್ದಾರೆ. ಇವರೆಲ್ಲರೂ ಮಠದ ಭಕ್ತರಾಗಿದ್ದು, ಸ್ವಾಮೀಜಿಯ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸುವವರೂ ಆಗಿದ್ದು, ಮಠದ ಅಭಿವೃದ್ಧಿಗೆ ಶ್ರಮಿಸುವವರೂ ಆಗಿರುತ್ತಾರೆ. ಮಠ ಸ್ವಜಾತಿ ಸದಸ್ಯರಿಗೆ ಮಹತ್ವ ನೀಡಲು ಕಾರಣ, ಮಠದ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಲು ಮತ್ತು ಯಾವುದೇ ಸಮಸ್ಯೆಗಳು ಎದುರಾದರು ಸುಲಭವಾಗಿ ನಿವಾರಿಸಿಕೊಳ್ಳಬಹುದೆಂಬ ಆಲೋಚನೆ. ಸದಸ್ಯರ ಕುಂಟುಂಬದವರೆಲ್ಲರೂ ಮಠದ ದಾನಿಗಳೂ ಆಗಿರುತ್ತಾರೆ. ರಾಜಕೀಯ ವ್ಯಕ್ತಿಗಳು ಮಠದ ಸದಸ್ಯರಾದಲ್ಲಿ ಅನುದಾನದ ರೂಪದಲ್ಲಿ ಸಾಕಷ್ಟು ಹಣವನ್ನು ಪಡೆದು ಶಾಲಾಭಿವೃದ್ಧಿಗೆ ಬಳಸುವುದೂ ಉದ್ದೇಶವಾಗಿರುತ್ತದೆ. ಹೀಗೆ ಜಾತಿಬಲ, ಜನಬಲ, ಹಣಬಲ, ಮತ್ತು ರಾಜಕೀಯ ಬಲವೇ ಮಠದ ಆಡಳಿತ ಮಂಡಳಿಯ ರಚನೆಗೆ ಪೂರಕ ಅಂಶಗಳಾಗಿರಬಹುದು. ಆಡಳಿತ ಮಂಡಳಿಯ ಸಾಮಾಜಿಕ ಆಯಾಮಗಳನ್ನು ಈ ಕೆಳಕಂಡ ಪಟ್ಟಿಯಿಂದ ವಿವರಿಸಲಾಗಿದೆ.

ಆಡಳಿತ ಮಂಡಳಿಯ ಸಾಮಾಜಿಕ ಆಯಾಮಗಳು : ಸಿದ್ಧಗಂಗಾ ಮಠ

	ಸದಸ್ಯರ ಹೆಸರು	ಜಾತಿ	ವಿದ್ಯಾರ್ಹತೆ	ರಾಜಕೀಯ ಸ್ವರೂಪ	ಉದ್ಯೋಗ
	ಡಾ. ಶಿವಕುಮಾರ ಸ್ವಾಮೀಜಿ	ಲಿಂಗಾಯತ	ಬಿ.ಎ. (ಆನರ್ಸ್)	–	ಅಧ್ಯಕ್ಷರು, ಶ್ರೀಸಿದ್ಧಗಂಗಾಮಠ, ತುಮಕೂರು.
	ಸಿದ್ಧಲಿಂಗ ಸ್ವಾಮೀಜಿ	ಲಿಂಗಾಯತ	ಬಿ.ಎ	–	ಉಪಾಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ, ತುಮಕೂರು
	ಟಿ.ಕೆ. ನಂಜುಡಪ್ಪ	ಲಿಂಗಾಯತ	ಎಂ.ಎ.ಎಲ್.ಎಲ್.ಬಿ	–	ಗೌರವ ಕಾರ್ಯದರ್ಶಿಗಳು, ವ್ಯಾಪಾರಸ್ಥರು, ಭೂ–ಮಾಲೀಕರು, ಸಿದ್ಧಗಂಗಾ ಮಠ, ತುಮಕೂರು.
	ಎಲ್ ರಾಜಪ್ಪ	ಲಿಂಗಾಯತ	ಬಿ.ಇ	–	ಸದಸ್ಯರು, ಪಿ.ಡಬ್ಲ್ಯು.ಡಿ.ಕಂಟ್ರಾಕ್ಟರ್, ಬೆಂಗಳೂರು
	ಡಾ.ಎಂಎನ್. ಚೆನ್ನಬಸಪ್ಪ	ಲಿಂಗಾಯತ	ಎಂ.ಎಸ್ಸಿ., ಪಿಹೆಚ್‌ಡಿ	–	ಸದಸ್ಯರು, ರಿ. ಪ್ರಾಂಶುಪಾಲರು, ಎಸ್.ಐ.ಟಿ. ತುಮಕೂರು
	ಎನ್.ಆರ್. ಜಗದೀಶ್	ಲಿಂಗಾಯತ	ಮೆಟ್ರಿಕ್ಯುಲೇಷನ್	ಕಾಂಗ್ರೇಸ್– ಐ	ಸದಸ್ಯರು, ಕೈಗಾರಿಕೋದ್ಯಮಿ. ತುಮಕೂರು.
	ಎಸ್.ಸಿದ್ಧಗಂಗಯ್ಯ	ಲಿಂಗಾಯತ	ಸಿ.ಎ.	–	ಸದಸ್ಯರು. ಆಡಿಟರ್, ಬೆಂಗಳೂರು.
	ವಿ.ಎಲ್. ಶಿವಪ್ಪ	ಲಿಂಗಾಯತ	ಎಲ್.ಎಲ್.ಬಿ	ಕಾಂಗ್ರೇಸ್– ಐ	ಸದಸ್ಯರು, ಮಾಜಿ ಶಾಸಕರು. ಭೂ–ಮಾಲೀಕರು, ತುಮಕೂರು
	ಬಿ. ಶಾಂತಾರಾಜು	ಲಿಂಗಾಯತ	–	–	ಸದಸ್ಯರು, ಕಾಫಿ ಪ್ಲಾಂಟರ್, ಸಕಲೇಶಪುರ
	ಡಾ. ಬಿ. ಶಿವಪ್ಪ	ಲಿಂಗಾಯತ	ಎಂ.ಬಿ.ಬಿಎಸ್.	–	ಸದಸ್ಯರು ಡಾಕ್ಟರ್, ಬೆಂಗಳೂರು
	ಪ್ರೊ.ಜಿ. ಪರಮೇಶ್ವರಪ್ಪ	ಲಿಂಗಾಯತ	ಎಂ.ಎ.,	–	ಸದಸ್ಯರು, ಉಪನ್ಯಾಸಕರು, ಬೆಂಗಳೂರು
	ಎಸ್. ಶಿವಪ್ರಸಾದ್	ಲಿಂಗಾಯತ	ಬಿ.ಇ	–	ಸದಸ್ಯರು, ಕಂಟ್ರಾಕ್ಟರ್, ಬೆಂಗಳೂರು
	ಎಸ್.ಪಿ. ವಿಶ್ವೇಶ್ವರಯ್ಯ	ಲಿಂಗಾಯತ	–	–	ಸದಸ್ಯರು. ಭೂ–ಮಾಲೀಕರು, ಸೋಮಪುರ, ಕೊರಟಗೆರೆ ತಾ.// ತುಮಕೂರು.
	ಟಿ.ಎಂ. ಸ್ವಾಮಿ	ಲಿಂಗಾಯತ	ಬಿ.ಇ	–	ಸದಸ್ಯರು ಕೈಗಾರಿಕೋದ್ಯಮಿಗಳು, ತುಮಕೂರು.
	ಕೆ.ಆರ್. ರಮೇಶ್ ಪೈ.	ಬ್ರಾಹ್ಮಣ	–	–	ಸದಸ್ಯರು, ಕೈಗಾರಿಕೋದ್ಯಮಿಗಳು, ತುಮಕೂರು.

ಆಧಾರ : ಅ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫–೦೬ ಪು.1.
ಆ. ರೇಖಾ ಕೌಲ್, ೧೯೯೩, ಪು.೧೬೭.

೫.೧ ಮಠದ ಶಾಲಾ-ಕಾಲೇಜುಗಳ ಆದಾಯ ಮತ್ತು ವೆಚ್ಚಗಳು

ಮಠ ಸ್ಥಾಪಿಸಿದ ೧೨೨ ಶಾಲಾ-ಕಾಲೇಜುಗಳು ಸುಗಮವಾಗಿ ಕಾರ್ಯ ನಿರ್ವಹಿಸಲೆಂದು ತಮ್ಮದೇ ಆದ ಆಡಳಿತ ಮಂಡಳಿಯನ್ನು ನೇಮಿಸಿಕೊಂಡಿದೆ. ಆಡಳಿತ ಮಂಡಳಿಯು ಆಯಾ ವರ್ಷದ ಯೋಜನೆಗಳನ್ನು ರೂಪಿಸುತ್ತದೆ. ಈ ಕಾರ್ಯಕಾರಿ ಮಂಡಳಿಯು ನೌಕರರ ನೇಮಕಾತಿ ವಿದ್ಯಾರ್ಥಿಗಳ ಪ್ರವೇಶಾವಕಾಶ, ಕೊಠಡಿಗಳ ಲಭ್ಯತೆ ಅಥವಾ ಅಲಭ್ಯತೆ, ಆದಾಯ ಮತ್ತು ಅವುಗಳ ವೆಚ್ಚ ಇತ್ಯಾದಿಗಳನ್ನು ನಿಯಂತ್ರಿಸುತ್ತದೆ. ಹಣಕಾಸಿನ ನಿರ್ವಹಣೆಯೇ ಜವಾಬ್ದಾರಿಯುತ ಕಾರ್ಯವಾಗಿದೆ. ಯಾವುದೇ ಖಾಸಗಿ ಸಂಸ್ಥೆ ವಿದ್ಯಾರ್ಥಿಗಳಿಂದ ಪಡೆದ ಹಣವನ್ನು ವಿದ್ಯಾರ್ಥಿಗಳ ಶಿಕ್ಷಣ ಸಂಸ್ಥೆಗಳು ಡೊನೇಷನ್ ಹಾಗೂ ಕ್ಯಾಪಿಟೇಶನ್ ಫೀಗಳನ್ನು ವಸೂಲಿ ಮಾಡಲು ಸರ್ಕಾರ ಅನುಮತಿ ನೀಡಿದೆ. ಆದರೆ ಮಿತಿಮೀರಿದರೆ ಸರ್ಕಾರ ಹಸ್ತಕ್ಷೇಪ ನಡೆಸಿ ನಿಯಂತ್ರಿಸಬಹುದು. ಶಾಲಾ-ಕಾಲೇಜುಗಳಿಂದ ಪಡೆದಂತಹ ಎಲ್ಲಾ ಆದಾಯದ ಮೂಲಗಳನ್ನು ಅದರ ವೆಚ್ಚಗಳನ್ನು ಶಿಕ್ಷಣ ಸಂಸ್ಥೆಗಳು ಲೆಕ್ಕವನ್ನಿಡಬೇಕು. ೧೯೮೩ ರ ಕರ್ನಾಟಕ ಎಜುಕೇಶನ್ ಬಿಲ್ ಪ್ರಕಾರ, ಸಂಸ್ಥೆಗಳು ವಸೂಲಿ ಮಾಡಿದ ಹಣವನ್ನು ಶಿಕ್ಷಣದ ಅವಶ್ಯಕತೆಗನುಗುಣವಾಗಿ ಬಳಸಲೇಬೇಕು.[೧] (ರೇಖಾಕೌಲ್, ೧೯೯೩,ಪು.೧೧೩). ಹೀಗೆ ಮಠ ವಿವಿಧ ರೂಪದಿಂದ ಪಡೆಯುವ ಆದಾಯದ ಮೂಲಗಳು ಮತ್ತು ವೆಚ್ಚದ ಮೂಲಗಳು ಈ ಕೆಳಕಂಡಂತಿವೆ.

೫.೧.೧ ಆದಾಯದ ಮೂಲಗಳು


೨೦೦೩-೦೪ ರಲ್ಲಿ ಮಠದ ಆದಾಯ ರೂ. ೮೭೧೬೬೨೩೮೭ ರಷ್ಟಿದ್ದರೆ, ೨೦೦೪-೦೫ ರಲ್ಲಿ ರೂ. ೧೧೦೬೫೯೧೯೭೪೧ ರಷ್ಟಿದೆ. ಮಠ ಫಂಡ್ಸ್‌ಗಳ ಮೂಲಕ ಸಾಕಷ್ಟು ಆದಾಯವನ್ನು ಪಡೆಯುತ್ತಿದೆ. ಫಂಡ್ಸ್‌ಗಳಲ್ಲಿ ಬಂಡವಾಳ ನಿಧಿ, ನಿರ್ದಿಷ್ಟ ನಿಧಿ ಪ್ರಮುಖವಾದವುಗಳು. ನಿರ್ದಿಷ್ಟ ನಿಧಿಯಲ್ಲಿ ದಾನಿಗಳ ಪಾತ್ರವೇ ಮುಖ್ಯವಾದದ್ದು. ಈ ನಿಧಿಯು ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತದೆ. ಆದಾಯದ ಮೂಲಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ತೋರಿಸಲಾಗಿದೆ.

ಟಿಪ್ಪಣಿ ೧. According to Karnataka Education Bill, "That all Money Collected or granted or allocated to the local authority by or under this Act should be expended for educational purposes by the Management.

ಪಟ್ಟಿ ೧ : ಮಠದ ಆದಾಯ (ರೂಪಾಯಿಗಳಲ್ಲಿ)


ಕ್ರ.ಸಂ	ಮೂಲಗಳು	೨೦೦೨-೨೦೦೩	೨೦೦೪-೨೦೦೫
೧.	ವಿದ್ಯಾರ್ಥಿ ಕಲ್ಯಾಣ ನಿಧಿ	೧೦೨೮೬೮೪೫ ೧.೧೮%	೧೨೬೪೦೫೫೩ ೧.೧೮%
೨.	ಡೊನೇಷನ್ಸ್	೯೬೨೧೫೯ ೦.೧೧%	೧೪೧೦೨೦೦ ೦.೧೩
೩.	ನಿಶ್ಚಿತ ಠೇವಣಿಗಳು	೧೭೫೨೩೭೫೪೪ ೨೦.೧೦%	೨೦೫೦೭೨೫೭೫ ೧೯.೨೩%
೪.	ಸ್ಥಿರಾಸ್ತಿ	೧೯೨೭೧೫೪೫೧ ೨೨.೧೦%	೧೯೮೨೮೬೨೬೨ ೧೮.೬೦%
೫.	ಫೀಸುಗಳಿಂದ	೮೧೮೪೧೯೪೩ ೯.೩೮%	೧೧೩೬೮೮೫೯೨ ೧೦.೬೬%
೬	ಅಭಿವೃದ್ಧಿ ಫೀಸ್‌ಗಳಿಂದ	೧೦೬೮೨೦೧೨ ೧.೨೨%	೯೭೩೧೧೩೫ ೦.೯೧%
೭.	ಬ್ಯಾಂಕಿನಿಂದ ಪಡೆದ ಬಡ್ಡಿ	೯೯೯೩೫೨೧ ೧.೧೪%	೧೬೩೦೯೧೪೬ ೧.೫೩%
೮.	ಫಂಡ್ಸ್‌ಗಳಿಂದ	೩೭೮೯೨೧೮೩೨ ೪೩.೪೭%	೪೮೭೧೯೭೫೨೨ ೪೫.೭೦%
೯.	ಇತರೆ ಕಲೆಕ್ಷನ್ಸ್‌ಗಳಿಂದ	೭೯೧೦೬೩೫ ೦.೯೦%	೭೩೨೮೬೩೩ ೦.೦೦೬%
೧೦.	ಅನ್ಯಮೂಲದ ಆದಾಯಗಳಿಂದ	೨೯೦೪೪೫ ೦.೦೩%	೧೧೨೨೯೩೨೩ ೧.೦೫%
೧೧.	ಜಾತ್ರಾ ಮೂಲಗಳಿಂದ	೨೮೨೦೦೦೦ ೦.೩೨%	೩೦೨೫೮೦೦ ೦.೨೮%
	ಒಟ್ಟು	೮೭೧೬೬೨೩೮೭ ೧೦೦%	೧೦೬೫೯೧೯೭೪೧ ೧೦೦%

ಆಧಾರ : ಅ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೨-೦೩ ಪು. ೯೮-೩೧.
ಆ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೪-೦೫, ಪು.೧೩೯-೧೯೦.



೨೦೦೨-೦೩ ರ ಅವಧಿಯಲ್ಲಿ ಸಿದ್ಧಗಂಗಾ ಮಠ ಫಂಡುಗಳಿಂದ ಪಡೆದ ಆದಾಯ ೨೦೦೨-೦೩ ರಲ್ಲಿ ಶೇ.೪೩.೪೭ ರಷ್ಟಿದ್ದು, ೨೦೦೪-೦೫ ರಲ್ಲಿ ಶೇ.೪೫.೭೦ ಕ್ಕೆ ಹೆಚ್ಚಾಗಿದೆ. ಮಠ ಅಭಿವೃದ್ಧಿ ಫೀಸ್‌ಗಳಿಂದ, ಅನ್ಯ ಮೂಲಗಳಿಂದ ಪಡೆದ ಆದಾಯದಲ್ಲಿ ಆಯಾ ಅವಧಿಯಲ್ಲಿ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯ ರೂಪದಲ್ಲಿಟ್ಟಿದೆ. ಈ ಠೇವಣಿಯ ಮೊತ್ತವು ೨೦೦೨-೦೩ ರಲ್ಲಿ ಶೇ.೨೦.೧೦ ರಷ್ಟಿದ್ದು ೨೦೦೪-೦೫ ರಲ್ಲಿ ಶೇ.೧೯.೨೩ ರಷ್ಟಿದೆ. ಠೇವಣಿ ಮೊತ್ತದಲ್ಲಿ ಅಂತಹ ಅಗಾಧವಾದ ವ್ಯತ್ಯಾಸವೇನೂ ಇಲ್ಲ. ಮಠ ಫೀಸ್‌ಗಳಿಂದಲು ಆದಾಯವನ್ನು ಪಡೆಯತ್ತದೆ. ೨೦೦೨-೦೩ ರಲ್ಲಿ ಶೇ.೯.೩೮ ರಷ್ಟಿದ್ದ ಆದಾಯ, ೨೦೦೪-೦೫ ರಲ್ಲಿ ಶೇ.೧೦.೬೬ ಕ್ಕೆ ಹೆಚ್ಚಾಗಿದೆ. ಮಠ ನಿಶ್ಚಿತ ಠೇವಣಿಗಳಲ್ಲಿಯೂ ಆದಾಯವನ್ನು ಪಡೆಯುತ್ತದೆ. ೨೦೦೨-೦೩ ರಲ್ಲಿ ಶೇ.೨೦.೧೦ ರಷ್ಟಿದ್ದರೆ, ೨೦೦೪-೦೫ ರಲ್ಲಿ ಶೇ.೧೮.೬೦ ರಷ್ಟಿದೆ. ತಾನಿಟ್ಟ ಠೇವಣಿಗಳಿಗೆ ಬಡ್ಡಿಯ ರೂಪದಲ್ಲಿಯೂ ಆದಾಯವನ್ನು ಪಡೆಯುತ್ತದೆ. ೨೦೦೨-೦೩ ರಲ್ಲಿ ಶೇ.೧.೧೪ ರಿಂದ ೨೦೦೪-೦೫ ರಲ್ಲಿ ಶೇ.೧.೫೩ ಕ್ಕೆ ಹೆಚ್ಚಾಗಿದೆ.

ಮಠ ಶಾಲಾ-ಕಾಲೇಜುಗಳಲ್ಲದೆ, ಜಾತ್ರಾ ಮೂಲಗಳಿಂದಲೂ ಆದಾಯವನ್ನು ಪಡೆಯುತ್ತದೆ. ಉದ್ದಾನ ಶಿವಯೋಗಿಗಳು ಶ್ರೀಸಿದ್ಧಲಿಂಗೇಶ್ವರ ಜಾತ್ರೆಯನ್ನು ಮಾಡಬೇಕೆಂದು ತೀರ್ಮಾನಿಸಿ, ೧೯೦೯ ರಲ್ಲಿ



ಪ್ರಥಮತಃ ಜಾತ್ರೆ ನಡೆಸಿದರು. ಈ ಜಾತ್ರೆಯೂ ಪ್ರತಿವರ್ಷ ಫೆಬವರಿ ತಿಂಗಳಿನಲ್ಲಿ ೧೦-೧೫ ದಿನಗಳು ನಡೆಯುತ್ತದೆ (ಸಿದ್ಧಗಂಗಾಶ್ರೀ, ೧೯೮೧, ಪು.೬೪).ಈ ಜಾತ್ರೆಯಲ್ಲಿ ಮಠದ ಆವರಣದಲ್ಲಿಯೇ ಸರ್ಕಾರಿ ಮತ್ತು ಖಾಸಗಿ ಮಳಿಗೆಗಳೆರಡನ್ನೂ ಸ್ಥಾಪಿಸಲಾಗುತ್ತದೆ. ಸಣ್ಣ, ಮಧ್ಯಮ ಮತ್ತು ಬೃಹತ್ ಮಳಿಗೆಗಳನ್ನು ತೆರೆಯಲಾಗುತ್ತದೆ. ಈ ಮಳಿಗೆಗಳಿಗೆ ಮಠ ಬಾಡಿಗೆಗಳನ್ನು ನಿಗಧಿಪಡಿಸಿರುತ್ತದೆ. ಮಠದ ನಿಯಮಾವಳಿಗಳಿಗೆ ಒಪ್ಪಿದಲ್ಲಿ ಮಾತ್ರ ಮಳಿಗೆ ಹಾಕಲು ಅವಕಾಶವನ್ನೀಯಲಾಗುತ್ತದೆ. ಜಾತ್ರೆಯಲ್ಲಿ ಮಳಿಗೆಗಳಲ್ಲದೆ ವಸ್ತು ಪ್ರದರ್ಶನವೂ ಇರುತ್ತದೆ.

ಈ ಜಾತ್ರೆಯಲ್ಲಿ ರೇಷ್ಮೆ, ಕೈಮಗ್ಗ, ಮೀನುಗಾರಿಕೆ, ತೋಟಗಾರಿಕೆ, ಆಗ್ರೋ-ಇಂಡಸ್ಟ್ರೀಸ್, ಹಿಂದೂಸ್ಥಾನ್ ಮೆಷಿನ್ ಟೂಲ್ಸ್, ಮಾಪನ ಮಳಿಗೆ, ಜಲಾನಯನ........ ಇತ್ಯಾದಿ ಪ್ರಮುಖ ಮಳಿಗೆಗಳಾಗಿವೆ. ಈ ಜಾತ್ರಾ ಮತ್ತೊಂದು ವಿಶೇಷತೆಯೇನೆಂದರೆ, ಸ್ತ್ರೀ ಶಕ್ತಿ ಸಂಘಗಳು ತಾವು ಉತ್ಪಾದಿಸಿದ ಸರಕುಗಳನ್ನು ಮಾರಾಟ ಮಾಡಲು ಮಳಿಗೆಗಳನ್ನು ಸ್ಥಾಪಿಸುತ್ತವೆ. ಈ ಎಲ್ಲಾ ಮಳಿಗೆಗಳಿಂದ ಬರುವ ಬಾಡಿಗೆ ರೂಪವೇ ಮಠದ ಆದಾಯವಾಗಿರುತ್ತದೆ. ಹೀಗೆ-ಜಾತ್ರಾ ಮೂಲಗಳಿಂದ ೨೦೦೨-೦೩ ರಲ್ಲಿ ಶೇ.೦.೩೨ ರಷ್ಟು ಆದಾಯವನ್ನು ಪಡೆದಿದ್ದರೆ, ೨೦೦೪-೦೫ ರಲ್ಲಿ ಶೇ.೦.೨೮ ರಷ್ಟು ಆದಾಯವನ್ನು ಪಡೆದಿದೆ.

೨೦೦೨-೦೩ ಮತ್ತು ೨೦೦೪-೦೫ ರ ಅವಧಿಯಲ್ಲಿ ಮಠದ ಸ್ಥಿರಾಸ್ಥಿಯಲ್ಲಿಯೂ ಸಾಕಷ್ಟು ಅಭಿವೃದ್ಧಿಯಾಗಿದೆ. ೨೦೦೨-೦೩ ಮತ್ತು ೨೦೦೪-೦೫ ರ ಅವಧಿಯಲ್ಲಿ ಕ್ರಮವಾಗಿ ಸ್ಥಿರಾಸ್ಥಿಯು ಶೇ.೨೨.೧೦ ಮತ್ತು ಶೇ. ೧೮.೬೦ ರಷ್ಟಿದೆ.

ಮೇಲ್ಕಂಡ ಆದಾಯ ಪಟ್ಟಿಯನ್ನು ಗಮನಿಸಿದರೆ, ಮಠ ಅತ್ಯಧಿಕ ಆದಾಯವನ್ನು ಫಂಡ್ಸ್ ರೂಪದಲ್ಲಿ ಪಡೆಯುತ್ತಿದೆ. ಮಠಕ್ಕೆ ದಾನ ನೀಡುವವರು ಅಧಿಕ ಸಂಖ್ಯೆಯಲ್ಲಿರುವುದರಿಂದ ನಿಧಿಗಳ ರೂಪದಲ್ಲಿರುವ ಆದಾಯ ಅಧಿಕವಾಗಿದೆ. ಮಠದಲ್ಲಿ ಆಶ್ರಯ ಪಡೆದು ಶಿಕ್ಷಣ ಪಡೆದು, ಉನ್ನತ ಸ್ಥಾನದಲ್ಲಿರುವವರು ಮಠಕ್ಕೆ ಹೆಚ್ಚು ದಾನ ಮಾಡುವವರಾಗಿದ್ದಾರೆ. ಮಠ ಬಂಡವಾಳ ನಿಧಿಯ ರೂಪದಲ್ಲಿಯೂ ಸಾಕಷ್ಟು ಹಣವನ್ನು ತೊಡಗಿಸಿದೆ. ತನ್ನ ವೆಚ್ಚಕ್ಕಿಂತ ಆದಾಯ ಹೆಚ್ಚಾದಾಗಲೆಲ್ಲ ಆ ಹಣವನ್ನು ತನ್ನ ನಿಧಿಗೆ ಹಾಕಿಕೊಳ್ಳುತ್ತದೆ. ಆದ್ದರಿಂದ ನಿಧಿಯ ಮೊತ್ತ ಹೆಚ್ಚಾಗಲು ಒಂದು ಕಡೆ ಮಠ ಕಾರಣವಾದರೆ, ಮತ್ತೊಂದು ಕಡೆ ಮಠದ ಆಶ್ರಯ, ಜ್ಞಾನ, ಆಹಾರ ಪಡೆದವರು ಕಾರಣರಾಗುತ್ತಾರೆ.


೫.೧.೨ ಮಠದ ವೆಚ್ಚಗಳು

ಸಿದ್ಧಗಂಗಾ ಮಠ ತನ್ನ ಆದಾಯದಿಂದ ಬೃಹತ್ ಪ್ರಮಾಣದ ವೆಚ್ಚವನ್ನು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಮೇಲೆ ವೆಚ್ಚಮಾಡುತ್ತಿದೆ. ೨೦೦೨-೦೩ ರಲ್ಲಿ ಶೇ. ೫೬.೨೦ ರಿಂದ ೨೦೦೪-೦೫ ರಲ್ಲಿ ಶೇ. ೫೮.೧೦ ಕ್ಕೆ ವೆಚ್ಚದ ಪ್ರಮಾಣ ಹೆಚ್ಚಾಗಿದೆ. ನಂತರದ ಅತೀ ಹೆಚ್ಚಿನ ವೆಚ್ಚ ತಗಲುತ್ತಿರುವುದು ಸವಕಳಿ ವೆಚ್ಚದ್ದು. ಸವಕಳಿ ವೆಚ್ಚ ೨೦೦೨-೦೩ ರಲ್ಲಿ ಶೇ. ೨೩.೬೨ ರಷ್ಟಿದ್ದರೆ, ೨೦೦೪-೦೫ ರಲ್ಲಿ ಶೇ. ೨೧.೬೬ ರಷ್ಟಿದೆ. ಕೆಲವು ಶಾಲೆಗಳಿಗೆ ಆಡಳಿತ ಮಂಡಳಿ ಸಹಾಯವನ್ನು ನೀಡುತ್ತದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸುವುದು, ನೋಟ್ ಬುಕ್‌ಗಳನ್ನು ವಿತರಿಸುವುದು, ಸ್ಕೂಲ್‌ಬ್ಯಾಗುಗಳನ್ನು ವಿತರಿಸುವುದು, ಕಡು ಬಡತನಲ್ಲಿರುವ ವಿದ್ಯಾರ್ಥಿಗಳಿಗೆ ಫೀಸ್‌ಗಳನ್ನು ಕಟ್ಟುವುದು......ಹೀಗೆ ನಾನಾ ರೂಪದಲ್ಲಿ ಸಹಾಯಹಸ್ತವನ್ನು ಆಡಳಿತ ಮಂಡಳಿಯೇ ನಿರ್ವಹಿಸುತ್ತದೆ. ಜಾಹೀರಾತುಗಳ ವೆಚ್ಚ, ಆಡಿಟ್ ಫೀ, ಆಡಿಟ್ ಖರ್ಚು, ಸಾರ್ವತ್ರಿಕ ಸಭೆ, ಬ್ಯಾಂಕ್ ಚಾರ್ಜಸ್, ನಗದು ಬಹುಮಾನ ಇತ್ಯಾದಿಗಳಿಗೆಂದು ಮಠ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಇತ್ಯಾದಿ ಖರ್ಚುಗಳೆಂದು ಹೇಳಲಾಗುತ್ತದೆ. ಇಂತಹ ಖರ್ಚುಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ೨೦೦೨-೦೩ ರಲ್ಲಿ ಶೇ. ೭.೫೪ ರಷ್ಟಿದ್ದರೆ, ೨೦೦೪-೦೫ ರಲ್ಲಿ ಶೇ. ೯.೩೭ ರಷ್ಟಿದೆ. ಶಾಲಾ-ಕಾಲೇಜುಗಳಲ್ಲಿ ಡಿಪಾರ್ಟ್‌ಮೆಂಟ್‌ಗಳ ಅಭಿವೃದ್ಧಿಗಾಗಿ ಖರ್ಚನ್ನು ಮಾಡಬೇಕಾಗುತ್ತದೆ. ಡಿಪಾರ್ಟ್‌ಮೆಂಟ್‌ಗಳಲ್ಲಿ ಲೈಬ್ರರಿ ಅನುಕೂಲ ಒದಗಿಸುವುದು, ವರ್ಕ್‌ಷಾಪ್‌ಗಳನ್ನು ನಡೆಸುವುದು, ಕೆಲವು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು .... ಇತ್ಯಾದಿ ವೆಚ್ಚಗಳನ್ನು ಕೈಗೊಳ್ಳಬೇಕು. ಡಿಪಾರ್ಟ್‌ಮೆಂಟ್ ಖರ್ಚುಗಳು ಕಲಾ ವಿಭಾಗದವರಿಗಿಂತ, ವಿಜ್ಞಾನ ವಿಭಾಗದಲ್ಲಿ ಹೆಚ್ಚು ಕಂಡುಬರುವುದು. ೨೦೦೨-೦೩ ರಲ್ಲಿ ಶೇ.೨.೩೮ ರಷ್ಟಿದ್ದ ವೆಚ್ಚ, ೨೦೦೪-೦೫ ರಲ್ಲಿ ಶೇ.೨.೩೨ ರಷ್ಟಿದೆ. ಕಛೇರಿ ವೆಚ್ಚಗಳಿಗಾಗಿಯೂ ಹಣವನ್ನು ವೆಚ್ಚ ಮಾಡಲಾಗುತ್ತದೆ. ಟೆಲಿಫೋನ್ ಚಾರ್ಜಸ್, ಪೋಸ್ಟಲ್ ಚಾರ್ಜಸ್, ಪ್ರಿಂಟಿಂಗ್, ಸ್ಟೇಷನರಿ ಮೊದಲಾದವುಗಳಿಗೆ ವೆಚ್ಚದ ಅಗತ್ಯತೆ ಇದೆ. ೨೦೦೨-೦೩ ರಲ್ಲಿ ಇಂತಹ ಕಛೇರಿ ವೆಚ್ಚಗಳು ಶೇ. ೩.೨೯ ರಷ್ಟಿದ್ದರೆ, ೨೦೦೪-೦೫ ರಲ್ಲಿ ಶೇ. ೧.೪೬ ರಷ್ಟಿದೆ. ಕಛೇರಿ ವೆಚ್ಚಗಳು ಸಾಕಷ್ಟು ಇಳಿಮುಖವಾಗಿದೆ.

ಪಟ್ಟಿ ೨ : ಮಠದ ವೆಚ್ಚಗಳು : (ರೂಪಾಯಿಗಳಲ್ಲಿ)

ಕ್ರಸಂ	ವಿಧಗಳು	೨೦೦೨-೦೩	೨೦೦೪-೦೫
೧.	ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್	೬೭೧೭೬೧೫೩ ೫೬.೨೦%	೭೪೧೬೦೯೬೩ ೫೮.೧೦%
೨.	ರಿಪೇರಿಗಳು ಮತ್ತು ಸಂರಕ್ಷಣೆ	೩೫೩೪೦೨ ೦.೨೯%	೫೭೭೭೨೦ ೦.೪೫%
೩.	ಸವಕಳಿ ವೆಚ್ಚ	೨೮೨೩೨೨೨೩ ೨೩.೬೨%	೨೭೬೫೪೬೪೩ ೨೧.೬೬%
೪.	ಕೊಡುಗೆಗಳು	೨೪.೦೦೦ ೦.೦೨%	೩೪೭೫೦ ೦.೦೨%
೫.	ಶಾಲೆಗಳಿಗೆ ಮ್ಯಾನೇಜ್‌ಮೆಂಟ್ ಕೊಡುಗೆಗಳು	೭೯೩೯೦೮೯ ೬.೬೪%	೮೪೦೧೬೮೭ ೬.೫೮%
೬.	ಡಿಪಾರ್ಟ್‌ಮೆಂಟ್ ಖರ್ಚುಗಳು	೨೮೪೭೨೬೭ ೨.೩೮%	೨೯೬೯೦೦೨ ೨.೩೨%
೭.	ಕಛೇರಿ ವೆಚ್ಚಗಳು	೩೯೩೭೩೬೬ ೩.೨೯%	೧೮೬೫೨೩೩ ೧.೪೬%
೮.	ಇತರೆ ಖರ್ಚುಗಳು	೯೦೧೨೬೪೬ ೭.೫೪%	೧೧೯೬೦೫೪೭ ೯.೩೭%
	ಒಟ್ಟು	೧೧೯೫೨೨೧೪೬ ೧೦೦%	೧೨೭೬೨೪೫೪೫ ೧೦೦%

ಆಧಾರ : ಅ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೨-೦೩ ಪು. ೯೮-೩೧.
ಆ. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೪-೦೫, ಪು.೧೩೯-೧೯೦.



ಆದಾಯ ಮತ್ತು ವೆಚ್ಚಗಳನ್ನು ಪರಿಪೂರ್ಣವಾಗಿ ಅಧ್ಯಯನ ಮಾಡಿದರೆ ಮಠದ ಆದಾಯ ವೆಚ್ಚಕ್ಕಿಂತಲೂ ಅಧಿಕವಾಗಿದೆ. ಸಾಕಷ್ಟು ಹಣ ಫಂಡ್ಸ್‌ಗಳಿಂದ ಹರಿದು ಬರುತ್ತದೆ. ಬಿಲ್ಡಿಂಗ್, ಫರ್ನೀಚರ್ ಆಟದ ಮೈದಾನ ಭೂಮಿಗಳ ಮೌಲ್ಯಗಳನ್ನು ಸ್ಥಿರಾಸ್ತಿಯಲ್ಲಿ ಪರಿಗಣಿಸಲಾಗಿದ್ದು, ಗರಿಷ್ಠ ಮಟ್ಟದಲ್ಲಿ ಹೊಂದಿದೆ. ವಿದ್ಯಾರ್ಥಿಗಳ ಕಲ್ಯಾಣ ನಿಧಿಯಿಂದ ಪಡೆದಂತಹ ಆದಾಯವನ್ನು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಖರ್ಚನ್ನು ಮಾಡುತ್ತಿದೆ. ಉತ್ತಮವಾದ ಕಟ್ಟಡಗಳು ಪ್ರಯೋಗಶಾಲೆಗಳು, ಗ್ರಂಥಾಲಯ, ಲ್ಯಾಬೋರೇಟರಿ, ಲೈಬ್ರರಿ, ಆಟದ ಮೈದಾನ ಮೊದಲಾದ ಸೌಲಭ್ಯಗಳನ್ನು ಪರಿಪೂರ್ಣವಾಗಿ ಒದಗಿಸಿದೆ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಬೃಹತ್ ಪ್ರಮಾಣದಲ್ಲಿ ಬಂಡವಾಳವನ್ನು ಹೂಡುತ್ತಿದೆ.

ಮೇಲ್ನೋಟಕ್ಕೆ ಮಠದ ಆದಾಯ ಮಠದ ವೆಚ್ಚಕ್ಕಿಂತ ಅಧಿಕವಾಗಿರುವುದು ಕಂಡು ಬರುತ್ತದೆ. ಆದರೆ ಮಠದ ಆದಾಯಗಳಲ್ಲಿ ಸ್ಥಿರಾಸ್ತಿಯು ಅಧಿಕವಾಗಿದೆ. ಒಟ್ಟು ಆದಾಯದಿಂದ ಸ್ಥಿರಾಸ್ತಿಗಳನ್ನು ಕಳೆದರೆ ಆದಾಯ ಕಡಿಮೆಯಾಗಿ ವೆಚ್ಚವು ಅಧಿಕವಾಗುತ್ತದೆ. ಮಠ ತಾನು ಯಾವ ಮೂಲದಿಂದಲಾದರು ಹೆಚ್ಚುವರಿ ಆದಾಯವನ್ನು ಪಡೆದರೆ, ಆ ಆದಾಯವೆಲ್ಲವನ್ನು ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯಕ್ಕೆ ಸದುಪಯೋಗಪಡಿಸಿಕೊಳ್ಳಲಾಗುತ್ತದೆ.

ಕೊನೆಯ ಮಾತು

ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲಗಳ ಮೇಲೆ ಬಂಡವಾಳವನ್ನು ಹೂಡುವುದೆಂದರ್ಥ. ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳವನ್ನು ಹೂಡಿದರೆ, ಆರ್ಥಿಕ, ಸಾಮಾಜಿಕ ಬದಲಾವಣೆಗಳು ಕಂಡುಬರುತ್ತವೆ. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣದ ಮೇಲಿನ ಬಂಡವಾಳ ಹೂಡುವಿಕೆ ಮಹತ್ವವಾದದ್ದು. ರಾಷ್ಟ್ರದ ಕಲ್ಯಾಣವನ್ನು ಹೆಚ್ಚಿಸುವಲ್ಲಿ ಪಡೆದಂತಹ ಆದಾಯ, ಬಂಡವಾಳ ರೂಪದಲ್ಲಿ ಮರುಹೂಡಿಕೆಯಾಗಲೇಬೇಕು. ಸಿದ್ಧಗಂಗಾ ಮಠ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬಂಡವಾಳವನ್ನು ಹೂಡುತ್ತಿದೆ.

ಗ್ರಂಥಋಣ

೧. **ಅಮರ್ತ್ಯ ಸೇನ್/ ಜೀನ್ ಡ್ರೀಜ್**, *ಕಾಂಪ್ರೈಸಿಂಗ್ ಪಾವರ್ಟಿ ಅಂಡ್ ಫ್ಯಾಮಿನ್ಸ್, ಹಂಗರ್ ಅಂಡ್ ಪಬ್ಲಿಕ್ ಆ್ಯಕ್ಷನ್ ಇಂಡಿಯಾ: ಎಕಾನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಷಿಯಲ್ ಆಪರ್ಚುನಿಟಿ*, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೯.

೩. **ಜಿಂಗಾನ್ ಎಮ್.ಎಲ್**, *ದಿ ಎಕಾನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಅಂಡ್ ಪ್ಲಾನಿಂಗ್*, ವಿಕಾಸ್ ಪಬ್ಲಿಷಿಂಗ್ ಹೌಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, ೧೯೭೫.

೪. **ಮದನ್ ಟಿ.ಎನ್./ ಬಿ.ಜಿ. ಹಾಲ್ಬರ್**, ಕ್ಯಾಸ್ಟ್ ಅಂಡ್ ಕಮ್ಯುನಿಟಿ ಇನ್ ದಿ ಪ್ರೈವೇಟ್ ಅಂಡ್ ಪಬ್ಲಿಕ್ ಎಜುಕೇಶನ್ ಆಫ್ ಮೈಸೂರ್ ಸ್ಟೇಟ್ ಇನ್: ಸುಸಾನ್ನೆ ಹೋಬರ್ ರುಡಾಫ್, ಲಾಯ್ಡ್ ರೂಡಾಫ್ (ಇಡಿ.ಎಸ್.), *ಎಜುಕೇಶನ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ:* ಸ್ಟಡೀಸ್ ಇನ್ ಆರ್ಗನೈಜೇಶನ್, ಸೊಸೈಟಿ ಅಂಡ್ ಪಾಲಿಸಿ; ನ್ಯೂ ಡೆಲ್ಲಿ: ಆರ್ಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೭೨.

೫. **ತಿಲಕ್ ಬಿ.ಜಿ.**, ಫೈನಾನ್ಸಿಂಗ್ ಎಲಿಮೆಂಟರಿ ಎಜುಕೇಶನ್ ಇನ್ ಇಂಡಿಯಾ (ಇಡಿ.) ಆರ್. ಗೋವಿಂದ್, ಇಂಡಿಯಾಸ್ ಎಜುಕೇಶನ್ ರಿಪೋರ್ಟ್, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

೬. ***ಸಿದ್ಧಗಂಗಾಶ್ರೀ***, ಸಂ ಚನ್ನಪ್ಪ ಎರೆಸೀಮೆ ಮತ್ತು ಮಹಾದೇವಯ್ಯ ಟಿ.ಆರ್, ಹಳೆ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಕ್ಷೇತ್ರ, ೧೯೮೮, ತುಮಕೂರು.

೭. ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ***ಶ್ರೀ ಸಿದ್ಧಗಂಗಾ ಮಠ*, ೨೦೦೫–೦೬.**

ಪಟ್ಟಿ :

೧. ಮಠದ ಆದಾಯ

೨. ಮಠದ ವೆಚ್ಚಗಳು

ಅಧ್ಯಾಯ - ೬

ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯ

ಅಧ್ಯಾಯ – ೬

ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯ.

೬.೧ ಶ್ರೀ ಸಿದ್ಧಗಂಗಾ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಉಚಿತ ವಿದ್ಯಾರ್ಥಿ ನಿಲಯ

ಶಿಕ್ಷಣ ಎಷ್ಟು ಮುಖ್ಯವೋ ಆಹಾರವು ಅಷ್ಟೇ ಮುಖ್ಯವೆಂದರಿತ ಮಠ, ಅನ್ನ, ಅರಿವು, ಆಸರೆಗಳಿಗೆ ಪ್ರಾಶಸ್ತ್ಯ ನೀಡಿದೆ. ಸರ್ಕಾರ ಇತ್ತೀಚಿನ ದಿನಗಳಲ್ಲಿ 'ಮಧ್ಯಾಹ್ನದ ಬಿಸಿಯೂಟ' ಕ್ಕೆ ವ್ಯಾಪಕ ಪ್ರಚಾರ ನೀಡುತ್ತಿದೆ. ಆದರೆ ಸಿದ್ಧಗಂಗಾ ಮಠ ಯಾವುದೇ ಪ್ರಚಾರವಿಲ್ಲದೆ, ಹತ್ತೊಂಬತ್ತನೇ ಶತಮಾನದ ಪೂರ್ವಾರ್ಧದಲ್ಲಿಯೇ ಇಂತಹ ಆಲೋಚನೆಗಳನ್ನು ಕೈಗೊಂಡು ಅನುಷ್ಠಾನಕ್ಕೆ ತಂದಿದೆ. ದಾಸೋಹದಲ್ಲಿ ವ್ಯಕ್ತಿಗಿಂತಲೂ ಸಮಾಜಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಮಾಡುವ ಸೇವೆಯ ಬಹುಪಾಲು ಜನತೆಗೆ ತಲುಪಬೇಕೆಂಬ ಕಳಕಳಿಯಿದೆ.

ಡಾ. ಎಂ.ಎಂ. ಕಲುಬುರ್ಗಿಯವರು 'ಶೋಷಣೆ ರೂಪದ ದಾನ ವ್ಯವಸ್ಥೆಯನ್ನು, ಸದೆಬಡಿಯಲು ದಾಸೋಹತ್ವವನ್ನು ಶರಣರು ಅನುಷ್ಠಾನಕ್ಕೆ ತಂದರು" ಎಂದಿದ್ದಾರೆ (ಡಾ.ಅಶೋಕ ನರೋಡೆ, ೨೦೦೦, ಪು.೬೨). ವರ್ಗ-ವರ್ಣ ರಚಿತವಾದ ಭಕ್ತ ಸಮಾಜದಲ್ಲಿ ಮುಕ್ತವಾಗಿ ನಡೆಯುವ ವಿನಿಮಯ ಕ್ರಿಯೆಯಾಗಿದೆ. ದಾಸೋಹ ಒಂದು ಸಮಾಜದಲ್ಲಿ ಸಮಸ್ತ ಜನತೆಯ ಹಿತಾಸಕ್ತಿಯನ್ನು ಕಾಪಾಡುತ್ತದೆ. ದಾಸೋಹ ಮತ್ತು ತ್ರಿವಿಧ ದಾಸೋಹದ ಬಳಕೆ ೧೨ ನೇ ಶತಮಾನದಲ್ಲಿಯೇ ಕಾಣಬಹುದಾಗಿದೆ. ಆಹಾರವನ್ನು ಗಳಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಮನುಷ್ಯನ ಬದುಕು ನಿಂತಿರುವುದರಿಂದ, ಬದುಕನ್ನು ಉತ್ತಮಪಡಿಸಿಕೊಳ್ಳಲು ಹಸಿವಿನಿಂದ ಬಿಡುಗಡೆಯಾಗಬೇಕೆನ್ನಲಾಗಿದೆ (ಡಾ.ಟಿ.ಆರ್.ಚಂದ್ರಶೇಖರ್, ೨೦೦೩, ಪು.೨೧). ದಾಸೋಹದಲ್ಲಿ 'ಸಹಕಾರ'ವನ್ನು ಕಾಣಬಹುದಾಗಿದೆ. ಯಾರಲ್ಲಿ ಸರಕುಗಳ ಉತ್ಪಾದನೆ, ಪೂರೈಕೆ ಅಧಿಕವಾಗಿರುತ್ತದೋ, ಉಪಯೋಗಿಸದೆ ವ್ಯರ್ಥವಾಗಿ ಹೋಗುವ ಹೊತ್ತಿನಲ್ಲಿ ಮತ್ತು

ಇನ್ನಿತರ ಸಂದರ್ಭಗಳಲ್ಲಿ ಅವುಗಳನ್ನು ಉದಾರವಾಗಿ ನೀಡಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತ್ಯಾನುಸಾರ ದಾಸೋಹ ಮಾಡಬೇಕು. ಹೀಗೆ ದಾಸೋಹವೆಂಬುದು ತ್ಯಾಗ, ದಾನ ಮತ್ತು ಸಮಾನ ಹಂಚಿಕೆಯನ್ನು ಒಳಗೊಂಡಿದೆ.

ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದಂತೆ ನೆಹರು ಹೇಳುವ ಹಾಗೆ, ಪ್ರಾಥಮಿಕ ಶಿಕ್ಷಣ, ಪೌಷ್ಠಿಕ ಆಹಾರ, ಆರೋಗ್ಯ ಕಾಪಾಡಿಕೊಳ್ಳುವುದು, ಸಾಮಾಜಿಕ ಭದ್ರತೆ ಇವುಗಳು ಮಹತ್ವವಾದದ್ದು (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯,ಪು.೨). ಮಾನವನಿಗೆ ಅಕ್ಷರ ಜ್ಞಾನ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಆರೋಗ್ಯ ಮತ್ತು ಆಹಾರ. ಆರ್ಥಿಕಾಭಿವೃದ್ಧಿಯು ಆರೋಗ್ಯ ಮತ್ತು ಆಹಾರವನ್ನು ದೊರಕಿಸುವುದಲ್ಲದೆ, ಅಭಿವೃದ್ಧಿಯ ಅವಕಾಶಗಳಿಗು ಪೂರಕವಾಗಿ ವರ್ತಿಸುತ್ತದೆ. ಶಿಕ್ಷಣ ಮತ್ತು ಆರೋಗ್ಯ ಮಾನವನಲ್ಲಿ ಅಂತಸ್ಥವಾದ ಗುಣವನ್ನು ಹೊಂದಿವೆ (ಅಮರ್ತ್ಯ ಸೇನ್/ಜೀನ್ ಡ್ರೀಜ್, ೧೯೯೯, ಪು.೧೪).

ಅಮರ್ತ್ಯ ಸೇನ್‌ನ ಚಿಂತನೆಗಳನ್ನೇ ಹಲವಾರು ವೀರಶೈವ ಮಠಗಳು ಆಚರಿಸಿಕೊಂಡು ಬಂದಿವೆ. ವೀರಶೈವ ಮಠಗಳಲ್ಲಿ ಸಿದ್ಧಗಂಗೆ ಮಠ ದಕ್ಷಿಣ ಕರ್ನಾಟಕದಲ್ಲಿ ದಾಸೋಹಕ್ಕಾಗಿ ಪ್ರಸಿದ್ಧಿಯನ್ನು ಪಡೆದಿದೆ. ವಿ.ವಿ. ಸಂಗಮದ ಪ್ರಕಾರ, "ಬಸವಣ್ಣನವರ ಭಕ್ತಿಯನ್ನು ಹೈದರಾಬಾದ್ ಕರ್ನಾಟಕದವರು, ಜ್ಞಾನವನ್ನು ಉತ್ತರ ಕರ್ನಾಟಕದವರು, ದಾಸೋಹವನ್ನು ದಕ್ಷಿಣ ಕರ್ನಾಟಕದವರು ಹಂಚಿಕೊಂಡಿದ್ದಾರೆ" ಎಂದಿದ್ದಾರೆ (ವಿ.ವಿ. ಸಂಗಮದ, ೨೦೦೫, ಪು.೭೬).

ಸಾಮಾನ್ಯವಾಗಿ ತ್ರಿವಿಧ ದಾಸೋಹ ಎಂಬ ಪದಕ್ಕೆ ತನು, ಮನ, ಧನಗಳನ್ನರ್ಪಿಸಿ ಧನ್ಯತೆಯನ್ನು ಧಾರಣಗೈದುಕೊಳ್ಳುವುದು. ಆದರೆ ಶಿವಕುಮಾರಸ್ವಾಮಿಗಳ ಪರಿಭಾಷಾಕೋಶದಲ್ಲಿ ಬೇರೆ ಭಾಷಾರ್ಥವೇ ಅಡಗಿದೆ ಎಂದು ಸಾ.ಶಿ. ಮರುಳಯ್ಯ ವಿವರಿಸಿದ್ದಾರೆ (ಸಾ.ಶಿ.ಮರುಳಯ್ಯ, ೨೦೦೫, ಪು.೭೫). ಜ್ಞಾನದಾಸೋಹ, ಅನ್ನ ದಾಸೋಹ ಮತ್ತು ಸೇವಾ ದಾಸೋಹ ಈ ತ್ರಿವಿದಾರ್ಥಗಳು ಮಠದ ದೈನಂದಿನ ಕಾಯಕಗಳು. ಹಸಿದ ಹೊಟ್ಟೆಗೆ ಯಾವ ತತ್ವಬೋಧೆಯೂ ಹಿಡಿಸುವುದಿಲ್ಲ. ಮೊದಲು ಹೊಟ್ಟೆಗೆ ತೃಪ್ತಿಸಿಗಬೇಕು. ಅದು ನಿತ್ಯನಿರಂತರ ದಾಸೋಹ. ಬಡವ-ಬಲ್ಲಿದ, ಹೆಣ್ಣು-ಗಂಡು, ಮೇಲ್ಜಾತಿ-ಕೀಳ್ಜಾತಿ ಎಂಬ ಯಾವ ಭೇದವೂ ಇಲ್ಲದೆ ಸರ್ವ ಸಮಾನತೆಗೆ ಸಾಕ್ಷಿಯಾಗಿದೆ.

ಡಾ.ಎಚ್.ಎಂ. ಮರುಳಸಿದ್ದಯ್ಯ ಹೇಳುವಂತೆ ಸಾಮಾಜಿಕ ಆಯಾಮಗಳನ್ನು ರೂಪಿಸಬೇಕು ಅದಕ್ಕಾಗಿ ಐದು ಸಾಮಾಜಿಕ ಆಯಾಮಗಳನ್ನು ಹೆಸರಿಸಿದ್ದಾರೆ-ಶಿಕ್ಷಣ. ಆರೋಗ್ಯ, ಕಾಯಕ, ಸಾಮರಸ್ಯ ಮತ್ತು ಜನಾಧಿಕಾರ (ಡಾ.ಎಚ್.ಎಂ.ಮರುಳಸಿದ್ಧಯ್ಯ, ೨೦೦೫, ಪು.೬೭). ಆಧುನಿಕ ಸಮಾಜದಲ್ಲಿ ಸಮಸ್ಯೆಗಳು ಉಲ್ಬಣಗೊಂಡು ಸಮಾಜವನ್ನು ಅಸ್ವಸ್ಥಗೊಳಿಸುತ್ತಲಿವೆ. ಅನಾರೋಗ್ಯ, ಅಪೌಷ್ಠಿಕತೆ, ಅನಕ್ಷರತೆ, ಅಜ್ಞಾನ, ದಾರಿದ್ರ್ಯ, ನಿರುದ್ಯೋಗ.......ಮೊದಲಾದವು ಸಮಾಜವನ್ನು ಅಸ್ವಸ್ಥಗೊಳಿಸುತ್ತವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಅಕ್ಷರಜ್ಞಾನದೊಂದಿಗೆ, ಅನ್ನದಾಸೋಹವು ಮುಖ್ಯವಾದದ್ದು.

೨೦ ನೆಯ ಶತಮಾನದಲ್ಲಿ ವಿದ್ಯಾಕ್ಷೇತ್ರಕ್ಕೆ ವೀರಶೈವ ಮಠಗಳ ಮಹಾನ್ ಕೊಡುಗೆಯೆಂದರೆ ಉಚಿತ ಪ್ರಸಾದ ನಿಲಯಗಳು. ಈ ಕಾರ್ಯವನ್ನು ಮಾಡಿದವರು ಮಠಾಧಿಪತಿಗಳು. ಭರದಿಂದ ವಿದ್ಯಾಪ್ರಸಾರ ನಡೆದ ಈ ಶತಮಾನದಲ್ಲಿ ಗ್ರಾಮೀಣ ಭಾಗದವರಿಗೂ, ಬಡವರಿಗೂ ಕಲಿಯಲು ಮುಂಬರಲು ಅವಕಾಶ ಮಾಡಿಕೊಟ್ಟ ಶ್ರೇಯಸ್ಸು ಈ ಮಠಗಳಿಗೆ ಸಲ್ಲುತ್ತದೆ. ಈ ಸಮಾಜದ ಎಲ್ಲಾ ಜಾತಿ ಬಾಂಧವರಿಗೂ ಮುಕ್ತ ಪ್ರವೇಶಕೊಟ್ಟು ಅವರ ಮಕ್ಕಳಿಗೆಲ್ಲ ಅನ್ನವಿಟ್ಟು ಓದಲು ಅವಕಾಶ ಕಲ್ಪಿಸಿಕೊಟ್ಟಿವೆ. ಇದಕ್ಕೆ ಸಿದ್ಧಗಂಗಾ ಮಠವೂ ಹೊರತಾಗಿಲ್ಲ. ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಊಟ-ವಸತಿಗಳು ಮೂಲಭೂತ ಅವಶ್ಯಕತೆಗಳೆಂದು ಅರಿತ ಶ್ರೀ ಸಿದ್ಧಗಂಗಾ ಮಠವು ವ್ಯವಸ್ಥಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿತು.

ಸಿದ್ಧಗಂಗಾ ಗುರು ಪರಂಪರೆಯಲ್ಲಿ ಬಂದ ಶಿವಯೋಗಿಗಳು ಚಿಕ್ಕದಾಗಿ ಪ್ರಾರಂಭಿಸಿದ, ಶಿಕ್ಷಣ ಹಾಗೂ ದಾಸೋಹವನ್ನು 'ನ ಭೂತೋ ನ ಭವಿಷ್ಯತಿ', ಎಂಬಂತೆ ಊಹೆಗೂ ನಿಲುಕಲಾರದಷ್ಟು ಮಟ್ಟದಲ್ಲಿ ಅನುಷ್ಠಾನಗೊಳಿಸಿ ಸಹಸ್ರ-ಸಹಸ್ರ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ, ದೀನದಲಿತರ ಮನ-ಮನೆಗಳಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುವಂತೆ ಮಾಡುವುದರ ಮೂಲಕ ಸಮಾಜದ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ರಾಷ್ಟ್ರದ ಎರಡು ದೊಡ್ಡ ಹಸಿವುಗಳಾದ ಜ್ಞಾನ ಮತ್ತು ಅನ್ನ ನಿವಾರಣೆಗೆ ಪ್ರಯತ್ನ ಸಾಗುತ್ತಲಿದೆ. ಒಟ್ಟಾರೆ ಆ ಕಾಲಕ್ಕೆ ಸಿದ್ಧಗಂಗಾ ಮಠ ತನ್ನ ಶೈಕ್ಷಣಿಕ ಸೇವೆಗೆ ಬುನಾದಿ ಹಾಕಿದ್ದು ಕ್ರಾಂತಿಕಾರಿ ಎನಿಸಿದೆ. ಶಿವಕುಮಾರ ಸ್ವಾಮೀಜಿಯ ತತ್ತ್ವಪಾಲನೆ, ಸಮಯಪಾಲನೆ, ದಾಸೋಹಗಳ ಪಾಲನೆಯು ಅನನ್ಯವಾದುದು. ಸಿದ್ಧಗಂಗಾ ಮಠದ ದಾಸೋಹ ವೈಶಿಷ್ಟ್ಯವೆಂದರೆ, ಲಿಂಗಾಯತ ಸ್ವಾಮೀಜಿಗಳಿಂದ ಸ್ಥಾಪಿಸಲ್ಪಟ್ಟಿದ್ದರೂ ಸಮಸ್ತ ಜಾತಿ, ಕೋಮಿನವರಿಗು ಆಶ್ರಯವುಂಟು.

ಶಿವಕುಮಾರಸ್ವಾಮೀಜಿ ಪ್ರಕಾರ, ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು, ಹಸಿವು-ಬಡತನಗಳಿಗೆ ಗುರಿಯಾಗಬಾರದು. ಚಿಕ್ಕ ವಯಸ್ಸಿನಲ್ಲಿ ತಿಂದುಂಡು ಕೆಲಸ ಮಾಡಬೇಕು. ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಕ್ರಿಯಾಶೀಲತೆ ಇಲ್ಲದಿದ್ದರೆ ಮಕ್ಕಳು ಬೆಳೆಯಲಾರರೆಂಬ ಯೋಚನೆ ಶ್ರೀಗಳವರದ್ದು. ಸಿದ್ಧಗಂಗಾ ಮಠದಲ್ಲಿ ವ್ಯಾಸಂಗ ಮಾಡಿದ ಸಾವಿರಾರು ವಿದ್ಯಾರ್ಥಿಗಳು ಇಂದು ದೇಶ-ವಿದೇಶಗಳಲ್ಲಿ ಸಿಗುತ್ತಾರೆ. ಅವರಲ್ಲಿ ಪ್ರಮುಖರೆಂದರೆ, **ಡಾ. ಜಿ.ಎಸ್. ಶಿವರುದ್ರಪ್ಪ, ರಾಷ್ಟ್ರ ಕವಿ., ಡಾ. ಸಾ.ಶಿ.ಮರಳಯ್ಯ, ಪ್ರಸಿದ್ಧ ಲೇಖಕರು, ಚೆಲುವರಾಯಸ್ವಾಮಿ, ಮಾಜಿ ಸಾರಿಗೆ ಸಚಿವರು, ಬಿ.ಎಸ್.ಮಹದೇವಯ್ಯ, ಚೇರಮನ್, ಪಂಡಿತ್ ವೆಂಕಟಾಚಲಗುಪ್ತ., ಲೇಖಕರು. ಸಿ.ಎಸ್. ರಾಮದಾಸ್, ಡಿ.ಹೆಚ್.ಇ. (ರಿ.) ಆಫೀಸರ್, ಎಲ್. ರೇವಣ್ಣಸಿದ್ದಯ್ಯ, ಐ.ಪಿ.ಎಸ್.(ರಿ.). ಎಸ್.ಶಿವಾನಂದಶರ್ಮ, ಕೆ.ಎ.ಎಸ್., (ರಿ.), ಎಸ್.ಶಂಕರಪ್ಪ, ಸಾಮಾಜಿಕ ಕಾರ್ಯಕರ್ತ, ಜಿ.ನಾಗಭೂಷಣ ಶಾಸ್ತ್ರಿ , ತಹಸಿಲ್ದಾರ್., ಕೆ.ಹೆಚ್. ಶಿವರುದ್ರಯ್ಯ ಸಿದ್ಧಗಂಗಾ ಮಠದ ಹಳೆ ವಿದ್ಯಾರ್ಥಿಗಳ ಸಂಘದ ಹಾಲಿ ಕಾರ್ಯದರ್ಶಿ.........ಮೊದಲಾದವರು.**

೧೮೫೦-೧೮೫೫ ರ ಸುಮಾರಿಗೆ ಅಟವೀಸ್ವಾಮಿಗಳು ಸಿದ್ಧಗಂಗಾ ಕ್ಷೇತ್ರದಲ್ಲಿ ನೆಲೆಸಿ ದಾಸೋಹ, ಸಂಸ್ಕೃತ ವಿದ್ಯಾಭ್ಯಾಸಗಳಿಗೆ ಅಂಕುರಾರ್ಪಣೆ ಮಾಡಿದರು (ಸಿದ್ಧಗಂಗಾಶ್ರೀ, ೧೯೮೧, ಪು.೩೫). ಅಟವೀಸ್ವಾಮಿಗಳು ಚಿಕ್ಕ ಒಂದು ಸಂಸ್ಕೃತ ಪಾಠಶಾಲೆ ಮತ್ತು ದಾಸೋಹ ಕ್ರಿಯೆಯನ್ನು ಮೇಲ್ಭಾಗದ ಗುಹೆಯಲ್ಲಿಯೇ ಪ್ರಾರಂಭಿಸಿದರು. ಕ್ರಿ.ಶ. ೧೯೦೧ ರಲ್ಲಿ ಅಟವೀಸ್ವಾಮಿಗಳ ಸಮಾಧಿಕ್ರಿಯೆ ನಡೆದು, ಉದ್ದಾನಶಿವಯೋಗಿಗಳೇ ಮಠದ ಪೂರ್ಣ ಜವಾಬ್ದಾರಿಯನ್ನು ಹೊತ್ತರು. ಉದ್ದಾನಶಿವಯೋಗಿಗಳು ಸಿದ್ಧಗಂಗಾ ದಾಸೋಹದ ಅಭಿವೃದ್ಧಿ ಕಾರ್ಯಗಳಲ್ಲಿ ಮಗ್ನರಾದರು. ಇವರ ಉದ್ದೇಶ ವಿದ್ಯಾರ್ಥಿಗಳು ಮಠಕ್ಕೆ ಬರಬೇಕು. ಊಟವನ್ನು ಮಾಡಬೇಕು. ಇದರಿಂದಾಗಿ ದಾಸೋಹಕ್ರಿಯೆ ಹಿಂದಿಗಿಂತ ಅಧಿಕವಾಗುತ್ತಾ ಹೋಯಿತು. ೧೯೧೭ ನೆಯ ಇಸವಿಯಲ್ಲಿಯೇ ಉದ್ದಾನಶಿವಯೋಗಿಗಳು ಮಠದಲ್ಲಿ ಸಾರ್ವಜನಿಕ ಉಚಿತ ಆಸನ ವಸತಿ ವಿದ್ಯಾರ್ಥಿನಿಲಯ ತೆರೆದರು. ಸಾರ್ವಜನಿಕ ಉಚಿತ ವಿದ್ಯಾರ್ಥಿ ನಿಲಯವನ್ನು ತೆರೆಯಲು ಸರ್ಕಾರವೂ ಹೆದರುತ್ತಿದ್ದ ಕಾಲದಲ್ಲಿ ಮಠ ತೆರೆಯಿತು. ಸರ್ಕಾರವೇ ಕೋಮುವಾರು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುತ್ತಿತ್ತು. ಅಂಥಹ ಕಾಲದಲ್ಲಿ ಉದ್ದಾನಶಿವಯೋಗಿಗಳು ತಮ್ಮ ಮಠದಲ್ಲಿ ಸಾರ್ವಜನಿಕ ಉಚಿತ ವಿದ್ಯಾರ್ಥಿ ನಿಲಯವನ್ನು ತೆರೆದು ಎಲ್ಲಾ ಕೋಮಿನವರಿಗೂ ಅವಕಾಶ ನೀಡಿದರು (ಸಿದ್ಧಗಂಗಾಶ್ರೀ, ೧೯೮೧, ಪು.೬೨-೬೫). ಅಲ್ಲದೆ ಆ ಕಾಲ ಸಂಸ್ಕೃತವನ್ನು ಎಲ್ಲರೂ ಓದಲು ಶಕ್ಯವಿಲ್ಲದ ಕಾಲ.ಆ ಕಾಲದಲ್ಲಿ ಸಂಸ್ಕೃತವನ್ನು ಎಲ್ಲರೂ ಓದಬಹುದೆಂದು ಪ್ರಥಮತಃ ಸಾರಿ ಅದರಂತೆ ಎಲ್ಲಾ ಕೋಮಿನವರಿಗೂ ಸಂಸ್ಕೃತವನ್ನೋದಲು ಅವಕಾಶ ಕಲ್ಪಿಸಿದರು.

ಹಲವಾರು ಬಾರಿ ದಾಸೋಹ ನಡೆಸಲು ದುಸ್ತರವಾಗಿದ್ದಾಗ ಜೋಳಿಗೆ ಹಿಡಿದರು. ದೇವರಾಯಪಟ್ಟಣ, ಮಾರನಾಯಕನಪಾಳ್ಯ, ಪುರುಷನಹಳ್ಳಿ, ಅಂಬಲಗೆರೆ, ಕೋರ, ಮೆಳೇಹಳ್ಳಿ, ಸಕಲೇಶಪುರ, ಬೆಂಗಳೂರು.......ಮೊದಲಾದ ಪ್ರದೇಶದ ಜನತೆ ತುಂಬು ಹೃದಯದಿಂದ ಸಹಕರಿಸಿದರು.

೧೯೦೧-೦೨ ರ ಅವಧಿಯಲ್ಲಿ ಮಠದಲ್ಲಿ ಅಭಿವೃದ್ಧಿ ಕಾರ್ಯಗಳು ಜರುಗಿದವು. ವ್ಯವಸಾಯವನ್ನು ರೂಢಿಸುತ್ತಾ ತಮ್ಮ ಜೀವಿತಾವಧಿಯಲ್ಲಿ ಸುಮಾರು ೧೬ ಎಕರೆ ಹೊಲಗದ್ದೆಗಳನ್ನು ರೂಢಿಸತೊಡಗಿದರು. ಹಳೆಯ ಸಂಸ್ಕೃತ ಪಾಠಶಾಲೆ ೧೯೧೭ ನೆಯ ಇಸವಿಯ ಹೊತ್ತಿಗೆ ಸರ್ಕಾರದ ಮನ್ನಣೆ ಪಡೆದು ಅಧಿಕೃತವಾಗಿ 'ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಪಾಠಶಾಲೆ' ಎಂದು ಕರೆಯಲಾಯಿತು. ಉಚಿತ ಆಸನವಸತಿ ನಿಲಯವನ್ನು ತೆರೆದು ಪ್ರಥಮತಃ ೪೦ ಜನ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವೊದಗಿಸಿದರು (ಸಿದ್ಧಗಂಗಾಶ್ರೀ, ೧೯೮೧, ಪು.೬೭). ಆನಂತರ ದಾಸೋಹದ ಜವಾಬ್ದಾರಿ ಶಿವಕುಮಾರಸ್ವಾಮಿ ಮಡಿಲಿಗೆ ಬಿತ್ತು (ಸಿದ್ದಾಗಂಗಾಶ್ರೀ, ೧೯೮೧, ಪು.೩೨) ಇವರು ಕಷ್ಟಕಾಲದಲ್ಲಿ ಈ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ೧೦-೧೨ ಮೈಲಿ ದೂರದ ಹಳ್ಳಿಗಳಿಗೆ ಭಿನ್ನಹಕ್ಕೆ ಒಪ್ಪಿಕೊಂಡು ತೆರಳಿದಾಗ, ಆ ಹಳ್ಳಿಯ ಜನರು ಮಠದ ದಾಸೋಹಕ್ಕೆಂದು ದವಸಧಾನ್ಯಗಳನ್ನು ನೀಡುತ್ತಿದ್ದರು. ಹಲವಾರು ವೇಳೆ ವಿದ್ಯಾರ್ಥಿಗಳಿಂದಲೇ ಸಾಲ ಪಡೆದು ದಾಸೋಹ ನೆರವೇರಿಸಲಾಗಿದೆ (ಸಿದ್ಧಗಂಗಾಶ್ರೀ, ೧೯೮೧,ಪು.೭೨). ಈ ವಸತಿ ನಿಲಯದಲ್ಲಿ ಪ್ರಾರಂಭದಲ್ಲಿ ಸಂಸ್ಕೃತ ಕಾಲೇಜಿನ ಮಕ್ಕಳಲ್ಲದೆ ಇತರೆ ಕಾಲೇಜಿನ ಮಕ್ಕಳೂ ಇದ್ದರು. ಮಠದಲ್ಲಿ ಕನ್ನಡ ಪಂಡಿತ್ ಪರೀಕ್ಷಾ ವಿಭಾಗವು ಈ ಸಂಸ್ಕೃತ ಕಾಲೇಜಿನ ಅಂಗವಾಗಿ ಉದಯಗೊಂಡಿತು. ಒಂದು ಪದವಿ-ಪೂರ್ವ ಕಾಲೇಜು, ಒಂದು ಪ್ರೌಢಶಾಲೆ, ಒಂದು ಸಂಗೀತ ಶಿಕ್ಷಣ ಶಾಲೆ, ಒಂದು ಕುರುಡರ ಶಾಲೆ, ಒಂದು ಉಪಾಧ್ಯಾಯ ತರಬೇತಿ ಕೇಂದ್ರ, ಒಂದು ಜ್ಯೋತಿಷ್ಯ ಪಾಠಶಾಲೆ, ಒಂದು ಕಾಮರ್ಸ್ ತರಗತಿಗಳ ಪಾಠಶಾಲೆ, ಒಂದು ಉನ್ನತ ಪ್ರೈಮರಿ ಶಾಲೆ, ಒಂದು ಪ್ರಾಥಮಿಕ ಶಾಲೆಯಿದ್ದು ಈ ಎಲ್ಲಾ ವಿದ್ಯಾರ್ಥಿಗಳು ಮಠದಲ್ಲಿಯೇ ವಸತಿ ಸೌಲಭ್ಯವನ್ನು ಪಡೆಯುತ್ತಿದ್ದರು (ಸಿದ್ಧಗಂಗಾಶ್ರೀ, ೧೯೮೧, ಪು.೧೯೨೧). ಜಾತಿರಹಿತ, ವರ್ಗರಹಿತ ಸಮಾಜ ಸ್ಥಾಪನೆಯಾಗಬೇಕೆಂಬ ಮಹದಾಸೆಯಿಂದ ಎಲ್ಲಾ ಜಾತಿಯವರಿಗೂ, ಎಲ್ಲಾ ವರ್ಗದವರಿಗೂ ವಸತಿನಿಲಯದಲ್ಲಿ ಸೌಕರ್ಯ ಮಾಡಿಕೊಡಲಾಗಿತ್ತು.

೨೦೦೭ ರ ಅವಧಿಯಲ್ಲಿ ಈ ಕೆಳಕಂಡ ಶಾಲೆಗಳನ್ನು ಸಿದ್ಧಗಂಗಾ ಮಠದಲ್ಲಿ ಸ್ಥಾಪಿಸಲಾಗಿದೆ. ಒಟ್ಟು ೧೯ ಶಾಲೆಗಳನ್ನು ಸ್ಥಾಪಿಸಲಾಗಿದೆ.

ಅ. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರಿ ಸಿದ್ಧಗಂಗಾ ಮಠ

ಆ. ಕನ್ನಡ ಪಂಡಿತ್ ವಿಭಾಗ, ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು,

ಇ. ಶ್ರೀ ಸಿದ್ಧಗಂಗಾ ಅಂಧಮಕ್ಕಳ ಶಾಲೆ.

ಈ. ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆ.

ಉ. ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಪ್ರೌಢಶಾಲೆ.

ಊ. ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರಾಥಮಿಕ ಶಾಲೆ

ಋ. ಶ್ರೀ ಬಸವೇಶ್ವರ ಉನ್ನತ ಪ್ರಾಥಮಿಕ ಶಾಲೆ.

ಎ. ಶ್ರೀ ಬಸವೇಶ್ವರ ನರ್ಸರಿ ಶಾಲೆ.

ಏ. ಶ್ರೀ ಸಿದ್ಧಗಂಗಾ ಸಮನ್ವಯ ಶಿಕ್ಷಣ ಕೇಂದ್ರ (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬, ಪು.೨೧-೩೪).


೧೯೧೭ ರಲ್ಲಿ ಸಂಸ್ಕೃತ ಮತ್ತು ವೇದ ಪಾಠಶಾಲೆಯಲ್ಲಿ ಹಾಗೂ ಉಚಿತ ವಸತಿ ನಿಲಯದಲ್ಲಿ ಒಟ್ಟು ೪೦ ಜನ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವನ್ನೊದಗಿಸಲಾಗಿತ್ತು (ಸಿದ್ಧಗಂಗಾಶ್ರೀ, ೧೯೮೧,ಪು.೬೭). ಕ್ರಮೇಣ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗುತ್ತಾ ಹೋಯಿತು. ಮುಖ್ಯವಾಗಿ ೨೦೦೦ ದಿಂದೀಚೆಗೆ ಇನ್ನೂ ಅಧಿಕವಾಗಿದೆ.

ಪಟ್ಟಿ ೧ : ಉಚಿತ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ

ಕ್ರಸಂ.	ವರ್ಷ	ವಿದ್ಯಾರ್ಥಿಗಳ ಸಂಖ್ಯೆ
೧.	೧೯೧೭-೧೮	೪೦
೨.	೧೯೫೧-೫೨	೧೫೧
೩.	೧೯೬೧-೬೨	೫೩೯
೪.	೧೯೭೧-೭೨	೯೭೬
೫.	೧೯೮೧-೮೨	೪೨೪೫
೬.	೧೯೯೧-೯೨	೪೨೦೪
೭.	೨೦೦೦-೨೦೦೧	೭೦೫೭
೮.	೨೦೦೧-೨೦೦೨	೬೩೮೦
೯.	೨೦೦೨-೨೦೦೩	೬೧೯೮
೧೦.	೨೦೦೩-೨೦೦೪	೬೯೩೪
೧೧.	೨೦೦೪-೨೦೦೫	೭೭೨೦
೧೨.	೨೦೦೫-೨೦೦೬	೭೮೮೧
೧೩.	೨೦೦೬-೨೦೦೭	೭೯೦೪
೧೪.	೨೦೦೭-೨೦೦೮	೮೦೦೨

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಕ್ಯಾಸ್ಟ್-ವೈಸ್. ಅಂಡ್ ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೧೯೫೧-೫೨ ಟು ೨೦೦೭-೦೮.

ವಿದ್ಯಾರ್ಥಿಗಳ ಸಂಖ್ಯೆ



೧೯೧೭-೧೮ ರಲ್ಲಿ ಒಟ್ಟು ೪೦ ವಿದ್ಯಾರ್ಥಿಗಳಿಂದ ಪ್ರಾರಂಭವಾದ ವಸತಿ ನಿಲಯ, ೨೦೦೭-೦೮ರ ಅವಧಿಯಲ್ಲಿ ೮೦೦೨ ರಷ್ಟು ವಿದ್ಯಾರ್ಥಿಗಳು ವಸತಿ ನಿಲಯದಲ್ಲಿದ್ದಾರೆ. ೭೭ ವರ್ಷಗಳ ಸುದೀರ್ಘವಾದ ಹಾದಿ ಸವೆಸಿರುವ ಶಿವಕುಮಾರಸ್ವಾಮೀಜಿ, ವಸತಿ ನಿಲಯಕ್ಕೆ ಪ್ರವೇಶ ಬಯಸಿ ಬಂದ ವಿದ್ಯಾರ್ಥಿಗಳನ್ನು ಸ್ವತಃ ತಾವೇ ಖುದ್ದಾಗಿ ಸಂದರ್ಶನ ನಡೆಸಿ, ಬಯಸಿದವರೆಲ್ಲರಿಗೂ ಸೌಲಭ್ಯವನ್ನು ಒದಗಿಸುತ್ತಿರುವುದರಿಂದ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದು ಕಂಡು ಬರುತ್ತದೆ. ಮಠದ ಹಳೆ ವಿದ್ಯಾರ್ಥಿಗಳನ್ನು ಮಾತನಾಡಿಸಿದರೆ, ಸ್ವಾಮೀಜಿಗಿದ್ದ ಶೈಕ್ಷಣಿಕ ಕಾಳಜಿಯನ್ನು ವಿವರಿಸುತ್ತಾರೆ. ಬೆಳಗಿನ ಸಮಯ ೬ ರಿಂದ ೮ ಗಂಟೆಯವರಿಗೆ ಆಂಗ್ಲಭಾಷೆಯನ್ನು, ಸಾಂಪ್ರದಾಯಿಕ ಭಾಷೆ ಸಂಸ್ಕೃತವನ್ನು ಮತ್ತು ಮಾತೃಭಾಷೆ ಕನ್ನಡವನ್ನು ಬೋಧಿಸುತ್ತಿದ್ದರೆಂದು ಹೇಳುತ್ತಾರೆ. ಈಗಲೂ ಈ ಕಾಯಕ ಮುಂದುವರಿಯುತ್ತಿದೆ.

ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯದಲ್ಲಿ ಕರ್ನಾಟಕದ ವಿದ್ಯಾರ್ಥಿಗಳಲ್ಲದೆ ಅನ್ಯ ರಾಷ್ಟ್ರದ ವಿದ್ಯಾರ್ಥಿಗಳೂ ಇದ್ದಾರೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಂದ ವಿದ್ಯಾರ್ಥಿಗಳು ಬಂದು ಆಶ್ರಯವನ್ನು ಪಡೆದಿದ್ದಾರೆ. ಕರ್ನಾಟಕ ರಾಜ್ಯದ ಎಲ್ಲಾ ಮೂಲೆಗಳಿಂದಲೂ ಬಂದು, ಬಡ ವಿದ್ಯಾರ್ಥಿಗಳು ನೆಲೆಸಿದ್ದಾರೆ. ಬೆಂಗಳೂರು, ಬೀದರ್, ಬಿಜಾಪುರ,



ಬಳ್ಳಾರಿ, ಬೆಳಗಾಂ, ಬಾಗಲಕೋಟೆ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ್, ಗುಲ್ಬರ್ಗಾ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ ಮತ್ತು ಉಡುಪಿ ವಿದ್ಯಾರ್ಥಿಗಳು ವಸತಿನಿಲಯದಲ್ಲಿ ಆಶ್ರಯವನ್ನು ಪಡೆದಿದ್ದಾರೆ. ಒಂದನೆ ತರಗತಿಯಿಂದ ಉನ್ನತ ಶಿಕ್ಷಣದವರೆಗೂ ವಿದ್ಯಾರ್ಥಿಗಳು ಈ ಅವಕಾಶವನ್ನು ಪಡೆದಿದ್ದಾರೆ. ಕನ್ನಡ ಪಂಡಿತ್, ಸಂಸ್ಕೃತ, ಐ.ಟಿ.ಐ. ಜೆ.ಓ.ಸಿ., ಡಿ.ಫಾರ್ಮ, ನರ್ಸಿಂಗ್, ಡಿ.ಎಡ್., ಬಿ.ಎಡ್. ಬಿ.ಎ., ಬಿ.ಎಸ್.ಸಿ., ಬಿಕಾಂ., ಎಲ್.ಎಲ್.ಬಿ., ಎಂ.ಬಿ.ಎ., ಎಂ.ಸಿ.ಎ., ಎಮ್.ಟೆಕ್., ಎಂ.ಎ., ಬಿ.ಇ., ಮೊದಲಾದ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳೆಲ್ಲರೂ ಪ್ರವೇಶಾವಕಾಶ ಪಡೆದಿದ್ದಾರೆ. ೨೦೦೧-೦೨ ರ ಅವಧಿಯಲ್ಲಿ ಒಟ್ಟು ೨೮ ಪ್ರದೇಶಗಳಿಂದ ವಿದ್ಯಾರ್ಥಿಗಳು ವಸತಿನಿಲಯದಲ್ಲಿ ಆಶ್ರಯ ಪಡೆದಿದ್ದರು. ಈ ಅವಧಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೬೩೮೦. ೨೦೦೬-೦೭ ರ ಅವಧಿಯಲ್ಲಿ ಒಟ್ಟು ೨೯ ಪ್ರಾಂತ್ಯಗಳಿಂದ ೭೯೦೪ ರಷ್ಟು ವಿದ್ಯಾರ್ಥಿಗಳಿದ್ದರು. ೨೦೦೧-೦೨ ರಿಂದ ೨೦೦೬-೦೭ ರವರೆಗೆ ವಿವಿಧ ಪ್ರಾಂತ್ಯಗಳಿಂದ ಮಠಕ್ಕೆ ಬಂದು ಉಚಿತ ವಸತಿ ನಿಲಯದ ಅನುಕೂಲತೆಯನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿವೆ.

ಪಟ್ಟಿ ೨ : ವಿವಿಧ ಪ್ರದೇಶಗಳಿಂದ ಆಗಮಿಸಿದ ವಿದ್ಯಾರ್ಥಿಗಳ ಸಂಖ್ಯೆ : ೨೦೦೧-೦೨ ರಿಂದ ೨೦೦೬-೦೭ ರ ವರೆಗೆ.

ಕ್ರ. ಸಂ.	ಜಿಲ್ಲೆಯ ಹೆಸರು	೨೦೦೧-೦೨	೨೦೦೨-೦೩	೨೦೦೩-೦೪	೨೦೦೪-೦೫	೨೦೦೫-೦೬	೨೦೦೬-೦೭	ಒಟ್ಟು	ಶೇಕಡಾವರು
೧.	ಬೆಂಗಳೂರು ನಗರ	೨೯೬	೩೩೯	೪೧೮	೪೧೧	೪೩೮	೩೯೬	೨೨೯೮	೫.೩೪
೨.	ಬೆಂಗಳೂರು ಗ್ರಾಮೀಣ	೪೫೮	೪೬೧	೫೩೭	೫೨೯	೫೦೨	೪೧೪	೨೯೦೧	೬.೭೪
೩.	ಬೀದರ್	೧೬೭	೧೫೦	೧೭೬	೨೦೨	೨೨೨	೨೯೦	೧೨೦೭	೨.೮೦
೪.	ಬಿಜಾಪುರ	೧೦೫	೧೩೪	೨೦೨	೩೩೯	೩೯೩	೪೬೯	೧೬೪೨	೩.೮೧
೫.	ಬಳ್ಳಾರಿ	೧೪೩೫	೧೧೨೦	೯೫೪	೮೧೬	೬೮೪	೬೭೬	೫೬೬೭	೧೩.೭೧
೬.	ಬೆಳಗಾಂ	೨೭	೭೨	೯೨	೧೬೫	೨೦೯	೨೬೩	೮೨೮	೧.೯೨
೭.	ಬಾಗಲಕೋಟೆ	೧೦೪	೧೨೬	೧೭೮	೨೯೨	೩೩೨	೩೫೬	೧೩೮೮	೩.೨೨
೮.	ಚಾಮರಾಜನಗರ	೧೩೦	೭೨	೬೨	೫೨	೬೨	೩೩	೩೮೪	೦.೮೯
೯.	ಚಿಕ್ಕಮಗಳೂರು	೧೬೪	೧೪೭	೧೫೩	೨೦೦	೧೯೮	೧೫೦	೧೦೧೨	೨.೩೫
೧೦.	ಚಿತ್ರದುರ್ಗ	೨೧೫	೨೦೩	೧೮೧	೨೦೯	೨೨೬	೨೫೯	೧೨೯೩	೩.೦೦
೧೧.	ದಾವಣಗೆರೆ	೨೦೧	೨೧೩	೨೮೫	೩೨೯	೩೩೩	೩೬೩	೧೭೩೪	೪.೦೩
೧೨.	ಧಾರವಾಡ	೧೫೩	೧೬೧	೨೨೨	೩೧೩	೪೧೩	೪೯೨	೧೭೫೪	೪.೦೭
೧೩.	ಗದಗ್	೯೬	೧೧೫	೧೮೦	೨೬೦	೨೪೪	೨೭೧	೧೧೬೬	೨.೭೧
೧೪.	ಗುಲ್ಬರ್ಗ	೩೯೦	೪೪೪	೫೬೫	೭೦೭	೭೧೧	೭೯೫	೩೬೧೨	೮.೩೯
೧೫.	ಹಾಸನ	೩೧೮	೨೬೭	೨೫೦	೨೧೬	೨೩೪	೧೯೪	೧೪೭೯	೩.೪೩
೧೬.	ಹಾವೇರಿ	೧೮೮	೧೭೯	೨೨೯	೩೩೧	೩೧೨	೨೬೦	೧೪೯೯	೩.೪೮
೧೭.	ಕೊಡಗು	೨೪	೨೫	೧೩	೧೬	೧೮	೨೫	೧೨೧	೦.೨೮
೧೮.	ಕೋಲಾರ	೨೪೭	೨೫೯	೨೯೫	೩೬೯	೩೧೫	೩೦೧	೧೭೮೬	೪.೧೫
೧೯.	ಕೊಪ್ಪಳ	೨೮೬	೩೧೭	೪೦೧	೪೨೫	೩೧೮	೨೯೦	೨೦೩೭	೪.೭೩
೨೦.	ಮಂಡ್ಯ	೧೦೭	೧೦೭	೧೨೦	೧೦೭	೧೦೫	೬೭	೬೧೩	೧.೪೨
೨೧.	ಮಂಗಳೂರು	೧	–	–	–	–	–	೦೧	೦.೦೦೨
೨೨.	ಮೈಸೂರು	೧೧೧	೧೦೪	೧೦೭	೯೧	೯೨	೭೨	೫೭೭	೧.೩೪
೨೩.	ರಾಯಚೂರು	೫೭೫	೫೬೬	೬೩೧	೬೦೮	೬೨೮	೬೩೮	೩೬೪೬	೮.೪೭
೨೪.	ಶಿವಮೊಗ್ಗ	೬೮	೬೦	೮೧	೮೪	೯೬	೧೦೩	೪೯೨	೧.೧೪
೨೫.	ತುಮಕೂರು	೪೪೦	೫೦೦	೫೩೦	೫೬೨	೭೧೧	೬೧೨	೩೩೫೫	೭.೭೯
೨೬.	ಉತ್ತರ ಕನ್ನಡ	೦೮	೦೪	೦೬	೬	೪	೩	೩೧	೦.೦೭
೨೭.	ಉಡುಪಿ	–	೦೧	–	೧	೧	೧	೦೪	೦.೦೦೯
೨೮.	ಮಹಾರಾಷ್ಟ್ರ	–	೦೧	–	–	೧	೨	೦೪	೦.೦೦೯
೨೯.	ಆಂಧ್ರ ಪ್ರದೇಶ	೮೪	೬೨	೫೨	೫೭	೫೦	೭೦	೩೭೫	೦.೮೭
೩೦.	ತಮಿಳುನಾಡು	೦೯	೦೭	೧೪	೧೩	೨೯	೩೯	೧೧೧	೦.೨೫
	ಒಟ್ಟು	೬೩೮೦ ೧೪.೮೩%	೬೧೯೮ ೧೪.೪೦%	೬೯೩೪ ೧೬.೧೧%	೭೭೨೦ ೧೭.೯೪%	೭೮೮೧ ೧೮.೩೨%	೭೯೦೪ ೧೮.೩೭%	೪೩೦೧೭ ೧೦೦%	೧೦೦.೦೦

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡ್‌ರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಮತ್ತು ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೨೦೦೧-೦೨ ರಿಂದ ೨೦೦೬-೦೭ ರ ವರೆಗೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.



೨೦೦೧-೦೨ ರಿಂದ ೨೦೦೬-೦೭ ರ ವರೆಗೆ ಒಟ್ಟು ೪೩೦೧೭ ರಷ್ಟು ವಿದ್ಯಾರ್ಥಿಗಳು ವಿವಿಧ ಪ್ರದೇಶಗಳಿಂದ ಆಗಮಿಸಿ, ಆಶ್ರಯ ಪಡೆದಿದ್ದಾರೆ. ಒಟ್ಟು ಮೂವತ್ತು ಪ್ರಾಂತ್ಯಗಳಿಂದ ವಿದ್ಯಾರ್ಥಿಗಳು ವಸತಿನಿಲಯದಲ್ಲಿ ಆಶ್ರಯ ಪಡೆದಿದ್ದಾರೆ. ಒಟ್ಟು ೫೬೬೭ ಅಥವಾ ಶೇ.೧೩.೧೭ ರಷ್ಟು, ಬಳ್ಳಾರಿ ಜಿಲ್ಲೆಯಿಂದ ಅತಿ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಆನಂತರ ರಾಯಚೂರಿನಿಂದ ಎರಡನೇ ಅತಿಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದಿದ್ದಾರೆ. ಅಂದರೆ ಒಟ್ಟು ೩೬೪೬ ಅಥವಾ ಶೇಕಡಾವಾರು ೮.೪೭ ರಷ್ಟು, ಮೂರನೇ ಸ್ಥಾನ ತುಮಕೂರು ಜಿಲ್ಲೆಯದ್ದಾಗಿದೆ. ಒಟ್ಟು ೩೩೫೫ ವಿದ್ಯಾರ್ಥಿಗಳು, ಶೇ.೭.೭೯ ರಷ್ಟಿದೆ. ಅತೀ ಕಡಿಮೆ ವಿದ್ಯಾರ್ಥಿಗಳು ಮಂಗಳೂರಿನವರಾಗಿದ್ದಾರೆ. ೨೦೦೧-೦೨ ರಿಂದ ೨೦೦೬-೦೭ ರವರೆಗೆ ಕೇವಲ ಒಬ್ಬನೇ ವಿದ್ಯಾರ್ಥಿ ವಸತಿನಿಲಯದ ಅನುಕೂಲವನ್ನೂ ಪಡೆದಿದ್ದು, ಶೇ.೦.೦೦೨ ರಷ್ಟಿದೆ.

ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದಲು ವಿದ್ಯಾರ್ಥಿಗಳು ವಸತಿ ನಿಲಯದ ಸೌಲಭ್ಯವನ್ನು ಪಡೆದಿದ್ದಾರಾದರು, ಮಹಾರಾಷ್ಟ್ರದಿಂದ ಅತೀ ಕಡಿಮೆ ವಿದ್ಯಾರ್ಥಿಗಳಿದ್ದಾರೆ. ಕ್ರಮವಾಗಿ ೦೪, ೩೭೫ ಮತ್ತು ೧೧೧ ವಿದ್ಯಾರ್ಥಿಗಳಿದ್ದಾರೆ. ಶೇಕಡಾವಾರು ೦.೦೦೯, ೦.೮೭ ಮತ್ತು ೦.೨೫ ರಷ್ಟಿದೆ.



೨೦೦೧-೨೦೦೨ ರ ಅವಧಿಯಲ್ಲಿ ೬೩೮೦ ವಿದ್ಯಾರ್ಥಿಗಳು ವಿವಿಧ ಪ್ರದೇಶಗಳಿಂದ ಬಂದು ವಸತಿ ನಿಲಯದ ಸೌಕರ್ಯವನ್ನು ಪಡೆದಿದ್ದಾರೆ. ಅಂದರೆ ಶೇ.೧೪.೮೩ ರಷ್ಟು. ೨೦೦೨-೦೩ ರಲ್ಲಿ ೬೧೯೮ ಕ್ಕೆ ಅಂದರೆ ಶೇ.೧೪.೪೦ ರಷ್ಟು ಕಡಿಮೆಯಾದರೂ, ೨೦೦೩-೦೪ ರಲ್ಲಿ ೬೯೩೪ ಕ್ಕೆ ಅಧಿಕವಾಗಿದೆ. ಅಂದರೆ ಶೇ.೧೬.೧೧ ಕ್ಕೆ ತಲುಪಿದೆ. ೨೦೦೪-೦೫ ರಲ್ಲಿ ೭೭೨೦ ವಿದ್ಯಾರ್ಥಿಗಳಿದ್ದು, ಶೇ.೧೭.೯೪ ರಷ್ಟು, ೨೦೦೫-೦೬ ರ ಅವಧಿಯಲ್ಲಿ ವಿದ್ಯಾರ್ಥಿಗಳ ಪೂರೈಕೆ ಅಧಿಕವಾಗಿದ್ದು, ೭೮೮೧ ರಷ್ಟಿದ್ದು, ಶೇ.೧೮.೩೨ ರಷ್ಟಿದೆ. ೨೦೦೬-೦೭ ರಲ್ಲಿ ೭೯೦೪ ರಷ್ಟಿದ್ದು, ಶೇ.೧೮.೩೭ ರಷ್ಟಿದೆ. ಹೀಗೆ ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಸಿದ್ಧಗಂಗಾ ಮಠದ ವಸತಿ ನಿಲಯದಲ್ಲಿ ವರ್ಷದಿಂದ ವರ್ಷಕ್ಕೆ ಅಧಿಕವಾಗಿದೆ.

೬.೨ ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯದ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳು

ಉದ್ದಾನ ಶಿವಯೋಗಿಗಳಿಂದ ೧೯೧೭ ರಲ್ಲಿ ಸ್ಥಾಪನೆಗೊಂಡು ಪ್ರಥಮತಃ ೪೦ ಜನ ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಒದಗಿಸಲಾಯಿತು. ಜಾತಿರಹಿತ, ವರ್ಗರಹಿತ ಸಮಾಜ ಸ್ಥಾಪನೆಯೇ ಮಠದ ಪ್ರಮುಖ ಉದ್ದೇಶವಾಗಿತ್ತು. ಸಿದ್ಧಗಂಗಾ ಮಠದ ಒಟ್ಟು ವಿಸ್ತೀರ್ಣ ೧೦೮ ಎಕರೆ (ಮಠದ ಬಗ್ಗೆ ಮಾಹಿತಿಯಿರುವ ಸಿ.ಡಿ. ಕ್ಯಾಸೆಟ್, ೨೦೦೭) ತನ್ನೀ ಸವಿಸ್ತಾರವಾದ ಪ್ರದೇಶದಲ್ಲಿ, ಒಟ್ಟು ೦೯ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದೆ. (ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ೨೦೦೫-೦೬. ಪು.೨೧-೩೪).


೧೯೧೭ ರಲ್ಲಿ ೪೦ ವಿದ್ಯಾರ್ಥಿಗಳೊಂದಿಗೆ ಸ್ಥಾಪಿಸಲ್ಪಟ್ಟು, ೨೦೦೭-೦೮ ರ ಅವಧಿಯಲ್ಲಿ ೮೦೦೨ ವಿದ್ಯಾರ್ಥಿಗಳಿಗೆ ಅಧಿಕವಾಗಿದೆ. ೨೦೦೧-೦೨ ರ ಅವಧಿಯಲ್ಲಿ ಶೇ.೧೪.೮೩ ರಷ್ಟಿದ್ದು, ೨೦೦೬-೦೭ ರ ಅವಧಿಯಲ್ಲಿ ಶೇ.೧೮.೩೭ ರಷ್ಟಿದೆ. ೧೯೪೧ ರಲ್ಲಿ ಶಿವಕುಮಾರಸ್ವಾಮೀಜಿ ಅಧಿಕಾರವನ್ನು ಪಡೆದ ನಂತರ ಮಕ್ಕಳ ಸಂಖ್ಯೆ ಅಧಿಕವಾಗುತ್ತಿದೆ. ವಿವಿಧ ಕೋಮುಗಳಿಂದ ವಿದ್ಯಾರ್ಥಿಗಳು ಪ್ರವೇಶಾವಕಾಶವನ್ನು ಬಯಸಿ ಅಧಿಕ ಸಂಖ್ಯೆಯಲ್ಲಿ ಪ್ರವೇಶಾತಿಯನ್ನು ಪಡೆಯುತ್ತಿದ್ದಾರೆ. ನೂರಕ್ಕೂ ಅಧಿಕ ಸಂಖ್ಯೆಯ ಕೋಮಿನವರು ಮಠದಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಪಟ್ಟಿ ೩ : ಕೋಮುವಾರು ವಿದ್ಯಾರ್ಥಿಗಳ ಸಂಖ್ಯೆ


ವರ್ಷ	ಕೋಮುಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
೨೦೦೧-೦೨	೧೦೪	೬೩೮೦
೨೦೦೨-೦೩	೧೦೮	೬೧೯೮
೨೦೦೩-೦೪	೧೨೧	೬೯೩೪
೨೦೦೪-೦೫	೧೧೭	೭೭೨೦
೨೦೦೫-೦೬	೧೦೭	೭೮೮೧
೨೦೦೬-೦೭	೧೧೦	೭೯೦೪
೨೦೦೭-೦೮	೧೩೦	೮೦೦೨

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಮತ್ತು ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೨೦೦೧-೦೨ ರಿಂದ ೨೦೦೬-೦೭ ರ ವರೆಗೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.

ಕೋಮುಗಳ ಸಂಖ್ಯೆ



ವಿದ್ಯಾರ್ಥಿಗಳ ಸಂಖ್ಯೆ



೨೦೦೧-೦೨ ರ ಅವಧಿಯಲ್ಲಿ ಒಟ್ಟು ೧೦೪ ಜಾತಿಯವರು ಪ್ರವೇಶಾವಕಾಶವನ್ನು ಪಡೆದಿದ್ದಾರೆ. ೨೦೦೨-೦೩ ರ ಅವಧಿಯಲ್ಲಿ ೧೦೮ ಕೋಮಿನವರು ಪ್ರವೇಶವನ್ನು ಪಡೆದಿದ್ದಾರೆ. ೨೦೦೩-೦೪ ರಲ್ಲಿ ಒಟ್ಟು ೧೨೧ ಕೋಮಿನವರು ಪ್ರವೇಶವನ್ನು ಪಡೆದಿದ್ದರೆ, ೨೦೦೭-೦೮ ರಲ್ಲಿ ಒಟ್ಟು ೧೩೦ ಕೋಮಿನವರು ಪ್ರವೇಶವನ್ನು ಪಡೆದಿದ್ದಾರೆ. ೨೦೦೧-೦೨ ರಲ್ಲಿ ೧೦೪ ಕೋಮುಗಳಿಂದ ೬೩೮೦ ವಿದ್ಯಾರ್ಥಿಗಳು, ೨೦೦೨-೦೩ ರಲ್ಲಿ ೧೦೮ ಕೋಮುಗಳಿಂದ ೬೧೯೮ ವಿದ್ಯಾರ್ಥಿಗಳು, ೨೦೦೩-೦೪ ರಲ್ಲಿ ೧೨೧ ಕೋಮುಗಳಿಂದ ೬೯೩೪ ವಿದ್ಯಾರ್ಥಿಗಳು, ೨೦೦೪-೦೫ ರಲ್ಲಿ ೧೧೭ ಕೋಮುಗಳಿಂದ ೭೭೨೦ ವಿದ್ಯಾರ್ಥಿಗಳು, ೨೦೦೫-೦೬ ರಲ್ಲಿ ೧೦೭ ಕೋಮುಗಳಿಂದ ೭೮೮೧ ವಿದ್ಯಾರ್ಥಿಗಳು, ೨೦೦೬-೦೭ ರಲ್ಲಿ ೧೧೦ ಕೋಮುಗಳಿಂದ ೭೯೦೪ ವಿದ್ಯಾರ್ಥಿಗಳು ಮತ್ತು ೨೦೦೭-೦೮ ರಲ್ಲಿ ಒಟ್ಟು ೧೩೦ ಕೋಮುಗಳಿಂದ ೮೦೦೨ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದಾರೆ.

ಬೆಸ್ತಾ, ಅಂಬಿಗ, ಗಂಗಾಮತಸ್ತ, ಬಾರ್ಕಿ, ಹೆಳವ, ಕಬ್ಬೇರ, ಕಬ್ಬಾಲಿಗ, ಕೋಲಿ, ಬುಡಬುಡಕಿ, ಕಲಾಲಕಾತಿಕ, ಮೇಲುಸಕ್ಕರೆ, ಕ್ಷತ್ರಿಯ, ಉಪ್ಪಾರ, ಗೊಂಡಾಲಿ, ಗೊಲ್ಲ, ಯಾದವ, ಗೌಲಿ, ತೆಲುಗುಗೌಡ, ತಲವಾರ, ಅಗಸ, ಡೋಬಿ, ಮಡಿವಾಲ, ಈಡಿಗ, ಪೂಜಾರಿ, ಈಲಿಗ, ಕುಂಬಾರ, ಕುರುಬ, ಹಾಲುಮತ, ನಾಯಿಂಡ, ಬಜಂತ್ರಿ, ಹಡಪದ, ನಾವಿ, ತಿಗಳ, ವಾಹಿನಿಕುಲ, ವಿಶ್ವಕರ್ಮ, ಆವಾರಿ, ಅಕ್ಕಸಾಲಿಗ, ಕಮ್ಮಾರ, ಪಾಂಚಾಲ, ಹಂಡೀವಜೀರ, ಮಾಲಿ, ಹೂಗಾರ, ಮಾಲಾಗಾರ, ಜೀರ, ಭವಸಾರ, ಕ್ಷತ್ರಿಯ, ಸಿಂಪಿ, ದೇವಾಂಗ, ಹಠಗಾರ, ನೇಗಿ, ಕುರುಹಿನಶೆಟ್ಟಿ, ತೊಗಟ, ಪದ್ಮಾಶಾಲಿ, ಜಾದರು, ಸ್ವಕುಲಸಾಲಿ, ಗಾಣಿಗ,




ರಾಜಪುತರು, ಸಾದರು, ಮುಸ್ಲಿಂರು, ಒಕ್ಕಲಿಗ, ಸರ್ಪ ಒಕ್ಕಲಿಗ, ಹಳ್ಳಿಕಾರ, ನಾಮಧಾರಿ, ಕುಂಚಿಟಿಗ, ಗೌಡ, ಕಾಪು. ಕಮ್ಮಾರ, ಗೌಂಡರ್, ಬಲಿಜ, ಬಣಜಿಗ, ನಾಯ್ಡು, ರೆಡ್ಡಿ, ಲಿಂಗಾಯತ, ಮರಾಠ, ಕ್ರಿಶ್ಚಿಯನ್, ಬಂಟರು, ಜೈನರು, ವೈಷ್ಣವ, ಬ್ರಾಹ್ಮಣ, ಮೊದಲಿಯಾರ್, ವೈಶ್ಯ, ಆದಿದ್ರಾವಿಡ, ಆದಿ-ಕರ್ನಾಟಕ, ಲಂಬಾಣಿ, ಬೇಡ-ಜಂಗಮ, ಸಮಾಗಾರ, ಮಾದಾರ, ಮೋಚಿ, ಭೋವಿ, ಚೆಲವಾದಿ, ಚನ್ನದಾಸರು, ದೋರ, ದೊಂಬರು, ಹಂದಿಜೋಗಿ, ಹೊಲೆಯ. ಕೊರಚ, ಕೊರಮ, ಮಾದಿಗ. ಮುಲಸನ್ಯಾಸಿ, ಸಿಲ್ಲೇಕ್ಯಾತ, ಸುಡುಗಾಡುಸಿದ್ಧ, ಬೌಧರಿ, ಗೊಂಡ, ಜೇನುಕುರುಬ, ಕಾಡುಕುರುಬ, ತೊಕಾರಿ ಕೋಲಿ, ಮೋಧಾ, ನಾಯಕ, ಬೇಡರ ಯಾರವ...........ಹೀಗೆ ಮೊದಲಾದ ನೂರಕ್ಕು ಅಧಿಕ ಜಾತಿಯವರು ಸಿದ್ಧಗಂಗಾ ಮಠದಲ್ಲಿ ಪ್ರವೇಶವನ್ನು ಪಡೆದಿದ್ದಾರೆ. ಹೀಗೆ ಯಾವುದೇ ಸಾಮಾಜಿಕ ಸಂಸ್ಥೆ, ಖಾಸಗಿ ಸಂಸ್ಥೆಗಳಾಗಲೀ, ಸರ್ಕಾರವಾಗಲೀ ಮಾಡದಿರುವ ಕಾರ್ಯವನ್ನು ಸಿದ್ಧಗಂಗಾ ಮಠ ಮಾಡುತ್ತಿದೆ. ಶ್ರೀ ಸಿದ್ಧಗಂಗಾ ಮಠದ ಅನಾಥಾಲಯ ಮತ್ತು ಉಚಿತ ವಸತಿ ನಿಲಯದಲ್ಲಿರುವ ಜಾತಿಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ.

ಪಟ್ಟಿ ೪ : ಶ್ರೀ ಸಿದ್ಧಗಂಗಾ ಮಠದ ಅನಾಥಾಲಯ ಮತ್ತು ಉಚಿತ ವಸತಿ ನಿಲಯದಲ್ಲಿರುವ ವಿವಿಧ ಜಾತಿಯ ವಿದ್ಯಾರ್ಥಿಗಳ ಸಂಖ್ಯೆ : ೨೦೦೧ ರಿಂದ ೨೦೦೮ ರ ವರೆಗೆ.

ಕ್ರ ಸಂ.	ಜಾತಿ ವರ್ಗಗಳು	೨೦೦೧-೦೨	೨೦೦೨-೦೩	೨೦೦೩-೦೪	೨೦೦೪-೦೫	೨೦೦೫-೦೬	೨೦೦೬-೦೭	೨೦೦೭-೦೮	ಒಟ್ಟು
೧.	I	೬೦೮ ೯.೫೨%	೫೮೨ ೯.೩೯%	೭೧೫ ೧೦.೩೧%	೬೦೭ ೭.೮೬%	೬೧೩ ೭.೭೭%	೫೯೮ ೭.೫೬%	೮೮೧ ೧೧.೦೦%	೪೬೦೪ ೯.೦೨%
೨.	IIA	೧೩೨೨ ೨೦.೭೨%	೧೩೫೭ ೨೧.೮೯%	೧೫೭೨ ೨೨.೬೭%	೧೮೯೩ ೨೪.೫೨%	೨೦೬೨ ೨೬.೧೬%	೨೦೭೯ ೨೬.೩೦%	೧೭೭೩ ೨೨.೧೫%	೧೨೦೫೮ ೨೩.೬೩%
೩.	IIB	೬೭ ೧.೦೫%	೫೫ ೦.೮೮%	೬೨ ೦.೮೯%	೬೮ ೦.೮೮%	೬೯ ೦.೮೭%	೭೭ ೦.೯೭%	೭೬ ೦.೯೪%	೪೭೪ ೦.೯೨%
೪.	IIIA	೮೪೫ ೧೩.೨೪%	೮೫೬ ೧೩.೮೧%	೯೬೦ ೧೩.೮೪%	೯೭೬ ೧೨.೬೪%	೯೬೯ ೧೨.೨೯%	೯೫೪ ೧೨.೦೬%	೧೧೪೫ ೧೪.೩೦%	೬೭೦೫ ೧೩.೧೪%
೫.	IIIB	೨೯೧೩ ೪೫.೬೫%	೨೬೮೧ ೪೩.೨೫%	೨೮೪೪ ೪೧.೦೧%	೩೨೧೫ ೪೧.೬೪%	೩೦೮೫ ೩೯.೧೪%	೩೧೧೧ ೩೯.೩೫	೩೧೪೪ ೩೯.೨೯%	೨೦೯೯೩ ೪೧.೧೪%
೬.	ಜಿ.ಎಂ	೬೨ ೦.೯೭%	೫೪ ೦.೮೭%	೬೭ ೦.೯೬%	೬೪ ೦.೮೨%	೬೮ ೦.೮೬%	೫೯ ೦.೭೪	೮೭ ೧.೦೮%	೪೬೧ ೦.೯೦%
೭.	ಪರಿಶಿಷ್ಟ ಜಾತಿ	೩೦೬ ೪.೭೯%	೩೫೮ ೫.೭೭%	೪೨೯ ೬.೧೮%	೪೯೯ ೬.೪೬%	೫೬೫ ೭.೧೬%	೫೭೦ ೭.೨೧	೪೮೦ ೫.೬೦%	೩೨೦೭ ೬.೨೮%
೮.	ಪರಿಶಿಷ್ಟ ವರ್ಗ	೨೫೭ ೪.೦೨%	೨೫೫ ೪.೧೧%	೨೮೫ ೪.೧೧%	೩೯೮ ೫.೧೫%	೪೫೦ ೫.೭೦%	೪೫೬ ೫.೭೬	೪೧೬ ೫.೧೯%	೨೫೧೭ ೪.೯೩%
	ಒಟ್ಟು	೬೩೮೦ ೧೦೦%	೬೧೯೮ ೧೦೦%	೬೯೩೪ ೧೦೦%	೭೭೨೦ ೧೦೦%	೭೮೮೧ ೧೦೦%	೭೯೦೪ ೧೦೦%	೮೦೦೨ ೧೦೦%	೫೧೦೧೯ ೧೦೦%

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಮತ್ತು ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೨೦೦೧-೦೨ ರಿಂದ ೨೦೦೬-೦೭ ರ ವರೆಗೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.



ಸಿದ್ಧಗಂಗಾ ಮಠದ ಅನಾಥಾಲಯ ಮತ್ತು ಉಚಿತ ವಸತಿ ನಿಲಯದಲ್ಲಿರುವ ವಿವಿಧ ಕೋಮಿನ ವಿದ್ಯಾರ್ಥಿಗಳಲ್ಲಿ IIIಬಿ ಗುಂಪಿನವರು ಗರಿಷ್ಟ ಪ್ರಮಾಣದ ಅನುಕೂಲತೆಯನ್ನು ಪಡೆದಿದ್ದಾರೆ. IIIಬಿ. ಗುಂಪಿನಲ್ಲಿ ಪ್ರಮುಖವಾಗಿ ಲಿಂಗಾಯತ ಜಾತಿಯವರಿದ್ದಾರೆ. ಈ ಗುಂಪಿನಲ್ಲಿ ಇತರ ಜಾತಿಯವರೆಂದರೆ ಮರಾಠರು, ಕ್ರಿಶ್ಚಿಯನ್ನರು, ಬಂಟರು, ಜೈನರು, ವೈಷ್ಣವರಿದ್ದಾರೆ. ಆದರೆ ಇವೆರಲ್ಲರ ಪ್ರಮಾಣ ಶೇ.೧ ರಷ್ಟಿದೆ. ಶೇ.೯೯ ರಷ್ಟು ಲಿಂಗಾಯತರು ಮಠದ ಅನ್ನ, ಆಶ್ರಯ ಮತ್ತು ವಿದ್ಯೆಯ ಅನುಕೂಲವನ್ನು ಪಡೆದಿದ್ದಾರೆ. ೨೦೦೧-೦೨ ರಲ್ಲಿ ಶೇ.೪೬.೬೫ ರಷ್ಟಿದ್ದು, ೨೦೦೬-೦೭ರಲ್ಲಿ ಶೇ.೫೯.೩೫ ರಷ್ಟಿದ್ದು, ೨೦೦೭-೦೮ ರಲ್ಲಿ ಶೇ.೫೯.೨೯ ರಷ್ಟಿದೆ. ಮಠದ ಆಶ್ರಯವನ್ನು ಪಡೆದವರಲ್ಲಿ **II**ಎ ವರ್ಗದವರು ಪ್ರಮುಖರು. **II**ಎ ನಲ್ಲಿ ಅಗಸ, ಡೋಭಿ, ಮಡಿವಾಳ, ಪೂಜಾರಿ, ಕುಂಬಾರ, ಕುರುಬ, ವಿಶ್ವಕರ್ಮ, ಹೂಗಾರ, ಗಾಣಿಗ....... ಮೊದಲಾದ ಜಾತಿಯವರಿದ್ದಾರೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಕುರುಬರು ಈ ಅನುಕೂಲತೆಯನ್ನು ಪಡೆದಿದ್ದಾರೆ. ೨೦೦೧-೦೨ ರಲ್ಲಿ ಶೇ.೨೦.೭೨ ರಷ್ಟಿದ್ದು, ೨೦೦೬-೦೭ ರಲ್ಲಿ ಶೇ.೨೬.೩೦ ರಷ್ಟಿದ್ದು, ೨೦೦೭-೦೮ ರಲ್ಲಿ ಶೇ.೨೨.೧೫ ರಷ್ಟಿದ್ದಾರೆ. ಆದ್ದರಿಂದ ಈ ವರ್ಗದಲ್ಲಿ ಮಠದ

ಅನುಕೂಲತೆಯನ್ನು ಪಡೆದವರಲ್ಲಿ ಕುರುಬರೇ ಅಗ್ರಗಣ್ಯರು. ವರ್ಗI ರಲ್ಲಿಯೂ ವಿದ್ಯಾರ್ಥಿಗಳು ವಸತಿನಿಲಯದ ಅನುಕೂಲತೆಯನ್ನು ಪಡೆದಿದ್ದಾರೆ. ವರ್ಗI ರಲ್ಲಿ. ಗೊಲ್ಲರು, ಹೆಳವ, ಅಂಬಿಗ, ಕಬ್ಬಾಲಿಗ, ತೆಲುಗುಗೌಡ, ತಲವಾರ ಮೊದಲಾದ ಜಾತಿಗಳಿದ್ದರು ಗೊಲ್ಲರು ವರ್ಗI ರಲ್ಲಿ ಗರಿಷ್ಟ ಪ್ರಮಾಣದ ಅನುಕೂಲತೆಯನ್ನು ಪಡೆದಿದ್ದಾರೆ. ೨೦೦೧-೦೨ ರಲ್ಲಿ ಶೇ.೯.೫೨ ರಷ್ಟಿದ್ದು, ೨೦೦೭-೦೮ ರ ಅವಧಿಗೆ ಶೇ.೧೧.೦೦ ರಷ್ಟಿದೆ. ಈ ಅನಾಥಾಲಯದಲ್ಲಿ ಜನರಲ್ ಮೆರಿಟ್ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆಯಿದೆ. ೨೦೦೧-೦೨ ರಲ್ಲಿ ಶೇ.೦.೯೭ ರಷ್ಟಿದ್ದು, ೨೦೦೭-೦೮ ರ ಅವಧಿಗೆ. ಶೇ.೧.೦೮ ರಷ್ಟಿದೆ. ಇದರಲ್ಲಿ ವೈಶ್ಯರು, ಬ್ರಾಹ್ಮಣರು ಮತ್ತು ಮೊದಲಿಯರ್ ಜಾತಿಯವರೆ ಪ್ರಮುಖರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಠದ ಅನಾಥಾಲಯದಲ್ಲಿ ಆಶ್ರಯ ಪಡೆದಿದ್ದಾರೆ. ಪರಿಶಿಷ್ಟ ಜಾತಿಯವರು ೨೦೦೧-೦೨ರಲ್ಲಿ ಶೇ. ೪.೭೯ ರಷ್ಟಿದ್ದರೆ, ೨೦೦೭-೦೮ ರ ಅವಧಿಗೆ ಶೇ.೫.೬೦ ಗೆ ಅಧಿಕವಾಗಿದೆ. ಪರಿಶಿಷ್ಟ ವರ್ಗದಲ್ಲಿಯೂ ಇದೇ ಅವಧಿಯಲ್ಲಿ ಶೇ.೪.೦೨ ರಿಂದ ಶೇ.೫.೧೯ ಕ್ಕೆ ಅಧಿಕವಾಗಿದೆ.

ಪಟ್ಟಿ ೫ : ಅನಾಥಾಲಯದಲ್ಲಿ ದಾಖಲಾದ ಜಾತಿವಾರು ಮತ್ತು ಶಾಲಾವಾರು ವಿದ್ಯಾರ್ಥಿಗಳ ಪ್ರಮಾಣ : ೨೦೦೧-೦೨.


ಕ್ರಸಂ	ಜಾತಿವಾರು ವರ್ಗಗಳು	1-IV	VI-X	ಪದವಿ ಪೂರ್ವ	ತಾಂತ್ರಿಕ ಕೋರ್ಸುಗಳು	ಒಟ್ಟು
೧.	I	೬೯	೪೭೦	೫೦	೧೯	೬೦೮
೨.	II A	೧೬೫	೯೯೮	೯೬	೬೩	೧೩೨೨
೩.	II B	೧೧	೪೯	೦೪	೦೩	೬೭
೪.	III A	೭೯	೫೯೪	೯೭	೭೫	೮೪೫
೫.	III B	೨೫೧	೨೧೬೨	೨೭೦	೨೩೦	೨೯೧೩
೬.	ಸಾ.ವರ್ಗ	೧೦	೪೫	೦೩	೦೪	೬೨
೭.	ಪ.ಜಾ	೫೨	೨೧೩	೧೯	೨೨	೩೦೬
೮.	ಪ.ಪಂ.	೨೪	೨೧೬	೦೯	೦೮	೨೫೭
೯.	ಒಟ್ಟು	೬೬೧ ೧೦.೩೬%	೪೭೪೭ ೭೪.೪೦%	೫೪೮ ೮.೫೮%	೪೨೪ ೬.೬೪%	೬೩೮೦ ೧೦೦%

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫ್‌ನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡ್‌ರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಮತ್ತು ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೨೦೦೧-೦೨ ರಿಂದ ೨೦೦೬-೦೭ ರ ವರೆಗೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.

ಅನಾಥಾಲಯದಲ್ಲಿ ದಾಖಲಾದ ಜಾತಿವಾರು ಮತ್ತು ಶಾಲಾವಾರು, ವಿದ್ಯಾರ್ಥಿಗಳ ಪ್ರಮಾಣ : ೨೦೦೬-೦೭.

ಕ್ರಸಂ	ಜಾತಿವಾರು ವರ್ಗಗಳು	1-IV	VI-X	ಪದವಿ ಪೂರ್ವ	ತಾಂತ್ರಿಕ ಕೋರ್ಸುಗಳು	ಒಟ್ಟು
೧.	**I**	೭೪	೪೪೫	೪೦	೩೯	೫೯೮
೨.	**II A**	೨೫೮	೧೫೯೬	೧೧೪	೧೧೧	೨೦೭೯
೩.	**II B**	೧೦	೫೮	೬	೦೩	೭೭
೪.	**III A**	೮೭	೬೭೧	೫೮	೧೩೮	೯೫೪
೫.	III B	೩೦೩	೨೨೪೩	೨೩೦	೩೩೫	೩೧೧೧
೬.	ಸಾ.ವರ್ಗ	೦೭	೪೩	೪	೦೫	೫೯
೭.	ಪ.ಜಾ	೭೭	೪೦೯	೩೫	೪೯	೫೭೦
೮.	ಪ.ಪಂ.	೪೦	೩೬೨	೩೩	೨೧	೪೫೬
೯.	ಒಟ್ಟು	೮೫೬ ೧೦.೮೨%	೫೮೨೭ ೭೩.೭೨%	೫೨೦ ೬.೫೭%	೭೦೧ ೮.೮೬%	೭೯೦೪ ೧೦೦%

ಆಧಾರ : ಶ್ರೀ ಸಿದ್ಧಲಿಂಗೇಶ್ವರ ಆರ್ಫ್‌ನೇಜ್ ಅಂಡ್ ಫ್ರೀ ಹಾಸ್ಟೆಲ್ ಸ್ಟೇಟ್‌ಮೆಂಟ್ ಆಫ್ ಬೋರ್ಡ್‌ರ್ಸ್ ಅಡ್‌ಮಿಟೆಡ್ ಕ್ಯಾಟಗರಿ-ವೈಸ್, ಮತ್ತು ಡಿಸ್ಟ್ರಿಕ್ಟ್-ವೈಸ್ ಇನ್‌ಟು ವೇರಿಯಸ್ ಕ್ಲಾಸಸ್, ೨೦೦೧-೦೨ ರಿಂದ ೨೦೦೬-೦೭ ರ ವರೆಗೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.





೨೦೦೧-೦೨ ರಲ್ಲಿ ಎಲ್ಲಾ ವರ್ಗಗಳಿಂದಲೂ ೧ ರಿಂದ ೫ ನೇ ತರಗತಿಯವರೆಗೆ ಶೇ. ೧೦.೩೬ ರಷ್ಟಿದ್ದರೆ, ೨೦೦೬-೦೭ ರಲ್ಲಿ ಶೇ. ೧೦.೮೨ ಕ್ಕೆ ಅಧಿಕವಾಗಿದೆ. ೬ ರಿಂದ ೧೦ ನೇ ತರಗತಿಯವರೆಗೆ ಶೇ. ೭೪.೪೦ ರಷ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ ಶೇ. ೭೩.೭೨ ಕ್ಕೆ ಕಡಿಮೆಯಾಗಿದೆ. ಪದವಿ-ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಯು ಶೇ. ೮.೫೮ ರಿಂದ ಶೇ.೬.೫೭ಕ್ಕೆ ಇಳಿದಿದೆ. ಆದರೆ ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಯು ಶೇ. ೬.೬೪ ರಿಂದ ಶೇ.೮.೮೬ ಕ್ಕೆ ಅಧಿಕವಾಗಿದೆ, ಈ ಅಧ್ಯಯನದಲ್ಲಿ ಈ ಎರಡೂ ಅವಧಿಗಳಲ್ಲಿ ೬ ರಿಂದ ೧೦ ನೇ ತರಗತಿಗೆ ಆಶ್ರಯ ಬಯಸಿ ಬರುವ ಮಕ್ಕಳ ಸಂಖ್ಯೆಯು ಅಧಿಕವಾಗಿದೆ. ಸಿದ್ಧಗಂಗಾ ಮಠದಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇರುವುದರಿಂದ ಆಶ್ರಯ ಪಡೆಯಬಯಸುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅಧಿಕವಾಗಿದೆ. ಶಿವಕುಮಾರಸ್ವಾಮೀಜಿಯ ಆಶ್ರಯದಲ್ಲಿ ತಮ್ಮ ಮಕ್ಕಳು ಬೆಳೆಯಲೆಂದು ಬಡ-ಪೋಷಕರು ಇಚ್ಛಿಸುವುದರಿಂದಲು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ.

೧ ರಿಂದ ೪ ನೇ ತರಗತಿಯ ಮಕ್ಕಳ ಪ್ರಮಾಣವೂ ಅಧಿಕವಾಗಿದೆ. ಆದರೆ ಪದವಿ-ಪೂರ್ವ ಮತ್ತು ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ. ಉನ್ನತ ಶಿಕ್ಷಣಕ್ಕೆ ಹೆಜ್ಜೆಯನ್ನಿಡುವಾಗ ವಿದ್ಯಾರ್ಥಿಗಳು ವೈಯಕ್ತಿಕ ಮತ್ತು ಖಾಸಗಿಯಾಗಿ ಓದುವ ಹವ್ಯಾಸ ಬೆಳೆಸಿಕೊಳ್ಳುವುದರಿಂದ ಪದವಿ-ಪೂರ್ವ ಮತ್ತು ತಾಂತ್ರಿಕ-ಕೋರ್ಸುಗಳ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ.

೬.೩ ಸಹಾಯಧನ

ಜಾತಿರಹಿತ, ವರ್ಗರಹಿತ ಸಮಾಜ ಸ್ಥಾಪನೆಯಾಗಬೇಕೆಂಬ ಮಹದಾಸೆಯಿಂದ ಎಲ್ಲಾ ಜಾತಿಯವರಿಗೂ, ಎಲ್ಲಾ ವರ್ಗದವರಿಗೂ ವಸತಿ ನಿಲಯದಲ್ಲಿ ಸೌಕರ್ಯ ಮಾಡಿಕೊಡಲಾಗಿತ್ತದೆ. ಒಟ್ಟು ೧೦೮ ಎಕರೆ ವಿಸ್ತೀರ್ಣ ಹೊಂದಿರುವ ಸಿದ್ಧಗಂಗಾ ಮಠ, ೨೦೦೭-೦೮ ರ ಅವಧಿಯಲ್ಲಿ ಒಟ್ಟು ೮೦೦೨ ವಿದ್ಯಾರ್ಥಿಗಳನ್ನು ಅನಾಥಾಶ್ರಮಕ್ಕೆ ದಾಖಲಿಸಿಕೊಂಡಿದೆ.

೧೯೧೭ ರಲ್ಲಿಯೇ ಪ್ರಾರಂಭವಾದ ಈ ಅನಾಥಾಶ್ರಮ ೧೯೩೬ ರ ಇಸವಿಯ ವೇಳೆಗೆ ಸರ್ಕಾರವು ಸಹಾಯ ಧನ ನೀಡಲು ಮುಂದಾಯಿತು. ೧೬ ಮಂದಿಗೆ ಮಾತ್ರ ತಲಾಮಾಹೆಯಾನ ೧ ರೂ. ೫೦ ಪೈಸೆಯಂತೆ ಸಹಾಯಧನ ನೀಡಲಾಗುತ್ತಿತ್ತು. ಕ್ರಮೇಣ ಈ ಸಹಾಯಧನವನ್ನು ३ ರೂ. ಗಳಿಗೆ ಹೆಚ್ಚಿಸಲಾಯಿತು. ಉಳಿದ ಹೆಚ್ಚಿನ ವೆಚ್ಚವನ್ನು ಮಠ ಭರಿಸಿಕೊಳ್ಳುತ್ತಿತ್ತು. ಜೀವನದ ವೆಚ್ಚವು

ಏರುತ್ತಿರುವ ವಿಷಯವನ್ನು ಪರಿಶೀಲಿಸಿದ ಸರ್ಕಾರವು ಸಹಾಯಧನವನ್ನು ೩ ರೂ. ನಿಂದ ೧೦ ರೂ. ಗಳಿಗೆ ಏರಿಸಿತು. ನಿಲಯದ ಶಿಸ್ತಿನ ಜೀವನ, ಮಕ್ಕಳ ಬೆಳವಣಿಗೆಗೆ ಪೂರಕ ವಾತಾವರಣ, ಉತ್ತಮ ಜ್ಞಾನ ಪ್ರಸರಣಗಳಿಂದ ಆಕರ್ಷಿತಗೊಂಡ ಜನತೆ ಹರ್ಷದಿಂದ ವರ್ಷ ವರ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸುತ್ತಾ ಬಂದರು (ಸಿದ್ಧಗಂಗಾಶ್ರೀ, ೧೯೮೧,ಪು.೨೬೯).

ಮಠ ತನ್ನ ದಾಸೋಹ ಕಾರ್ಯದಲ್ಲಿ ಸರ್ಕಾರದ ನೆರವನ್ನು ಪಡೆದೆ ವಿದ್ಯಾರ್ಥಿ ನಿಲಯವನ್ನು ನಡೆಸಬೇಕೆಂದೇನೂ ಇಲ್ಲ. ವಿಧಾನಸಭೆಯಲ್ಲಿ ಒಮ್ಮೆ ೧೯೭೪ ರ ಅವಧಿಯಲ್ಲಿ ಅನಾಥಾಲಯಗಳ ಬಗ್ಗೆ ಅವಹೇಳನಕಾರಿ ಮಾತನಾಡಿದಾಗ, ಸಿದ್ಧಗಂಗಾ ಮಠ ಸರ್ಕಾರದ ಈ ಹೇಳಿಕೆಯನ್ನು ಖಂಡಿಸಿ, ಸರ್ಕಾರದಿಂದ ವಿದ್ಯಾರ್ಥಿ ನಿಲಯಕ್ಕೆ ದೊರಕುತ್ತಿದ್ದ ಸಹಾಯವನ್ನು ೧-೦೬-೧೯೭೪ ರಿಂದ ನಿರಾಕರಿಸಿ ಸ್ವಂತ ಆಧಾರದ ಮೇಲೆ ಸಾಧ್ಯವಾದಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಉತ್ತಮ ಶಿಕ್ಷಣ ಮತ್ತು ಶಿಸ್ತುಗಳಿಗೆ ಹೆಚ್ಚಿನ ಗಮನ ನೀಡಿ ಅಕ್ಷರ ಜ್ಞಾನ ನೀಡಲು ನಿಶ್ಚಯಿಸಿತು. ಆದರೆ ಹಣಕಾಸಿನ ಮುಗ್ಗಟ್ಟಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಲಿಲ್ಲ. ಇದನ್ನು ಕಂಡ ಸರ್ಕಾರ ಪುನಃ ಸಹಾಯಧನವನ್ನು ನೀಡಲು ಮುಂದಾಯಿತು. ಮಠದ ಅನಾಥಾಲಯದಲ್ಲಿ ಸೇರುವ ಎಲ್ಲಾ ವಿದ್ಯಾರ್ಥಿಗಳು ಸಂಸ್ಕೃತವನ್ನು ದಿನನಿತ್ಯ ಅಭ್ಯಾಸ ಮಾಡಲೇಬೇಕು. ಅಲ್ಲದೆ ದಿನನಿತ್ಯ ಕಾಯಕ ಮತ್ತು ಪ್ರಾರ್ಥನೆಗಳಲ್ಲಿ ತಪ್ಪದೇ ಭಾಗವಹಿಸಬೇಕು (ಸಿದ್ಧಗಂಗಾಶ್ರೀ, ೧೯೮೧, ಪು.೨೯೪-೨೯೫). ಈ ಉಚಿತ ವಿದ್ಯಾರ್ಥಿ ನಿಲಯದಲ್ಲಿ ತಮ್ಮ ಬಾಳನ್ನು ಸುಂದರವಾಗಿ ರೂಪಿಸಿಕೊಂಡು ಹೋದ ಸಾವಿರಾರು ಮಂದಿ ಹಳೆಯ ವಿದ್ಯಾರ್ಥಿಗಳು ಇಂದು ವಿಶ್ವದ ನಾನಾ ಭಾಗಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಅಧಿಕಾರಿಗಳಾಗಿ, ಸಾಹಿತಿಗಳಾಗಿ.........ವಿವಿಧ ಕ್ಷೇತ್ರಗಳಲ್ಲಿ ದುಡಿದು ಮಠದ ಅನಾಥಾಲಯಕ್ಕೆ ಬಂದು ಅವರೆಲ್ಲ ಸಂಘಟಿತರಾಗಿ "ಹಳೆ ವಿದ್ಯಾರ್ಥಿ ಸಂಘ" ವನ್ನು ೧೯೫೪ ರಲ್ಲಿ ಸ್ಥಾಪಿಸಿಕೊಂಡು ತಮ್ಮ ಸೇವೆಯನ್ನು ಮಠಕ್ಕೆ ಸಲ್ಲಿಸುತ್ತಿದ್ದಾರೆ. ಶಿವಕುಮಾರಸ್ವಾಮೀಜಿಯವರೇ ಇದರ ಅಧ್ಯಕ್ಷರಾಗಿದ್ದಾರೆ.

ಸಿದ್ಧಗಂಗಾ ಗುರುಕುಲದ ಅನಾಥಾಲಯದಲ್ಲಿ ಪ್ರವೇಶಾವಕಾಶವನ್ನು ಪಡೆದ ಮಕ್ಕಳಲ್ಲಿ, ಕೆಲವು ಮಕ್ಕಳನ್ನು ಅನಾಥ ಮಕ್ಕಳೆಂದು ಪರಿಗಣಿಸಿ, ಅವರಿಗೆ ಸರ್ಕಾರದ ನೆರವು ಪಡೆಯುವ ಸೌಲಭ್ಯವನ್ನು ಮಠ ದೊರಕಿಸಿಕೊಂಡಿದೆ. ಅನಾಥ ಮಕ್ಕಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ವ್ಯತ್ಯಾಸಗೊಳ್ಳುತ್ತದೆ. ಸಿದ್ಧಗಂಗಾ ಮಠ ಅನಾಥ ಮಕ್ಕಳಿಗೆ ಸರ್ಕಾರದಿಂದ ಪಡೆದ ಸಹಾಯಧನ ಈ ಕೆಳಕಂಡಂತಿದೆ.

ಪಟ್ಟಿ ೬ : ಸರ್ಕಾರದ ಸಹಾಯಧನ ಪಡೆದ ವಿದ್ಯಾರ್ಥಿಗಳ ಸಂಖ್ಯೆ

ವರ್ಷ	ಒಟ್ಟು ವಿದ್ಯಾರ್ಥಿಗಳು	ಸರ್ಕಾರದ ಸಹಾಯಧನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ತಲಾ ವಿದ್ಯಾರ್ಥಿಗೆ (ರೂ. ಗಳಲ್ಲಿ)	ಮೊತ್ತ (ರೂ.ಗಳಲ್ಲಿ)
೧೯೯೦-೯೧	೩೫೭೯	೨೦೭೬ ೫೭.೮೪% (೨೦೭೬x ರೂ.೫೦ x ೧೨)	೫೦	೧೨೪೫೬೦೦
೧೯೯೫-೯೬	೪೧೦೫	೨೧೩೦ ೫೧.೮೮% (೨೧೩೦x ರೂ.೫೦ x ೧೨)	೫೦	೧೨೭೮೦೦೦
೧೯೯೭-೯೮	೪೫೩೪	೨೨೬೯ ೫೦.೦೪% (೨೨೬೯ x ರೂ.೧೦೦ x ೧೨)	೧೦೦	೨೭೨೨೮೦೦
೧೯೯೮-೯೯	೫೧೨೮	೨೩೨೧ ೪೫.೨೬% (೨೩೨೧ x ರೂ.೧೫೦x೧೨)	೧೫೦	೪೧೭೭೮೦೦
೨೦೦೭-೦೮	೮೦೦೨	೨೫೦೦ ೩೨% (೨೫೦೦ x ರೂ.೧೫೦x೧೨)	೧೫೦	೪೫೦೦೦೦೦

ಆಧಾರ : ಸಿದ್ಧಗಂಗಾ ಮಠದ ಮಾಹಿತಿಯಿಂದ, ೨೦೦೭-೦೮.

೧೯೯೦-೯೧ ರ ಅವಧಿಯಲ್ಲಿ ಶೇ.೫೭.೮೪ ರಷ್ಟು ವಿದ್ಯಾರ್ಥಿಗಳನ್ನು ಅನಾಥ ಮಕ್ಕಳೆಂದು ಪರಿಗಣಿಸಿ ತಲಾ ವಿದ್ಯಾರ್ಥಿಗೆ ೫೦ ರೂ. ಗಳನ್ನು ನೀಡಿದೆ. ಆದರೆ ಅನಾಥ ಮಕ್ಕಳ ಶೇಕಡಾವಾರು ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗಿದೆ. ೧೯೯೫-೯೬ ರಲ್ಲಿ ಶೇ.೫೧.೮೮ ರಷ್ಟಿದೆ. ೧೯೯೭-೯೮ ರಲ್ಲಿ ಶೇ.೫೦.೦೪ ರಷ್ಟು, ೧೯೯೮-೯೯ ರಲ್ಲಿ ಶೇ.೪೫.೨೬ ರಷ್ಟಿದೆ. ೨೦೦೭-೦೮ ರಲ್ಲಿ ಈ ಪ್ರಮಾಣ ಶೇ.೩೨ ಕ್ಕೆ ಇಳಿದಿದೆ. ಆದರೆ ತಲಾದಾಯವನ್ನು ೧೯೯೦-೯೧ ರ ಅವಧಿಯಲ್ಲಿದ್ದ ೫೦ ರೂ. ನಿಂದ ೨೦೦೭-೦೮ ರ ಅವಧಿಯಲ್ಲಿ ೧೫೦ ರೂ. ಗಳಿಗೆ ಸರ್ಕಾರ ಏರಿಸಿದೆ. ಆದ್ದರಿಂದ ಮಠದ ಆದಾಯವು ರೂ.೧೨೪೫೬೦೦ ಯಿಂದ ರೂ. ೪೫೦೦೦೦೦ ಗಳಿಗೆ ಏರಿದೆ.

	ಒಂದು ದಿನದ ದಾಸೋಹಕ್ಕೆ ತಗಲುವ ವೆಚ್ಚ	ರೂ.ಗಳಲ್ಲಿ
೧.	ಆಹಾರ ಸಾಮಗ್ರಿಗಳು	೯೦,೭೭೦=೦೦
೨.	ಸೌದೆ, ಎಲೆಕ್ಟ್ರಿಸಿಟಿ ಮತ್ತು ವೇತನ	೯೪೫೦=೦೦
	ಒಟ್ಟು	೧೦೦೨೨೦=೦೦


ಆಧಾರ : ಶ್ರೀ ಸಿದ್ಧಗಂಗಾ ಮಠ, ೨೦೦೭-೦೮, ಪು.೨೦.

ಅನಾಥಾಲಯದಲ್ಲಿ ಬಡ ಮಕ್ಕಳೇ ಇರುವುದರಿಂದ ವಿದ್ಯಾರ್ಥಿಗಳ ಕೆಲವೊಂದು ವೆಚ್ಚವನ್ನು ಮಠವೇ ಭರಿಸಬೇಕಾಗುತ್ತದೆ. ಅನೇಕ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಸ್ಥಳಕ್ಕೆ ಹೋಗಿಬರಲು ಹಣಕಾಸು ತೊಂದರೆ ಉಂಟಾದರೆ ಮಠವೇ ಮಕ್ಕಳಿಗೆ ಹಣಸಹಾಯ ನೀಡುತ್ತದೆ. ಬಟ್ಟೆಯಿಲ್ಲದ ಮಕ್ಕಳಿಗೆ ಬಟ್ಟೆಯನ್ನು, ಹೊದಿಕೆಯಿಲ್ಲದ ಮಕ್ಕಳಿಗೆ ಹೊದಿಕೆಯನ್ನು ಮಠವೇ ಪೂರೈಸುತ್ತದೆ. ಮಠ ಹೀಗೆ ಅನಾಥಾಲಯದ ವಿದ್ಯಾರ್ಥಿಗಳಿಗೆ ಮಾಡುವ ಸಾಮಾಜಿಕ ವೆಚ್ಚಗಳು ಈ ಕೆಳಕಂಡಂತಿವೆ.

ಪಟ್ಟಿ ೭ : ಸಾಮಾಜಿಕ ವೆಚ್ಚಗಳು

ಕ್ರ.ಸಂ.	ವಿಧಗಳು	ವೆಚ್ಚಗಳು (ರೂ.ಗಳಲ್ಲಿ)
೧.	ಮಕ್ಕಳಿಗೆ ಬಸ್ ಛಾರ್ಜಗಾಗಿ	೧,೦೦,೦೦೦=೦೦ ೬.೬೬%
೨.	ಬಡಮಕ್ಕಳಿಗೆ ಬಟ್ಟೆ ವಿತರಿಸುವಿಕೆ ವೆಚ್ಚ	೪,೦೦,೦೦೦=೦೦ ೨೬.೬೬%
೩.	ಬಡಮಕ್ಕಳಿಗೆ ಆರ್ಥಿಕ ಸಹಾಯ	೧,೦೦,೦೦೦=೦೦ ೬.೬೬%
೪.	ಸಿದ್ಧಗಂಗಾ ದವಾಖಾನೆಯಲ್ಲಿ ವೈದ್ಯಕೀಯ ಸೌಲಭ್ಯ	೩,೦೦,೦೦೦=೦೦ ೨೦%
೫.	ಇತರೆ ವೈದ್ಯಕೀಯ ವೆಚ್ಚ	೧,೦೦,೦೦೦=೦೦ ೬.೬೬%
೬.	ಸಿದ್ಧಗಂಗಾ ಮ್ಯಾಗ್‌ಝೀನ್ ವೆಚ್ಚ	೫,೦೦,೦೦೦=೦೦ ೩೩.೩೩%
	ಒಟ್ಟು	೧೫,೦೦.೦೦೦=೦೦ ೧೦೦%

ಆಧಾರ : ಶ್ರೀ ಸಿದ್ಧಗಂಗಾ ಮಠ, ೨೦೦೭-೦೮, ಪು.೨೧.



೨೦೦೬-೦೭ ರ ಅವಧಿಯಲ್ಲಿ ಸಿದ್ಧಗಂಗಾ ಮ್ಯಾಗಝೀನ್‌ಗಳಿಗಾಗಿ ಅಧಿಕವಾಗಿ ವೆಚ್ಚ ಮಾಡಲಾಗಿದೆ. ಶೇ.೩೩.೩೩ ರಷ್ಟು ವೆಚ್ಚವನ್ನು ಮ್ಯಾಗಝೀನ್‌ಗಳಿಗೆ ಭರಿಸಲಾಗಿದೆ. ಬಡ ಮಕ್ಕಳಿಗೆ ಬಟ್ಟೆ ವಿತರಿಸುವಿಕೆಗಾಗಿಯೇ ಶೇ.೨೬.೬೬ ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. ಸಿದ್ಧಗಂಗಾ ಮಠ, ಮಠದಲ್ಲಿಯೇ ದವಾಖಾನೆಯನ್ನು ಸ್ಥಾಪಿಸಿದ್ದು ಶೇ.೨೦ ರಷ್ಟನ್ನು ವೈದ್ಯಕೀಯ ಸೌಲಭ್ಯಕ್ಕಾಗಿ ವೆಚ್ಚ ಮಾಡಲಾಗಿದೆ. ಮಕ್ಕಳ ಬಸ್ ಛಾರ್ಜಗೆಂದು ಶೇ.೬.೬೬ ರಷ್ಟು, ಆರ್ಥಿಕ ಸಹಾಯಕ್ಕಾಗಿ ಶೇ.೬.೬೬ ರಷ್ಟು ಮತ್ತು ಇತರೆ ವೈದ್ಯಕೀಯ ಸೌಲಭ್ಯಕ್ಕಾಗಿ ಶೇ.೬.೬೬ ರಷ್ಟು ವೆಚ್ಚ ಮಾಡಲಾಗಿದೆ. ಸಿದ್ಧಗಂಗಾ ಮಠ ಅನಾಥಾಶ್ರಮಕ್ಕೆಂದು ಒಟ್ಟು ೪.೦೫,೦೦,೦೦೦ ರೂ.ಗಳನ್ನು ವೆಚ್ಚ ಮಾಡುತ್ತಿದೆ. ಮಠದ ದಾಸೋಹಕ್ಕೆಂದು, ಧರ್ಮದತ್ತಿ ವೆಚ್ಚ ಮತ್ತು ಇತ್ಯಾದಿ ವೆಚ್ಚಗಳನ್ನು ಭರಿಸುತ್ತದೆ. ಈ ವೆಚ್ಚಗಳನ್ನು ಭರಿಸಲು ಮಠ ಕೃಷಿ, ಸರ್ಕಾರದ, ಬಾಡಿಗೆಗಳಿಂದ, ಠೇವಣಿಗಳ ಮೇಲಿನ ಬಡ್ಡಿಗಳಿಂದ ಆದಾಯವನ್ನು ಪಡೆಯುತ್ತದೆ.

ಸಿದ್ಧಗಂಗಾ ಮಠ ನಡೆಸುತ್ತಿರುವ ಅನಾಥಾಲಯದಲ್ಲಿ ೨೦೦೭-೦೮ ರಲ್ಲಿ ಒಂದು ಹೊತ್ತಿಗೆ ೮,೦೦೦ ವಿದ್ಯಾರ್ಥಿಗಳು ಮತ್ತು ೨೦೦೦ ಸಾರ್ವಜನಿಕರು ಊಟವನ್ನು ಸೇವಿಸುತ್ತಾರೆ. ಅಂದರೆ ಒಂದು ದಿನಕ್ಕೆ ೨೬,೦೦೦ ಜನ ಊಟವನ್ನು ಮಾಡುತ್ತಾರೆಂದರ್ಥ. ಈ ಅವಧಿಯಲ್ಲಿ ಒಂದು ದಿನಕ್ಕೆ ಅಡಿಗೆ ಸಾಮಾನಿಗೆ ತಗಲುವ ವೆಚ್ಚ ರೂ. ೯೦,೭೭೦. ಸೌದೆ, ವಿದ್ಯುಚ್ಛಕ್ತಿ ಮತ್ತು ವೇತನಗಳೆಂದು ಒಟ್ಟು ರೂ. ೯೪೫೦ ವೆಚ್ಚ ತಗಲುತ್ತಿದೆ. ಮಠದ ದಾಸೋಹದ ಒಂದು ದಿನದ ವೆಚ್ಚ ರೂ. ೧೦೦೨೨೦ ರಷ್ಟು. ಆದ್ದರಿಂದ ಒಂದು ಊಟದ ಸರಾಸರಿ ವೆಚ್ಚ ರೂ.೩.೮೫.

೬.೪ ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯದ ಆದಾಯ ಮತ್ತು ವೆಚ್ಚ


ಸಿದ್ಧಗಂಗಾ ಮಠ ಅನಾಥಾಲಯ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ಒಟ್ಟು ೪,೦೫,೦೦,೦೦೦ ರೂ. ಗಳಷ್ಟು ವೆಚ್ಚವನ್ನು ಕೈಗೊಳ್ಳಬೇಕು. ಮಠದ ಒಟ್ಟು ಆದಾಯ ರೂ. ೨,೫೦,೦೦,೦೦೦ ಗಳಷ್ಟು ಶೇ.೬೦ ರಷ್ಟು ಆದಾಯ, ಬ್ಯಾಂಕಿನಲ್ಲಿಟ್ಟ ಠೇವಣಿಗಳ ಮೇಲಿನ ಬಡ್ಡಿಯ ರೂಪದಲ್ಲಿ ಬರುತ್ತದೆ. ತುಮಕೂರು ನಗರದಲ್ಲಿ ಹಲವಾರು ಮಳಿಗೆಗಳನ್ನು ಸ್ಥಾಪಿಸಿ ಮಠ ಬಾಡಿಗೆಗೆ ನೀಡಿದೆ. ಬಾಡಿಗೆ ರೂಪದಲ್ಲಿ ಬರುವ ಆದಾಯವೇ ಶೇ.೧೪ ರಷ್ಟಿದೆ. ಕೃಷಿ ಮೂಲಗಳಿಂದ ಶೇ.೮ ರಷ್ಟಿದ್ದರೆ, ಅನಾಥಮಕ್ಕಳಿಗೆಂದೇ ಮಠ ಶೇ.೧೮ ರಷ್ಟು ಆದಾಯವನ್ನು ಸರ್ಕಾರದ ಮೂಲಗಳಿಂದ ಪಡೆಯುತ್ತಿದೆ. ಆದರೆ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿರುವುದು ಪಟ್ಟಿಯಿಂದ ತಿಳಿದುಬರುತ್ತದೆ.

ಪಟ್ಟಿ ೮ : ಸಿದ್ಧಲಿಂಗೇಶ್ವರ ಅನಾಥಾಲಯದ ಆದಾಯ ಮತ್ತು ವೆಚ್ಚ : ೨೦೦೬-೦೭


ಕ್ರ.ಸಂ	ಆದಾಯ (ರೂ.ಗಳಲ್ಲಿ)	ಮೊತ್ತ (ರೂ.ಗಳಲ್ಲಿ)	ವೆಚ್ಚ (ರೂ.ಗಳಲ್ಲಿ)	ಮೊತ್ತ (ರೂ.ಗಳಲ್ಲಿ)
೧.	ಠೇವಣಿಗಳ ಮೇಲಿನ ಬಡ್ಡಿ	೧,೫೦,೦೦,೦೦೦ ೬೦%	ದಾಸೋಹ ವೆಚ್ಚ	೩,೬೫,೦೦,೦೦೦ ೯೦.೧೨%
೨.	ಬಾಡಿಗೆ ರೂಪದ ಆದಾಯ	೩೫,೦೦,೦೦೦ ೧೪.%	ಸಾಮಾಜಿಕ ವೆಚ್ಚ	೧೫,೦೦,೦೦೦ ೩.೭೦%
೩.	ಕೃಷಿ ಆದಾಯ	೨೦,೦೦,೦೦೦ ೮%	ಇತರೆ ವೆಚ್ಚ	೨೫,೦೦,೦೦೦ ೬.೧೭%
೪.	ಅನಾಥ ಮಕ್ಕಳಿಗೆ ಸರ್ಕಾರದಿಂದ ಪಡೆಯುವ ಸಹಾಯಧನ (೨೫೦೦ x ರೂ.೧೫೦ x ೧೨	೪೫,೦೦,೦೦೦ ೧೮%		
	ಒಟ್ಟು	೨,೫೦,೦೦,೦೦೦ ೧೦೦%		೪,೦೫,೦೦,೦೦೦ ೧೦೦%

ಆಧಾರ : ಸಿದ್ಧಗಂಗಾ ಮಠ, ೨೦೦೭-೦೮, ಪು.೨೪

ಆದಾಯ



ವೆಚ್ಚ



ವೆಚ್ಚಗಳಲ್ಲಿ ದಾಸೋಹ ವೆಚ್ಚವೇ ಪ್ರಮುಖವಾದದ್ದು. ಒಟ್ಟು ವೆಚ್ಚದಲ್ಲಿ ಶೇ. ೯೦.೧೨ ರಷ್ಟು ದಾಸೋಹಕ್ಕೆಂದು ವೆಚ್ಚವಾಗುತ್ತಿದೆ. ಸಾಮಾಜಿಕ ವೆಚ್ಚಗಳ ಮೇಲೆ ಶೇ.೩.೭೦ ಮತ್ತು ಇತರೆ ವೆಚ್ಚಗಳೆಂದು ಶೇ.೬.೧೭ ರಷ್ಟು ವಾರ್ಷಿಕವಾಗಿ ವೆಚ್ಚವನ್ನು ಮಾಡುತ್ತದೆ. ಆದಾಯ ಮತ್ತು ವೆಚ್ಚಗಳ ಸಾಪೇಕ್ಷ ಅಧ್ಯಯನದಿಂದ ಕಂಡು ಬರುವ ಪ್ರಮುಖ ಅಂಶ ವೆಚ್ಚಗಳು ಆದಾಯಕ್ಕಿಂತ ಅಧಿಕವಾಗಿರುವುದು. ಆದಾಯ ಮತ್ತು ವೆಚ್ಚಗಳ ನಡುವಿನ ಅಂತರ ಅಗಾಧವಾಗಿದೆ. ಒಟ್ಟು ಆದಾಯ ರೂ. ೨,೫೦,೦೦,೦೦೦ ರಷ್ಟಿದ್ದರೆ, ಒಟ್ಟು ವೆಚ್ಚ ರೂ. ೪,೦೫,೦೦,೦೦೦ ಗಳಷ್ಟಿದೆ. ಆದ್ದರಿಂದ ಹೆಚ್ಚುವರಿ ವೆಚ್ಚ ರೂ. ೧,೫೫,೦೦,೦೦೦ ಈ ಭಾರಿ ಮೊತ್ತದ ವೆಚ್ಚವನ್ನು ಸಾರ್ವಜನಿಕರಿಂದ, ಡೊನೇಷನ್‌ಗಳನ್ನೆತ್ತುವುದರ ಮೂಲಕ ಭರಿಸಿಕೊಳ್ಳತ್ತದೆಂದು ಹೇಳಲಾಗಿದೆ.

ಶಿಕ್ಷಣ ಪ್ರಸಾರದಿಂದ, ಆರೋಗ್ಯ-ನೈರ್ಮಲ್ಯ ಕಾರ್ಯಕ್ರಮಗಳ ಅನುಷ್ಠಾನದಿಂದ ಸಮಾಜದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರುವಲ್ಲಿ ಸಿದ್ಧಗಂಗಾ ಮಠ ಶ್ರಮಿಸುತ್ತಿದೆ. ಇವುಗಳ ಸಾಧ್ಯತೆಗೆ ಸಿದ್ಧಗಂಗಾ ಮಠ ಪರಿಣಾಮಕಾರಿಯಾದ ಉಪಕರಣಗಳಾಗಿ ಕಾರ್ಯ ನಿರ್ವಹಿಸುತ್ತಿದೆ. ಉದಾತ್ತ ಸೂತ್ರಗಳಾದ ಕಾಯಕ ಮತ್ತು ದಾಸೋಹ ಪರಿಕಲ್ಪನೆಯನ್ನು ಇಂದಿಗೂ ಪ್ರಸ್ತುತವನ್ನಾಗಿಸಿದೆ. ಸಿದ್ಧಗಂಗಾ ಮಠದ ಅನಾಥಾಲಯದಲ್ಲಿ ಲಿಂಗಾಯತ ವಿದ್ಯಾರ್ಥಿಗಳೇ ಅಧಿಕವಾಗಿದ್ದಾರೆ. ಸಿದ್ಧಗಂಗಾ ಮಠ ಲಿಂಗಾಯತ ಮಠವಾಗಿರುವುದರಿಂದ ಲಿಂಗಾಯತರೇ ಅಧಿಕವಾಗಿದ್ದಾರೆ. ವೀರಶೈವಧರ್ಮದ



ತತ್ವಗಳಿಗನುಸಾರವಾಗಿ ಮಠ ನಿಯಮಗಳನ್ನು ರೂಪಿಸಿದೆ. ಶಿವಕುಮಾರಸ್ವಾಮೀಜಿ ವಚನತತ್ವ ಹಿನ್ನೆಲೆಯನ್ನಿಟ್ಟುಕೊಂಡು ಅನಾಥಾಶ್ರಮವನ್ನು ನಡೆಸುತ್ತಿರುವುದರಿಂದ ಪೋಷಕರು ಸಹಜವಾಗಿ ಸ್ವಾಮೀಜಿಯವರಿಗೆ ಆಕರ್ಷಿತರಾಗುತ್ತಾರೆ. ತಮ್ಮ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಬೇಕೆಂಬ ಆಶ್ರಯದಿಂದಲೂ ಮಠಕ್ಕೆ ಸೇರಿಸುತ್ತಾರೆ. ಕಡಿಮೆ ವೆಚ್ಚದಲ್ಲಿ ನಗರ ಪ್ರದೇಶದ ಶಿಕ್ಷಣ ತಮ್ಮ ಮಕ್ಕಳಿಗೆ ದೊರೆಯಲೆಂದು ಶ್ರೀಮಠದ ಅನಾಥಾಶ್ರಮಕ್ಕೆ ಸೇರಿಸುತ್ತಾರೆ. ಗ್ರಾಮೀಣ ಜನರು ಮತ್ತು ಬಡವರ ಪ್ರಕಾರ ಮಠದಲ್ಲಿ ಮಕ್ಕಳು ಬೆಳೆದರೆ ಧಾರ್ಮಿಕತೆ ಮೇಳೈಸಿಕೊಳ್ಳುತ್ತಾರೆಂದೂ, ಆ ಮಕ್ಕಳು ಉತ್ತಮ ಪ್ರಜೆಗಳಾಗುತ್ತರೆಂಬ ನಂಬಿಕೆಯೇ ಇದಕ್ಕೆ ಕಾರಣ. ಮುಖ್ಯವಾಗಿ ಬೆಳಿಗ್ಗೆ ಮತ್ತು ಪ್ರಾತಃಕಾಲ ಸಂಸ್ಕೃತ ಶ್ಲೋಕಗಳನ್ನು ಎಲ್ಲಾ ಮಕ್ಕಳು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸವುದು ಪೋಷಕರನ್ನು ಮೂಕ ಪ್ರೇಕ್ಷಕರನ್ನಾಗಿಸುತ್ತದೆ. ಇಂತಹ ಧಾರ್ಮಿಕ ಪ್ರವೃತ್ತಿಯನ್ನು ಹೊಂದಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ಪೋಷಕರು ತಮ್ಮ ಮಕ್ಕಳ ಭವಿಷ್ಯತ್ತನ್ನು ರೂಪಿಸಲು ಸಿದ್ಧಗಂಗಾ ಮಠದ ಅನಾಥಾಶ್ರಮಕ್ಕೆ ದಾಖಲಿಸುತ್ತಾರೆ. ಕಾಯಕ ಮತ್ತು ದಾಸೋಹ ಶಿವಕುಮಾರ ಸ್ವಾಮೀಜಿಯ ಬಾಳರಥದ ಎರಡು ಚಕ್ರಗಳಿದ್ದಂತೆ.

ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯದ ಅಧ್ಯಯನದಿಂದ ಕಂಡು ಬರುವ ಪ್ರಮುಖ ಅಂಶಗಳೆಂದರೆ.

೧. ಭಾರತದಂತಹ ಜಾತಿ ಪ್ರಧಾನ ರಾಷ್ಟ್ರದಲ್ಲಿ ಒಟ್ಟು ೧೩೦ ಕೋಮುಗಳು ಒಂದೇ ಸೂರಿನಡಿಯಿರುವುದು ಚರಿತ್ರಾರ್ಹ.

೨. ಮಠ ಸರ್ಕಾರದಿಂದ ಶೇ.೧೮ ರಷ್ಟು ಸಹಾಯಧನವನ್ನು ಅನಾಥ ಮಕ್ಕಳಿಗೆ ಪಡೆದರೆ, ಮಠ ಶೇ.೯೦ ರಷ್ಟು ಹಣವನ್ನು ವೆಚ್ಚ ಮಾಡುತ್ತಿದೆ. ಆದ್ದರಿಂದ ಸರ್ಕಾರದಿಂದ ಪಡೆಯುವ ಸಹಾಯಧನದಿಂದ ಅನಾಥಾಲಯವನ್ನು ಪೋಷಿಸಲು ಅಸಾಧ್ಯವಾದದ್ದು.

೩. ಮಠ ಪ್ರಾರಂಭದಿಂದಲೂ ಗಂಡು ಮಕ್ಕಳಿಗೆ ಮಾತ್ರ ಉಚಿತ ವಸತಿನಿಲಯ ಮತ್ತು ದಾಸೋಹದ ಸೌಕರ್ಯವನ್ನೊದಗಿಸಿದೆ. ಆದರೆ ಹೆಣ್ಣು ಮಕ್ಕಳಿಗೆ ಇಂತಹ ಸೌಲಭ್ಯವನ್ನೊದಗಿಸಿಲ್ಲ. ಕಾರಣ ಸ್ಪಷ್ಟವಾಗಿಲ್ಲದಿದ್ದರೂ ಪ್ರಕೃತಿದತ್ತವಾಗಿ ಹೆಣ್ಣು ಮಕ್ಕಳು ಅನೇಕ ಸಮಸ್ಯೆಗಳನ್ನೆದುರಿಸುವುದರಿಂದ ಪೋಷಕರ ಮಡಿಲಲ್ಲಿಯೇ ಬೆಳೆಯಲೆಂದು ಮಠ ಆಶಿಸಿರಬಹುದೆಂಬುದು ನನ್ನ ಭಾವನೆ.

೪. ಮಠದ ಉಚಿತ ವಸತಿ ನಿಲಯ ಮತ್ತು ಅನಾಥಾಲಯದಲ್ಲಿ ಆಶ್ರಯ ಪಡೆದವರಲ್ಲಿ ಲಿಂಗಾಯತರು ಅಧಿಕ ಸಂಖ್ಯೆಯಲ್ಲಿದ್ದರೂ, ಹಿಂದುಳಿದ ವರ್ಗದವರು ಆಶ್ರಯ ಪಡೆದಿದ್ದಾರೆ.

ಕೊನೆಯ ಮಾತು

ಶಿಕ್ಷಣ ಎಷ್ಟು ಮುಖ್ಯವೋ, ಆಹಾರವೂ ಅಷ್ಟೇ ಮುಖ್ಯವಾದದ್ದು ಎಂದರಿತ ಸಿದ್ಧಗಂಗಾ ಮಠ ಸ್ವಾತಂತ್ರ್ಯಪೂರ್ವದಿಂದಲೇ ಉಚಿತ ವಸತಿ ನಿಲಯ ಮತ್ತು ದಾಸೋಹವನ್ನು ಸ್ಥಾಪಿಸಿ, ಬಡಮಕ್ಕಳಿಗೆ, ದೀನದಲಿತರಿಗೆ, ಶಿಷ್ಟ-ಪರಿಶಿಷ್ಟರಿಗೆ, ಹಿಂದುಳಿದವರಿಗೆ ಅವಕಾಶಗಳನ್ನೊದಗಿಸಿ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಸಿದ್ಧಗಂಗಾ ಮಠ ಬೃಹತ್ ಸಂಖ್ಯೆಯಲ್ಲಿ ಪ್ರೌಢಶಾಲೆ ಮತ್ತು ಕಾಲೇಜುಗಳನ್ನು ಹಾಗೂ ಅವುಗಳಿಗೆ ಹೊಂದಿಕೊಂಡಂತೆ ಉಚಿತ ವಿದ್ಯಾರ್ಥಿ ನಿಲಯ ಮತ್ತು ದಾಸೋಹಗಳನ್ನು ಸ್ಥಾಪಿಸಿದೆ. ವಚನಕಾರರ ಆದರ್ಶ ತತ್ವಗಳನ್ನು ಸ್ವಾತಂತ್ರ್ಯಾನಂತರವೂ ರೂಢಿಸಿಕೊಂಡಿದೆ. ಇದರ ಮೂಲಕ ಲಿಂಗಾಯತ ಸಮುದಾಯಕ್ಕಲ್ಲದೆ ಇಡೀ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದೆ. ಮಠದಲ್ಲುಳಿದು ಶಿಕ್ಷಣ ಪಡೆದವರೇ ಇಂದು ಮಠಕ್ಕೆ ದಾನಿಗಳೂ ಆಗಿದ್ದಾರೆ. ಜಾತಿಭೇದವಿಲ್ಲದೆ ಸಾವಿರಾರು ಬಡ ಮಕ್ಕಳು ಇಂದು ಸಿದ್ಧಗಂಗಾ ಮಠದ ಉಚಿತ ವಸತಿ ನಿಲಯ ಮತ್ತು ದಾಸೋಹದ ಅನುಕೂಲತೆಯನ್ನು ಪಡೆಯುತ್ತಿದ್ದಾರೆ.

ಗ್ರಂಥಋಣ

೧. **ಅಮರ್ತ್ಯ ಸೇನ್/ ಜೀನ್ ಡ್ರೀಜ್,** *ಕಾಂಪ್ರೈಸಿಂಗ್ ಪಾವರ್ಟಿ ಅಂಡ್ ಫ್ಯಾಮಿನ್ಸ್, ಹಂಗರ್ ಅಂಡ್ ಪಬ್ಲಿಕ್ ಆಕ್ಷನ್ ಇಂಡಿಯಾ: ಎಕಾನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಷಿಯಲ್ ಆಪರ್ಚುನಿಟಿ,* ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೯.

೨. **ಡಾ. ಅಶೋಕ ನರೋಡೆ,** *ವಚನ ಚಳವಳಿ ಕೆಲವು ಅಧ್ಯಯನಗಳು,* ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,೨೦೦೦.

೩. **ಡಾ. ಚಂದ್ರಶೇಖರ್ ಟಿ.ಆರ್.,** *ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು,* ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೪. **ಡಾ. ಮರುಳಯ್ಯ ಸಾ.ಶಿ.,** ಒಂದು ಮೆಲುಕು, *ಅಮೃತಗಂಗಾ, ಅಮೃತ ಮಹೋತ್ಸವ ಸಂಚಿಕೆ.* ಪ್ರ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಸಂಘ, ೨೦೦೫.

೫. **ಡಾ. ಮರುಳಸಿದ್ಧಯ್ಯ ಎಚ್.ಎಂ.,** ಅಮೃತ ಅಭ್ಯುದಯ ಮಣಿಗ, *ಅಮೃತಗಂಗಾ, ಅಮೃತ ಮಹೋತ್ಸವ ಸಂಚಿಕೆ.* ಪ್ರ. ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಸಂಘ, ೨೦೦೫.

೬. **ಪ್ರೊ. ಸಂಗಮದ ವ್ಹಿ.ವ್ಹಿ.,** ಮಹಾಮಾನವತಾವಾದಿ, *ಅಮೃತಗಂಗಾ ಅಮೃತ ಮಹೋತ್ಸವ ಸಂಚಿಕೆ.* ಪ್ರ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಸಂಘ, ೨೦೦೫.

೭. **ಸಿದ್ಧಗಂಗಾಶ್ರೀ,** ಸಂ. ಚನ್ನಪ್ಪ ಎರೆಸೀಮೆ ಮತ್ತು ಮಹಾದೇವಯ್ಯ ಟಿ.ಆರ್, ಹಳೆ ವಿದ್ಯಾರ್ಥಿಗಳ ಸಂಘ, *ಶ್ರೀ ಸಿದ್ಧಗಂಗಾ ಕ್ಷೇತ್ರ,* ೧೯೮೧, ತುಮಕೂರು.

೮. **ಶ್ರೀ ಸಿದ್ಧಲಿಂಗೇಶ್ವರ ಆರ್ಫ್‌ನೇಜ್ ಅಂಡ್ ಫ್ರೀ ಹಾಸ್ಟೆಲ್,** *ಸ್ಟೇಟ್‌ಮೆಂಟ್ ಆಫ್ ಬೋರ್ಡ್‌ರ್ಸ ಅಡಿಮಿಟೆಡ್ ಕ್ಯಾಟಗರಿ–ವೈಸ್, ಕ್ಯಾಸ್ಟ್–ವೈಸ್ ಅಂಡ್ ಡಿಸ್ಟ್ರಿಕ್ಟ್–ವೈಸ್ ಇನ್‌ಟು ವೇರಿಯಸ್ ಕ್ಲಾಸಸ್,* ೧೯೫೧ ಟು ೨೦೦೭.

೯. **ಸಿದ್ಧಗಂಗಾ ಮಠ,** ಆಡಳಿತ ಕಛೇರಿಯಿಂದ ಪಡೆದ ಮಾಹಿತಿ, ೨೦೦೭–೦೮.

೧೦. **ಸಿದ್ಧಗಂಗಾ ಮಠದ** *ಸಿ.ಡಿ. ಕ್ಯಾಸೆಟ್,* ೨೦೦೭.

ಪಟ್ಟಿ :

೧. ಉಚಿತ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ

೨. ವಿವಿಧ ಪ್ರದೇಶಗಳಿಂದ ಆಗಮಿಸಿದ ವಿದ್ಯಾರ್ಥಿಗಳ ಸಂಖ್ಯೆ : ೨೦೦೧-೦೨ ರಿಂದ ೨೦೦೬-೦೭ ರ ವರೆಗೆ

೩. ಕೋಮುವಾರು ವಿದ್ಯಾರ್ಥಿಗಳ ಸಂಖ್ಯೆ

೪. ಶ್ರೀ ಸಿದ್ಧಗಂಗಾ ಮಠದ ಅನಾಥಾಲಯ ಮತ್ತು ಉಚಿತ ವಸತಿ ನಿಲಯದಲ್ಲಿರುವ ವಿವಿಧ ಜಾತಿಯ ವಿದ್ಯಾರ್ಥಿಗಳ ಸಂಖ್ಯೆ : ೨೦೦೧ ರಿಂದ ೨೦೦೮ ರ ವರೆಗೆ.

೫. ಅನಾಥಾಲಯದಲ್ಲಿ ದಾಖಲಾದ ಜಾತಿವಾರು ಮತ್ತು ಶಾಲಾವಾರು ವಿದ್ಯಾರ್ಥಿಗಳ ಪ್ರಮಾಣ : ೨೦೦೧-೦೨.

೬. ಸರ್ಕಾರದ ಸಹಾಯಧನ ಪಡೆದ ವಿದ್ಯಾರ್ಥಿಗಳ ಸಂಖ್ಯೆ

೭. ಸಾಮಾಜಿಕ ವೆಚ್ಚಗಳು

೮. ಸಿದ್ಧಲಿಂಗೇಶ್ವರ ಅನಾಥಾಲಯದ ಆದಾಯ ಮತ್ತು ವೆಚ್ಚ : ೨೦೦೬-೦೭

ಅಧ್ಯಾಯ – ೭

ಅಧ್ಯಯನದ ಸಾರಾಂಶ

ಅಧ್ಯಾಯ – ೭

ಅಧ್ಯಯನದ ಸಾರಾಂಶ

ಸಾಮಾನ್ಯರು ಪರಂಪರೆಯನ್ನು ಪಾಲಿಸಿದರೆ ಅಸಾಮಾನ್ಯರು ಪರಂಪರೆಯನ್ನು ಸೃಷ್ಟಿಸುತ್ತಾರೆ ಎನ್ನುವಂತೆ ಭಾವೈಕ್ಯತೆಯ ಸಂಗಮ ಸ್ಥಾನದಂತಿರುವ ಶಿವಕುಮಾರಸ್ವಾಮೀಜಿ ಜ್ಞಾನ–ಜ್ಯೋತಿಗಳಾಗಿ ನಾಡಿನ ಜನತೆಗೆ ಜ್ಞಾನದಾಸೋಹದ ಜೊತೆಗೆ ಅನ್ನದಾಸೋಹವನ್ನು ನೀಡಿ ತಮ್ಮ ತಪೋ–ಬಲದಿಂದ ನಾಗರೀಕತೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ಮತ್ತು ಉಳಿಸಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ.

ಭವಿಷ್ಯತ್ತಿನಲ್ಲಿ ಸಮಾಜವು ಅಭಿವೃದ್ಧಿ ಹೊಂದಬೇಕಾದರೆ ಇಂದಿನ ಮಕ್ಕಳಿಗೆ ಶಿಕ್ಷಣ ದೊರೆಕಬೇಕೆಂಬ ಅಚಲ ನಿಲುವುಳ್ಳವರಾಗಿದ್ದಾರೆ. ಅಂತೆಯೇ ಜಾತಿ, ಮತ ಭೇದವೆಣಿಸದೆ ಸಮಾಜದ ಸಕಲ ಸ್ತರಗಳಿಂದ ಬಂದ ಎಲ್ಲಾ ಮಕ್ಕಳಿಗೆ ಯೋಗ್ಯ ಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದಾರೆ. ಪ್ರಾರಂಭದಿಂದಲೇ ಶಿಸ್ತು, ಸಂಯಮಗಳ ಚೌಕಟ್ಟಿನಲ್ಲಿ ಮಕ್ಕಳಿಗೆ ಉಚಿತ ಊಟ ಹಾಗೂ ವಸತಿಗಳ ಏರ್ಪಾಡು ಮಾಡಿ ವಿದ್ಯಾರ್ಥಿಗಳ ಸುಪ್ತ ಚೇತನದ ವಿಕಾಸಕ್ಕೆ ವಿಪುಲ ಅವಕಾಶ ಒದಗಿಸಿದ್ದಾರೆ. ಸುಸಜ್ಜಿತವಾದ ಶಾಲಾ ಕಟ್ಟಡಗಳ ನಿರ್ಮಾಣ, ಸುಸಜ್ಜಿತ ಗ್ರಂಥಾಲಯ, ಪ್ರಯೋಗಶಾಲೆಗಳು ಇತ್ಯಾದಿ ಅನುಕೂಲತೆಗಳೊಟ್ಟಿಗೆ ಸಮಗ್ರ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಿದ್ದಾರೆ. ಅವರು ಕೈಗೊಂಡ ಕಾರ್ಯಗಳು ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿವೆ. ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ನವಕ್ರಾಂತಿಯನ್ನು, ಜನಜಾಗೃತಿಯನ್ನು ತಂದ ಮಠವೇ ಶ್ರೀ ಸಿದ್ಧಗಂಗಾ ಮಠ.

ಇಲ್ಲಿಯವರೆಗಿನ ಸಮಗ್ರ ಅಧ್ಯಯನದಿಂದ ಶ್ರೀಮಠದ ಹಿರಿಮೆ-ಗರಿಮೆಗಳು ವ್ಯಕ್ತವಾಗಿವೆ. ಒಂದು ವ್ಯಕ್ತಿತ್ವವನ್ನು ಗುರುತಿಸುವುದು ಸರಳವಾದರೆ ಒಂದು ಸಂಸ್ಥೆ, ಒಂದು ಶಕ್ತಿಯನ್ನು ಗುರುತಿಸುವುದು ಗುರುತರವಾದ ಕೆಲಸ. ಆಧಾರ, ಆಕರ, ಸಂದರ್ಶನ ಇತ್ಯಾದಿಗಳ ಮೂಲಕ ವಿಷಯವನ್ನು ಇಲ್ಲಿ ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

ಮೊದಲನೆ ಅಧ್ಯಾಯದಲ್ಲಿ ಅಧ್ಯಯನ ವಿಷಯದ ಸೈದ್ಧಾಂತಿಕ ನೆಲೆಗಳು, ಸಮಸ್ಯೀಕರಣ, ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಇದ್ದ ಉದ್ದೇಶಗಳು ಮಾಹಿತಿ ಪಡೆದ ವಿಧಾನಗಳು ಮತ್ತು ಅಧ್ಯಯನದ ಮಹತ್ವವನ್ನು ವಿವರಿಸಲಾಗಿದೆ. ಕರ್ನಾಟಕದಲ್ಲಿ ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯ ಅಧ್ಯಯನ ಪ್ರಮುಖವಾಗಿದ್ದು ಅದರಲ್ಲೂ ಸಿದ್ಧಗಂಗಾ ಮಠ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಲಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಮೂಲ ಉದ್ದೇಶ, ಅಧ್ಯಯನದ ಗುರಿಗಳನ್ನು ಮತ್ತು ಆಕರಗಳನ್ನು ತಿಳಿಸಲು ಪ್ರಯತ್ನಿಸಲಾಗಿದೆ. ಮಠಗಳ ಹಿನ್ನೆಲೆಯಲ್ಲಿ, ಪ್ರಮುಖ ಹೆಜ್ಜೆಗಳನ್ನಿಡುತ್ತಿರುವ ಸಿದ್ಧಗಂಗಾ ಮಠದ ಶೈಕ್ಷಣಿಕ ಕ್ಷೇತ್ರದ ಸಾಧನೆಯು ಈ ಅಧ್ಯಯನದ ಮೂಲ ಉದ್ದೇಶವಾಗಿದ್ದು, ಪ್ರಮುಖವಾಗಿ ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರೌಢಶಾಲೆಗಳ ಸಾಮಾಜಿಕ ಆಯಾಮಗಳನ್ನು ವಿವರಿಸುವ ಒಂದು ಪ್ರಯತ್ನವಾಗಿದೆ. ಅಗತ್ಯವಾದ ಮಾಹಿತಿಗಳನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಾಸಂಗಿಕವಾಗಿ ಹೇಳಬೇಕಾದ ಅನಿವಾರ್ಯತೆ ಇದೆ. ಒಂದು ಅಧ್ಯಯನ ಕೈಗೊಳ್ಳುವಲ್ಲಿ ಕಾರ್ಯ ಕಾರಣ-ಪರಿಣಾಮಗಳ ಸಂಬಂಧವನ್ನು ಗುರುತಿಸುವುದು ಅತ್ಯವಶ್ಯ. ಈ ಅಧ್ಯಾಯದಲ್ಲಿ ವಸಾಹತು ಪೂರ್ವ ಮತ್ತು ವಸಾಹತ್ತೋತ್ತರ ಶೈಕ್ಷಣಿಕ ಬೆಳವಣಿಗೆಯನ್ನು ವಿವರಿಸಲಾಗಿದೆ. ಬ್ರಿಟೀಷರು ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಅನುದಾನವನ್ನು ಕೊಡಲಾಗುವುದೆಂದು ಘೋಷಿಸಿದ ನಂತರ ಸಾವಿರಾರು ಮಠ ಮಾನ್ಯಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿರುವುದನ್ನು ವಿವರಿಸಲಾಗಿದೆ. ಎಲ್ಲಾ ಜಾತಿಯವರು ಶಿಕ್ಷಣ ಪಡೆಯುವಂತಾಗಬೇಕೆಂಬುದೆ ಮಠಗಳ ಉದ್ದೇಶವಾಗಿತ್ತು. ಶಿಕ್ಷಣ ಕೇವಲ ಬ್ರಾಹ್ಮಣರ ಸ್ವತ್ತಾಗಬಾರದೆಂದು ಮತ್ತು ಎಲ್ಲಾ ಜಾತಿಯವರು ಶಿಕ್ಷಣ ಪಡೆಯಲೆಂದು ಬ್ರಾಹ್ಮಣೇತರರ ಚಳವಳಿ ಮತ್ತು ಹಿಂದುಳಿದ ವರ್ಗಗಳ ಚಳವಳಿಯ ಮೂಲಕ ಮಠಗಳ ಒಳಸಂಘರ್ಷ ಮತ್ತು ವಿಭಜನೆಯನ್ನು ವಿವರಿಸಲಾಗಿದೆ. ಗುರು-ಮಠಗಳಿಗಿಂತ, ವಿರಕ್ತ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದು, ಶಿಕ್ಷಣ, ಸಾಕ್ಷರತೆ ಮತ್ತು ದಾಸೋಹಗಳಿಗೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ವಿವರಿಸಲಾಗಿದೆ.

ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠವು ಈ ನಿಟ್ಟಿನಲ್ಲಿಯೇ ಶಿಕ್ಷಣ ಕ್ಷೇತ್ರ ಪ್ರವೇಶಿಸಿ ಅಭಿವೃದ್ಧಿಯ ನೆಲೆಯನ್ನು ಕಂಡುಕೊಳ್ಳುವಲ್ಲಿ ಸಫಲವಾಗುತ್ತಿರುವುದನ್ನು ವಿವರಿಸಲಾಗಿದೆ. ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಠಗಳನ್ನು ಕುರಿತು ಅಧ್ಯಯನ ನಡೆದಿದ್ದರೂ ಶಿಕ್ಷಣ ಕ್ಷೇತ್ರದ ಅಧ್ಯಯನ ನಡೆದಿರುವುದು ಅಪರೂಪ. ಈ ಅಧ್ಯಾಯದಲ್ಲಿ ಮಠಗಳು ಹೇಗೆ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದವು ಎಂಬುದನ್ನು ಐತಿಹಾಸಿಕ ಅಧ್ಯಯನದಿಂದ ಕೂಲಂಕಷವಾಗಿ ತಿಳಿಸಲಾಗಿದೆ.

ಮೂರನೆ ಅಧ್ಯಾಯದಲ್ಲಿ ತುಮಕೂರು ಜಿಲ್ಲೆಯ ಮತ್ತು ಸಿದ್ಧಗಂಗಾ ಮಠದ ಇತಿಹಾಸವನ್ನು ದೀರ್ಘವಾಗಿ ವಿವರಿಸಲಾಗಿದೆ. ಈ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಕೂಲಂಕುಷವಾಗಿ ವಿವರಿಸಲಾಗಿದೆ. ತುಮಕೂರು ಜಿಲ್ಲೆಯ ಸರ್ಕಾರಿ, ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳನ್ನು, ಗ್ರಾಮೀಣ ಮತ್ತು ನಗರಶಾಲೆಗಳನ್ನು ಕುರಿತಂತೆ ಕೂಲಂಕುಷವಾಗಿ ವಿವರಿಸಲಾಗಿದೆ. ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳನ್ನು, ಶಿಕ್ಷಕ-ವಿದ್ಯಾರ್ಥಿ ಅನುಪಾತ ಮತ್ತು ಸಾಕ್ಷರತೆ ಹಾಗೂ ವಿದ್ಯಾರ್ಥಿ ನಿಲಯಗಳನ್ನು ಅಧ್ಯಯನ ಮಾಡಲಾಗಿದೆ. ಶ್ರೀ ಸಿದ್ಧಗಂಗಾ ಮಠದ ಪರಿಚಯವನ್ನು ಮಾಡಿಕೊಟ್ಟಿದ್ದು, ಶಿವಕುಮಾರಸ್ವಾಮೀಜಿಯವರ ಶಿಕ್ಷಣ ಶಕ್ತಿಯನ್ನು ವಿವರಿಸಲಾಗಿದೆ.

ಇನ್ನೂ ಹೆಚ್ಚಿನ ವಿದ್ಯಾರ್ಥಿ ನಿಲಯಗಳನ್ನು ಸರ್ಕಾರ ಸ್ಥಾಪಿಸಬೇಕು. ಪ್ರೌಢಶಾಲಾ ಹಂತದಲ್ಲಿ (೮-೧೦) ವಿದ್ಯಾರ್ಥಿಗಳ ದಾಖಲಾತಿ ಪ್ರಾಥಮಿಕ ಹಂತದ (೧-೪) ವಿದ್ಯಾರ್ಥಿಗಳ ದಾಖಲಾತಿಗಿಂತಲು ಕಡಿಮೆಯಿದೆ. ಮಹಿಳಾ ಸಾಕ್ಷರತೆ, ಪುರುಷ ಸಾಕ್ಷರತೆಗಿಂತ ಕಡಿಮೆಯಿದೆ. ಗ್ರಾಮೀಣ ಸಾಕ್ಷರತೆ, ಮಹಿಳಾ ಸಾಕ್ಷರತೆಗಿಂತ ಕಡಿಮೆಯಿದೆ. ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದರೂ, ಜಾತಿವಾರು ಸರ್ಕಾರ ಕೈಗೊಳ್ಳುವ ವೆಚ್ಚ ಅಸಮತೋಲನದಿಂದಿದೆ. ತುಮಕೂರು ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳು ಅಧಿಕವಾಗಿರುವುದರಿಂದ ಇನ್ನೂ ಆಧಿಕ ಪ್ರಮಾಣದಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚವನ್ನು ಕೈಗೊಳ್ಳಬೇಕು.

ಇಂದಿನ ವಿಜ್ಞಾನಯುಗದಲ್ಲಿ ಎಲ್ಲಾ ದಾನಕ್ಕಿಂತ ಮಿಗಿಲಾದುದು ವಿದ್ಯಾದಾನವೆಂದು ಬಗೆದ ಶಿಕ್ಷಣ ಪ್ರೇಮಿ ಡಾ. ಶ್ರೀ ಶಿವಕುಮಾರಸ್ವಾಮೀಜಿ ಅಪಾರ ಸೇವೆ ಗೈದಿರುವುದು ಶಿಕ್ಷಣ ಕ್ಷೇತ್ರದಲ್ಲಿ. ಸಿದ್ಧಗಂಗಾ

ಮಠವು ಯಶಸ್ವಿಯಾಗಿ ನಡೆಸಿದ ಸರ್ವಕಾರ್ಯಗಳನ್ನು ಅವಲೋಕಿಸಿದಾಗ ನಮ್ಮ ಸಮಾಜ ಸುಧಾರಣೆಯಲ್ಲಿ ಮಠಗಳ ಪಾತ್ರ ಎಷ್ಟು ಪ್ರಮುಖವಾದುದೆಂಬುದು ಅರಿವಾಗದೇ ಇರದು.

ಸಮಾಜ ಸುಧಾರಣೆಯಂತಹ ಕಾರ್ಯ ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಮಠಗಳು, ಮಠಾಧಿಕಾರಿಗಳು ಸಾಮಾಜಿಕ ರಂಗದಲ್ಲಿ ದೊಡ್ಡಶಕ್ತಿ. ಇಂಥಹ ಶಕ್ತಿಯ ಪ್ರತೀಕವಾಗಿ ಸರ್ಕಾರದೊಂದಿಗೆ ಶ್ರೀಸಿದ್ಧಗಂಗಾ ಮಠ, ಶ್ರೀ ಶಿವಕುಮಾರಸ್ವಾಮೀಜಿಗಳವರ ಪರಿಶ್ರಮ ಮತ್ತು ಪ್ರಯತ್ನ ಅತ್ಯಗತ್ಯವಾಗಿದೆ. ಮಠ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸದಿದ್ದಲ್ಲಿ ಸಾವಿರಾರು ಗ್ರಾಮೀಣ ಮಕ್ಕಳು ಮುಖ್ಯವಾಗಿ ಶಿಕ್ಷಣದಿಂದ ವಂಚಿತರಾಗುತ್ತಿದ್ದುದು ಗೋಚರಿಸುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಸಿದ್ಧಗಂಗಾ ಮಠ ಸ್ಥಾಪಿಸಿರುವ ಒಟ್ಟು ೧೨೨ ಶಾಲೆಗಳ ಸಮಗ್ರ ಅಧ್ಯಯನವಿದೆ. ಈ ಅಧ್ಯಾಯದಲ್ಲಿ ಸಿದ್ಧಗಂಗಾ ಮಠದ ಒಟ್ಟು ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಅಧ್ಯಯನ ಮಾಡಿದ್ದರೂ, ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ ೩೧ ಪ್ರೌಢಶಾಲೆಗಳ ಅಧ್ಯಯನ ಪ್ರಮುಖವಾಗಿದೆ. ಈ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶವೇನೆಂದರೆ ಗಂಡು ಮಕ್ಕಳ ದಾಖಲಾತಿ ಹೆಣ್ಣು ಮಕ್ಕಳ ದಾಖಲಾತಿಗಿಂತ ಅಧಿಕವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲು ಹೆಣ್ಣು ಮಕ್ಕಳ ದಾಖಲಾತಿ ಕಡಿಮೆಯಿದೆ. ಗ್ರಾಮೀಣ ಪ್ರದೇಶಗಳಲ್ಲಿಯಾದರು ಹೆಣ್ಣು ಮಕ್ಕಳ ದಾಖಲಾತಿ, ಗಂಡು ಮಕ್ಕಳ ದಾಖಲಾತಿಯ ಸಮೀಪದಲ್ಲಿದೆ. ಆದರೆ ನಗರ ಪ್ರದೇಶಗಳ ಹೆಣ್ಣು ಮಕ್ಕಳ ದಾಖಲಾತಿ ಬಹಳ ಕಡಿಮೆಯಿದೆ. ಕಾರಣ ತುಮಕೂರು ನಗರದಲ್ಲಿಯೇ ಎಲ್ಲಾ ಪ್ರೌಢಶಾಲೆಗಳು ಕೇಂದ್ರೀಕೃತವಾಗಿದ್ದು, ನಗರದಲ್ಲಿ ಇತರೆ ಶಾಲೆಗಳನ್ನು ಹೆಣ್ಣು ಮಕ್ಕಳಿಗೆಂದೇ ಅನೇಕ ಪ್ರೌಢಶಾಲೆಗಳನ್ನು ಸ್ಥಾಪಿಸಲಾಗಿದೆ. ಸಿದ್ಧಗಂಗಾ ಮಠದ ೩೧ ಪ್ರೌಢಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಿಂತ ಇತರೆ ಜಾತಿಯ ವಿದ್ಯಾರ್ಥಿಗಳ ದಾಖಲಾತಿ ಅಧಿಕವಾಗಿರುವುದು ಕಂಡುಬರುತ್ತದೆ. ಕಾರಣ ಸರ್ಕಾರವು ಅಧಿಕ ಸಂಖ್ಯೆಯಲ್ಲಿ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆದಿದೆಯಲ್ಲದೆ, ಮಧ್ಯಾಹ್ನದ ಬಿಸಿಯೂಟವನ್ನು ನೀಡುತ್ತಿದೆ. ಈ ಕಾರಣದಿಂದಾಗಿ ಬಡ ಹಿಂದುಳಿದ ಮಕ್ಕಳು, ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಅಧಿಕಸಂಖ್ಯೆಯ ಮಕ್ಕಳು ದಾಖಲಾಗುತ್ತಾರೆ. ೩೧ ಪ್ರೌಢಶಾಲೆಗಳ ನೌಕರ ವರ್ಗದ ಜಾತಿಸ್ವರೂಪ ಮತ್ತು ಲಿಂಗಸ್ವರೂಪವನ್ನು ಅಧ್ಯಯನ ಮಾಡಲಾಗಿದೆ. ಮಠದ ಪ್ರೌಢಶಾಲೆಗಳಲ್ಲಿ ಲಿಂಗಾಯತ ಜಾತಿಯ ನೌಕರರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಸಿದ್ಧಗಂಗಾ ಮಠ ಲಿಂಗಾಯತ ಮಠವಾಗಿದ್ದರಿಂದ ಅಲ್ಲದೆ ದಾನಿಗಳೂ ಕೂಡ ಅಧಿಕವಾಗಿ ಲಿಂಗಾಯತರೇ

ಆಗಿರುವುದರಿಂದ ಸಹಜವಾಗಿ ಲಿಂಗಾಯತರ ಸಂಖ್ಯೆಯು ಅಧಿಕವಾಗಿರುತ್ತದೆ. ನೌಕರಿಯಲ್ಲಿ ಮಹಿಳೆಯರಿಗೇನು ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದಿಲ್ಲ. ಮಹಿಳಾ ನೌಕರಿ ಪ್ರಮಾಣ ಪುರುಷರಿಗಿಂತ ಸಾಕಷ್ಟು ಕಡಿಮೆಯಿದೆ. ಈ ನಿಟ್ಟಿನಲ್ಲಿ ಮಠ ತನ್ನ ಆಲೋಚನೆಯನ್ನು ಹರಿಸಬೇಕಾಗಿದೆ.

ಐದನೇ ಅಧ್ಯಾಯದಲ್ಲಿ ಸಿದ್ಧಗಂಗಾ ಮಠದ ಸಂಸ್ಥೆಯ ಆಡಳಿತ ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡಲಾಗಿದೆ. ಸಿದ್ಧಗಂಗಾ ಮಠ ಲಿಂಗಾಯತ ಮಠವಾಗಿರುವುದರಿಂದ ಸಂಸ್ಥೆಯ ಆಡಳಿತದಲ್ಲಿಯೂ ಲಿಂಗಾಯತ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿರುವರು. ಕಾರಣ ಆಡಳಿತದ ಸದಸ್ಯರೆಲ್ಲರೂ ಮಠದ ದಾನಿಗಳೇ ಆಗಿರುವರೆಂಬುದು ಗಮನಾರ್ಹವಾದುದ್ದು.

ಸಿದ್ಧಗಂಗಾ ಮಠದ ಆದಾಯ ಮತ್ತು ವೆಚ್ಚಗಳನ್ನು ವಿವರಿಸಲಾಗಿದೆ. ಮಠ ಎಲ್ಲಾ ಶಾಲಾ-ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಅಧಿಕ ಮೊತ್ತದ ಬಂಡವಾಳವನ್ನು ಹೂಡುತ್ತಿದೆ. ವೆಚ್ಚ ಆದಾಯಕ್ಕಿಂತ ಅಧಿಕವಾಗಿದ್ದು, ಈ ವ್ಯತ್ಯಾಸವನ್ನು ದಾನಿಗಳಿಂದ ಪಡೆದು ತುಂಬುವ ಪ್ರಯತ್ನವನ್ನು ಮಾಡುತ್ತಿದೆ.

ಆರನೇ ಅಧ್ಯಾಯದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಸತಿ ನಿಲಯದ ಬಗ್ಗೆ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಉಚಿತ ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಸಾಮಾಜಿಕ ಆಯಾಮಗಳನ್ನು, ಸಿದ್ಧಗಂಗಾ ಮಠ ಸರ್ಕಾರದಿಂದ ಪಡೆದ ಸಹಾಯಧನವನ್ನು ಮತ್ತು ಆದಾಯ ಮತ್ತು ವೆಚ್ಚಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಬಡಮಕ್ಕಳ ಸಂಖ್ಯೆ ಅನಾಥಾಶ್ರಮದಲ್ಲಿ ಅಧಿಕವಾದಂತೆ, ಸರ್ಕಾರದಿಂದ ದೊರೆಯುವ ಧನಸಹಾಯ ಸಾಕಾಗುತ್ತಿಲ್ಲ. ಸರ್ಕಾರ ಜಿಲ್ಲೆಯಾದ್ಯಂತ ಹಲವಾರು ಉಚಿತ ವಸತಿ ನಿಲಯಗಳ ಮೇಲೆ ಮಾಡುವ ವೆಚ್ಚಕ್ಕಿಂತ, ಮಠ ಅನಾಥಾಲಯದ ಮೇಲೆ ಮಾಡುವ ವೆಚ್ಚವು ಅಧಿಕವಾಗಿದೆ. ದಾನಿಗಳಿಂದ ಹಣ ಪಡೆದು ಈ ವೆಚ್ಚವನ್ನು ಸರಿದೂಗಿಸುತ್ತದೆ. ಹೀಗೆ ಸಮಾಜ ಮತ್ತು ಮಠಗಳ ಪ್ರಯತ್ನ ಅತ್ಯಗತ್ಯವಾಗಿದೆ.

೭.೧ ಅಧ್ಯಯನದ ತಥ್ಯಗಳು

ಮಠದ ೧೨೨ ಶಿಕ್ಷಣ ಸಂಸ್ಥೆಗಳಲ್ಲಿ ೩೧ ಪ್ರೌಢಶಾಲೆಗಳು ತುಮಕೂರು ಜಿಲ್ಲೆಯಾದ್ಯಂತ ಹರಡಿವೆ. ಸಿದ್ಧಗಂಗಾ ಮಠದ ಅಧ್ಯಯನದಲ್ಲಿ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಜಾತಿಸಂಬಂಧಿ, ಲಿಂಗಸಂಬಂಧಿ ಅಧ್ಯಯನ ಪ್ರಮುಖವಾಗಿವೆ. ದೂರದ ಪ್ರದೇಶಗಳಿಂದ ಬಂದ ಬಡಮಕ್ಕಳು, ಅನಾಥರು, ದೀನದಲಿತರು ಸಿದ್ಧಗಂಗಾ ಮಠದ ಆಶ್ರಯ ಪಡೆದು ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ. ಸಿದ್ಧಗಂಗಾ ಮಠವೆಂದರೆ ವಿದ್ಯಾರ್ಥಿಗಳ ನೆಲೆವೀಡು ಎಂದೇ ಜನ ಗುರುತಿಸುವುದು. ಆದರೂ ನನ್ನ ಈ ಅಧ್ಯಯನದಲ್ಲಿ ಪ್ರಮುಖವಾಗಿ ಕಂಡುಕೊಂಡು ತಥ್ಯಗಳು ಈ ಕೆಳಕಂಡಂತಿವೆ.

೧. ಸಿದ್ಧಗಂಗಾ ಮಠ ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಪ್ರೌಢಶಾಲೆಗಳನ್ನು ಸ್ಥಾಪಿಸಿದ್ದರೂ ಎಲ್ಲಾ ಜಾತಿಯವರಲ್ಲಿಯೂ ಹೆಣ್ಣು ಮಕ್ಕಳ ದಾಖಲಾತಿ ಗಂಡು ಮಕ್ಕಳ ದಾಖಲಾತಿಗಿಂತ ಕಡಿಮೆಯಿದೆ.

೨. ನಗರ ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ ಜಾತಿಯ ಹೆಣ್ಣು ಮಕ್ಕಳ ದಾಖಲಾತಿಯಲ್ಲಿ ಬಹಳ ಅಂತರವಿರುವುದು ಕಂಡುಬರುತ್ತದೆ. ನಗರ ಪ್ರದೇಶದ ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಗ್ರಾಮೀಣ ಪ್ರದೇಶಗಳಿಗಿಂತ ಬಹಳ ಕಡಿಮೆಯಿದೆ.

೩. ಮಠ ಉದ್ಯೋಗ ಸೃಷ್ಠಿಯಲ್ಲಿಯೂ ತಾರತಮ್ಯವನ್ನೆಸಗಿದೆ. ಮಹಿಳೆಯರ ನೇಮಕಾತಿ ಪುರುಷರ ನೇಮಕಾತಿಗಿಂತ ಬಹಳ ಕಡಿಮೆಯಿದೆ.

೪. ಮಠ ಲಿಂಗಾಯತರಿಗೆ ಉದ್ಯೋಗಾವಕಾಶಗಳಲ್ಲಿ ಗರಿಷ್ಠ ಅವಕಾಶವನ್ನು ಒದಗಿಸಿದೆ. ಇತರೆ ಜಾತಿಯವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಮಠ ವಿಫಲವಾಗಿದೆ.

೫. ಮಠದ ಆಡಳಿತ ಮಂಡಳಿಯ ಸದಸ್ಯರಲ್ಲಿ ಲಿಂಗಾಯತರೇ ಅಧಿಕ ಸಂಖ್ಯೆಯಲ್ಲಿರುವರು. ಇತರೆ ಜಾತಿಯವರಿಗೆ ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯತೆಯನ್ನು ಅಷ್ಟಾಗಿ ನೀಡಿಲ್ಲದಿರುವುದು ಕಂಡುಬರುತ್ತದೆ.

೬. ಕರ್ನಾಟಕದ ಹಿಂದುಳಿದ ಪ್ರದೇಶಗಳಿಂದಲೇ ಸಿದ್ಧಗಂಗಾ ಮಠದಲ್ಲಿ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಆಶ್ರಯ ಪಡೆದಿರುವುದು. ಅದರಲ್ಲೂ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯಿಂದಲೇ ಅಧಿಕ ವಿದ್ಯಾರ್ಥಿಗಳು ಆಗಮಿಸಿರುವುದು. ಅಂದರೆ ಇತರೆ ಹಿಂದುಳಿದ ಪ್ರದೇಶಗಳಲ್ಲಿ ಮಠ ವಿದ್ಯಾಸಂಸ್ಥೆಗಳನ್ನು ತೆರೆದಿರುವುದಿಲ್ಲ ಎಂಬುದು ವೇದ್ಯವಾಗುತ್ತದೆ.

೭. ಸಿದ್ಧಗಂಗಾ ಮಠದ ಆಶ್ರಯ ಪಡೆದಿರುವವರಲ್ಲಿ ಹಿಂದುಳಿದ ವರ್ಗದವರಾದ ಅಗಸ, ಡೋಬಿ, ಮಡಿವಾಳ, ಕುರುಬ, ವಿಶ್ವಕರ್ಮ (IIಎ) ಮೊದಲಾದವರು ಗರಿಷ್ಠ ಪ್ರಮಾಣದ ಅನುಕೂಲತೆಯನ್ನು ಪಡೆದಿದ್ದಾಗ್ಯೂ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಲಿಂಗಾಯತ ಸಮುದಾಯದವರೇ ಆಗಿದ್ದಾರೆ.

೮. ಸಿದ್ಧಗಂಗಾ ಮಠ ಗಂಡು ಮಕ್ಕಳಿಗೆ ಮಾತ್ರ ಉಚಿತ ವಸತಿ ಸೌಲಭ್ಯ ಮತ್ತು ದಾಸೋಹ ವ್ಯವಸ್ಥೆಯನ್ನು ಕಲ್ಪಿಸಿದೆ. ಆದರೆ ಹೆಣ್ಣು ಮಕ್ಕಳಿಗೆ ಇಂತಹ ಸೌಲಭ್ಯವನ್ನು ನೀಡಿರುವುದಿಲ್ಲ.

೯. ಕರ್ನಾಟಕ ಸರ್ಕಾರ ತುಮಕೂರು ಜಿಲ್ಲೆಯ ಎಲ್ಲಾ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಮಾಡುವ ವೆಚ್ಚವನ್ನು, ಸಿದ್ಧಗಂಗಾ ಮಠ ಒಂದೇ ವಿದ್ಯಾರ್ಥಿ ನಿಲಯಕ್ಕೆ ಖರ್ಚು ಮಾಡುತ್ತಿದೆ.

ಈ ಎಲ್ಲಾ ಅಧ್ಯಯನದ ಹಿನ್ನೆಲೆಯಲ್ಲಿ ಈ ಮೇಲ್ಕಂಡ ತಥ್ಯಗಳನ್ನು ನಾನು ವೈಯಕ್ತಿಕವಾಗಿ ಕಂಡುಕೊಂಡಿರುವುದಷ್ಟೆ. ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಮಠ ಮತ್ತು ಸಮಾಜಗಳಿಗಿರುವ ನೇರ ಸಂಬಂಧವನ್ನು ಕಂಡುಕೊಳ್ಳಬಹುದಾಗಿದೆ. ಆದರೂ ನನ್ನ ಅಧ್ಯಯನದಿಂದ ಕೆಲವು ಸಲಹೆಗಳನ್ನು ನಾನು ಸಿದ್ಧಗಂಗಾ ಮಠಕ್ಕೆ ಈ ಮೂಲಕ ಕೊಡಲು ಇಚ್ಛಿಸುತ್ತಿದ್ದೇನೆ. ಈ ಪರಿವರ್ತನಾ ಹಂತದಲ್ಲಿ ಸಿದ್ಧಗಂಗಾ ಮಠ ಇನ್ನೂ ಹೆಚ್ಚಿನ ಸೇವೆಯನ್ನು ಸಮಾಜಕ್ಕೆ ಒದಗಿಸಲು ಸಾಧ್ಯವಿದೆ ಎಂಬುದು ನನ್ನ ಭಾವನೆ.

೭.೨ ಸಲಹೆ-ಶಿಫಾರಸ್ಸುಗಳು

ಶ್ರೀ ಸಿದ್ಧಗಂಗಾ ಮಠ ಲಿಂಗಾಯತ ಮಠವಾಗಿರುವುದರಿಂದ ವಿದ್ಯಾರ್ಥಿ ಸಮೂಹದಲ್ಲಿಯೂ, ಶಿಕ್ಷಕರ ಸಮೂಹದಲ್ಲಿಯೂ ಮತ್ತು ಆಡಳಿತ ಮಂಡಳಿಯಲ್ಲಿಯೂ ಲಿಂಗಾಯತರೇ ಹೆಚ್ಚಿನ ಅನುಕೂಲತೆಯನ್ನು ಪಡೆದಿದ್ದಾರೆ. ಇದಕ್ಕೆ ಕಾರಣಗಳುಂಟು. ಆರಂಭದಿಂದಲೂ ಮಠ ದೀನದಲಿತರ, ಬಡವರ ಆಶ್ರಯ ತಾಣವಾಗಿದೆ. ಅನ್ನ, ಆಹಾರ ಮತ್ತು ಸೌಕರ್ಯಗಳನ್ನೊದಗಿಸಿದೆ. ಸಹಜವಾಗಿ ಬಡತನದಿಂದ ಬಸವಳಿದ ನಿರುದ್ಯೋಗಿ ವಿದ್ಯಾರ್ಥಿಗಳು ಮಠದ ಕೈಂಕರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಶಿವಕುಮಾರಸ್ವಾಮೀಜಿಯವರು ತಮ್ಮ ಆಶ್ರಯದಲ್ಲಿ ಬೆಳೆದವರನ್ನು ಗುರುತಿಸಿ, ಉದ್ಯೋಗವನ್ನು ನೀಡುತ್ತಾರೆ. ಲಿಂಗಾಯತ ವಿದ್ಯಾರ್ಥಿಗಳು ಜಾತಿ ಅಭಿಮಾನದಿಂದಲೂ ಮಠದ ಆಶ್ರಯ ಪಡೆಯಬಹುದಾಗಿದೆ.

ಮಠ ಬೃಹತ್ ಪ್ರಮಾಣದಲ್ಲಿ ಹಣವನ್ನು ಶಿಕ್ಷಣ ಕ್ಷೇತ್ರದಲ್ಲಿ ವಿನಿಯೋಗಿಸುವುದರಿಂದ, ದಾನಿಗಳ ಕೊಡುಗೆಗೆ ಹೆಚ್ಚಿನ ಮಹತ್ವ. ಸಿದ್ಧಗಂಗಾ ಮಠಕ್ಕೆ ಮುಖ್ಯವಾಗಿ ಲಿಂಗಾಯತರೇ ಹೆಚ್ಚು ದಾನಧರ್ಮ, ಹಣಕಾಸಿನ ಸಹಾಯ ಮಾಡಿರುವುದರಿಂದ ಸಹಜವಾಗಿ ಅವರನ್ನು ಆಡಳಿತ ಮಂಡಳಿಯ ಸದಸ್ಯರನ್ನಾಗಿ ನೇಮಿಸುವುದು ಅನಿವಾರ್ಯವಾಗುತ್ತದೆ. ಸಿದ್ಧಗಂಗಾ ಮಠದ ಆಡಳಿತ ಮಂಡಳಿಯ ಸದಸ್ಯರೆಲ್ಲರೂ ತಲತಲಾಂತರದಿಂದ ದಾನ ಮಾಡಿದವರೇ ಆಗಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಲಿಂಗಾಯತರೇ ಹೆಚ್ಚು ಅನುಕೂಲ ಪಡೆದಿರುವುದು ಗೋಚರಿಸುತ್ತದೆ. ಆದರೂ ಮಠ ಕೆಲವೊಂದು ಅನುಕೂಲತೆಗಳನ್ನೊದಗಿಸುವುದರ ಮೂಲಕ ಹೊಸ ಹೆಜ್ಜೆಯನ್ನಿಡಬಹುದಾಗಿದೆ. ಮೇಲ್ಕಂಡ ತಥ್ಯಗಳಿಗೆ ನನ್ನ ವೈಯಕ್ತಿಕ ಸಲಹೆಗಳು ಈ ಕೆಳಕಂಡಂತಿವೆ.

೧. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ಮಠ ಪ್ರಯತ್ನಿಸಬೇಕು. ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡಬಹುದಾಗಿದೆ. ಸಮವಸ್ತ್ರ, ಪುಸ್ತಕಗಳನ್ನು ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತವಾಗಿ ನೀಡಬೇಕು. ಒಂದು ವೇಳೆ ಪ್ರೌಢಶಾಲೆಗಳಿಗೆ ಹೀಗೆ ಸಹಾಯವನ್ನು ಮಾಡಿದರೆ ಮಠ ನಷ್ಟವನ್ನೆದುರಿಸಬೇಕಾಗುತ್ತದೆಂದು ಆಲೋಚಿಸಿದ್ದಾದರೆ ಅದಕ್ಕೆ ನನ್ನ ಸಲಹೆ ಈ ನಷ್ಟವನ್ನು ತಾಂತ್ರಿಕ ಶಿಕ್ಷಣದಿಂದ ತುಂಬಿಕೊಳ್ಳಲು ಅವಕಾಶವಿದೆ ಎನ್ನುವುದಾಗಿದೆ.

೨. ಸಿದ್ಧಗಂಗಾ ಮಠದ ಶಿಕ್ಷಣ ರಚನೆಯಲ್ಲಿ ಪ್ರೌಢಶಾಲಾ ಸಂಖ್ಯೆಗಳು ಅಧಿಕವಾಗಿವೆ. ಪ್ರೌಢಶಾಲಾ ಹಂತದಲ್ಲಿ ಶಿಕ್ಷಕಿಯರ ಸಂಖ್ಯೆ ಅಧಿಕವಾಗಿದ್ದಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಇನ್ನೂ ಅಧಿಕವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸಬೇಕು.

೩. ಉದ್ಯೋಗ ಸೃಷ್ಟಿಯಲ್ಲಿ ಮಠ ಸ್ತ್ರೀಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಬೇಕು. ಹಿಂದುಳಿದ ವರ್ಗ ಮತ್ತು ಹಿಂದುಳಿದ ಜಾತಿಯವರಿಗು ಮಠ ಉದ್ಯೋಗ ಸೌಲಭ್ಯವನ್ನೊದಗಿಸಬೇಕು. ಉದ್ಯೋಗಾವಕಾಶಗಳು ಹೆಚ್ಚಾದಂತೆ ವಿದ್ಯಾರ್ಥಿಗಳ-ಶಿಕ್ಷಕರ ಅನುಪಾತವು ಉತ್ತಮವಾಗುತ್ತದೆ.

೪. ಹೆಚ್ಚು ಬಡತನ ಎದುರಿಸುತ್ತಿರುವ ಹಿಂದುಳಿದ ಪ್ರದೇಶಗಳಿಂದಲೇ ವಿದ್ಯಾರ್ಥಿಗಳು ಆಶ್ರಯ ಬಯಸಿ ಮಠಕ್ಕೆ ಆಗಮಿಸುತ್ತಿದ್ದಾರೆ. ಸಿದ್ಧಗಂಗಾ ಮಠಕ್ಕೆ ಕೊಡುಗೈ ದಾನಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಮಠ ಉತ್ತರ ಕರ್ನಾಟಕದ ಯಾವುದಾದರೊಂದು ಭಾಗದಲ್ಲಿ ಉಚಿತ ವಸತಿ ಮತ್ತು ದಾಸೋಹ ಸೌಲಭ್ಯವನ್ನೊದಗಿಸಬಹುದಾಗಿದೆ. ಅದರಲ್ಲೂ ನನ್ನ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿಯೇ ಇಂತಹ ಅನುಕೂಲವನ್ನು ಮಠ ಒದಗಿಸಿಕೊಡಬಹುದಾಗಿದೆ.

೫. ಸಿದ್ಧಗಂಗಾ ಮಠ ಗಂಡು ಮಕ್ಕಳಿಗೆ ಮಾತ್ರ ಉಚಿತ ವಸತಿ ನಿಲಯ ಮತ್ತು ದಾಸೋಹ ವ್ಯವಸ್ಥೆಯನ್ನು ಕಲ್ಪಿಸಿದೆ. ಹಾಗೆಯೇ ಹೆಣ್ಣು ಮಕ್ಕಳಿಗೂ ಉಚಿತ ವಸತಿ ನಿಲಯ ಮತ್ತು ದಾಸೋಹ ವ್ಯವಸ್ಥೆಯನ್ನು ಕಲ್ಪಿಸಬೇಕು. ಹಾಗಾದಲ್ಲಿ ಅಧಿಕ ಸಂಖ್ಯೆಯ ಹೆಣ್ಣು ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವಂತಾಗುತ್ತಾರೆ. ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿದಂತೆಯೂ ಆಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಮಠ ಮತ್ತೊಂದು ಕ್ರಾಂತಿಗೈದು ಇತಿಹಾಸದ ಪುಟಗಳಲ್ಲಿ ಮೈಲಿಗಲ್ಲಾಗುತ್ತದೆ.

೬. ಸಿದ್ಧಗಂಗಾ ಮಠ ಶಿಕ್ಷಣ ಕೊಡುವುದರ ಜೊತೆಗೆ ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು. ಓದು, ಬರಹ, ಆಹಾರ, ವಸತಿಯೊಂದಿಗೆ ಕೈ ಕಸುಬನ್ನು ಕಲಿಸಿದರೆ, ವಿದ್ಯಾರ್ಥಿಗಳು ಶಿಕ್ಷಣ

ಪಡೆದ ನಂತರ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಬಹುದಾಗಿದೆ. ಹೆಣ್ಣು ಮಕ್ಕಳಿಗೆ ಈ ಸೌಲಭ್ಯವನ್ನು ಒದಗಿಸಿದಲ್ಲಿ ಸ್ತ್ರೀ-ಶಕ್ತಿ ಸಂಘಗಳು ಇನ್ನೂ ಹೆಚ್ಚಿನ ಕಾರ್ಯೋನ್ಮುಖವಾಗಬಹುದು. ಕರ್ನಾಟಕದಲ್ಲಿ 'ಮೈಕ್ರೋ ಫೈನಾನ್ಸ್'ನ್ನು ಉತ್ತೇಜಿಸಿದಂತಾಗುತ್ತದೆ.

ಈ ರೀತಿಯ ಅನೇಕ ಅಂಶಗಳು ನನ್ನ ಅಧ್ಯಯನದ ಪರಿಮಿತಿಯಲ್ಲಿ ಕಂಡುಬಂದ ಅನಿಸಿಕೆಗಳಾಗಿವೆ. ಏಕೆಂದರೆ ವೈಯಕ್ತಿಕವಾಗಿ ಕಂಡುಂಡ ಸಂಶೋಧನೆಯ ಪ್ರತಿಫಲವಾಗಿ ನನ್ನವೇ ಆದ ಕೆಲವು ಮುಕ್ತ ಒಳನೋಟಗಳನ್ನು ಈ ಮೇಲ್ಕಂಡಂತೆ ತಿಳಿಸಬಯಸುತ್ತೇನೆ. ಇವೆಲ್ಲವೂ ಈ ಸಂಶೋಧನೆಯ ಮೂಲಕ ಅರಿತುಕೊಂಡ ಸಲಹೆಗಳಾಗಿವೆ.

ಅನುಬಂಧ

ಅನುಬಂಧ – ೧

ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ಒಟ್ಟು ಶಾಲಾ-ಕಾಲೇಜುಗಳ ಪಟ್ಟಿ

ಕ್ರಸಂ	ಶಾಲಾ-ಕಾಲೇಜುಗಳ ಹೆಸರು	ಸ್ಥಾಪಿಸಿದ ವರ್ಷ	ಅನುದಾನಿತ ಶಾಲೆಗಳು(ಅ)	ಅನುದಾನರಹಿತ ಶಾಲೆಗಳು (ಅ.ರ.)
I	ತಾಂತ್ರಿಕ ಕಾಲೇಜುಗಳು			
೧.	ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ, ತುಮಕೂರು.	೧೯೬೩	–	ಅ.ರ
೨.	ಶ್ರೀಸಿದ್ಧಗಂಗಾ ಎಂ.ಬಿ.ಎ. ಕಾಲೇಜು, ತುಮಕೂರು.	೧೯೯೭	–	ಅ.ರ.
೩.	ಶ್ರೀ ಸಿದ್ಧಗಂಗಾ ಪಾಲಿಟೆಕ್ನಿಕ್ ಕಾಲೇಜು, ತುಮಕೂರು.	೧೯೮೮	–	ಅ.ರ
II	ಫಾರ್ಮಸಿ ಕಾಲೇಜು			
೪	ಶ್ರೀ ಸಿದ್ಧಗಂಗಾ ಔಷಧ ವಿಜ್ಞಾನ ಕಾಲೇಜು, ತುಮಕೂರು.	೧೯೮೪	–	ಅ.ರ
III	ನರ್ಸಿಂಗ್ ಶಾಲೆ			
೫.	ಶ್ರೀ ಸಿದ್ಧಗಂಗಾ ನರ್ಸಿಂಗ್ ಕಾಲೇಜು, ತುಮಕೂರು.	೧೯೯೩	–	ಅ.ರ.
IV	ಪ್ರಥಮ ದರ್ಜೆಕಾಲೇಜುಗಳು		ಅ.	
೬.	ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು, ಬಾಲಕರ ವಿಭಾಗ, ತುಮಕೂರು.	೧೯೬೬	ಅ.	–
೭.	ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು, ಮಹಿಳಾ ವಿಭಾಗ, ತುಮಕೂರು.	೧೯೮೨	ಅ.	–
೮.	ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ. ಬೆಂಗಳೂರು ಗ್ರಾಮಾಂತರ ಜಿಲ್ಲೆ.	೧೯೮೪ (Trfd-೧೯೮೮)	ಅ.	–
೯.	ಶ್ರಿ ಸಿದ್ಧಗಂಗಾ ಸಂಜೆ ಪ್ರಥಮ ದರ್ಜೆ ಕಾಲೇಜು, ತುಮಕೂರು.	೧೯೯೬	–	ಅ.ರ.
V	ಬಿ. ಎಡ್. ಕಾಲೇಜುಗಳು			
೧೦.	ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ ತುಮಕೂರು.	೧೯೭೨	–	ಅ.ರ.
೧೧.	ಶ್ರೀ ಸಿದ್ಧಗಂಗಾ ದೈಹಿಕ ಶಿಕ್ಷಣ ಕಾಲೇಜು, ಶ್ರಿ ಸಿದ್ಧಗಂಗಾ ಮಠ, ತುಮಕೂರು.	೨೦೦೫	–	ಅ.ರ.
VI	ಜನಶಿಕ್ಷಣ ಸಂಸ್ಥೆ :			
೧೨.	ಶ್ರೀ ಸಿದ್ಧಗಂಗಾ ಜನಶಿಕ್ಷಣ ಸಂಸ್ಥೆ, ತುಮಕೂರು.	೧೯೯೪ (Trfd ೨೦೦೩)	ಅ.	–
VII	ಶಿಕ್ಷಣ ತರಬೇತಿ ಸಂಸ್ಥೆಗಳು			
೧೩.	ಶ್ರೀ ಸಿದ್ಧಗಂಗಾ ಶಿಕ್ಷಕ ತರಬೇತಿ ಸಂಸ್ಥೆ, ತುಮಕೂರು.	೧೯೫೬	ಅ	–
೧೪.	ಶ್ರೀ ಬಸವೇಶ್ವರ ಶಿಕ್ಷಕ ತರಬೇತಿ ಸಂಸ್ಥೆ	೧೯೬೧	ಅ	–
೧೫.	ಶ್ರಿ ಸಿದ್ಧಗಂಗಾ ಶಿಕ್ಷಕ ತರಬೇತಿ ಸಂಸ್ಥೆ, ಪುರುಷನಹಳ್ಳಿ, ದೊಡ್ಡಬಳ್ಳಾಪುರ ತಾ.	೨೦೦೫	–	ಅ.ರ

VIII	**ಕೈಗಾರಿಕಾ ತರಬೇತಿ ಸಂಸ್ಥೆಗಳು**			
೧೬.	ಶ್ರೀ ಸಿದ್ಧಗಂಗಾ ಕೈಗಾರಿಕಾ ತರಬೇತಿ ಸಂಸ್ಥೆ, ಪುರುಷನಹಳ್ಳಿ, ದೊಡ್ಡಬಳ್ಳಾಪುರ ತಾ.	೧೯೯೭	–	ಅ.ರ.
೧೭.	ಶ್ರೀ ಸಿದ್ಧಗಂಗಾ ಕೈಗಾರಿಕಾ ತರಬೇತಿ ಸಂಸ್ಥೆ, ಕಂಚುಗಲ್ ಬಂಡೇಮಠ, ಮಾಗಡಿ ತಾ.	೧೯೯೮	–	ಅ.ರ.
೧೮.	ಶ್ರೀ ಸಿದ್ಧಗಂಗಾ ಕೈಗಾರಿಕಾ ತರಬೇತಿ ಸಂಸ್ಥೆ, ಬಟವಾಡಿ, ತುಮಕೂರು.	೧೯೯೯	–	ಅ.ರ.
IX	**ಪದವಿ-ಪೂರ್ವ ಕಾಲೇಜುಗಳು**			
೧೯.	ಶ್ರೀ ಸಿದ್ಧಗಂಗಾ ಬಾಲಕರ ಪದವಿ ಪೂರ್ವ ಕಾಲೇಜು, ತುಮಕೂರು.	೧೯೬೬ (ವಿಭಜನೆ ೨೦೦೧)	ಅ.	–
೨೦.	ಶ್ರೀ ಸಿದ್ಧಗಂಗಾ ಪದವಿ-ಪೂರ್ವ ಕಾಲೇಜು, ತುಮಕೂರು.	೧೯೭೭	ಅ.	–
೨೧.	ಶ್ರೀ ಸಿದ್ಧಗಂಗಾ ಮಹಿಳಾ ಪದವಿ-ಪೂರ್ವ ಕಾಲೇಜು, ತುಮಕೂರು.	೧೯೮೨ (ವಿಭಜನೆ೨೦೦೧)	ಅ.	–
೨೨.	ಶ್ರೀ ಸಿದ್ಧಗಂಗಾ ಪದವಿ-ಪೂರ್ವ ಕಾಲೇಜು, ಗುಡೇಮಾರನಹಳ್ಳಿ, ಮಾಗಡಿ ತಾಲ್ಲೋಕು.	೧೯೮೩	ಅ.	–
೨೩.	ಶ್ರೀ ಗಣೇಶ ಗ್ರಾಮಾಂತರ ಪದವಿ-ಪೂರ್ವ ಕಾಲೇಜು, ಗೂಳೂರು, ತುಮಕೂರು ತಾ.	೧೯೮೪	ಅ.	–
೨೪.	ಶ್ರೀ ಸಿದ್ಧಗಂಗಾ ಗ್ರಾಮಾಂತರ ಪದವಿ-ಪೂರ್ವ ಕಾಲೇಜು, ಹಾಲ್ನೂರು, ತುಮಕೂರು ತಾ.	೧೯೮೪	ಅ.	–
೨೫.	ಶ್ರೀ ವಿನಾಯಕ ಪದವಿ ಪೂರ್ವ ಕಾಲೇಜು, ನಿಟ್ಟೂರು, ಗುಬ್ಬಿ ತಾಲ್ಲೋಕು.	೧೯೮೪	ಅ.	–
೨೬.	ಶ್ರೀ ಶಿವಕುಮಾರಸ್ವಾಮಿ ಪದವಿ-ಪೂರ್ವ ಕಾಲೇಜು, ಬೆಳಕವಾಡಿ, ಮಳವಳ್ಳಿ ತಾಲ್ಲೋಕು, ಮಂಡ್ಯ ಜಿಲ್ಲೆ.	೧೯೮೮	–	ಅ.ರ.
೨೭.	ಶ್ರೀ ಸಿದ್ಧಗಂಗಾ ಸಂಯುಕ್ತ ಪದವಿ-ಪೂರ್ವ ಕಾಲೇಜು, ಬೂದಿಗೆರೆ, ದೇವನಹಳ್ಳಿ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ.	೧೯೯೪	–	ಅ.ರ.
೨೮.	ಶ್ರೀ ಬಸವೇಶ್ವರ ಪದವಿ-ಪೂರ್ವ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	೧೯೮೫ (Trfd-೧೯೯೪)	ಅ.	–
೨೯.	ಶ್ರೀ ಸ್ವಾಮಿ ವಿವೇಕಾನಂದ ಪದವಿ-ಪೂರ್ವ ಕಾಲೇಜು, ತುರುವೇಕೆರೆ, ತುಮಕೂರು ಜಿಲ್ಲೆ.	೧೯೮೫ (Trfd-೧೯೯೭)	ಅ.	–
೩೦.	ಶ್ರೀ ಸಿದ್ಧಗಂಗಾ ಪದವಿ-ಪೂರ್ವ ಕಾಲೇಜು, ರಘುವನಹಳ್ಳಿ, ಕನಕಪುರ ರೋಡ್, ಬೆಂಗಳೂರು.	೨೦೦೫	–	ಅ.ರ
X	**ಪ್ರೌಢಶಾಲೆಗಳು : ತುಮಕೂರು ಜಿಲ್ಲೆ**	–	–	–
೩೧.	ಶ್ರೀ ಸಿದ್ಧಗಂಗಾ ಪದವಿ-ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ತುಮಕೂರು.	೧೯೪೪	ಅ.	–
೩೨.	ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆ, ಶ್ರೀಸಿದ್ಧಗಂಗಾ ಮಠ, ತುಮಕೂರು.	೧೯೫೫	ಅ	–
೩೩.	ಶ್ರೀವಿನಾಯಕ ಪದವಿ-ಪೂರ್ವ ಕಾಲೇಜು ನಿಟ್ಟೂರು, ಗುಬ್ಬಿ ತಾ. ತುಮಕೂರು ಜಿಲ್ಲೆ.	೧೯೬೨	ಅ.	–
೩೪.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ತರೂರು. ಶಿರಾ ತಾ.	೧೯೬೨	ಅ	–

೩೫.	ಶ್ರೀ ಗಣೇಶ ಗ್ರಾಮಾಂತರ ಪದವಿ-ಪೂರ್ವ ಕಾಲೇಜು, ಪ್ರೌಢಶಾಲೆ ವಿಭಾಗ, ಗೂಳೂರು,	೧೯೬೫	ಅ	-
೩೬.	ಶ್ರೀ ಮಾರುತಿ ಗ್ರಾಮಾಂತರ ಪ್ರೌಢಶಾಲೆ, ಹೊಸಹಳ್ಳಿ, ಪಾವಗಡ ತಾ.	೧೯೬೦ (Trfd ೧೯೬೫)	ಅ	-
೩೭.	ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಪ್ರೌಢಶಾಲೆ, ಶ್ರೀ ಸಿದ್ಧಗಂಗಾ ಮಠ.	೧೯೬೮	ಅ	-
೩೮.	ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ, ಕಲ್ಲೂರು, ಗುಬ್ಬಿ ತಾ.	೧೯೬೮	ಅ	-
೩೯.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಕಂದೀಕೆರೆ, ಚಿಕ್ಕನಾಯ್ಕನ ಹಳ್ಳಿ ತಾ.	೧೯೬೯	ಅ	-
೪೦.	ಶ್ರೀ ಸಿದ್ಧಗಂಗಾ ಗ್ರಾಮೀಣ ಪದವಿ-ಪೂರ್ವ ಕಾಲೇಜು, ಪ್ರೌಢಶಾಲೆ ವಿಭಾಗ-ಹಾಲ್ನೂರು.	೧೯೭೦	ಅ	-
೪೧.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಅರೆಯೂರು.	೧೯೭೦	ಅ	-
೪೨.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಹಿರೇಹಳ್ಳಿ	೧೯೭೦	ಅ	-
೪೩.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಅದಲಗೆರೆ, ಗುಬ್ಬಿ ತಾ.	೧೯೭೦	ಅ	-
೪೪.	ಶ್ರೀ ಶಾಲಿವಾಹನ ಪ್ರೌಢಶಾಲೆ, ತಂಡಗ ತುರುವೇಕೆರೆ ತಾ.	೧೯೭೦	ಅ	-
೪೫.	ಶ್ರೀ ಗಂಗಾಧರೇಶ್ವರ ಗ್ರಾಮೀಣ ಪ್ರೌಢಶಾಲೆ, ಆನೆಕೆರೆ, ತುರುವೇಕೆರೆ ತಾ.	೧೯೭೦	ಅ	-
೪೬.	ಶ್ರೀ ಮಲ್ಲಿಕಾರ್ಜುನ ಗ್ರಾಮಾಂತರ ಪ್ರೌಢಶಾಲೆ, ದೊಡ್ಡಗುಣ್ಣಿ, ಗುಬ್ಬಿ ತಾ.	೧೯೬೬ (Trfd- ೧೯೭೦)	ಅ	-
೪೭.	ಬೆಳಧರ ಗ್ರಾಮೀಣ ಪ್ರೌಢಶಾಲೆ, ಬೆಳಧರ.	೧೯೬೪ (Trfd-೧೯೭೨)	ಅ	-
೪೮.	ಶ್ರೀ ಶಾರದ ಪ್ರೌಢಶಾಲೆ, ಮೂಗನಾಯ್ಕನಕೋಟೆ. ಗುಬ್ಬಿ ತಾಲ್ಲೋಕು.	೧೯೬೧ (Trfd-೧೯೭೩)	ಅ	-
೪೯.	ಬಾಪೂಜಿ ಕೇಂದ್ರೀಯ ಪ್ರೌಢಶಾಲೆ, ಮಾಚೇನಹಳ್ಳಿ , ತುರುವೇಕೆರೆ ತಾ.	೧೯೭೬	ಅ	-
೫೦.	ಶ್ರೀ ಮಾಹಾಲಿಂಗೇಶ್ವರ ಗ್ರಾಮೀಣ ಪ್ರೌಢಶಾಲೆ, ಕೋರ.	೧೯೭೮	ಅ.	-
೫೧.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಗಂಜಲಗುಂಟೆ, ಮಧುಗಿರಿ.	೧೯೮೦	ಅ	-
೫೨.	ಶ್ರೀ ವೀರಭದ್ರಸ್ವಾಮಿ ಗ್ರಾಮೀಣ ಪ್ರೌಢಶಾಲೆ ಹರಳೂರು.	೧೯೮೦	ಅ	-
೫೩.	ನಿವೇದಿತಾ ಪೌಢಶಾಲೆ, ಕ್ಯಾತ್ಸಂದ್ರ	೧೯೬೦ (Trfd ೧೯೮೦)	ಅ	-
೫೪.	ಶ್ರೀ ಬಸವೇಶ್ವರ ಗ್ರಾಮೀಣ ಪ್ರೌಢಶಾಲೆ, ದೊಡ್ಡಸಾಗ್ಗೆರೆ, ಕೊರಟಗೆರೆ ತಾಲ್ಲೋಕು.	೧೯೮೧	ಅ	-
೫೫.	ಜಯಮಂಗಲಿ ಗ್ರಾಮೀಣ ಪ್ರೌಢಶಾಲೆ, ನಿಟ್ರಹಳ್ಳಿ, ಮಧುಗಿರಿ ತಾಲ್ಲೋಕು.	೧೯೬೧ (Trfd-೧೯೮೨)	ಅ	-
೫೬.	ಶ್ರೀ ರಂಗನಾಥ ಗ್ರಾಮೀಣ ಪ್ರೌಢಶಾಲೆ,	೧೯೬೮	ಅ	-


	ನೇರಳೇಕೆರೆ, ಮಧುಗಿರಿ ತಾಲ್ಲೋಕು.	(Trfd ೧೯೮೨)		
೫೭.	ಶ್ರೀಸುವರ್ಣಮುಖಿ-ಪ್ರೌಢಶಾಲೆ, ಮಲ್ಲೇಕಾವು, ಕೊರಟಗೆರೆ ತಾ.	೧೯೮೫ (Trfd ೧೯೮೭)	ಅ	-
೫೮.	ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ಬಾಲಕಿಯರ ಪ್ರೌಢಶಾಲೆ, ತುಮಕೂರು.	೧೯೮೮	-	ಅ.ರ
೫೯.	ಸಿಲ್ವರ್‌ಜ್ಯೂಬಿಲಿ ಮೆಮೋರಿಯಲ್ ಡೆಮೋನ್ ಸ್ಟ್ರೇಷನ್ ಪ್ರೌಢಶಾಲೆ, ತುಮಕೂರು.	೧೯೯೭	-	ಅ.ರ
೬೦.	ಶ್ರೀ ಸ್ವಾಮಿ ವಿವೇಕಾನಂದ ಪ್ರೌಢಶಾಲೆ, ಕುಪ್ಪೂರು, ಚಿಕ್ಕನಾಯ್ಕನಹಳ್ಳಿ ತಾ.	೧೯೮೧ (Trfd-೧೯೯೭)	ಅ.	-
೬೧.	ಶ್ರೀ ಹುತ್ತ ಸಿದ್ದೇಶ್ವರ ಗ್ರಾಮೀಣ ಪ್ರೌಢಶಾಲೆ, ಮಾದಿಹಳ್ಳಿ, ತುರುವೇಕೆರೆ ತಾ.	೧೯೮೨ (Trfd ೧೯೯೭)	ಅ	-
XI	**ಬೆಂಗಳೂರು ಜಿಲ್ಲೆಯ ಪ್ರೌಢಶಾಲೆಗಳು**			
೬೨.	ಶ್ರೀಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಕಂಚುಗಲ್ ಬಂಡೇಮಠ, ಬನವಾಡಿ ಪೋಸ್ಟ್, ಮಾಗಡಿ ತಾ.	೧೯೬೩	ಅ	-
೬೩.	ಶ್ರೀ ಬಸವೇಶ್ವರ ಪ್ರೌಢಶಾಲೆ, ಸೋಲೂರು, ಮಾಗಡಿ ತಾ.	೧೯೬೩	ಅ	-
೬೪.	ಶ್ರೀ ಸಿದ್ಧಗಂಗಾ ಸಂಯುಕ್ತ ಪದವಿ-ಪೂರ್ವ, ಪ್ರೌಢಶಾಲೆ ವಿಭಾಗ, ಬುದಿಗೆರೆ, ದೇವನಹಳ್ಳಿ ತಾ.	೧೯೬೩	ಅ.	-
೬೫.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಪುರುಷನಹಳ್ಳಿ, ದೊಡ್ಡಬಳ್ಳಾಪುರ ತಾ.	೧೯೬೫	ಅ	-
೬೬.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಗುಡೇಮಾರನಹಳ್ಳಿ, ಮಾಗಡಿ ತಾ.	೧೯೬೫	ಅ	-
೬೭.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ನಾರಸಂದ್ರ, ಮಾಗಡಿ ತಾ.	೧೯೭೧	ಅ	-
೬೮.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಹೆಡಕನಹಳ್ಳಿ, ಹೊಸಕೋಟೆ.	೧೯೮೦	ಅ	-
೬೯.	ಶ್ರಿ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ರಘುವನಹಳ್ಳಿ, ಕನಕಪುರ ರೋಡ್, ಬೆಂಗಳೂರು.	೧೯೮೨	ಅ	-
೭೦.	ಶ್ರೀ ಉದ್ದಾನ ಶಿವಯೋಗೀಶ್ವರ ಗ್ರಾಮಾಂತರ ಪ್ರೌಢಶಾಲೆ, ಗಟ್ಟಿಪುರ, ಮಾಗಡಿ ತಾ.	೧೯೮೨	ಅ	-
೭೧.	ಶ್ರೀ ಮಂಜುನಾಥ ಬಾಲಕಿಯರ ಪ್ರೌಢಶಾಲೆ, ನೆಲಮಂಗಲ.	೧೯೬೪	ಅ.	-
೭೨.	ಶ್ರೀ ಶಿವಕುಮಾರಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಬ್ಯಾಲಾಕೆರೆ, ಮಾಗಡಿ ತಾ.	೧೯೮೪	ಅ.	-
೭೩.	ಶ್ರೀ ಸಿದ್ಧಗಂಗಾ ಪ್ರೌಢಶಾಲೆ, ಜಂಗಮ ಮಠ ಶಿವನಹಳ್ಳಿ .	೧೯೮೪	ಅ.	-
೭೪.	ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆ, ತೋಟಗೆರೆ, ದೊಸಣಾಪುರ ಹೋಬಳಿ, ಬೆಂಗಳೂರು ಗ್ರಾ .ಜಿ.	೧೯೮೬	ಅ.	-
೭೫.	ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಗ್ರಾಮೀಣ ಪ್ರೌಢಶಾಲೆ, ಎಣ್ಣೇಗೆರೆ, ಮಾಗಡಿ ತಾ.	೧೯೮೨	ಅ	-
೭೬.	ಶ್ರೀ ಮಹಂತೇಶ್ವರ ಬಾಲಕಿಯರ ಪ್ರೌಢಶಾಲೆ, ಕುದೂರು, ಬೆಂಗಳೂರು ಗ್ರಾ .ಜಿ.	೧೯೮೫ (Trfd-೧೯೮೮)	ಅ	-
೭೭.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ದೊಡ್ಡಗಂಗಾವಾಡಿ, ರಾಮನಗರ.	೧೯೯೦	-	ಅ.ರ
೭೮.	ಶ್ರೀ ಬಸವೇಶ್ವರ ಪ್ರೌಢಶಾಲೆ, ಹುಲಿಕಲ್	೧೯೬೩	ಅ	-

	ಮಾಗಡಿ ತಾ.	(Trfd-೧೯೯೧)		
೭೯.	ಶ್ರೀ ಅಂಬಿಕಾ ಕನ್ನಡ ಪ್ರೌಢಶಾಲೆ, ಜೈ ಮಾರುತಿ ನಗರ, ನಂದಿನಿ ಲೇಔಟ್, ಬೆಂಗಳೂರು.	೧೯೯೨	–	ಅ.ರ
೮೦.	ಶ್ರೀ ವೀರಭದ್ರಸ್ವಾಮಿ ಕನ್ನಡ ಪ್ರೌಢಶಾಲೆ, ಅಗ್ರಹಾರ ದಾಸರಹಳ್ಳಿ. ಬೆಂಗಳೂರು.	೧೯೯೪	–	ಅ.ರ
೮೧.	ಶ್ರೀ ಸಿದ್ಧಗಂಗಾ ಪ್ರೌಢಶಾಲೆ ಚಂದ್ರಲೇಔಟ್, ಬೆಂಗಳೂರು.	೨೦೦೦	–	ಅ.ರ
XII	ಇತರೆ ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳು			
೮೨.	ನೆಹರು ಗ್ರಾಮಾಂತರ ಪ್ರೌಢಶಾಲೆ, ಆದಿವಾಲ. ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ.	೧೯೬೪ (Trfd-೧೯೭೫)	ಅ.	–
೮೩.	ಶ್ರೀ ಸಿದ್ಧಗಂಗಾ ಗ್ರಾಮೀಣ ಪ್ರೌಢಶಾಲೆ, ಶುಕ್ರವಾರಸಂತೆ, ಸಕಲೇಶಪುರ ತಾ.	೧೯೮೦	ಅ.	–
೮೪.	ಶ್ರೀ ಶಿವಕುಮಾರ ಸ್ವಾಮಿ ಗ್ರಾಮಾಂತರ ಪ್ರೌಡಶಾಲೆ, ಪರಿಣಾಮಿಪುರ, ಟಿ. ನರಸೀಪುರ ತಾಲ್ಲೋಕು. ಮೈಸೂರು ಜಿಲ್ಲೆ.	೧೯೯೦	–	ಅ.ರ.
XIII	ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಶಾಲೆಗಳು			
೮೫.	ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರಾಥಮಿಕ ಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು ತಾಲ್ಲೋಕು.	೧೯೫೪	ಅ.	–
೮೬.	ಶ್ರೀ ಸಿದ್ಧಗಂಗಾ ಪ್ರಾಕ್ಟೀಸಿಂಗ್ ಎಲಿಮೆಂಟರಿ ಶಾಲೆ. ತುಮಕೂರು.	೧೯೬೨	ಅ	–
೮೭.	ಶ್ರೀ ಸಿದ್ಧಗಂಗಾ ಬಾಲೋಧ್ಯಾನ, ತುಮಕೂರು	೧೯೬೨	–	ಅ.ರ
೮೮.	ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ಉನ್ನತ ಪ್ರಾಥಮಿಕ ಶಾಲೆ, ತುಮಕೂರು.	೧೯೮೦	–	ಅ.ರ
೮೯.	ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ನರ್ಸರಿ ಶಾಲೆ, ತುಮಕೂರು.	೧೯೮೦	–	ಅ.ರ
೯೦.	ಶ್ರೀ ಸಿದ್ಧಗಂಗಾ ಉನ್ನತ ಪ್ರಾಥಮಿಕ ಶಾಲೆ, ಜಂಗಮ ಮಠ, ಬೆಂಗಳೂರು.	೧೯೮೩	ಅ	–
೯೧.	ಶ್ರೀ ಸಿದ್ಧಗಂಗಾ ನರ್ಸರಿ ಶಾಲೆ, ಜಂಗಮ ಮಠ ಶಿವನಗರ, ಬೆಂಗಳೂರು.	೧೯೮೩	–	ಅ,ರ
೯೨.	ಶ್ರೀ ಅಂಬಿಕಾ ಕನ್ನಡ ಉನ್ನತ ಪ್ರಾಥಮಿಕ ಶಾಲೆ, ಜೈಮಾರುತಿ ನಗರ, ಬೆಂಗಳೂರು.	೧೯೮೦ (Trfd-೧೯೮೯)	ಅ	–
೯೩.	ಶ್ರೀ ಅಂಬಿಕಾ ಕನ್ನಡ ನರ್ಸರಿ ಶಾಲೆ, ಜೈ ಮಾರುತಿ ನಗರ, ಬೆಂಗಳೂರು.	೧೯೯೮	–	ಅ.ರ.
೯೪.	ಶ್ರೀ ವೀರಭದ್ರಸ್ವಾಮಿ ಕನ್ನಡ ಉನ್ನತ ನರ್ಸರಿ ಸ್ಕೂಲ್ ಅಗ್ರಹಾರ ದಾಸರಹಳ್ಳಿ, ಬೆಂಗಳೂರು.	೧೯೮೧ (Trfd-೧೯೮೯)	ಅ	–
೯೫.	ಶ್ರೀ ವೀರಭದ್ರಸ್ವಾಮಿ ಕನ್ನಡ ನರ್ಸರಿ ಸ್ಕೂಲ್, ಅಗ್ರಹಾರ, ದಾಸರಹಳ್ಳಿ, ಕೊರಟಗೆರೆ ತಾ.	೧೯೮೭ (Trfd-೧೯೮೯)	–	ಅ.ರ
೯೬.	ಶ್ರೀ ಬಸವೇಶ್ವರ ಉನ್ನತ ಪ್ರಾಥಮಿಕ ಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೯೬	–	ಅ.ರ
೯೭.	ಶ್ರೀ ಬಸವೇಶ್ವರ ನರ್ಸರಿ ಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೯೨	–	ಅ.ರ

೯೮.	ಶ್ರೀ ಸಿದ್ಧಗಂಗಾ ಉನ್ನತ ಪ್ರಾಥಮಿಕ ಶಾಲೆ ಚಂದ್ರ ಲೇಔಟ್, ಬೆಂಗಳೂರು.	೨೦೦೦	-	ಅ.ರ
೯೯.	ಶ್ರೀ ಸಿದ್ಧಗಂಗಾ ನರ್ಸರಿ ಶಾಲೆ, ಚಂದ್ರ ಲೇಔಟ್, ಬೆಂಗಳೂರು.	೨೦೦೦	-	ಅ.ರ
XIV	ಅಂಗವಿಕಲ ಮಕ್ಕಳ ಸಂಸ್ಥೆಗಳು			
೧೦೦.	ಶ್ರೀ ಸಿದ್ಧಗಂಗಾ ಅಂದ ಮಕ್ಕಳ ಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೭೮	ಅ	-
೧೦೧.	ಶ್ರಿ ಸಿದ್ಧಗಂಗಾ ಸಮನ್ವಯ ಶಿಕ್ಷಣ ಕೇಂದ್ರ , ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೯೦	ಅ.	-
೧೦೨.	ಕರ್ನಾಟಕ ನವಚೇತನ ಅಂಧಮಕ್ಕಳ ಶಾಲೆ, ಕುಣಿಗಲ್, ತುಮಕೂರು ಜಿಲ್ಲೆ.	೧೯೯೩ (Trfd-೧೯೯೯)	ಅ	-
XV	ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳು			
೧೦೩.	ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೧೭	ಅ	-
೧೦೪.	ಕನ್ನಡ ಪಂಡಿತ್ ವಿಭಾಗ, ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು.	೧೯೬೫	ಅ	-
೧೦೫.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ, ಹಾಲ್ನೂರು, ತುಮಕೂರು ತಾ.	೧೯೭೧	ಅ	-
೧೦೬.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ, ಮೆಳೇಹಳ್ಳಿ, ತುಮಕೂರು.	೧೯೭೭	ಅ	-
೧೦೭.	ಶ್ರೀ ಶಾಲಿವಾಹನ ಸಂಸ್ಕೃತ ಪಾಠಶಾಲಾ, ತಂಡಗ, ತುರುವೇಕೆರೆ ತಾ.	೧೯೭೭	ಅ	-
೧೦೮.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಬ್ಯಾಲಕೆರೆ ಮಾಗಡಿ ತಾಲ್ಲೋಕು.	೧೯೭೮	ಅ	-
೧೦೯.	ಶ್ರೀ ಮಲ್ಲೇಶ್ವರ ಸಂಸ್ಕೃತ ಪಾಠಶಾಲಾ, ಕೋರಾ, ತುಮಕೂರು ತಾ.	೧೯೭೯	ಅ	-
೧೧೦.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ರಾಮಗೊಂಡನಹಳ್ಳಿ, ತುಮಕೂರು ತಾ.	೧೯೮೦	ಅ	-
೧೧೧.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ ಶ್ರೀ ಸಿದ್ಧಗಿರಿ ಬೃಹನ್ಮಠ, ಚಕ್ರಬಾವಿ ಪೋಸ್ಟ್, ಮಾಗಡಿ ತಾ.	೧೯೮೦	ಅ	-
೧೧೨.	ಶ್ರೀ ಶಿವಕುಮಾರಸ್ವಾಮಿ ಸಂಸ್ಕೃತ ಪಾಠಶಾಲಾ, ಶ್ರೀ ಸಿದ್ಧಗಂಗಾ ಪ್ರೌಢಶಾಲೆ, ತುಮಕೂರು.	೧೯೮೦	ಅ	-
೧೧೩.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ, ಶಿರಾ.	೧೯೮೦	ಅ	-
೧೧೪.	ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ನಾರಸಂದ್ರ, ಮಾಗಡಿ ತಾಲ್ಲೋಕು.	೧೯೮೦	ಅ	-
೧೧೫.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಕುದೂರು ಹೋಬಳಿ, ಮಾಗಡಿ ತಾಲ್ಲೋಕು.	೧೯೮೦	ಅ	-
೧೧೬.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಗಂಜಲಗುಂಟೆ, ಮಧುಗಿರಿ ತಾಲ್ಲೋಕು.	೧೯೮೨	ಅ	-
೧೧೭.	ಶ್ರೀ ಅಂಬುಜ ಸಂಸ್ಕೃತ ಪಾಠಶಾಲೆ, ಜಂಗಮ ಮಠ,	೧೯೮೩	ಅ	-


	ಶಿವನಗರ, ಬೆಂಗಳೂರು.	(Trfd-೧೯೮೯)		
೧೧೮.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಕಣ್ಣನ್ನೂರ್, ಮಾಗಡಿ ತಾ.	೧೯೯೨	–	ಅ.ರ
೧೧೯.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ, ಅಂಬಾಲಗೆರೆ, ದೊಡ್ಡಬಳ್ಳಾಪುರ ತಾ.	೧೯೯೨	–	ಅ.ರ
೧೨೦.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಗುಡೇಮಾರನಹಳ್ಳಿ, ಮಾಗಡಿ, ತಾ.	೧೯೯೪	–	ಅ.ರ
೧೨೧.	ಶ್ರೀ ಕಂಚುಗಲ್ ಬಂಡೇಮಠ, ಮಾಗಡಿ ತಾ.	೧೯೬೩ (Trfd-೧೯೯೪)	ಅ	–
೧೨೨.	ಶ್ರೀ ಸಿದ್ಧಗಂಗಾ ಸಂಸ್ಕೃತ ಪಾಠಶಾಲಾ, ಸೋಲೂರು, ಮಾಗಡಿ ತಾ.	೧೯೯೬	–	ಅ.ರ.

ಆಧಾರ : ಆನ್ಯುಯಲ್ ರಿಪೋರ್ಟ್ ಅಂಡ್ ಅಕೌಂಟ್ಸ್, ಶ್ರೀ ಸಿದ್ಧಗಂಗಾ ಮಠ, ೨೦೦೫-೦೬, ಪು. ೨೧-೩೪.




ಅನುಬಂಧ – ೨

ಶ್ರೀ ಸಿದ್ಧಗಂಗಾ ಮಠದ ಛಾಯಾಚಿತ್ರಗಳು



ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರಾದ ಡಾ. ಶ್ರೀ ಶಿವಕುಮಾರಸ್ವಾಮೀಜಿಗಳವರು






ಪೂಜ್ಯಶ್ರೀ ಸಿದ್ಧಲಿಂಗಸ್ವಾಮೀಜಿಗಳವರು, ಶ್ರೀ ಸಿದ್ಧಗಂಗಾ ಮಠ.




ಪೂಜ್ಯರ ಸಾನ್ನಿಧ್ಯದಲ್ಲಿ ದಿನನಿತ್ಯದ ಸಾಮೂಹಿಕ ಪ್ರಾರ್ಥನೆ





ಶ್ರೀ ಸಿದ್ಧಗಂಗಾ ಮಠದಲ್ಲಿರುವ ಸಂಸ್ಕೃತ ಪಾಠಶಾಲೆ ಮತ್ತು ಕಾಲೇಜು





ಡಾ. ಶ್ರೀ ಶಿವಕುಮಾರಸ್ವಾಮೀಜಿಗಳವರ ವಜ್ರಮಹೋತ್ಸವದ ಸವಿನೆನಪಿನ ಬೃಹತ್
ವಿದ್ಯಾರ್ಥಿ ನಿಲಯ

